

ಮಾವು

ಮೂಲ

ಎಸ್ ಆರ್ ಗಂಗೂಲಿ

ರಣಜಿತ್ ಸಿಂಗ್

ಎಸ್ ಎಲ್ ಕಟ್ಯಾಲ್

ದಲ್ ಜಿತ್ ಸಿಂಗ್

ಅನುವಾದ

ಡಿ ಮುನಿಸ್ವಾಮಿ

ಎಚ್ ಕೆ ನರಸಿಂಹೇಗೌಡ

ಸಿ ಕೆ ಕುಮುದಿನಿ

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಪ್ರಕಟಣೆ—144

ಮಾವು

ಮೂಲ : ಎಸ್. ಆರ್. ಗಂಗೂಲಿ
ರಣಜಿತ್ ಸಿಂಗ್
ಎಸ್. ಎಲ್. ಕಟ್ಯಾಲ್
ದಲ್‌ಜಿತ್ ಸಿಂಗ್

ಅನುವಾದ : ಡಿ. ಮುನಿಸ್ವಾಮಿ
ಎಚ್. ಕೆ. ನರಸಿಂಹೇಗೌಡ
ಸಿ. ಕೆ. ಕುಮುದಿನಿ

1985

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560 065

ಕೃಷಿ ವಿಶ್ವವಿದ್ಯಾನಿಲಯ ವ್ಯವಸಾಯ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ತರಗತಿ ಈಗಾಗಲೇ ಪ್ರಾರಂಭಗೊಂಡಿದ್ದು, ಕನ್ನಡದ ಬಗ್ಗೆ ಕಳಕಳಿಯುಳ್ಳ ಆಸಕ್ತಿಯುಳ್ಳ ಅತ್ಯಂತ ಉತ್ಸಾಹಿ ವಿದ್ಯಾರ್ಥಿಗಳು ಈ ಪುಸ್ತಕಗಳ ಸದುಪಯೋಗ ಪಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿ.

ಈಗ ಪ್ರಕಟವಾಗುತ್ತಿರುವ ಮೂರು ಪುಸ್ತಕ ಎಲ್ಲ ವಿಜ್ಞಾನಿಗಳು ತಂತ್ರಜ್ಞರು, ಹಾಗೂ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಲೆಂದು ಆಶಿಸುತ್ತೇನೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಸ್. ವಿ. ಪಾಟೀಲ್
ಕುಲಪತಿಗಳು

ಸಂಪಾದಕರ ಮಾತು

ಮಾವು-ಪುಸ್ತಕ ಮೂಲ ಇಂಗ್ಲಿಷ್ ಪುಸ್ತಕ 'ದಿ ಮ್ಯಾಂಗೊ'ದ ಅನುವಾದ. ಇದರಲ್ಲಿ ಮಾವಿನ ವಿವಿಧ ತಳಿಗಳ ವಿವರ, ಬೇಸಾಯ ಹಾಗೂ ಕೀಟ ಹತೋಟಿ ಪರಿಚಯ ಮಾಡಲಾಗಿದೆ.

ಈ ಪುಸ್ತಕವನ್ನು ಮೂಲತಃ ಐ. ಸಿ. ಎ. ಆರ್. ಪ್ರಕಟಿಸಿದ್ದು ಇದನ್ನು ಕನ್ನಡಕ್ಕೆ ಕನ್ನಡದ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದ ಶ್ರೀ ಡಿ. ಮುನಿಸ್ವಾಮಿ ಹಾಗೂ ಸಹಾಯಕ ಕನ್ನಡ ಪ್ರಾಧ್ಯಾಪಕರಾದ ಶ್ರೀ ಎಚ್. ಕೆ. ನರಸಿಂಹೇಗೌಡ ಮತ್ತು ಸಂಶೋಧನಾ ಸಹಾಯಕಿ ಶ್ರೀಮತಿ ಸಿ.ಕೆ. ಕುಮುದಿನಿ ಇವರುಗಳು ಭಾಷಾಂತರಿಸಿದ್ದಾರೆ ಈ ಪುಸ್ತಕದಲ್ಲಿ ಮೂಲ ಗ್ರಂಥದಲ್ಲಿಯ ಬಣ್ಣದ ಚಿತ್ರಗಳನ್ನು ಕೈ ಬಿಟ್ಟು, ಕಪ್ಪು ಬಿಳುಪು ಚಿತ್ರಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಈ ಪುಸ್ತಕದ ಭಾಷಾಂತರ ಪರಿಶೀಲನೆ ಮಾಡಿಕೊಟ್ಟವರು ಮೂಲ ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳ ಕಾಲೇಜು ಶಿಕ್ಷಣ ನಿರ್ದೇಶಕರಾದ ಡಾ। ಆರ್. ನಾರಾಯಣ ಅವರು. ಬೆರಳಚ್ಚು ಪ್ರತಿಯನ್ನು ಸಿದ್ಧಪಡಿಸಿದವರು ವಿಭಾಗದ ಬೆರಳಚ್ಚುಗಾರರಾದ ಶ್ರೀ ಎಲ್. ಆರ್. ದೊಡ್ಡರಂಗಯ್ಯ ಅವರು, ಕರಡೋದುವಿಕೆಯನ್ನು ನಿರ್ವಹಿಸಿದವರು ಕರಡೋದುಗಾರರಾದ ಶ್ರೀ ಎಂ. ರಮೇಶ್‌ರವರು, ಒಳ ಚಿತ್ರ ಪಡಿಯಚ್ಚಿಗೆ ಸಿದ್ಧಪಡಿಸಿದವರು ಹಾಗೂ ಮುಖಪುಟ ತಯಾರಿಸಿದವರು ಶ್ರೀ ಕೆ. ವಿದ್ಯಾಧರಯ್ಯನವರು. ಇವರುಗಳಿಗೆಲ್ಲ ಕೃತಜ್ಞತೆಗಳು.

ಈ ಪುಸ್ತಕ ಎಲ್ಲ ಕೃಷಿ ವಿದ್ಯಾರ್ಥಿಗಳು, ಅಧ್ಯಾಪಕರು, ಸಂಶೋಧಕರು ಹಾಗೂ ಇತರ ಆಸಕ್ತರಿಗೆಲ್ಲ ಉಪಯುಕ್ತವಾಗುವುದೆಂದು ಆಶಿಸಲಾಗಿದೆ.

ಕನ್ನಡ ಅಧ್ಯಯನ ವಿಭಾಗ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು-560 065

ಎಚ್. ಕೆ. ನರಸಿಂಹೇಗೌಡ
ಪ್ರಭಾರಿ ಕನ್ನಡ ಪ್ರಾಧ್ಯಾಪಕರು
ಹಾಗೂ ಕನ್ನಡ ಅಭಿವೃದ್ಧಿ ಸಮಿತಿಯ
ಕಾರ್ಯದರ್ಶಿಗಳು

ಮುನ್ನುಡಿ

ಮಾವು ಭಾರತೀಯ ಹಣ್ಣುಗಳ ರಾಜ. ಹಣ್ಣುಗಳ ಪೈಕಿ ಬಹಳ ರುಚಿಯಾದದ್ದು ಮತ್ತು ಜನಪ್ರಿಯವಾದದ್ದು. ಶ್ರೀಮಂತರ ರಸಭಕ್ಷ್ಯ, ಬಡವರ ಪಾಲಿನ ಆಹಾರ. ಹಳ್ಳಿಗಾಡಿನ ಅನೇಕ ದುರದೃಷ್ಟ ಬಡಜನರು ಮಾವಿನಿಂದ ಹೊಟ್ಟೆಹೊರೆದುಕೊಳ್ಳುತ್ತಾರೆ.

ಪುರಾತನ ಕಾಲದಿಂದಲೂ ನಮ್ಮ ದೇಶದಲ್ಲಿ ಮಾವಿನ ಬೇಸಾಯವಿದೆ ಮತ್ತು ಅನೇಕ ತಳಿಗಳು ಅಭಿವೃದ್ಧಿಯಾಗಿವೆ. ಅನೇಕ ಅಪರಿಚಿತ ತಳಿಗಳನ್ನು ಬಿಟ್ಟು, ಪರಿಚಿತ ತಳಿಗಳ ಸಂಖ್ಯೆಯೇ 1400 ಎಂದು ಕೆಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕವಿ ಗಾಲಿಬ್‌ರನ್ನು ಮಾವಿನ ಹಣ್ಣಿನ ಗುಣಮಟ್ಟವನ್ನು ಕುರಿತು ಕೇಳಿದಾಗ, ಮಾವು ಬಹಳ ಸಿಹಿಯಾಗಿ ಮತ್ತು ರಸಭರಿತವಾಗಿರಬೇಕು ಎಂದು ತಿಳಿಸಿದ್ದಾರೆ. ಇದು ಒಳ್ಳೆಯ ಹಾಗೂ ತಮಾಷೆಯ ಉತ್ತರವಾಗಿದೆ. ಮಾವು ಹೆಚ್ಚು ಬೆಲೆಯ ಹಣ್ಣು ಎಂದು ಹೇಳಿದ ಬಾಬರನದು ಮಾವಿನ ಮೇಲಿನ ಕಠಿಣ ಮನೋವೃತ್ತಿ ಇರಬಹುದು. ಭಾರತದಲ್ಲಿ ಇದ್ದ ಯೂರೋಪಿಯನ್ನರಿಗೆ ಮಾವಿನ ಬಗ್ಗೆ ಮಮತೆ ಉಂಟಾಗದೆ ಇರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಆದರೆ ಜವಾಹರಲಾಲ್ ನೆಹರುರವರು ಊಟವ ಮೇಜಿನಮೇಲೆ ಮಾವಿನ ಹಣ್ಣನ್ನು ಜಾಣತನದಿಂದ ಎರಡು ಹೋಳು ಮಾಡಿ ಓಟೆ ಪ್ರತ್ಯೇಕಿಸುವುದನ್ನು ನೋಡಿ ಅರಿಯಬೇಕಾಗಿದೆ. ಜವಾಹರಲಾಲರು ಮಾವಿನ ಹಣ್ಣು ಹೆಚ್ಚುವುದನ್ನು ಸ್ತ್ರೀಯರು ನೋಡಿ ಅನೇಕವೇಳೆ ಹೊಟ್ಟೆಕಿಚ್ಚು ಪಟ್ಟಿದ್ದಾರೆ.

ನಮ್ಮ ದೇಶದಲ್ಲಿ ಮಾವಿನ ಅಭಿವೃದ್ಧಿ ಮತ್ತು ತಳಿಗಳ ವರ್ಗೀಕರಣದ ಬಗ್ಗೆ ಸಾಕಷ್ಟು ಗಮನ ಹರಿಸದಿರುವುದು ದುರದೃಷ್ಟಕರ. ಮಾವಿನ ಪರಿಣಿತರು ಮತ್ತು ಉದ್ದಿಮೆಗಾರರು ಮಾವಿನ ತಳಿಗಳ ನಾಮಕರಣ ಮತ್ತು ವರ್ಗೀಕರಣದ ಬಗ್ಗೆ ತಪ್ಪು ಭಾವನೆಗಳನ್ನು ಕಲ್ಪಿಸಿದ್ದಾರೆ ಮತ್ತು ಒಂದೇ ಮಾವಿನ ತಳಿಯನ್ನು ವಿವಿಧ ಸ್ಥಳಗಳಲ್ಲಿ ಭಿನ್ನ ಹೆಸರುಗಳಿಂದ ಕರೆಯುತ್ತಾರೆ. ಇದರಿಂದ ನರ್ಸರಿಗಳಲ್ಲಿ ಎಚ್ಚರಿಕೆವಹಿಸದೆ ಲೇಬಲ್ ಹಾಕುವುದರಿಂದ ತಳಿಗಳ ಹೆಸರುಗಳು ತಪ್ಪಾಗಿವೆ. ಈ ದಿಶೆಯಲ್ಲಿ ಸಂಶೋಧಕರಿಗೂ, ಬೇಸಾಯಗಾರರಿಗೂ ಹಾಗೂ ವ್ಯಾಪಾರಿಗಳಿಗೂ, ವಿವಿಧ ತಳಿಗಳ ದರ್ಜೆ ಮತ್ತು ಸೂಕ್ತ ವಿವರಗಳು ತಿಳಿಯುವಂತೆ ವಿವರಿಸಿರುವ ಭಾರತೀಯ ಕೃಷಿ ಸಂಶೋಧನ

ಪರಿಷತ್‌ನ ವಿವಿಧ ತಳಿಗಳ ವೈಜ್ಞಾನಿಕ ವರ್ಗೀಕರಣದ ಈ ಪ್ರಯತ್ನವನ್ನು ನಾನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

1947ರಷ್ಟು ಹಿಂದೆಯೇ ಬರ್ಲಿನ್‌ನಲ್ಲಿ ನಡೆದ ಹನ್ನೆರಡನೆಯ ಅಂತರ ರಾಷ್ಟ್ರೀಯ ತೋಟಗಾರಿಕೆ ಸಮ್ಮೇಳನದ ಶಿಫಾರಸ್ಸಿನಂತೆ ಭಾರತದಲ್ಲಿ ಬೆಳೆಯುವ ವಿವಿಧ ಹಣ್ಣುಗಳ ಹೆಸರುಗಳನ್ನು ನಿರ್ದಿಷ್ಟಪಡಿಸುವ ತೋಟಗಾರಿಕೆ ಕೆಲಸಗಾರರ ಸಮ್ಮೇಳನವು ಭಾರತದಲ್ಲೂ ಕಾರ್ಯವನ್ನು ಆರಂಭಿಸಲು ನಿರ್ಧರಿಸಿತು. ಅದರಂತೆ, 1948ರಲ್ಲಿ ಮಾವಿನ ಯೋಜನೆಯೊಂದನ್ನು ಆರಂಭಿಸಲಾಯಿತು. ಮಾವಿನ ವಿವಿಧ ತಳಿಗಳ ವಿವರಗಳನ್ನು ಕ್ರೋಢೀಕರಿಸಲು ಮೂರು ವರ್ಷಗಳ ಕಾಲ ಬೇಕಾಯಿತು. ಸಂಗ್ರಹಿಸಿದ ಎಲ್ಲಾ ಆಧಾರಾಂಶಗಳು ಈ ಏಕ ವಿಷಯಿಕ ಪ್ರಬಂಧಕ್ಕೆ ಆಧಾರವಾಗಿವೆ. ಸಸ್ಯಾಂಗ, ಹೂವು, ಹಣ್ಣು ಮತ್ತು ಓಟೆಯ ಗುಣಗಳು ಸೇರಿ ತಳಿಗಳ ಸಂಪೂರ್ಣ ಬಾಹ್ಯ ರಚನೆಯನ್ನು ನಿರ್ಧರಿಸಲಾಗಿದ್ದು, ಪ್ರತಿ ತಳಿಯ ಹಣ್ಣಿನ ಬಣ್ಣದ ಚಿತ್ರವನ್ನು ಕೊಡಲಾಗಿದೆ. ತಳಿಯ ಮೂಲಸ್ಥಾನದ ಇತಿಹಾಸ, ಹೂ ಮತ್ತು ಹಣ್ಣುಬಿಡುವ ಕಾಲ ಹಾಗೂ ಅವುಗಳ ವಿಶಿಷ್ಟ ಹೆಸರಿನೊಂದಿಗೆ ಸಮಾನ ಹೆಸರುಗಳನ್ನು ವಿವರಿಸಲಾಗಿದೆ. ಈ ಅಧ್ಯಯನ ಉಪಯುಕ್ತ ಎಂದು ನಾನು ಬಯಸುತ್ತೇನೆ.

ಈ ಏಕ ವಿಷಯಿಕ ಪ್ರಬಂಧ ಬಹುಕಾಲದ ಅತ್ಯಗತ್ಯತೆಯ ಬಯಕೆಯನ್ನು ಪೂರೈಸುತ್ತದೆ ಮತ್ತು ಮಾವಿನ ಅಭ್ಯಾಸಿಗಳಿಗೆ ಒಂದು ಆಧಾರಗ್ರಂಥವಾಗುತ್ತದೆ. ಈ ಅಧ್ಯಯನದಲ್ಲಿ ಅನೇಕ ಮಾವಿನ ತಳಿಗಳು ಬಿಟ್ಟುಹೋಗಿವೆ. ಭಾರತೀಯ ಕೃಷಿ ಸಂಶೋಧನ ಪರಿಷತ್ತು ಶೀಘ್ರದಲ್ಲಿ ಈ ಕ್ಷೇತ್ರವನ್ನು ವಿಸ್ತರಿಸಿ ಮಾವನ್ನು ಕುರಿತು ಅಧ್ಯಯನವನ್ನು ಪೂರ್ಣಗೊಳಿಸುತ್ತದೆ ಎಂದು ಭಾವಿಸುತ್ತೇನೆ.

ಸಹಿ

ಅಜಿತ್ ಪ್ರಸಾದ್ ಜೈನ್

ಆಹಾರ ಮತ್ತು ಕೃಷಿ ಮಂತ್ರಿ

ಭಾರತ ಸರ್ಕಾರ

ಹೊಸ ದೆಹಲಿ

ಮೇ, 1957

ಪ್ರಸ್ತಾವನೆ

ಭಾರತದ ಹಣ್ಣುಗಳ ಪೈಕಿ ಮಾವು ಪ್ರಧಾನವಾದದ್ದು. ಇಲ್ಲಿನ ಹಣ್ಣಿನ ಬೇಸಾಯ ಕ್ಷೇತ್ರದಲ್ಲಿ ಮಾವು ಶೇಕಡಾ 70ರಷ್ಟು ಭಾಗ ಆಕ್ರಮಿಸಿಕೊಂಡಿದೆ. ಭಾರತದಲ್ಲಿ ಇದರ ಬೇಸಾಯ ಪುರಾತನವಾದದು. ಇಲ್ಲಿನ ಜನಜೀವನದಲ್ಲಿ ಮಾವು ಬಹಳ ನಿಕಟವಾಗಿದೆ.

ಬೌದ್ಧ ಯಾತ್ರಿಕರಾದ ಫಾಹಿಯಾನ್ ಮತ್ತು ಸಂಗ್-ಯನ್ ತಮ್ಮ ಪ್ರವಾಸ ಟಿಪ್ಪಣಿಗಳಲ್ಲಿ. ಆಮ್ರದಾರಿಕ ಎಂಬುವರು ಭಗವಾನ್ ಬುದ್ಧನ ವಿಶ್ರಾಂತಿ ಸ್ಥಳವಾಗಿ ಉಪಯೋಗಿಸಿಕೊಳ್ಳಲು ಆತನಿಗೆ ಮಾವಿನ ತೋಟವನ್ನು ಬಳುವಳಿಯಾಗಿ ಕೊಟ್ಟಿದ್ದನು ಎಂಬುವ ವಿಷಯವನ್ನು ಉಲ್ಲೇಖಿಸಿದ್ದಾರೆ. ಹಿಂದೆ ಭಾರತದಲ್ಲಿ ಪ್ರವಾಸಮಾಡಿದ್ದ ಇತರ ಮುಖ್ಯ ವಿದೇಶೀ ಪ್ರವಾಸಿಗಳಾದ ಹುಯನ್‌ತ್ಸಾಂಗ್ ಮತ್ತು ಇಬನ್ ಬಟೂಟ ತಮ್ಮ ಬರವಣಿಗೆಗಳಲ್ಲಿ ಅಲ್ಲಲ್ಲಿ ಮಾವಿನ ಮರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರಾಚೀನ ಶೋಧನೆಗಳಿಂದ ಭಾರತದ ಕಲೆಯಲ್ಲಿ ಮಾವಿಗೆ ಪ್ರಮುಖ ಸ್ಥಾನವಿದ್ದದು ತಿಳಿದು ಬಂದಿದೆ. ಸಾಂಚಿಯಲ್ಲಿನ ಕ್ರಿಸ್ತಪೂರ್ವ 150ರಷ್ಟು ಹಿಂದಿನ ಸ್ತೂಪ ಒಂದರಲ್ಲಿ, ಮಾವಿನ ಮರದ ಮತ್ತು ಹಣ್ಣಿನ ವಿವಿಧ ಭಂಗಿಯ ಕೆತ್ತನೆ ಇದೆ.

ಅನೇಕ ದೇಶಗಳಲ್ಲಿ ನಿರ್ದಿಷ್ಟ ಸಂಸ್ಕೃತಿಗಳಿಗೆ ಅನುಗುಣವಾಗಿ ವಿಶೇಷ ಮರಗಳು ಸಾಂಕೇತಿಕವಾಗಿವೆ. ಇದರಂತೆ ಇಂಗ್ಲೆಂಡಿನಲ್ಲಿ ಓಕ್, ಆಸ್ಟ್ರೇಲಿಯಾದಲ್ಲಿ ಮಿಮೋಸ ಜಪಾನಿನಲ್ಲಿ ಚೆರ್ರಿಬ್ಲಾಸಂ, ಅರೇಬಿಯಾದಲ್ಲಿ ಖರ್ಜೂರ, ಇಟಲಿಯಲ್ಲಿ ಆಲಿವ್ ಮರಗಳು ಆಯಾ ದೇಶಗಳ ಸಾಂಕೇತಿಕ ಮರಗಳಾಗಿವೆ. ಭಾರತದಲ್ಲಿ ಮಾವು, ಆಲ ಮತ್ತು ಅರಳಿ ಮರಗಳು ರಾಷ್ಟ್ರೀಯ ಮರಗಳಾಗಿವೆ, ಇವುಗಳಲ್ಲಿ ಮಾವು ತನ್ನ ಸೌಂದರ್ಯದೊಂದಿಗೆ ಉಪಯುಕ್ತವೂ ಆಗಿರುವುದಲ್ಲದೆ ಒಂದು ಹಣ್ಣಿಗೆ ಸಾರ್ವತ್ರಿಕ ಜನಪ್ರಿಯತೆ ದೊರೆಯಬಹುದಾದ ಗುಣಗಳನ್ನು ಹೊಂದಿದ್ದು ಹೆಚ್ಚು ಸಾಂಕೇತಿಕವಾಗಿದೆ. ಮಾವಿನ ಹಣ್ಣಿನ ಕಾಲದಲ್ಲಿ, ಮರದಲ್ಲಿ ಹೊಂಬಣ್ಣದ ಹಣ್ಣುಗಳು ತುಂಬಿರುತ್ತವೆ. ದಟ್ಟವಾದ ಮೃದುವಾದ ಹೊಳಪಿನ ಹಸುರು ಬಣ್ಣವು ನಿಸರ್ಗವೇ ಭಾರತದಲ್ಲಿ ಮಣ್ಣಿನ ಸಮೃದ್ಧಿಗೆ ಸಂಕೇತವಾಗಿರುವಂತೆ ಸೃಷ್ಟಿಸಿರುವಂತೆ ತೋರುತ್ತದೆ. ಭಾರತದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಾವಿನ ತಳಿಗಳಿವೆ ಎಂದು ಅಂದಾಜು ಮಾಡಲಾಗಿದೆ. ಹಿಂದೆ ಮಾವಿನ ಬೇಸಾಯಗಾರರು ಹೆಚ್ಚು ಮಾವಿನ ತಳಿಗಳನ್ನು ಬಿಡುಗಡೆ ಮಾಡಿದ ಪ್ರಸಿದ್ಧಿ ಪಡೆಯಲು ತಮ್ಮ ತಮ್ಮಲ್ಲಿ ಸ್ಪರ್ಧೆ ನಡೆಸಿದ್ದರು.

ಮಾವಿನ ಬೇಸಾಯದ ಸುದೀರ್ಘ ಇತಿಹಾಸದಲ್ಲಿ, ತಮ್ಮ ಮೆಚ್ಚಿನ ತಳಿಯನ್ನು ಶ್ಲಾಘಿಸಲು ಅಥವಾ ತಮ್ಮ ಹೆಸರುಗಳನ್ನು ಶಾಶ್ವತಗೊಳಿಸಲು ಅಸಂಖ್ಯಾತ ಪ್ರೀತಿ ಪಾತ್ರ ಹೆಸರು/ಹೆಸರುಗಳನ್ನು ರೂಪಿಸಿದ್ದಾರೆ. ಇದು ಮಾವಿನ ವಿವಿಧ ತಳಿಗಳ ನಾಮಕರಣದಲ್ಲಿ ಸಾಕಷ್ಟು ತಪ್ಪು ಭಾವನೆಗೆ ಕಾರಣವಾಗಿದೆ. ಆದ್ದರಿಂದ, ಮಾವಿನ ಬೇಸಾಯಗಾರ, ವ್ಯಾಪಾರಿ ಮತ್ತು ಸಂಶೋಧಕ ಇವರುಗಳಿಗೆ ಅರ್ಥವಾಗುವಂತೆ ಪ್ರತಿಯೊಂದು ತಳಿಯ ನಾಮಕರಣ ಮತ್ತು ಸೂಕ್ತವಾದ ವಿವರಣೆ ನೀಡಲು ಒಂದು ಶಾಸ್ತ್ರೀಯ ವರ್ಗೀಕರಣಕ್ಕೆ ಪ್ರಯತ್ನಿಸುವುದು ಅತ್ಯಗತ್ಯವಾಗುತ್ತದೆ.

ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಮುಖ್ಯವಾದ ಮಾವಿನ ತಳಿಗಳ ವಿವರಣೆ ನೀಡಲು ಭಾರತೀಯ ಕೃಷಿ ಸಂಶೋಧನಾ ಪರಿಷತ್ 1948 ರ ಸೆಪ್ಟಂಬರ್ ತಿಂಗಳಲ್ಲಿ ಒಂದು ಯೋಜನೆಯನ್ನು ಪ್ರಾರಂಭಿಸಿದೆ. ಇದರಲ್ಲಿ ಬಹಳ ಮುಖ್ಯವಾದ ಇನ್ನೂರ ಹತ್ತು ತಳಿಗಳನ್ನು ಅಭ್ಯಾಸಕ್ಕಾಗಿ ತೆಗೆದುಕೊಂಡು ಇವುಗಳನ್ನು ಕುರಿತು ಎಲ್ಲಾ ಅಂಶಗಳಲ್ಲೂ ವಿಸ್ತೃತ ಆಧಾರಾಂಶಗಳನ್ನು ಸಂಗ್ರಹಿಸಲಾಯಿತು. ಈ ಮಾಹಿತಿಯನ್ನು ಈಗ ಮುಖ್ಯ ಹಣ್ಣಿನ ಬಗ್ಗೆ ಆಸಕ್ತಿ ಇರುವ ವಿಜ್ಞಾನಿಗಳು ಮತ್ತು ಇತರರಿಗಾಗಿ ಕ್ರೋಢೀಕರಿಸಿದೆ. ಈ ಅಭ್ಯಾಸ ರಾಜ್ಯಗಳ ಪುನರ್ ವಿಂಗಡಣೆಗೆ ಮೊದಲು ಪೂರ್ಣವಾಗಿದ್ದು ಮಾವಿನ ತಳಿಗಳ ಮೂಲ ಮತ್ತು ವ್ಯಾಪ್ತಿಯು ರಾಜ್ಯ ಪುನರ್ ವಿಂಗಡಣೆಗೆ ಮೊದಲಿನ ಕಾಲದ ರಾಜ್ಯಗಳನ್ನು ಸೂಚಿಸುತ್ತದೆ.

ಈ ಏಕ ವಿಷಯಿಕ ಪ್ರಬಂಧದ ಗ್ರಂಥಕರ್ತರಾದ ಎಸ್. ಆರ್. ಗಂಗೂಲಿ, ರಣಜಿತ್‌ಸಿಂಗ್, ಎಸ್. ಎಲ್. ಕಟ್ಯಾಲ್ ಮತ್ತು ದಲಜಿತ್‌ಸಿಂಗ್ ಅವರುಗಳು ತಮ್ಮ ಕೆಲಸವನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ. ಹಲವಾರು ವರ್ಷಗಳ ಕಾಲ ಮುಂದುವರಿದ ಅವರ ಶ್ರಮಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಇವರುಗಳಿಗೆ ಭಾರತ ಸರ್ಕಾರದಲ್ಲಿ ಅಸಿಸ್ಟೆಂಟ್ ಅಗ್ರಿಕಲ್ಚರ್ ಕಮಿಷನರ್ ಆಗಿರುವ ಡಾ| ಶ್ಯಾಮ್ ಸಿಂಗ್‌ರವರಿಂದ ಅಪಾರವಾದ ಮಾರ್ಗದರ್ಶನ ದೊರಕಿದೆ. ಮೆಸರ್ಸ್. ರಾಜೇಂದ್ರ ಐಸ್ ಅಂಡ್ ಕೋಲ್ಡ್ ಸ್ಟೋರೇಜ್ ಕಂಪನಿ, ಡೆಲ್ಲಿ, ದಾಸ್ತಾನು ಸೌಲಭ್ಯ ಒದಗಿಸಿದ್ದಾರೆ. ಮಿನಿಸ್ಟ್ರಿ ಆಫ್ ಡಿಫೆನ್ಸ್‌ನ ಸೆಂಟ್ರಲ್ ಫೋಟೋಸ್ ರಿಪ್ರೊಡಕ್ಷನ್ ಸೆಕ್ಷನ್ ಆಫ್ ಏರ್ ಹೆಡ್‌ಕ್ವಾರ್ಟರ್ಸ್, ಛಾಯಾಗ್ರಹಣ ಕಾರ್ಯದಲ್ಲಿ ನೆರವು ನೀಡಿದ್ದಾರೆ ಮತ್ತು ಮಾಲಿಹ ಬಾದ್‌ನ ಸರ್ದಾರ್ ನರ್ಸರಿ ಮಾಲೀಕರಾದ ಶ್ರೀ ಎಂ. ಎಲ್. ಗರ್ಗ್ ಅವರು ತಮ್ಮಲ್ಲಿ ಸಂಗ್ರಹಿಸಿರುವ ಅಪಾರ ಮಾವಿನ ತಳಿಗಳನ್ನು ಒದಗಿಸಿದ್ದಾರೆ. ಕೆಲವು ಚಿತ್ರಗಳನ್ನು ಶ್ರೀ ಕೆ. ಸಿ. ನಾಯಕ್ ಮತ್ತು ಎಸ್. ಆರ್. ಗಂಗೂಲಿಯವರು ಬರೆದಿರುವ 'ಸೌತ್ ಇಂಡಿಯ ಮ್ಯಾಂಗೋಸ್' ಎಂಬ ಮದ್ರಾಸ್ ಸರ್ಕಾರದ ಏಕ ವಿಷಯಿಕ ಪ್ರಬಂಧ ಪ್ರಕಟಣೆಯಿಂದ ತೆಗೆದುಕೊಳ್ಳಲಾಗಿದೆ.

ಈ ಏಕ ವಿಷಯಿಕ ಪ್ರಬಂಧವನ್ನು ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನಲ್ಲಿ ಸಂಪಾದಕರಾಗಿರುವ ಶ್ರೀ ಪ್ರೇಮನಾಥ್ ಅವರು ಪರಿಣಾಮಕಾರಿಯಾಗಿ ಸಂಪಾದನೆ ಮಾಡಿದ್ದಾರೆ ಇದರಲ್ಲಿನ ಬಣ್ಣದ ಚಿತ್ರಗಳನ್ನು ಭಾರತ ಕೃಷಿ ಸಂಶೋಧನ ಪರಿಷತ್‌ನ ಕಲಾವಿದ ಹಾಗೂ ಛಾಯಾಚಿತ್ರಗ್ರಾಹಕರಾದ ಶ್ರೀ ಕೆ. ಕೆ. ಓರಿಚಿ ಅವರು ತಯಾರಿಸಿದ್ದಾರೆ. ಮಾವಿನ ಅಭಿರುಚಿಯುಳ್ಳವರೆಲ್ಲರು, ಬೇಸಾಯಗಾರರು ಹಾಗೂ ಪರಿಣತರಿಗೆಲ್ಲ ಈ ಪುಸ್ತಕ ಉಪಯುಕ್ತವಾಗುತ್ತದೆ ಎಂದು ಭಾವಿಸಲಾಗಿದೆ.

ಹೊಸ ದೆಹಲಿ
ಜೂನ್, 1957

ಎಂ. ಎಸ್. ರಾಂಧವ, ಡಿ. ಎಸ್‌ಸಿ., ಐ. ಸಿ. ಎಸ್.
ಉಪಾಧ್ಯಕ್ಷ
ಭಾರತೀಯ ಕೃಷಿ ಸಂಶೋಧನ ಪರಿಷತ್

ಪರಿವಿಡಿ

	ಕುಲಪತಿಗಳ ಹಾರೈಕೆ	iii
	ಸಂಪಾದಕರ ಮಾತು	v
	ಮುನ್ನುಡಿ	vi
	ಪ್ರಸ್ತಾವನೆ	ix
	ಪರಿವಿಡಿ	xiii
ಭಾಗ–1	**ಮಾವಿನ ತಳಿಗಳು**	
ಅಧ್ಯಾಯ 1	ಭಾರತದಲ್ಲಿ ಮಾವು	3
2	ಮಾವಿನ ಸಸಶಾಸ್ತ್ರ	16
ಭಾಗ–2	**ಮಾವಿನ ಬೇಸಾಯ**	
ಅಧ್ಯಾಯ 1	ಬೇಸಾಯ	331
2	ಕೀಟ ಪೀಡೆಗಳು ಮತ್ತು ರೋಗಗಳು	368
ಅನುಬಂಧ–1	ತಿನ್ನುವ ವಾಣಿಜ್ಯ ಮಾವಿನ ತಳಿಗಳು	387
ಅನುಬಂಧ–2	ಪರಿಮಾಣಾತ್ಮಕ ಗುಣಗಳು	390
	ಪಾರಿಭಾಷಿಕ ಶಬ್ದಕೋಶ	409
	ಆಧಾರ ಗ್ರಂಥಗಳು	413

ಮಾವು

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
1	4	ಬಿಟ್ಟು	ಬಿಟ್ಟು
	5	ಹಿಡಿದ್ಮ	ಹಿಡಿದು
4	25	ಹರವು	ಹಲವು
11	2	ಬೆಳೆಯಬಾರದು	ಬೆಳೆಯಲಾರದು
44	7	ಅದೆ	ಅಬೆ
91	25	ಕೂಂಮಟ್ಟದಲ್ಲಿರುತ್ತವೆ	ಮಟ್ಟದಲ್ಲಿರುತ್ತವೆ
	25	ಡೆ	ಡೋಕಿ
121	22	ತೆಳುವಿನಂದ	ತೆಳುವಿನಿಂದ
139	6	ಣಂದಿನ	ಹಿಂದಿನ
	17	ವೃಷ್ಣ	ಪುಷ್ಪ
142	25	ಹನರ್ದ	ಹಣ್ಣಿನ ದರ್ಜೆ
182	10	ಕೊಲಂಬನ	ಕೊಲಂಬನ್
232	15	ಜೆಣ್ಣಿನ ದರ್ಜೆ	ಹಣ್ಣಿನ ದರ್ಜೆ
256	3	ಸ್ವಲ್ಪ	ಸ್ವಲ್ಪ
	7	ಬೌನ್	ಬ್ರೌನ್
		ಮತ್ತು	ಮತ್ತು

ಭಾಗ - 1

ಮಾವಿನ ತಳಿಗಳು

ಹಿಟ್ಟು ಮಾಡಿ ಇದರಿಂದ ಗಂಜಿ ತಯಾರಿಸಿ ಕುಡಿಯುತ್ತಾರೆ; ಇದು ಅನೇಕ ಔಷಧೀಯ ಗುಣಗಳನ್ನು ಹೊಂದಿದೆ. ಮಾಗಿದ ಹಣ್ಣು ಚೈತನ್ಯದಾಯಕ, ಪುಷ್ಟಿದಾಯಕ, ಮೂತ್ರಸ್ರಾವ ಉತ್ತೇಜಕ ಮತ್ತು ವಿರೇಚಕವೆಂದು ಪರಿಗಣಿಸಲಾಗಿದೆ. ಮಾವಿನ ಎಲೆ ಸುಡುವುದರಿಂದ ಬರುವ ಹೊಗೆಯನ್ನು ಬಿಕ್ಕಳಿಕೆ ಮತ್ತು ಇತರ ಗಂಟಲು ಬೇನೆಗಳಿಗೆ ಪರಿಣಾಮಕಾರಿಯಾದ ಔಷಧಿಯೆಂದು ಭಾವಿಸಲಾಗಿದೆ. ಮಾವಿನ ತಿರುಳನ್ನು ಗೂರಲು (ಉಬ್ಬಸ) ಮತ್ತು ಅತಿಸಾರಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಬೇಯಿಸಿ ಸಕ್ಕರೆ ಹಾಕಿದ ಎಳೆಗಾಯಿಯ ತಿರುಳು ಕಾಲರಾ ಮತ್ತು ಪ್ಲೇಗು ಪೀಡಿತ ರೋಗಿಗಳಿಗೆ ಬಹಳ ಉಪಯುಕ್ತ ಔಷಧಿ ಎಂದು ಪರಿಗಣಿಸಲಾಗಿದೆ. ಮಾವಿನ ಮರದಲ್ಲಿ ಸುರಿಯುವ ಗೋಂದು ಮತ್ತು ಹಣ್ಣಿನ ಕಾಂಡ ತುದಿಯಲ್ಲಿ ಒಸರುವ ರಾಳಗಳಿಗೆ ನಿಂಬೆ ಹಣ್ಣಿನ ರಸವನ್ನು ಸೇರಿಸಿ ಚರ್ಮವ್ಯಾಧಿ ಮತ್ತು ಕಜ್ಜಿ ರೋಗಗಳಿಗೆ ಪರಿಹಾರವಾಗಿ ಉಪಯೋಗಿಸುತ್ತಾರೆ. ಮಾವಿನ ಮರದ ತೊಗಟೆಯನ್ನು ಚರ್ಮ ಹದಮಾಡುವುದಕ್ಕೆ ಹಾಗೂ ಇದರ ದಾರುವನ್ನು ಅನೇಕ ಕಾರ್ಯಗಳಿಗೆ ಉಪಯೋಗಿಸುತ್ತಾರೆ.

ಮೂಲಸ್ಥಾನ ಮತ್ತು ಇತಿಹಾಸ

ಡೀಕ್ಯಾಂಡೋಲ್ (1884) ಪ್ರಕಾರ ಮಾವು ಕನಿಷ್ಠ ಪಕ್ಷ 4,000 ವರ್ಷಗಳಿಂದಲೂ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ದಕ್ಷಿಣ ಏಷ್ಯಾ ಅಥವಾ ಮಲಯಾ ದ್ವೀಪಸ್ತೋಮ ಎಂದು ಆತ ಅಭಿಪ್ರಾಯಪಡುತ್ತಾನೆ. ಇದರ ಮೂಲಸ್ಥಾನದ ಬಗ್ಗೆ ಪೋಪ್‌ನೋ (1920) ಸಹ ಇಂತಹುದೇ ಅಭಿಪ್ರಾಯ ಹೊಂದಿದ್ದು, ಇದು ಬಹುವಾಗಿ ಪೂರ್ವಭಾರತ, ಅಸ್ಸಾಂ, ಬರ್ಮ ಇಲ್ಲವೇ ಪ್ರಾಯಶಃ ಮಲಯ ಇರಬಹುದು ಎಂದು ಸೂಚಿಸಿದ್ದಾರೆ. ಮುಖರ್ಜಿಯವರ (1951) ಪ್ರಕಾರ ಮ್ಯಾಂಜಿಫೆರಾ ಜಾತಿಯ ಮೂಲಸ್ಥಾನ ಪ್ರಾಯಶಃ ಬರ್ಮಾ, ಸಯಾಂ, ಇಂಡೋಚೈನಾ ಮತ್ತು ಮಲಯ ಪರ್ಯಾಯದ್ವೀಪ; ಆದರೆ ಮಾವು ಸ್ವತಃ ಅಸ್ಸಾಂ–ಬರ್ಮಾ ವಲಯದಲ್ಲಿ ಉದ್ಭವಿಸಿದೆ. ಈತನ ಈ ಅಭಿಪ್ರಾಯ, ಈ ಜಾತಿಯ ಇದರ ಸಮೀಪ ಪ್ರಭೇದಗಳ ಸಸ್ಯ ಭೌಗೋಳಿಕ ಹರವು ಪಳೆಯುಳಿಕೆಯ ದಾಖಲೆಗಳು ಹಾಗೂ ಭಾರತ ದೇಶದಲ್ಲಿರುವ ಹಂಚಿಕೆ ಅಸಂಖ್ಯಾತ ಕಾಡು ಮತ್ತು ಪಳಗಿಸಿದ ತಳಿ ಮೊದಲಾದವುಗಳ ವಿವರವಾದ ಅಧ್ಯಯನವನ್ನಾಧರಿಸಿದೆ. ಅಲ್ಲದೆ ಮಾವಿಗೆ ಮಲಯಾದಲ್ಲಿ ಮ್ಯಾಂಗ್ಯಾ ಎಂದು ಹೆಸರಿದ್ದು ಈ ಪದ ತಮಿಳಿನ ಮಾಂಗಾ ಎಂಬ ಸಮಾನ ಪದವನ್ನು ಬಹಳವಾಗಿ ಹೋಲುವುದರಿಂದ ಮಾವಿನ ಮೂಲಸ್ಥಾನ ಮಲಯಾ ಅಲ್ಲವೆಂದು ಸೂಚಿಸಿದ್ದಾನೆ. ನಿಜವಾದ ಕಾಡು ಬಗೆಯ (ಸ್ವಾಭಾವಿಕ) ಮಾವು ಚಿತ್ತಗಾಂಗ್ ಬೆಟ್ಟಗಳು ಮತ್ತು ಅಸ್ಸಾಂನಲ್ಲಿ ಬೆಳೆಯುವುದು ಕಂಡುಬರುತ್ತದೆ. ಆದರೆ, ಮಲಯಾ

ಮಾವನ್ನು ಆಮ್ರ, ಚೂತ, ರಸಾಲ, ಸಹಕಾರ, ಅತಿಸೌರಭ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗಿದೆ ಮತ್ತು ಮಾವಿನ ಮರವನ್ನು ಬೇಡಿದುದನ್ನು ನೀಡುವ ಕಲ್ಪವೃಕ್ಷವೆಂದು ವಿವರಿಸಲಾಗಿದೆ. ಆಮ್ರಪಾಲಿ ಎಂಬ ಒಬ್ಬ ದೊರೆ ಮತ್ತು ಆಮ್ರಪಾಲಿ ಎಂಬ ವೇಶ್ಯಾಂಗನೆ ಇತಿಹಾಸದಲ್ಲಿರುವುದು ಕಂಡುಬರುತ್ತದೆ. ಪಾಣಿನಿ ಎಂಬ ವ್ಯಾಕರಣಶಾಸ್ತ್ರಜ್ಞ ಮನುಷ್ಯರಿಗೆ ಆಮ್ರಗುಪ್ತ ಮತ್ತು ನಗರಗಳಿಗೆ ಆಮ್ರಪುರ ಎಂಬ ಹೆಸರುಗಳನ್ನು ವಿವರಣೆಗಾಗಿ ಕೊಟ್ಟಿದ್ದಾನೆ. ಆಮ್ರಗಂಧಕ, ಆಮ್ರನಿಸ, (ಸಿ.ರಪ – ರೆಕ್ಲಿನೇಟ), ಆಮ್ರಗಂಧಿಹರಿತ್ರ ಮುಂತಾದ ಸಸ್ಯಗಳಲ್ಲಿ ಅವುಗಳಿಗೊಂದು ಸ್ಥಾನವನ್ನು ಕಲ್ಪಿಸಿಕೊಡಲು ಮಾವಿನ ಹೆಸರನ್ನು ಸೇರಿಸಲಾಗಿದೆ. ಕಾಳಿದಾಸನ 'ಮೇಘದೂತ'ದಲ್ಲಿ ಕೂಡ ಒಂದು ಪರ್ವತಕ್ಕೆ ಆಮ್ರಕೂಟ ಎಂಬ ಹೆಸರನ್ನು ಕೊಡಲಾಗಿದೆ.

ಶತಪಥ ಬ್ರಾಹ್ಮಣದಲ್ಲಿಯೂ ಕೂಡ ವೇದ ಕಾಲಗಳಲ್ಲಿ ಮಾವಿಗೆ ಇದ್ದ ಸರ್ವೋತ್ಕೃಷ್ಟತೆಯನ್ನು ಒತ್ತಿ ಹೇಳಲಾಗಿದೆ. ಶೈವರ ಸಾಹಿತ್ಯದಲ್ಲಿ ಲಿಂಗವನ್ನು ಕೆಲವು ಸಾರಿ ಆಮ್ರ–ತಾಕೇಶ್ವರ ಎಂದು ಸೂಚಿಸಲಾಗಿದೆ ; ಮತ್ತು ಕಂಚಿಯಲ್ಲಿರುವ ಏಕಾಮ್ರನಾಥ ದೇವಸ್ಥಾನವು ಇಂದಿಗೂ ಸಹ ಪೂರ್ವಕಾಲದಲ್ಲಿ ಮಾವಿಗೆ ಇದ್ದ ಧಾರ್ಮಿಕ ಪ್ರಾಮುಖ್ಯತೆಗೆ ಪ್ರಮಾಣವಾಗಿದೆ. ಬೌದ್ಧರ ಕಾಲದಲ್ಲಿ ಅಮರಸಿಂಹನು ಬರೆದಿರುವ ಅಮರ ಕೋಶದಲ್ಲಿ ಈ ಉಷ್ಣವಲಯದ ಫಲರಾಜನ ಅಮರ ಗುಣಗಾನ ಕಂಡುಬರುತ್ತದೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಮಾವಿನ ತೋಟ ಮತ್ತು ಮಾವಿನ ಕಾಡುಗಳ ಉಲ್ಲೇಖಗಳನ್ನು ಕಾಣಬಹುದು. ವಾಲ್ಮೀಕಿ ಮಹಾಕವಿಗೆ ಮಾವಿನ ಬಗ್ಗೆ ಇರುವ ಅಪಾರ ಮಮತೆ ಎಣೆಯಿಲ್ಲದ ಪದ್ಯಗಳ ಮೂಲಕ ವ್ಯಕ್ತವಾಗುತ್ತದೆ. ಕಾಳಿದಾಸನೇ ಮೊದಲಾದ ಅನೇಕ ಕವಿಗಳು ಮಾವಿನ ಹೂವನ್ನು ಕಾಮದೇವ ಮನ್ಮಥನ ಬಾಣಗಳಲ್ಲಿ ಒಂದೆಂದು ವರ್ಣಿಸಿದ್ದಾರೆ ; ಜನಪದ ಗೀತೆಗಳಲ್ಲಿ ಮಾವಿನ ನರುಗಂಪು ವಿರಹಿಗಳಿಗೆ ಯಾತನೆಯನ್ನುಂಟುಮಾಡುತ್ತದೆಂದು ವರ್ಣಿಸಲಾಗಿದೆ. ಅತ್ಯಂತ ಪ್ರಾಯೋಗಿಕ ಬುದ್ಧಿಯ ಚರಕ ತನ್ನ 'ಚರಕ ಸಂಹಿತ' ಎಂಬ ವೈದ್ಯವಿಜ್ಞಾನ ಪುಸ್ತಕದಲ್ಲಿ ಮಾವು ಬಹಳ ಮುಖ್ಯವಾದ ಔಷಧಿಯೆಂದು ವಿವರಿಸಿದ್ದಾನೆ. ಪ್ರಾಚ್ಯ ಸಂಶೋಧನೆಯಿಂದಲೂ ಸಹ ಮಾವು ಭಾರತೀಯ ಕಲೆಯಲ್ಲಿ ಮುಖ್ಯಸ್ಥಾನವನ್ನು ಗಳಿಸಿದ್ದು ಸಾಂಚಿಯಲ್ಲಿನ ಸ್ತೂಪದಲ್ಲಿ ಬಗೆ ಬಗೆಯ ಮಾವಿನ ಮರಗಳು ಮತ್ತು ಬಗೆ ಬಗೆಯ ಮಾವಿನ ಹಣ್ಣುಗಳ ಕೆತ್ತನೆ ಕಂಡುಬರುತ್ತದೆ.

ಭಾರತದ ರಾಜಮಹಾರಾಜರುಗಳು ತಮ್ಮ ತೋಟಗಳಲ್ಲಿ ಅಪೂರ್ವವಾದ ಮಾವಿನ ತಳಿಗಳನ್ನು, ವಿಶಾಲ ಮಾವಿನ ತೋಪುಗಳನ್ನು ಹೊಂದಿರುವುದರ ಬಗ್ಗೆ ಹೆಮ್ಮೆಪಡುತ್ತಿದ್ದರು. ಆದ್ದರಿಂದ ಮೊಗಲ್ ಸಾಮ್ರಾಜ್ಯ ಸಾಮ್ರಾಟ್ ಅಕ್ಬರನು,

ದರ್ಭಾಂಗದ ಹತ್ತಿರದ ತನ್ನ ತೋಟ ಲಾಗ್‌ಬಾಗ್‌ನಲ್ಲಿ 1,00,000 ಮಾವಿನ ಮರಗಳನ್ನು ನೆಡಿಸಿದ್ದನು. ಅನ್-ಇ-ಅಕ್ಬರಿಯಲ್ಲಿ ಮಾವಿನ ತಳಿಗಳ ದರ್ಜೆ ಹಾಗೂ ಹಣ್ಣುಗಳ ಪ್ರಭೇದ, ವೈಶಿಷ್ಟ್ಯಗಳನ್ನು ಕುರಿತ ಸುದೀರ್ಘ ಮಾಹಿತಿ ದೊರೆಯುತ್ತದೆ.

ಬೇಸಾಯದಲ್ಲಿರುವ ಮಾವಿಗೆ ಸಂಬಂಧಿಸಿದ ಅನೇಕ ಪ್ರಭೇದಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ದೊರೆಯುತ್ತವೆ. ಭಾರತದಲ್ಲಿ ಮ್ಯಾಂಜಿಫೆರಾ ಇಂಡಿಕಾ ಲಿನ್. ಪ್ರಭೇದವನ್ನು ಬಿಟ್ಟರೆ ಇನ್ನೊಂದು ಪ್ರಭೇದ ಮಾತ್ರ ಇದೆ. ಈ ಪ್ರಭೇದವೆಂದರೆ ಮ್ಯಾಂಜಿಫೆರಾ ಸಿಲ್ವಾಟಿಕ್ ರಾಕ್ಸ್‌ಬ. ಇದು ಭಾರತದ ಈಶಾನ್ಯ ಭಾಗದ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಕಾಡುಮರವಾಗಿ ಬೆಳೆಯುತ್ತದೆ. ಬೇಸಾಯದಲ್ಲಿರುವ ಎಲ್ಲಾ ಮಾವಿನ ತಳಿಗಳು ಮತ್ತು ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆದಿರುವ ಮಾವಿನ ಸಸ್ಯಗಳು ಮ್ಯಾಂಜಿಫೆರಾ ಇಂಡಿಕಾ ಲಿನ್. ಪ್ರಭೇದಕ್ಕೆ ಸೇರುತ್ತವೆ. ಫಿಲಿಪ್ಪೈನ್ಸ್ ಬೇಸಾಯದಲ್ಲಿರುವ ಬಹುತೇಕ ತಳಿಗಳು ಮತ್ತು ಇಂಡೋಚೀನಾ ಮುಂತಾದ ಇತರ ದೇಶಗಳಲ್ಲಿ ಬಹು ಭ್ರೂಣ ಬಗೆಯವಾಗಿದ್ದು ತಮ್ಮ ಮೂಲ ತಳಿಗಳನ್ನು ಹೋಲುತ್ತವೆ. ಇನ್ನೊಂದು ಕಡೆ, ಭಾರತದಲ್ಲಿ ಬೇಸಾಯದಲ್ಲಿರುವ ತಳಿಗಳ ಪೈಕಿ ಪಶ್ಚಿಮತೀರ ಪ್ರದೇಶಗಳಲ್ಲಿನ ಸುಮಾರು ಹತ್ತು ತಳಿಗಳನ್ನು ಬಿಟ್ಟರೆ ಇನ್ನುಳಿದ ಎಲ್ಲಾ ತಳಿಗಳೂ ಏಕಭ್ರೂಣ ಬಗೆಯವಾಗಿವೆ. ಇದಲ್ಲದೆ, ಮಾವು ಅನ್ಯಪರಾಗದಿಂದ ಗರ್ಭಧಾರಣೆ ಮಾಡುವ ಸ್ವಭಾವವುಳ್ಳದ್ದಾದ್ದರಿಂದ ಅಸಂಖ್ಯಾತ ತಳಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿದೆ. ಓಟೆಯಿಂದ ಬೆಳೆಸಿದ ಪ್ರತಿಯೊಂದು ಸಸಿಯೂ ಸಮರ್ಥವಾದ ಒಂದು ಹೊಸ ತಳಿಯಾಗುತ್ತದೆ. ಮಾವು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇರುವ ಕಾರಣ ಇದರ ಬೇಸಾಯ ದೇಶದ ಎಲ್ಲಾ ಭಾಗಗಳಿಗೆ ವ್ಯಾಪಿಸಿದೆ ; ಮತ್ತು ಇದನ್ನು ಶತಮಾನಗಳಿಂದಲೂ ಓಟೆಯಿಂದ ವೃದ್ಧಿ ಮಾಡುತ್ತಿರುವುದರ ಕಾರಣದಿಂದಾಗಿ ಮಾವಿನ ತಳಿಗಳು ಹೆಚ್ಚಿವೆ. ಭಾರತದಲ್ಲಿ ಮಾವಿನ ಮರವನ್ನು ನಿರ್ಲಿಂಗ ರೀತಿಯಿಂದ ವೃದ್ಧಿ ಮಾಡುವುದು ಕೇವಲ 400 ವರ್ಷಗಳಿಂದ ಈಚೆಗೆ ಪ್ರಾರಂಭವಾಗಿದೆ. ಇದರಿಂದ ಆಕಸ್ಮಿಕವಾಗಿ ಉತ್ತಮ ತಳಿಯಾಗಿ ಉದ್ಭವಿಸಿದ ಅನೇಕ ತಳಿಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಭಾರತದಲ್ಲಿರುವ ಮಾವಿನ ತಳಿಗಳ ಸಂಖ್ಯೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಎಂದು ಅಂದಾಜು ಮಾಡಲಾಗಿದೆ ; ಪಂಜಾಬ್ ಹಾಗೂ ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿನ ಅಸಂಖ್ಯಾತ ರಸಪೂರಿತ ತಳಿಗಳನ್ನು ಗಣನೆಗೆ ತೆಗೆದುಕೊಂಡರೆ, ಈ ಸಂಖ್ಯೆ ಅಪಾರವಾಗುವುದು ನಿಶ್ಚಿತ.

ವರ್ಗೀಕರಣ ಮತ್ತು ನಾಮಕರಣ

ಭಾರತದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾವು ಇರುವುದರಿಂದ ಮತ್ತು ಹೆಚ್ಚು ತಳಿಗಳನ್ನು ಉತ್ಪಾದಿಸಬೇಕೆಂಬ ಅನೇಕ ಜನ ಸ್ಪರ್ಧಿ ಮತ್ತು ಪ್ರತಿಸ್ಪರ್ಧಿಗಳ ಸತತ ಪ್ರಯತ್ನದಿಂದಾಗಿ ಅತಿ ದೊಡ್ಡ ಸಂಖ್ಯೆಯಲ್ಲಿ ಮಾವಿನ ತಳಿಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಅಲ್ಲದೆ, ಆಕರ್ಷಕವಾದ ಮತ್ತು ಅಲಂಕಾರವಾದ ಹೆಚ್ಚು ತಳಿಗಳನ್ನು ಉಳಿಸಿಕೊಳ್ಳಲು ರೂಪುಗೊಳಿಸುವುದು ಸಾಧ್ಯವಾಗಿದೆ. ಈ ಕಾರ್ಯದಲ್ಲಿ ತೊಡಗಿರುವ ಉತ್ಸಾಹಶಾಲಿ ಕಾರ್ಯಕರ್ತರು ಈ ಕಾರ್ಯವನ್ನು ತಮ್ಮ ಮನಸ್ಸಿಗೆ ಸಮಾಧಾನವಾಗುವಂತೆ ಮಾವಿಗೆ ಹೆಸರುಗಳನ್ನು ಕೊಡುವುದರಲ್ಲಿ ಅಪಾರ ಕೆಲಸವನ್ನು ಮಾಡಿದ್ದಾರೆ (ಬರ್ನ್ಸ್ ಮತ್ತು ಪ್ರಯಾಗ್ 1921).

ಮುಂದೆ ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಉದ್ದೇಶಪೂರ್ವಕವಾಗಿಯೋ ಅಥವಾ ಇಲ್ಲದೆಯೋ ತಂದು ಬೆಳೆಸಿದ ಮಾವಿನ ತಳಿಗಳಿಗೆ ಹೊಸ ಹೆಸರುಗಳನ್ನು ಕೊಡಲಾಗಿದೆ. ಆದ್ದರಿಂದ ಅನೇಕ ತಳಿಗಳಿಗೆ ದೇಶದ ವಿವಿಧ ಭಾಗಗಳಲ್ಲಿ ಭಿನ್ನ ಭಿನ್ನವಾದ ಹೆಸರುಗಳಿವೆ. ಇದರಿಂದ ಮಾವಿನ ತಳಿಗಳಿಗೆ ನಾಮಕರಣ ಮಾಡುವುದರಲ್ಲಿ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿವೆ: ಉದಾಹರಣೆಗೆ, ಉತ್ತರ ಪ್ರದೇಶದ ತೋತಾಪುರಿ ಮತ್ತು ದಕ್ಷಿಣ ಭಾರತದಲ್ಲಿರುವ ಬೆಂಗಳೂರಾ ಎಂಬ ಹೆಸರುಗಳು ಒಂದೇ ತಳಿಗೆ ಅನ್ವಯಿಸುತ್ತವೆ; ಸುವರ್ಣರೇಖಾ ಮತ್ತು ಸಿಂಧೂರಿಯಾ ತಳಿಗಳ ಸಂಬಂಧದಲ್ಲಿಯೂ ಇದೇ ಪರಿಸ್ಥಿತಿ ಇವೆ. ಇಷ್ಟು ಮಾತ್ರವಲ್ಲ ಒಂದೇ ಹೆಸರನ್ನು ಅನೇಕ ವೇಳೆ ಸಂಪೂರ್ಣವಾಗಿ ಭಿನ್ನ ತಳಿಗಳಿಗೆ ಬಳಸಲಾಗಿದೆ. ಉದಾಹರಣೆಗೆ, ಕಲ್ಕತ್ತಾದಲ್ಲಿ ಮಾರಾಟವಾಗುತ್ತಿರುವ ಮಾಲ್ಡಾ ತಳಿಯು ಉತ್ತರಪ್ರದೇಶದ ಪೂರ್ವಭಾಗದಲ್ಲಿರುವ ಮಾಲ್ಡಾ ತಳಿಗಿಂತ ಭಿನ್ನವಾಗಿದೆ. ಹಾಗೆಯೇ ಉತ್ತರ ಪ್ರದೇಶದ ವಿವಿಧ ಭಾಗಗಳಲ್ಲಿರುವ ಸಫೇದ ತಳಿಗಳು ಭಿನ್ನವಾಗಿರುವುದು ವಾಸ್ತವಿಕ ಸಂಗತಿಯಾಗಿದೆ.

ಮಾವಿನ ತಳಿಗಳ ನಾಮಕರಣ ಮತ್ತು ಗುರುತಿಸುವುದರಲ್ಲಿ ನರ್ಸರಿ ಮಾಲೀಕರ ಸ್ವಾರ್ಥ ಇನ್ನೂ ಅಡ್ಡಿಯನ್ನುಂಟುಮಾಡಿದೆ. ಗಿರಾಕಿಗಳನ್ನು ಆಕರ್ಷಿಸಲು ಮತ್ತು ಮರುಳುಗೊಳಿಸಲು ಆಧಾರರಹಿತ ಹೊಸ ಹೆಸರುಗಳನ್ನು ಕೊಡಲಿಚ್ಛಿಸುವುದು ಕಂಡುಬರುತ್ತದೆ. ಮಾವಿನ ತಳಿಗಳಿಗೆ ಹಣ್ಣಿನ ಗುಣಗಳನ್ನು ಊಹೆ ಮಾಡಿಕೊಂಡು ಅನೇಕ ವಿಧವಾದ ಹೆಸರುಗಳನ್ನು ಕೊಡಲಾಗಿದೆ. ಪೋಪ್‌ನೊ (1911) ಹೇಳಿಕೆ ಪ್ರಕಾರ, ಭಾರತದ ನರ್ಸರಿ ಮಾಲೀಕರು ಮಾಡಿರುವ ಪಟ್ಟಿಯಲ್ಲಿನ ಮಾವಿನ ತಳಿ

ಗಳು ಆವನ ಕಲ್ಪನೆಯನ್ನು ಮೀರಿವೆ. ಈ ತಳಿಗಳು ವಾಸ್ತವವಾಗಿ ನಂಬಲನರ್ಹವಾದ ನರ್ಸರಿ ಉದ್ದಿಮೆಯ ಗುಣವನ್ನು ರೂಪಿಸಿವೆ. ಇದರಿಂದಾಗಿ, ಇವು ಹೊರ ರಾಷ್ಟ್ರಗಳಲ್ಲಿ ಅವಹೇಳನೆಗೆ ಗುರಿಯಾಗಿವೆ. ಆದ್ದರಿಂದ, ಭಾರತದ ತಳಿಗಳನ್ನು ಪರರಾಷ್ಟ್ರಗಳ ಹಣ್ಣಿನ ಬೇಸಾಯಗಾರರು ತರಿಸಿಕೊಳ್ಳಲು ಇಚ್ಛಿಸುವುದಿಲ್ಲ. ಹೊರ ದೇಶಗಳ ಮಾರುಕಟ್ಟೆಯನ್ನು ಹಿಡಿಯಬೇಕಾದರೆ, ಈ ಪರಿಸ್ಥಿತಿಯನ್ನು ಸರಿಪಡಿಸಲೇ ಬೇಕಾಗುತ್ತದೆ. ಇದಕ್ಕಾಗಿ ಎಲ್ಲಾ ನರ್ಸರಿ ಮಾಲೀಕರನ್ನು ತೆಗಳಬೇಕಾಗಿಲ್ಲ. ಪ್ರತಿಯೊಂದು ತಪ್ಪು ಉದ್ದೇಶಪೂರ್ವಕವಾದುದಲ್ಲ. ಕೆಲವು ಸಂದರ್ಭಗಳಲ್ಲಿ ನರ್ಸರಿಯಲ್ಲಿ ಸಸ್ಯಗಳ ಬೀಜವಾಬ್ದಾರಿಯ ನಿರ್ವಹಣೆ ಮತ್ತು ತಪ್ಪಾಗಿ ಲೇಬಲ್ ಹಾಕುವಿಕೆಗಳಿಂದ ಈ ಅವ್ಯವಸ್ಥೆ ಉಂಟಾಗುತ್ತದೆ. ಇದೂ ಅಲ್ಲದೆ, ನರ್ಸರಿ ಮಾಲೀಕರು ಗಿರಾಕಿಗಳಿಂದ ಬರುವ ಬೇಡಿಕೆಯನ್ನು ಪೂರೈಸಲು, ಇರುವ ಮಾವಿನ ಸಸಿಗಳಿಗೆ ತಪ್ಪು ಲೇಬಲ್ ಹಾಕಿ ಮಾರಾಟ ಮಾಡುತ್ತಾರೆ. ಈ ಕಾರಣಗಳಿಂದಲೇ ಇದ್ದರೂ ಮಾವಿನ ತಳಿಗಳ ನಾಮಕರಣದಲ್ಲಿ ಬಹಳಷ್ಟು ಅವ್ಯವಸ್ಥೆ ಇದೆ. ಸಸಿ ಕೊಂಡ ರೈತರಿಗೆ ಅನೇಕ ವರ್ಷಗಳು ಎಚ್ಚರಿಕೆ ವಹಿಸಿ, ಶ್ರಮವಹಿಸಿ, ಬೇಸಾಯ ಮಾಡಿದನಂತರ ಮೋಸವಾಗಿರುವುದರ ಅರಿವು ಮೂಡುತ್ತದೆ. ಅಲ್ಲದೆ ಕೇಳಿದ ತಳಿಯನ್ನಲ್ಲದೆ ಬೇರೆ ತಳಿಗಳನ್ನು ಕೊಟ್ಟಿರುವುದರ ಅರಿವು ಉಂಟಾಗುತ್ತದೆ. ಇದಕ್ಕೆ ಕಾರಣ, ಕೊಳ್ಳುವ ಸಮಯದಲ್ಲಿ ಕೇವಲ ಭೌತಿಕ ಗುಣಗಳಿಂದ ಮಾತ್ರ ತಳಿಗಳನ್ನು ಗುರುತಿಸಲಾಗುವುದಿಲ್ಲ ; ಮತ್ತು ದೀರ್ಘಕಾಲದ ಮೇಲೆ ಮಾವು ಫಲಕ್ಕೆ ಬಂದ ನಂತರ ತಳಿಯನ್ನು ಗುರುತಿಸಲು ಸಾಧ್ಯವಾಗುವುದರಿಂದ ಈ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಆದ್ದರಿಂದ ತಮ್ಮಲ್ಲಿರುವ ತಳಿಗಳ ವಿವರಣಾ ಪಟ್ಟಿಯನ್ನು ಒದಗಿಸುವುದು ಅಗತ್ಯ. ಇದರಿಂದ ರೈತ ತನಗೆ ಬೇಕಾದ ಸಸಿಗಳನ್ನು ಆರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಪ್ರತಿಯೊಂದು ಬೆಳೆಯ ಸುಧಾರಣೆಯಲ್ಲಿ ಸಸ್ಯಗಳನ್ನು ತರಿಸಿಕೊಳ್ಳುವುದು ಮತ್ತು ಅವುಗಳನ್ನು ತಾಕುಗಳಲ್ಲಿ ಪರೀಕ್ಷಿಸುವುದರಿಂದ ಮುಂದೆ ಯಾವ ಪ್ರಯೋಜನವೂ ಉಂಟಾಗದ ಹಂತವೂ ಬರುತ್ತದೆ. ಈ ಹಂತದಲ್ಲಿ ಶುದ್ಧವಾದ ಅನುಭವಾತ್ಮಕ ತಂತ್ರಗಳನ್ನು ಸೂಕ್ತವಾಗಿ ಯೋಜಿತ ನಿರ್ದಿಷ್ಟಗುರಿ ಇರುವ ಪದ್ಧತಿಗಳಿಗೆ ಬದಲಾಯಿಸಿಕೊಳ್ಳಬೇಕು. ದೇಶದಲ್ಲಿ ದೊರೆಯುವ ಮಾವಿನ ಸಸ್ಯ ಮತ್ತು ಇವುಗಳ ವೈಶಿಷ್ಟ್ಯ ತಿಳಿಯುವುದು ಅಗತ್ಯ. ಇಂತಹ ಮಾಹಿತಿ ಇಲ್ಲದೆ, ಸುಧಾರಣೆ ಸಾಧ್ಯವಿಲ್ಲ. ಮಾವು ಇಂದು ಇಂತಹ ಅಧೋಗತಿಗಿಳಿದಿದೆ. ಬೇರೆ ಕಡೆಗಳಿಂದ ಮಾವಿನ ತಳಿಗಳನ್ನು ತರಿಸಿಕೊಳ್ಳುವುದರಿಂದ ಮಾತ್ರ ಸುಧಾರಣೆಯಾಗುವುದು ಸಂದೇಹಾಸ್ಪದ. ಒಂದು ಸ್ಥಳದಲ್ಲಿ ಉತ್ತಮವಾಗಿ ಬೆಳೆಯುವ ಮಾವಿನ ತಳಿ ಇನ್ನೊಂದು ಸ್ಥಳದಲ್ಲಿ

ಚೆನ್ನಾಗಿ ಬೆಳೆಯಬಾರದು. ಉದಾಹರಣೆಗೆ, ಲಾಂಗ್ರಾ ಮತ್ತು ದುಸೇರಿ ಎಂಬ ಉತ್ತರ ಪ್ರದೇಶದ ಮಾವಿನ ತಳಿಗಳನ್ನು ಮದ್ರಾಸು ರಾಜ್ಯದಲ್ಲಿ ಬೆಳೆಸಿದಾಗ ಬಿಟ್ಟ ಹಣ್ಣಿನ ವಾಸನೆ, ಗಾತ್ರ ಮತ್ತು ಇತರ ಗುಣಗಳು ಮೂಲಸ್ಥಾನದಲ್ಲಿರುವುದಕ್ಕಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ನಮ್ಮ ದೇಶದಲ್ಲಿರುವ ಮಾವಿನ ತಳಿಗಳ ಸಂಪೂರ್ಣ ಸಮೀಕ್ಷೆ, ವಿವರಣೆಗಳ ತಿಳುವಳಿಕೆ ಮುಂದಿನ ಪ್ರಗತಿಗೆ ಅಗತ್ಯ ಮತ್ತು ಅದು ಮುಂದಿನ ಕೆಲಸ ಕಾರ್ಯಗಳಿಗೆ ಆಧಾರವಾಗಬೇಕು. ನಾವು ಹೆಚ್ಚು ಇಳುವರಿ ಕೊಡುವ, ರೋಗ ನಿರೋಧಕ, ನಿಯತಫಲ ಕೊಡುವ ತಳಿಯನ್ನು ನಿರೀಕ್ಷಿಸುವುದು ತಪ್ಪು. ಕಾರಣ ಎಲ್ಲಾ ಗುಣಗಳಿರುವ ನಿಸರ್ಗದಲ್ಲಿ ಇಂತಹ ತಳಿಗಳು ಸಿಕ್ಕುವ ಸಾಧ್ಯತೆ ತೀರ ಕಡಮೆ ; ಆದರೂ ಇಂತಹ ಒಂದು ಅಥವಾ ಹೆಚ್ಚು ಗುಣಗಳಿರುವ ತಳಿಗಳು ಸಿಗಬಹುದು. ಈ ಗುಣಗಳನ್ನು ಸಂಕರಣೆಯ ಮೂಲಕ ಒಟ್ಟುಗೂಡಿಸುವ ಕೆಲಸದ ಪ್ರಯತ್ನ ಮಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಗುಣವಿರುವ ತಳಿಯ ಸಂಶೋಧನೆಗಾಗಿ ಕಾಡು ಬಗೆಯ ಮ್ಯಾಂಜಿಫೆರ ಪ್ರಭೇದವನ್ನು ಶರಣು ಹೋಗಬೇಕಾಗಬಹುದು. ಆದ್ದರಿಂದ, ನಮ್ಮ ದೇಶದಲ್ಲಿರುವ ಮಾವಿನ ತಳಿಗಳ ಬಗ್ಗೆ ಸಂಪೂರ್ಣ ಜ್ಞಾನದ ಅರಿವು ಅಗತ್ಯವಾಗುತ್ತದೆ.

ಸಂಕರಣೆಗಾಗಿ ಮಾವಿನ ತಳಿಗಳ ಶಾಸ್ತ್ರೀಯ ಅಭ್ಯಾಸ ಮಾಡುವುದರ ಪ್ರಾಮುಖ್ಯತೆಯನ್ನು ಹೆಡ್ರಿಕ್ (1935) ಒತ್ತಿ ಹೇಳಿದ್ದಾನೆ. ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿರುವ ಮಾವಿನ ಹಣ್ಣಿನ ಗುಣ, ತಳಿಗಳ ಇಳುವರಿ ಸಾಮರ್ಥ್ಯಗಳನ್ನು ಮಾತ್ರ ಅಭ್ಯಾಸ ಮಾಡುತ್ತೇವೆ. ಆದರೆ ಹಣ್ಣಿನ ಕ್ಯಾನಿಂಗ್ ಗುಣ, ಇದರ ಬೇರು ಕಾಂಡ ಸಾಮರ್ಥ್ಯ ಮತ್ತು ರೋಗ ನಿರೋಧಕತೆ ಮುಂತಾದ ಇತರ ನಿರ್ದಿಷ್ಟ ಗುಣಗಳನ್ನು ಸಹ ಅಭ್ಯಾಸ ಮಾಡಬೇಕಾಗುತ್ತದೆ.

ಬೇಸಾಯದಲ್ಲಿರುವ ಅತ್ಯುತ್ತಮ ಮಾವಿನ ತಳಿಗಳ ಎಲ್ಲಾ ಗುಣಗಳ ಮಾಹಿತಿಯನ್ನು ಸಂಪೂರ್ಣವಾಗಿ ಹುಡುಕಿ ತೆಗೆಯಬೇಕು. ಮೊಗಲ್ ಚಕ್ರವರ್ತಿಯಾದ ಅಕ್ಬರನ ಕಾಲದಿಂದ ಇರುವ ಬಿಹಾರದ ಲಾಕ್‌ಬಾಗ್ ಮಾವಿನ ತೋಟದಲ್ಲಿರುವ ಮಾವಿನ ತಳಿಗಳ ಯಾವುದೇ ದಾಖಲೆ ಇಲ್ಲದೆ ಇರುವುದು ನಮ್ಮ ದುರದೃಷ್ಟ. ಇತರ ದೇಶಗಳಲ್ಲಿ ಸೇಬು, ಪಿಯರ್ಸ್ ಮತ್ತು ದ್ರಾಕ್ಷಿ ಮುಂತಾದ ಮುಖ್ಯವಾದ ಹಣ್ಣುಗಳ ಬಗ್ಗೆ ಭಾರಿ ಪ್ರಮಾಣದಲ್ಲಿ ಕೆಲಸ ನಡೆದಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಬರುತ್ತಿರುವ ಹೊಸ ತಳಿಗಳ ರಾಷ್ಟ್ರೀಯ ದಾಖಲೆಗಳನ್ನು ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ ಬೀಜಗಳಿಂದ ಒಂದೇ ಸಮನೆ ಹೊಸ ತಳಿಗಳು ಹೊರಬರುತ್ತಿದ್ದರೂ ಸಹ ಇವುಗಳನ್ನು ಕ್ರಮವಾಗಿ ಆಯಾ ಕಾಲಕ್ಕೆ ಸರಿಯಾಗಿ ದಾಖಲೆ ಮಾಡುವುದರಲ್ಲಿ

ಬಹಳ ಹಿಂದೆ ಬಿದ್ದಿದ್ದೇವೆ. ಈ ದಿಸೆಯಲ್ಲಿ ಮೊದಲ ಹೆಜ್ಜೆಯೆಂದರೆ ನಮ್ಮಲ್ಲಿರುವ ಮಾವಿನ ತಳಿಗಳ ಪಟ್ಟಿ ಮಾಡುವ ಅವಶ್ಯಕತೆ.

1938ರಲ್ಲಿ ಬರ್ಲಿನ್‌ನಲ್ಲಿ ನಡೆದ ಹನ್ನೆರಡನೆಯ ಅಂತರರಾಷ್ಟ್ರೀಯ ತೋಟಗಾರಿಕೆ ಸಮ್ಮೇಳನದಲ್ಲಿ ಪ್ರಪಂಚದ ವಿವಿಧ ಮೂಲೆಗಳಿಂದ ಸಂಶೋಧನ ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಹಣ್ಣಿನ ತಳಿಗಳ ವಿವರಣೆ ಮತ್ತು ವರ್ಗೀಕರಣ ಮಾಡುವುದು ಸಂಶೋಧನೆಯ ಸೋಪಾನ ಮತ್ತು ಇದಕ್ಕಾಗಿ ಪ್ರತಿಯೊಂದು ದೇಶದಲ್ಲಿ ಶಾಶ್ವತವಾದ ಆಯೋಗವನ್ನು ರಚಿಸಿ ಹಣ್ಣಿನ ತಳಿಗಳ ನಾಮಕರಣ ಕಾರ್ಯಕ್ಕೆ ಪ್ರೋತ್ಸಾಹ ನೀಡಬೇಕೆಂದು ತೀರ್ಮಾನಿಸಿದ್ದಾರೆ. 1947ರಲ್ಲಿ ನವದೆಹಲಿಯಲ್ಲಿ ಭಾರತೀಯ ಕೃಷಿ ಸಂಶೋಧನೆ ಪರಿಷತ್ತಿನ ಆಶ್ರಯದಲ್ಲಿ ಸೇರಿದ್ದ ರಾಷ್ಟ್ರೀಯ ತೋಟಗಾರಿಕೆ ಸಂಶೋಧನಾ ಕಾರ್ಯಕರ್ತರು ಮೇಲ್ಕಂಡ ತೀರ್ಮಾನವನ್ನು ಪುಷ್ಟೀಕರಿಸಿದ್ದಾರೆ.

ನಾಟಿ ಮಾಡುವ ಸಸಿಗಳನ್ನು ಸೂಕ್ತವಾಗಿ ಆಯ್ಕೆ ಮಾಡುವುದು ವಾಣಿಜ್ಯ ತೋಟಗಾರಿಕೆಯ ಯಶಸ್ಸಿಗೆ ಅನಿವಾರ್ಯವೆಂಬ ವಿಷಯವಂತೂ ಸುಸ್ಪಷ್ಟ. ಹಣ್ಣಿನ ಬೇಸಾಯಕ್ಕೆಸಂಬಂಧಿಸಿದಂತೆ ನಾಟಿಮಾಡಿದನಂತರ ಇವುಗಳು ಫಲಿತಾಂಶ ನೀಡಲು ನಾಲ್ಕರಿಂದ ಹತ್ತು ವರ್ಷಗಳ ಕಾಲ ಬೇಕಾಗಿರುವುದರಿಂದ ನಾಟಿ ಮಾಡುವ ಮೊದಲೇ ಸಸಿಗಳನ್ನು ಆಯ್ಕೆ ಮಾಡುವುದು ಬಹಳ ಮುಖ್ಯ. ಮಾವಿನ ತಳಿಗಳ ನಾಮಕರಣದಲ್ಲಿ ಇಂದು ಸಾಕಷ್ಟು ತಪ್ಪುಗಳಿರುವುದರಿಂದ ಭಾರತದ ಹಣ್ಣಿನ ತೋಟಗಾರರು ತಳಿಗಳನ್ನು ಗುರುತಿಸುವುದು ಮತ್ತು ಆಯ್ಕೆ ಮಾಡುವುದರಲ್ಲಿ ಸಮ್ಮಿಶ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರುಗಳಿಗೆ ಈ ಕಾರ್ಯದಲ್ಲಿ ನಿರ್ದಿಷ್ಟವಾದ ಮಾರ್ಗದರ್ಶಿ ಇಲ್ಲ. ತಳಿಗಳ ಹೆಸರುಗಳ ಮತ್ತು ಗುರುತಿಸುವುದರ ಬಗ್ಗೆ ಈಗ ಇರುವ ದರ್ಜೆಯನ್ನು ಕಾನೂನಿನ ಮುಖಾಂತರ ಅಥವಾ ಹಣ್ಣಿನ ಬೇಸಾಯಗಾರರಿಗೆ ತಳಿಗಳ ಸೂಕ್ತವಾದ ಜ್ಞಾನವನ್ನು ಹೆಚ್ಚಿಸುವುದರ ಮೂಲಕ ಸುಧಾರಿಸದಿದ್ದರೆ ಸಮಸ್ಯೆ ಅಧಿಕವಾಗುತ್ತದೆ. ಇಂತಹ ಕಾರ್ಯವು ಹಣ್ಣಿನ ಬೇಸಾಯಗಾರನು ತನ್ನ ಬೇಡಿಕೆಗೆ ತಕ್ಕಂತೆ ಮಾವಿನ ಸಸಿಗಳನ್ನು ಆರಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಇದರಿಂದತೋಟಗಾರಿಕೆ ಸಂಶೋಧನೆಯ ಕಾರ್ಯಕರ್ತರಿಗೆ, ಈಗಾಗಲೇ ನಮ್ಮ ದೇಶದಲ್ಲಿರುವ ಮಾವಿನ ತಳಿಗಳು ಮತ್ತು ಇವುಗಳು ದೊರೆಯುವ ಸ್ಥಳಗಳ ನಿರ್ದಿಷ್ಟ ಅರಿವು ಉಂಟಾಗುತ್ತದೆ.

ಭಾರತದಲ್ಲಿ ಮಾವಿನ ತಳಿಗಳನ್ನು ನಿರ್ಲಿಂಗ ರೀತಿಯಿಂದ ವೃದ್ಧಿ ಮಾಡುವುದನ್ನು 400ಕ್ಕೂ ಹೆಚ್ಚು ವರ್ಷಗಳಿಂದ ಸ್ಥಿರವಾಗಿ ಅಳವಡಿಸಿಕೊಂಡಿದ್ದರೂ ಸಹ ತಳಿಗಳ ವಿವರಣೆ ಮಾಡುವ ಕಾರ್ಯ ಮಾತ್ರ ಸೀಮಿತವಾಗಿದ್ದು ಪ್ರತ್ಯೇಕವಾಗಿ ಉಳಿದು ಬಿಟ್ಟಿದೆ. ಇದುವರೆಗೆ ಭಾರತದಲ್ಲಿ ಆಗಿರುವ ಕಾರ್ಯವೆಲ್ಲ ಕೇವಲ ಸ್ಥಳೀಯವಾಗಿದೆ. ವೈಜ್ಞಾನಿಕ ಪರಿಭಾಷೆಯಲ್ಲಿ ಪ್ರಪ್ರಥಮವಾಗಿ ವ್ಯಾಟ್ (1891)ಮಾವಿನ ವಿವರಣೆ ಮಾಡಿದ್ದಾನೆ. ಮಾರಿಸ್ (1901–1902) ಭಾರತದ 500 ತಳಿಗಳನ್ನು ಸಂಗ್ರಹಿಸಿ ಇವುಗಳನ್ನು ಸಸ್ಯಶಾಸ್ತ್ರ ಪರಿಭಾಷೆಯಲ್ಲಿ ವಿವರಿಸಿದ್ದಾನೆ. ವುಡ್‌ಹೌಸ್ (1909ಎ) ಪ್ರಪ್ರಥಮವಾಗಿ ಮಾವಿನ ನಿರ್ದಿಷ್ಟ ಗುಣಗಳ ಸಲಹೆ ಮಾಡಿದ್ದಾನೆ. ಈತನು ಬಿಹಾರಿನ 40 ಮಾವಿನ ತಳಿಗಳನ್ನು ವಿವರಿಸಿದ್ದಾನೆ. ಬರ್ನ್ಸ್ ಮತ್ತು ಪ್ರಯಾಗ್ (1921) ಎಂಬುವರು ಬಾಂಬೆ ಪ್ರೆಸಿಡೆನ್ಸಿಯಲ್ಲಿ ಇಂತಹ ಗುಣಗಳನ್ನು ಅಳವಡಿಸಿ 89 ಮಾವಿನ ತಳಿಗಳನ್ನು ವಿವರಿಸಿದ್ದಾರೆ. ಇವರು ಮಾವಿನ ತಳಿಗಳನ್ನು, ಹಣ್ಣಿನ ಗುಂಡು, ಉದ್ದ ಮತ್ತು ಅನಿರ್ದಿಷ್ಟ ಉದ್ದ ಎಂಬ ಗುಣಗಳನ್ನು ಆಧಾರವಾಗಿ ಗಣನೆಗೆ ತೆಗೆದುಕೊಂಡು ಮೂರು ಗುಂಪು(ಕೊಹಾರ್ಟ್ಸ್)ಗಳಾಗಿ ವಿಂಗಡಿಸಿದ್ದಾರೆ. ಇವರುಗಳು ಮಾವಿನ-ತಳಿಗಳ ಪಟ್ಟಿಮಾಡುವುದನ್ನು ಗುರಿಯಾಗಿಟ್ಟುಕೊಂಡು ಒಂದು ಸ್ವೇಚ್ಛಾನುಸಾರವಾದ ವರ್ಗೀಕರಣವನ್ನು ಸೂಚಿಸಿದ್ದಾರೆ. ಪೊಪ್‌ನೋ (1932) ಭಾರತದ ತಳಿಗಳು ಸೇರಿದಂತೆ ಪ್ರಪಂಚದ ಎಲ್ಲಾ ಭಾಗಗಳಲ್ಲಿನ ಸುಮಾರು 300 ಮಾವಿನ ತಳಿಗಳನ್ನು ಗುಂಪು ಮಾಡುವ ವಿಧಾನಗಳನ್ನು ಸೂಚಿಸಿದ್ದಾನೆ. ತರುವಾಯ ಈತನು ಮಾವಿನ ತಳಿಗಳನ್ನು ಮಲಗೋಬ,ಅಲ್ಫಾನ್ಸೊ ಸುಂದರ್‌ಶಾ ಮತ್ತು ಕ್ಯಾಂಬೋಡಿಯನಾ ಎಂಬ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿದ್ದಾನೆ. ಹಣ್ಣಿನ ಗುಣಗಳು, ಅಕ್ಷದ ಬಣ್ಣ ಮತ್ತು ಪ್ಯಾನಿಕಲ್‌ನ ಪಕ್ಕದ ಗೊಂಚಲುಗಳು, ಮಿಶ್ರ ಹೂಗೊಂಚಲಿನ ರೆಂಬೆಗಳ ಮೇಲಿನ ಮೃದು ತುಪ್ಪಳು ಮತ್ತು ಓಟೆಗಳಲ್ಲಿನ ಭ್ರೂಣಗಳ ಸಂಖ್ಯೆ ಈ ವರ್ಗೀಕರಣಕ್ಕೆ ಆಧಾರವಾಗಿದೆ. ವಿವರಣೆಯಲ್ಲಿ ಹೂಗೊಂಚಲಿನ ಗುಣಗಳನ್ನು ಸೇರಿಸುವ ಪ್ರಯತ್ನದಲ್ಲಿ ಈ ವರ್ಗೀಕರಣವೇ ಮೊದಲನೆಯದು.

ಮಾವಿನ ತಳಿಗಳನ್ನು ಗುರುತಿಸುವ ಮೊದಲ ಸೂಚಿಯು ಹಣ್ಣಿನ ಗುಣಗಳನ್ನು ಆಧರಿಸಿತ್ತು. ಇದನ್ನು ಫ್ಲಾರಿಡಾದ 38 ಮಾವಿನ ತಳಿಗಳನ್ನು ವಿವರಿಸಿದ ಸ್ಟುರಾಕ್ ಮತ್ತು ವುಲ್ಫ್ 1944ರಲ್ಲಿ ಪ್ರಕಟಿಸಿದ್ದಾರೆ. ಇಲ್ಲಿಯವರೆಗೆ ಮಾವಿನ ತಳಿಯ ವಿವರಣೆಯಲ್ಲಿ ಸಸ್ಯಶಾರೀರಕ ಗುಣಗಳನ್ನು ಅಳವಡಿಸಿಕೊಂಡಿರಲಿಲ್ಲ. ಆದರೆ ಇತ್ತೀಚೆಗೆ ಭಾರತದಲ್ಲಿನ ಮಾವಿನ ಎರಡು ಸಂಶೋಧನೆಯಲ್ಲಿ ಇವುಗಳನ್ನು ಸಹ ಸೇರಿಸಲಾಗಿದೆ. ಮುಖರ್ಜಿಯವರು (1948) ಬಂಗಾಳ, ಬಿಹಾರ ಮತ್ತು ಉತ್ತರ

ಪ್ರದೇಶದ 72 ತಳಿಗಳನ್ನು ವಿವರಿಸಿದ್ದಾರೆ. ಇವರು ಕೆಳಕಂಡ ಗುಣಗಳ ವ್ಯತ್ಯಾಸದ ಅಂತರವನ್ನು ಅಭ್ಯಾಸಮಾಡಿ ಈ ತಳಿಗಳನ್ನು ಗುರುತಿಸುವುದಕ್ಕೆ ಸೂಚಿಯನ್ನೂ ಸಹ ನೀಡಿದ್ದಾರೆ.

ಮರ—ಸ್ವಭಾವ


ಎಲೆ—ಹೊರ ಬರುವಾಗ ಇದ್ದ ಬಣ್ಣ; ಬಲಿತ ನಂತರದ ಬಣ್ಣ; ಅಂಚು ಮತ್ತು ಗಾತ್ರ

ಹೂಗೊಂಚಲು—ಹೂಗೊಂಚಲು ರೆಂಬೆಗಳ ಬಣ್ಣ ; ಹೂಗೊಂಚಲು ರೆಂಬೆಗಳ ತುಪ್ಪಳು ; ಉದ್ದ ; ಉಪಪತ್ರ(ಬ್ರಾಕ್ಟ್)ಗಳು ಇರುವಿಕೆ ಅಥವಾ ಇಲ್ಲದಿರುವಿಕೆ

ಹೂವು—ಗಾತ್ರ ; ದಳಗಳ ಮೇಲಿನ ದಿಂಡುಗಳು (ಬಣ್ಣ ಮತ್ತು ಮಾದರಿ)

ಹಣ್ಣು—ವಿವರವಾದ ವಿವರಣೆ

ಇದೇ ಕಾಲದಲ್ಲಿ ನಾಯರ್ ಮತ್ತು ಗಂಗೂಲಿ (1950) ದಕ್ಷಿಣ ಭಾರತದ 335 ಮಾವಿನ ತಳಿಗಳನ್ನು ವಿವರಿಸಿದ್ದಾರೆ. ಇವರುಗಳು ಹಣ್ಣಿನ ಗುಣಗಳಲ್ಲದೆ, ಸಸ್ಯ ಶಾರೀರಕ ಗುಣಗಳಿಗೂ ಬಹಳ ಮಹತ್ವ ನೀಡಿದ್ದಾರೆ. ಇವರು ಮಾವಿನ ತಳಿಗಳನ್ನು ಗುರುತಿಸುವುದರಲ್ಲಿ ಎಲೆಯ ತುದಿ ಮತ್ತು ಬಲಿತ ಎಲೆಯು ಒಳಭಾಗಕ್ಕೆ ಸುತ್ತಿಕೊಂಡಿರುವ ಗುಣಗಳು ಬಹಳ ಮುಖ್ಯ ಎಂದು ಮನಗಂಡಿದ್ದಾರೆ. ಇವರುಗಳು ಈ ತಳಿಗಳನ್ನು ಗುಂಡು, ಮಧ್ಯವರ್ತಿ ಮತ್ತು ಗಮನಾರ್ಹವಾಗಿ ಉದ್ದವಾದ ಹಣ್ಣುಗಳು ಎಂದು ಮೂರು ಗುಂಪುಗಳಾಗಿ ವರ್ಗೀಕರಿಸಿದ್ದಾರೆ. ಈ ಮೂರು ಗುಂಪುಗಳು ಮುಖರ್ಜಿಯವರು ವಿಂಗಡಿಸಿರುವ ಗುಂಪುಗಳನ್ನೇ ಹೋಲುತ್ತವೆ. ಇವರುಗಳು ಮುಂದುವರಿದು ಈ ಗುಂಪುಗಳನ್ನು ಹಣ್ಣಿಗೆ ಪ್ರಧಾನವಾದ ಕೊಕ್ಕು ಇದೆಯೇ ಅಥವಾ ಇಲ್ಲವೇ ಎಂಬ ಗುಣಗಳನ್ನು ಆಧಾರವಾಗಿ ಇಟ್ಟುಕೊಂಡು ಎರಡು ಗುಂಪು (ಕೊಹಾರ್ಟ್)ಗಳಾಗಿ ವಿಂಗಡಿಸಿದ್ದಾರೆ.



ಚಿತ್ರ 3 : ಮಾವಿನ ಬಾಹ್ಯ ಅಂಗ ರಚನೆ

ಅಧ್ಯಾಯ 2

ಮಾವಿನ ಸಸ್ಯಶಾಸ್ತ್ರ

ಬೇಸಾಯದಲ್ಲಿರುವ ಮಾವು ಮ್ಯಾಂಜಿಫೆರಾ ಇಂಡಿಕ ಲಿನ್. ವಾರ್ನಿಷನ್ನು ಕೊಡುವ ಸ್ವಾಭಾವಿಕ ಪಂಗಡ 'ಅನಾಕಾರ್ಡಿಯೆಸಿಯ'ಗೆ ಸೇರಿದೆ ; ಹೂಕರ್ ಮತ್ತು ಜಾಕ್‌ಸನ್ (1895) ಈ ಜಾತಿಯಲ್ಲಿ 65 ಪ್ರಭೇದಗಳನ್ನು ಪಟ್ಟಿ ಮಾಡಿದ್ದಾರೆ. ಹಾಗೆಯೇ ಎಂಗ್ಲರ್ ಮತ್ತು ಪ್ರಾಂಟಲ್ (1887) ಕೇವಲ 32 ಪ್ರಭೇದಗಳನ್ನು ಮಾತ್ರ ದಾಖಲು ಮಾಡಿದ್ದಾರೆ. ಮುಖರ್ಜಿ (1949ಎ) 41 ಪ್ರಭೇದಗಳನ್ನು ಗುರುತಿಸಿದ್ದಾರೆ. ಮಲಯ್ ಅರ್ಚಿಪೆಲಾಗೊದಲ್ಲಿ ಇವುಗಳಲ್ಲಿ ಒಂಬತ್ತು ಪ್ರಭೇದಗಳು ಕಂಡುಬಂದಿವೆ. ಆದರೂ ಭಾರತದಲ್ಲಿ ಮ್ಯಾಂಜಿಫೆರಾ ಇಂಡಿಕಾ ಲಿನ್., ಮತ್ತು ಮ್ಯಾಂಜಿಫೆರಾ ಸಿಲ್ವಾಟಿಕ್ ರಾಕ್ಸ್ಬ ಎಂಬ ಎರಡೇ ಪ್ರಭೇದಗಳು ಕಂಡುಬಂದಿವೆ. ಬೇಸಾಯದಲ್ಲಿರುವ ಎಲ್ಲಾ ತಳಿಗಳು ಮತ್ತು ಅರಣ್ಯಗಳಲ್ಲಿ ಬೆಳೆದಿರುವ ಕಾಡು ಬಗೆಯ ಮಾವಿನ ತಳಿಗಳು ಮ್ಯಾಂಜಿಫೆರಾ ಇಂಡಿಕಾ ಪ್ರಭೇದಕ್ಕೆ ಸೇರಿವೆ. ಮ್ಯಾಂಜಿಫೆರಾ ಸಿಲ್ವಾಟಿಕಾಕ್ಕೆ ಸೇರಿರುವ ಮಾವಿನ ಸಸ್ಯಗಳು ಭಾರತ ದೇಶದ ಈಶಾನ್ಯ ದಿಕ್ಕಿನ ಭಾಗದಲ್ಲಿ ಕಾಡು ಮರಗಳಾಗಿ ಬೆಳೆಯುತ್ತವೆ. ಈ ಪ್ರಭೇದದ ಹಣ್ಣುಗಳು ತಿನ್ನಲು ಅಷ್ಟು ಯೋಗ್ಯವಲ್ಲ. ಪಶ್ಚಿಮ ಘಟ್ಟದ ಸಮುದ್ರ ತೀರದಲ್ಲಿ ಬೆಳೆಯುವ ಹತ್ತು ತಳಿಗಳನ್ನು ಬಿಟ್ಟು ಭಾರತದಲ್ಲಿ ಬೇಸಾಯದಲ್ಲಿರುವ ಬಹುತೇಕ ತಳಿಗಳು ಏಕ ಭ್ರೂಣ ಮರಗಳು. ಪಂಜಾಬ್, ಪೆಪ್ಸು ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗಗಳಲ್ಲಿ ಬೇಸಾಯದಲ್ಲಿರುವ ರಸಭರಿತ ತಳಿಗಳನ್ನು ಓಟೆಗಳಿಂದ ವೃದ್ಧಿಗೊಳಿಸುತ್ತಾರೆ.

ಈ ಮರವು ದೊಡ್ಡದು, ಹರಡಿರುತ್ತದೆ, ನಿತ್ಯಹಸುರು ಮತ್ತು ನಿಬಿಡವಾಗಿ ವೃತ್ತಾಕಾರ ಅಥವಾ ಗೋಳಾಕಾರದ ಮೇಲ್ಭಾಗ ಬಲಿತ ಮರದ ಬುಡ ನೇರ, ದಪ್ಪ ಮತ್ತು ತಗ್ಗು ಅಥವಾ ಕುಳಿಗಳಿಂದ ಕೂಡಿರುವುದಿಲ್ಲ. ದಪ್ಪವಾದ ತೊಗಟೆ ಕೆಲವು ಸಾರಿ ಉದ್ದವಾಗಿ ಸೀಳಿದ್ದು, ಇದರಲ್ಲಿ ಸ್ವಲ್ಪ ಹಳದಿ ಬಣ್ಣದ ಪಾರದರ್ಶಕ ಗೋಂದು (ರಾಳ) ಇರುತ್ತದೆ. ಎಳೆಯ ಮರದ ಸಿಪ್ಪೆಯ ಮೇಲ್ಭಾಗದ ತೊಗಟೆ ವಾರ್ಷಿಕ ಪರ್ಣ ಸಸಿಯಂತೆ ಹಸುರು ಬಣ್ಣದಿಂದ ಕೂಡಿರುತ್ತದೆ. ಆದರೆ, ಮರ ಬಲಿತಂತೆ ಮೇಲು ಹಸಿರು ಚರ್ಮವನ್ನು ಒಳತೊಗಟೆ (ಬಾಸ್ಟ್) ಹೊರತಳ್ಳುತ್ತದೆ. ಬಲಿತ ಮರಕ್ಕೆ ರಕ್ಷಣೆ ನೀಡುವ ಹೊರ ಆವರಿಕೆ ಬೇಕಾಗುತ್ತದೆ. ಇದಕ್ಕಾಗಿ ಅದು

ಕಾರ್ಕ್ ಪದರಗಳನ್ನು ರೂಪಿಸಿಕೊಳ್ಳುತ್ತದೆ; ಇದು ದಪ್ಪವಾದಂತೆಲ್ಲ ಸೀಳಿ ಬಿಲ್ಲೆಗಳ ರೂಪದಲ್ಲಿ ಹೊರಬರುತ್ತದೆ. ಕಾರ್ಕ್ ಪದರದ ಕೆಳಭಾಗದಲ್ಲಿ ಬಾಸ್ಟ್ ಎಂಬ ಒಳ ತೊಗಟೆ ಇರುತ್ತದೆ. ಇದರ ಒಳಗೆ ಮರದ ಉಂಗುರಾಕಾರದ ದಾರು ಪದರಗಳಿರುತ್ತವೆ. ದಾರುವು ಕೆಂಪುಮಿಶ್ರಿತ ಬೂದಿ ಬಣ್ಣವಿದ್ದು ಅನೇಕವೇಳೆ ಗೆರೆಗಳಿಂದ ಕೂಡಿರುತ್ತದೆ. ಸಾಧಾರಣ ಗಟ್ಟಿಯಾಗಿದ್ದು ಒರಟಾದ ಹರಳುಗಳಿಂದ ಕೂಡಿರುತ್ತದೆ. ಎಳೆಯ ಮರದಲ್ಲಿ ಇದು ಮೃದುವಾಗಿರುವುದರಿಂದ ಕೀಟಗಳು ಸುಲಭವಾಗಿ ತಿನ್ನುತ್ತವೆ. ಚೆನ್ನಾಗಿ ಬಲಿತ ಮರದ ಒಳಭಾಗ ದಟ್ಟ ಕಂದು ಬಣ್ಣದಿಂದ ಕೂಡಿದ್ದು, ಗಟ್ಟಿಯಾಗಿರುತ್ತದೆ. ಮರಗಳ ಮೇಲೆ ಉಂಟಾಗುವ ಗಾಯಗಳು ಕಾರ್ಕ್ ಊತಕದ ಶೀಘ್ರ ಬೆಳವಣಿಗೆಯಿಂದ ಮಾಯುತ್ತವೆ. ದಾರುವನ್ನು ವಿರಳವಾಗಿ ಸೂಕ್ಷ್ಮವ್ಯಾಸಾರ್ಧ ಅಲೆಯಾಕಾರ ಮತ್ತು ನಿಕಟತೆಗಳಿಂದ ವಿಂಗಡಿಸಲಾಗುತ್ತದೆ.

ಮರದಲ್ಲಿ, ಅಸಂಖ್ಯಾತ ರೆಂಬೆಗಳಿರುತ್ತವೆ, ಕೆಳಭಾಗದ ರೆಂಬೆಗಳು ಬಹುವಾಗಿ ನೆಲಕ್ಕೆ ಸಮಾನಾಂತರವಾಗಿ ಹರಡಿರುತ್ತವೆ. ಮೇಲ್ಭಾಗದ ರೆಂಬೆಗಳು ಏರುತ್ತಾ ಹೋಗಿ ಮಧ್ಯದಲ್ಲಿ ಸುಮಾರಾಗಿ ನೇರವಾಗುತ್ತವೆ ; ಉಪರೆಂಬೆಗಳು ದಪ್ಪವಾಗಿ, ದಷ್ಟಪುಷ್ಟವಾಗಿರುತ್ತವೆ. ಅನೇಕ ವೇಳೆಪರ್ಯಾಯವಾದ ಉದ್ದದ ಮತ್ತು ಕುಳ್ಳಾದ ಉಪಗೆಣ್ಣುಗಳನ್ನು ಹೊಂದಿರುತ್ತವೆ, ಟೆರೆಟ್, ನುಣುಪು ಚರ್ಮ, ಎಳೆಯದಾಗಿದ್ದಾಗ ಹಳದಿ ಮಿಶ್ರಿತ ಹಸುರು ಬಣ್ಣದಿಂದ ಕೂಡಿದ್ದು ಹಣ್ಣೆಲೆಗಳ ಮೇಲೆ ತುಸು ಎದ್ದು ಕಾಣುವ ಕಲೆಗಳಿರುತ್ತವೆ.

ಎಲೆಗಳು ಸರಳ, ಪರ್ಯಾಯ, ಉಪರೆಂಬೆಗಳ ಮೇಲೆ ಅವ್ಯವಸ್ಥಿತವಾಗಿರುತ್ತವೆ. ಕೆಲವು ವೇಳೆ ದೂರದಲ್ಲಿರುತ್ತವೆ, ಮತ್ತೆ ಕೆಲವು ವೇಳೆ (ವಿಶೇಷವಾಗಿ ಹೂ ಬಿಡುವ ರೆಂಬೆಗಳ ತುದಿಯಲ್ಲಿ) ಗುಂಪಾಗಿರುತ್ತವೆ. ಉದ್ದವಾದ ಎಲೆ ತೊಟ್ಟು, ದೀರ್ಘ ಚತುರಸ್ರ ಅಂಡಾಕಾರದಿಂದ ದೀರ್ಘಚತುರಸ್ರ ಭರ್ಜಿಯಾಕಾರಿತ, ಮೊನಚು ಅಥವಾ ಬೆಣೆಯಾಕಾರಿತ ಎಲೆಯ ಬುಡ ಕಿರಿದು, ತುದಿ ಮೊನಚಿನಿಂದ ಲಂಬಾಗ್ರ, ಕೆಲವು ಸಾರಿ ಅಲೆಯ ಅಂಚುಗಳು, ಮೇಲು ಮತ್ತು ಕೆಳಭಾಗದಲ್ಲಿ ತೊಗಲಿನಂತೆ, ಎರಡೂ ಅಂಚುಗಳಲ್ಲಿ ನುಣುಪು ಚರ್ಮ, ಎಲೆಯ ಅಲಗು 10–32 ಸೆಂಟಿಮೀಟರ್ ಉದ್ದ, 2–9.5 ಸೆಂಟಿಮೀಟರ್ ಅಗಲ, ಹಿಸುಕಿದಾಗ ರಾಳವಾಸನೆ, ಗರಿರೂಪದ ನರಗಳು, ನಿರ್ದಿಷ್ಟವಾದ ಬಲೆಯಂಥ ನಾಳರಚನೆ, ದಪ್ಪವಾದ ನಡು ದಿಂಡು (ಕೋಸ್ಟಾ), ಅಸಂಖ್ಯಾತ ಪಕ್ಕದ ಉಪನರಗಳು (12–30 ಜೊತೆ), ಪ್ರಮುಖವಾಗಿರುತ್ತವೆ (ಎದ್ದು ಕಾಣುತ್ತವೆ), ಹಳದಿ ಮಿಶ್ರಿತ ಹಸುರು, ಕೆಳಭಾಗದಲ್ಲಿ ಪ್ರಮುಖವಾಗಿದ್ದು ಎಲೆಯ ಅಂಚಿನಲ್ಲಿ ಕಮಾನಿನಂತೆ ಬಾಗಿರುತ್ತವೆ, ಚಿಕ್ಕ

ಮಧ್ಯದ ನರಗಳಲ್ಲಿ ಪರ್ಯಾಯವಾಗಿರುತ್ತದೆ; ಎಳೆಯ ಎಲೆಗಳು ಉದಾ ಬಣ್ಣ (ಕಡುಗೆಂಪು ಹಳದಿ); ಎಲೆ ತೊಟ್ಟಿನ ಮೇಲ್ಭಾಗ ಕಾಲುವೆಯಂತೆ ತಗ್ಗಾಗಿರುತ್ತದೆ, ಬುಡದಲ್ಲಿ ಸ್ವಲ್ಪ ದಪ್ಪ ಅಥವಾ ಉಬ್ಬಿರುತ್ತದೆ, ಗುಂಡು, ನಯ, ಗ್ಲಾಬ್ರಸ್; ಬಲಿತ ಎಲೆಗಳ ಬಣ್ಣ ಕಡುಹಸುರು.

ಪುಷ್ಪ ವಿನ್ಯಾಸವು ತುದಿಯಲ್ಲಿರುವ ಒಂದು ದೊಡ್ಡ ಮಿಶ್ರಹೂಗೊಂಚಲು, 6-40 ಸೆಂಟಿಮೀಟರ್ ಉದ್ದ; ದೃಢ, ನೇರ ಅಥವಾ ಸ್ವಲ್ಪ ನೇರ, ಅಗಲವಾಗಿರುವ ಗೊಂಚಲುಗಳು, ಹೂ ಗೊಂಚಲಿನ ಗರಿಕಾಂಡ (ತೊಟ್ಟು) ಕೆಲವು ಸಾರಿ ನಸುಗೆಂಪು ಅಥವಾ ಕಡುಗೆಂಪು (ನೇರಿಳೆ), ಆದರೆ ಅನೇಕ ವೇಳೆ ಹಸುರು ಮಿಶ್ರಿತ ವಿವಿಧ ಛಾಯೆಗಳು, ಟೆರ್ರೆಟ್ (ಕಾಲುವೆಯಂತೆ ತಗ್ಗು), ನಿಬಿಡವಾಗಿ ಅಥವಾ ವಿರಳವಾಗಿ ಪೊದೆಯಂಥ ತುಪ್ಪುಳುಯುತ ಅಥವಾ ತೆಳುವಾದ ಮೃದು ತುಪ್ಪುಳಯುತ; ತುದಿಯಲ್ಲಿರುವ ಮಿಶ್ರಗೊಂಚಲು ಅಹಿತಕರ ವಾಸನೆಯುಕ್ತ, ಕೆಂಪು ಛಾಯೆಯುಯುತ ಮತ್ತು ಕೆಳಭಾಗವು ಮೃದು ತುಪ್ಪುಳಿನಿಂದ ಕೂಡಿರುತ್ತದೆ, ಪುಷ್ಪಪತ್ರ ಅಂಡಾಕಾರದಿಂದ ಅಂಡವೃತ್ತಾಕಾರ, ದೀರ್ಘಚತುರಸ್ರ ಈಟಿಯಾಕಾರ ಅಥವಾ ಅಂಡಾಕಾರಿತ ದೀರ್ಘ ಚತುರಸ್ರ, ಕೆಳಭಾಗದಲ್ಲಿರುವ ತುಪ್ಪುಳು (ರೋಮ) ಉದುರಿ ಹೋಗುತ್ತವೆ, ನಿಮ್ನವಾಧ (ಕುಳಿಯುತ), ತಕ್ಷಣ ಉದುರಿ ಬೀಳುತ್ತವೆ, 0.3-0.5 ಸೆಂಟಿಮೀಟರ್ ಉದ್ದ; ಚಿಕ್ಕ ಉಪಪುಷ್ಪ ಪತ್ರಗಳು ಅಂಡಾಕಾರಿತ.

ಸಣ್ಣ ಗಾತ್ರದ ಹೂಗಳು ಸಂಕೀರ್ಣಲಿಂಗಿ, ದ್ವಿಲಿಂಗಿ, ಹಳದಿ ಮಿಶ್ರಿತ ಹಸುರು ಬಣ್ಣ, ಉದುರುತ್ತವೆ, ತುದಿಯ ಉಪರೆಂಬೆಗಳಲ್ಲಿರುವ ನಿಬಿಡ ಮಧ್ಯಾರಂಭಿ ಪುಷ್ಪ ಮಂಜರಿಯಲ್ಲಿ ಹೂಗಳು ಉದುರುತ್ತವೆ. ಟೆಟ್ರಾ ಅಥವಾ ಪೆಂಟಾಮಾರಸ್, ಬಹುವಾಗಿ ಬಂಜೆ, ಸುವಾಸನೆಯುತ, ಒಂದೇ ಮಿಶ್ರ ಹೂಗೊಂಚಲಲ್ಲಿ ಗಂಡು ಮತ್ತು ಉಭಯಲಿಂಗಿ ಹೂವುಗಳು ವೃಂತ ಮೇಲ್ಭಾಗ ಕಾಲುವೆಯಂತೆ ತಗ್ಗು, ಕುಳ್ಳು ಮತ್ತು ದೃಢ, ನಿಬಿಡವಾಗಿ ಮೃದು ತುಪ್ಪಳು ಒಳಗೆ ಅಥವಾ ಮಧ್ಯದ ಮೇಲೆ ಸೇರಿರುತ್ತವೆ, ಬುಡದಲ್ಲಿ ನಸುಗೆಂಪು ಅಥವಾ ಉದ್ದಕ್ಕೂ ಹಸುರು ಮಿಶ್ರಿತ ಹಳದಿ, 0 4 ಸೆಂಟಿಮೀಟರ್ ಉದ್ದ, ಅಗಲವಾದಾಗ 0.5-0.7 ಸೆಂಟಿಮೀಟರ್, ವೃಂತಪರ್ಣಗಳು ಇರುವುದಿಲ್ಲ.

ಪುಷ್ಪಪಾತ್ರ ಪತ್ರಗಳು (ಹೂ ಎಲೆಗಳು) 4-5, ಉದುರುತ್ತವೆ, ದಳಗಳಿಗಿಂತ ಕುಳ್ಳು, ಅಂಡಾಕಾರಿತ ಅಥವಾ ಅಂಡಾಕಾರಿತ ದೀರ್ಘಚತುರಸ್ರ, ಮೊನಚು ಅಥವಾ ಮೊಂಡು ತುದಿ, ಹಳದಿ ಮಿಶ್ರಿತ ಹಸುರು ಅಥವಾ ತಿಳಿಹಳದಿ, ಎರಡೂ ಕಡೆಗಳಲ್ಲಿ

ಕುಳಿಗಳು (ನಿಮ್ನ ಮಧ್ಯ), ಆದರೆ ವಿಶೇಷವಾಗಿ ಹೊರಭಾಗದಲ್ಲಿ ನಿಬಿಡವಾಗಿ ತುಂಡು ತುಂಡು ರೋಮಾವೃತ, ಮೇಲಿನ ಅರ್ಧಭಾಗ ಉದ್ದವಾದ ರೋಮಗಳಿಂದ ಕೂಡಿರುತ್ತವೆ, ಇಂಬ್ರಿಕೇಟ್ (ಹೆಂಚಿನ ಹೊದಿಕೆಯಂಥ ಜೋಡಣೆ), 0.2-0.3 ಸೆಂಟಿಮೀಟರ್ ಉದ್ದ, 0.1-0.15 ಸೆಂಟಿಮೀಟರ್ ಅಗಲ.

ದಳಗಳು 4–5, ಉದುರುತ್ತವೆ. ಹರಡಿರುತ್ತವೆ, ಬಿಲ್ಲೆಗೆ ಅಂಟಿಕೊಂಡಿರುವುದಿಲ್ಲ ಅಥವಾ ಅಂಟಿಕೊಂಡಿರುತ್ತವೆ, ತುದಿಗಳು ಹಿಂಬಾಗಿರುತ್ತವೆ, ಇಂಬ್ರಿಕೇಟ್, ಹೂಎಲೆಗಳ ಎರಡರಷ್ಟು ಉದ್ದ, ಒಳಭಾಗದಲ್ಲಿ ಭಾಗವಾಗಿರುವ ಹರಳಿನಂತಹ ಬಿಲ್ಲೆ ಅಥವಾ ಉಬ್ಬು, ದೀರ್ಘಚತುರಸ್ರ ಅಂಡಾಕಾರದಿಂದ ಹಿಡಿದು ಭರ್ಜಿಯಾಕಾರ, ಸ್ವಲ್ಪ ಮೊನಚು, ಹಿಂಬಾಗಿರುತ್ತದೆ, ಕೆಳುವಾದ ಮೃದು ರೋಮಗಳಿಂದ ಕೂಡಿರುತ್ತದೆ ಅಥವಾ ನಯಚರ್ಮ, ಹಳದಿ ಮಿಶ್ರಿತ ಬಿಳುಪು, ಒಳಭಾಗದ ಬುಡದಲ್ಲಿ ಕಡುಗೆಂಪು ಬಣ್ಣದ ನಾಳಗಳು ಮತ್ತು 3ರಿಂದ 5 ಮಾಸಲು ಕಂದು ಹಳದಿ ಛಾಯೆಯ (ಕಾವಿ ಬಣ್ಣ) ಕಿತ್ತಲೆ ಬಣ್ಣದ ಉಬ್ಬು, ಇವುಗಳ ಅಂಚಿನಲ್ಲಿ ಅನೇಕವೇಳೆ ನಸುಗೆಂಪು ಬಣ್ಣ, 0.3–0.5 ಸೆಂಟಿಮೀಟರ್ ಉದ್ದ, 0.12–0.15 ಸೆಂಟಿಮೀಟರ್ ಅಗಲ.

ಅಗಲವಾದ ಬಿಲ್ಲೆ, ಮೆದು, ದಳಗಳ ಬುಡದ ಮೇಲ್ಭಾಗದಲ್ಲಿರುತ್ತವೆ, ನಿರ್ದಿಷ್ಟವಾಗಿ 4–5 ಭಾಗಗಳಿರುತ್ತವೆ, ತಗ್ಗಾಗಿರುತ್ತವೆ, ಮೃದುವಾಗಿರುತ್ತವೆ, ನಿಂಬೆಯ ಬಣ್ಣ, ಅನಂತರ ಫ್ರಾಸ್ಟೆಡ್ ಗಾಜಿನಂತಹ ಬಿಳುಪು ಬಣ್ಣ, ಸ್ತ್ರೀಯಾಂಗ ತೆರೆದಿರುವ ಕಾಲದಲ್ಲಿ ಅಂಡಾಶಯಕ್ಕಿಂತ ಬಹಳ ಅಗಲವಾಗಿರುತ್ತದೆ. 0.1–0.15 ಸೆಂಟಿಮೀಟರ್ ಎತ್ತರ; ಮಕರಂದ ಗ್ರಂಥಿಗಳು 5, ದೊಡ್ಡವು, ಹಳದಿ, ಮೆದು, ಜವಾರ್‌ ಬುಡವನ್ನು ಆವರಿಸಿದ್ದು ಮೇಲೆದ್ದ 5 ಭಾಗಗಳ ಪುಷ್ಪಪಾತ್ರವನ್ನುಂಟುಮಾಡುತ್ತದೆ.

ಕೇಸರಗಳು 4-5, ಬಹಳ ಅಸಮವಾಗಿರುತ್ತವೆ, ಇವುಗಳಲ್ಲಿ ಒಂದು ಅಥವಾ ಎರಡು ಉದ್ದವಾಗಿದ್ದು, ಫಲದಾಯಕ, ಉಳಿದವು ಬಂಜೆ ಅಥವಾ ನಿಷ್ಫಲದಾಯಕ ಬಂಜೆ ಕೇಸರಗಳಾಗಿರುತ್ತವೆ, ಒಳಕ್ಕೆ ಸೇರಿಕೊಂಡಿರುತ್ತವೆ ಅಥವಾ ಬಿಲ್ಲೆಯ ಮೇಲೆ ಇರುತ್ತವೆ, ಒಂದು ಸಣ್ಣ ಗ್ರಂಥಿಯಿರುವ ಸಣ್ಣ ತುದಿ. ಇವುಗಳ ಜೊತೆಗೆ ಮಕರಂದ ಗ್ರಂಥಿ ಭಾಗಗಳ ತುದಿಯಿಂದ ಸಾಧಾರಣವಾಗಿ 2–3 ಸೂಕ್ಷ್ಮವಾದ ಬಂಜೆ ಕೇಸರಗಳಂತಿರುವ ಭಾಗಗಳು ಹೊರಬಂದಿರುತ್ತವೆ; ಬಂಜೆ ಕೇಸರಗಳು ಸೂಕ್ಷ್ಮ, ಕಡುಗೆಂಪು ಅಥವಾ ಹಳದಿಮಿಶ್ರಿತ ಬಿಳುಪು, 0.1 ಸೆಂಟಿಮೀಟರ್ ಉದ್ದ; ಪೂರ್ಣ

ಕೇಸರಗಳು 0.2–0.3 ಸೆಂಟಿಮೀಟರ್ ಉದ್ದ, ಕೇಸರದಂಡ ಬಿಳುಪು ಅಥವಾ ಹಳದಿ ಮಿಶ್ರಿತ ಬಿಳುಪು, ಟೆರ್ರೈಟ್, ನುಣುಪು ಚರ್ಮ, ಊದಾ ಬಣ್ಣ, ಬಂಜೆ, 0.1 ಸೆಂಟಿಮೀಟರ್ ಉದ್ದ, ಗಂಡು ಹೂಗಳಲ್ಲಿ ಮೂಲಾವಸ್ಥೆಯ ಅಂಡಾಶಯ ಇರುವುದಿಲ್ಲ; ಮಧ್ಯದಲ್ಲಿರುವ ಕೇಸರಗಳು ಬಿಲ್ಲೆಯ ಭಾಗಗಳನ್ನು ಭದ್ರವಾಗಿ ಅಪ್ಪಿಕೊಂಡಿರುತ್ತವೆ.

ದ್ವಿಲಿಂಗ ಹೂಗಳಲ್ಲಿನ ಅಂಡಾಶಯವು ಸ್ಪಷ್ಟವಾಗಿರುತ್ತದೆ, ಗುಂಡಾಗಿರುತ್ತದೆ, ನುಣುಪು ಚರ್ಮ, ಸಿಂಬೆ ಬಣ್ಣ ಅಥವಾ ಹಳದಿ ಮಿಶ್ರಿತ ಬಿಳುಪು, 0.1ರಿಂದ 0.15 ಸೆಂಟಿಮೀಟರ್ ವ್ಯಾಸ, ತೊಟ್ಟು ಇಲ್ಲ, ಒಂದು ಕೋಶವುಳ್ಳ, ಸಾಮಾನ್ಯವಾಗಿ ಓರೆ ಅಂಡಾಕಾರಿತ ಪಕ್ಕದ ಶಲಾಕೆ, ಮೇಲ್ಭಾಗಕ್ಕೆ ಬಾಗಿರುತ್ತದೆ, ನುಣುಪು ಚರ್ಮ, ಸಿಂಬೆಯ ಹಳದಿ ಅಥವಾ ಹಳದಿ ಮಿಶ್ರಿತ ಬಿಳುಪು, 0.15ರಿಂದ 0.2 ಸೆಂಟಿಮೀಟರ್ ಉದ್ದ; ಶಲಾಕಾಗ್ರವು ಸರಳ, ಸಣ್ಣದು ಮತ್ತು ತುದಿಯಲ್ಲಿರುತ್ತದೆ; ಒಂಟಿ ಅಂಡಾಣು, ಏಕಕೋಶಿಕ. ಬುಡದಿಂದ ಅಥವಾ ಬುಡದ ಕೆಳಭಾಗದ ಫ್ಯೂನಿಕಲ್‌ನಿಂದ ಸಾಮಾನ್ಯವಾಗಿ ನೇರವಾಗಿರುತ್ತದೆ.

ಅಷ್ಟಿಫಲ (ಡ್ರೂಪ್) ಒಂದು ಹಣ್ಣು, ಮೆದು, ರಾಳದಿಂದ ಕೂಡಿರುತ್ತದೆ, ಆಕಾರ ಮತ್ತು ಆಕೃತಿಯಲ್ಲಿ ಬಹಳ ಭಿನ್ನವಾಗಿರುತ್ತದೆ. ಮಾಗಿದಾಗ ಹಳದಿ ಮಿಶ್ರಿತ ಹಸುರು ಅಥವಾ ಕೆಂಪು, 4–25 ಸೆಂಟಿಮೀಟರ್ ಉದ್ದ ಮತ್ತು 1.5ರಿಂದ 10 ಸೆಂಟಿಮೀಟರ್ ಅಗಲ, ಬಹಳ ಅಸಮ, ಅಂಡಾಕಾರಿತ ದೀರ್ಘ ಚತುರಸ್ರ, ಓರೆ ಆಯತಾಕಾರ, ಪಿಯರ್ ಹಣ್ಣಿನಾಕಾರ, ಸ್ವಲ್ಪ ಅಂಡಾಕಾರಿತ, ಗುಂಡು ಅಥವಾ ಮೊಂಡು, ದಪ್ಪವಾದ ಸಿಪ್ಪೆ, ಚರ್ಮದಂತಿರುತ್ತದೆ, ಚಪ್ಪಟೆಯಾಗಿರುವ ಏಕ ಬೀಜದ ಬೀಜದ ಮೇಲ್ಮೈರೆ ನಾರಿನಿಂದ ಕೂಡಿರುತ್ತದೆ. ಬೀಜ ದೊಡ್ಡದು, ಅಂಡಾಕಾರಿತ ದೀರ್ಘಚತುರಸ್ರ, ಚಪ್ಪಟೆ, ತೆಳುವಾದ ಮೇಲು ಚರ್ಮ, ಕಾಗದದಂತೆ ತೆಳುವು, ಬೀಜದಳಗಳು ಸಪಾಟ ಪೀನಮಧ್ಯ (ಪ್ಲೆನೊಕ್ಯಾನ್ವೆಕ್ಸ್), ಅನೇಕವೇಳೆ ಅಸಮ ಮತ್ತು ಭಾಗವಾಗಿರುತ್ತದೆ, ಮೂಲಬೇರು ತುಸು ಮೇಲ್ಭಾಗಕ್ಕೆ ಬಾಗಿರುತ್ತದೆ.

ಕೋಶಿಕೆ ಅನುವಂಶಶಾಸ್ತ್ರ


ಇದುವರೆಗೆ, ಮಾವಿನ ಕೋಶಿಕೆ ಅನುವಂಶಶಾಸ್ತ್ರದ ಬಗ್ಗೆ ಬಹು ಕಡಮೆ ಸಂಶೋಧನೆ ನಡೆದಿದೆ. ಕೇವಲ ಮುಖರ್ಜಿಯವರು 1(1950ಬಿ) ಮಾತ್ರ ಸಂಶೋಧನೆಯನ್ನು ಬಹಳಮಟ್ಟಿಗೆ ನಡೆಸಿದ್ದಾರೆ ಮತ್ತು ಕೆಳಕಂಡ ವಿಷಯ ಅವರ ಪ್ರಾಥಮಿಕ ಸಂಶೋಧನೆಯನ್ನು ಅವಲಂಬಿಸಿದೆ. ಮ್ಯಾ. ಇಂಡಿಕಾದ ವರ್ಣತಂತುಗಳ

ಸಂಖ್ಯೆ n = 24ರಿಂದ 26 ಎಂದು ಮಹೇಶ್ವರಿ ವರದಿಮಾಡಿದ್ದಾರೆ. ರಾಯ್(1939) n = 6ರಿಂದ 8 ಎಂದು ವರದಿ ಮಾಡಿದ್ದಾರೆ ಮತ್ತು ಡಾರ್ಲಿಂಗ್‌ಟನ್ ಮತ್ತು ಜಾನಕಿ ಅಮ್ಮಾಳ್ (1945) 2n = 40 ಎಂದು ವರದಿಮಾಡಿದ್ದಾರೆ. ಮುಖರ್ಜಿಯವರು ಬರ್ಮಾದಲ್ಲಿ ಬೆಳೆಯುವ ಮ್ಯಾ. ಇಂಡಿಕಾ, ಮ್ಯಾ. ಸಿಲ್ವಾಟಿಕಾ ಮತ್ತು ಮ್ಯಾ. ಕ್ಯಾಲೋನಿಯುರಾ ಎಂಬ ಮೂರು ಪ್ರಭೇದಗಳನ್ನು ಮತ್ತು 24 ಭಾರತದ ತಳಿಗಳನ್ನು ಅಭ್ಯಾಸ ಮಾಡಿದರು. ಇವರು ಮಾವಿನ ವರ್ಣತಂತುಗಳ ಸಂಖ್ಯೆ 2n = 40 ಎಂದು ತೀರ್ಮಾನಿಸಿದರು. ಆದರೂ ಲಾಟ್ರಾ ಸಫ್ದರ್ ಪಸಂದ್ ಮತ್ತು ಕಾಲಾಪಹಾರ್ ತಳಿಗಳಲ್ಲಿ (ಶಾರೀರಕ) ವರ್ಣತಂತುಗಳ ಪ್ರಗತಿಯಾಗಿರುವುದರಿಂದ ಅವುಗಳ ಸಂಖ್ಯೆಯಲ್ಲಿ 40ರಿಂದ 42ರಷ್ಟು ವ್ಯತ್ಯಾಸವನ್ನು ಸೂಚಿಸಿವೆ. ಇನ್ನಿತರ 13 ತಳಿಗಳಲ್ಲಿ ಪ್ರಾಪ್ತ ವಯಸ್ಸಿನ ಪರಾಗಗಳನ್ನು ಸಹ ಅಭ್ಯಾಸ ಮಾಡಲಾಗಿದ್ದು ಅವು ಇಂತಹ ಬಾಹ್ಯ ರಚನೆಯನ್ನು ತೋರಿಸಿವೆ. ಪರಾಗಗಳು ಅಂಡಾವೃತ್ತಾಕಾರಿತ, ಇವುಗಳ ಮೇಲು ಪೊರೆಯಲ್ಲಿ ತಗ್ಗುಗಳು, ಮೂರು ಉದ್ದವಾದ, ಇಳಿಜಾರಾಗಿ ಮತ್ತು ಮೊನಚಾಗುವ ಕಾಲುವೆಗಳಿಂದ ಕೂಡಿವೆ ಮತ್ತು ಪ್ರತಿಯೊಂದು ಪರಾಗದ ಮಧ್ಯದಲ್ಲಿ ಒಂದು ದೊಡ್ಡ ಮೊಳಕೆ (ಜರ್ಮ್) ಪೊರೆ ಇರುತ್ತದೆ. ಇವುಗಳ ಸರಾಸರಿ ವ್ಯಾಸದ ಅಂತರ 24ರಿಂದ 30μ ಇದ್ದು ಸಮರೂಪಿಯಾಗಿವೆ. ಮ್ಯಾಂಜಿಫೆರಾ ಜಾತಿಯ ಇತರ ಪ್ರಭೇದಗಳಲ್ಲಿ ಸಹ ವರ್ಣತಂತುಗಳ ಸಂಖ್ಯೆ ಭಿನ್ನವಾಗಿರುವುದಿಲ್ಲ ಎಂಬುದನ್ನು ಇದು ಸೂಚಿಸುತ್ತದೆ. ಮಾವಿನಲ್ಲಿ ವರ್ಣತಂತುಗಳ ಸಂಖ್ಯೆ ಸ್ಥಿರ ಮತ್ತು ವರ್ಣತಂತುಗಳ ಬಹುಗುಣಕ (ಪಾಲಿಪ್ಲಾಯಿಡ್) ಸರಣಿ ಕಂಡು ಬಂದಿಲ್ಲ. ಭಿನ್ನ ಪ್ರಭೇದ ಮತ್ತು ತಳಿಗಳ ವರ್ಣತಂತು ಉಪಭಾಗಗಳ ಮತ್ತು ದ್ವಿತೀಯ ತಗ್ಗುಗಳ ಸಂಖ್ಯೆ ಎಂಟು ಮತ್ತು ಹದಿನಾರರ ಮಧ್ಯೆ ಇರುತ್ತದೆ. ವರ್ಣತಂತುಗಳ ಗಾತ್ರದ ಅಂತರ 0.4ರಿಂದ 2.0μ. ಬಹು ಸಂಖ್ಯೆಯ ವರ್ಣತಂತುಗಳಲ್ಲಿನ ಪ್ರತಿಯೊಂದ ಉಪಭಾಗದಲ್ಲಿ ಸ್ಪಷ್ಟವಾದ ತಗ್ಗುಗಳು ಇರುವುದಿಲ್ಲ. ಬಾಹ್ಯ ರಚನೆಯ ಆಧಾರದ ಮೇಲೆ ವರ್ಣತಂತುಗಳನ್ನು ಹನ್ನೊಂದು ವಿಧವಾಗಿ ವಿಂಗಡಿಸಬಹುದು. ಇವುಗಳಲ್ಲಿ ಎಂಟು ನಿರ್ದಿಷ್ಟವಾಗಿವೆ ಮತ್ತು ಮೂರು ಅಂತರ ದರ್ಜೆಯವು. ಕ್ಯಾರಿಯೊಟೈಪ್‌ಗಳನ್ನು ವಿಶ್ಲೇಷಣೆ ಮಾಡಿದಾಗ ಪ್ರಭೇದಗಳ ಸಮೀಪ ತಳಿಗಳು ಪರಸ್ಪರ ಭಿನ್ನವಾಗಿರುವುದು ಮತ್ತು ಈ ವರ್ಣತಂತು ವಿಧಗಳು ವಿಂಗಡಣೆಯಾಗಿರುವುದೇ ಮುಖ್ಯ ಕಾರಣವೆಂಬುದು ತಿಳಿದು ಬರುತ್ತದೆ. ಶಾರೀರಕ ಕೋಶಿಕೆಯಲ್ಲಿನ ಕೇಂದ್ರಕಗಳ ಸಂಖ್ಯೆ ಎಂಟರಿಂದ ಹದಿನಾರು ಮತ್ತು ಇವು ಉಪವರ್ಣತಂತು ಮತ್ತು ದ್ವಿತೀಯ ತಗ್ಗಿನ ವರ್ಣತಂತುಗಳೊಂದಿಗೆ ಪರಸ್ಪರ ಅನ್ಯೋನ್ಯವಾಗಿರುತ್ತವೆ. ಪ್ರತಿ ಕೇಂದ್ರದಲ್ಲಿರುವ ನ್ಯೂಕ್ಲಿಯೊಲೈ ನಿರ್ದಿಷ್ಟವಾದ ಗಾತ್ರ ವ್ಯತ್ಯಾಸದ್ದು. ಅಂದರೆ, ದೊಡ್ಡ, ಮಧ್ಯಮ ಮತ್ತು ಸಣ್ಣ ನ್ಯೂಕ್ಲಿಯೊಲೈಗಳು, ಡೈಯಾಡ್

ಕಣದಲ್ಲಿನ ಎರಡು ಕ್ರೇಂದ್ರಕಗಳಲ್ಲಿ ಸಮ ಬಾಹ್ಯರೂಪ ಜೋಡಿಗಳಾಗುತ್ತವೆ. ಇದು ತಳಿಗಳ ಅನುರೂಪ (ಹೊಮೊಲೊಗಸ್) ಸ್ವಭಾವವನ್ನು ತೋರಿಸುತ್ತದೆ. ಅಲ್ಫಾನ್ಸೊ ಮತ್ತು ದುಸೆರಿ ತಳಿಗಳಲ್ಲಿ ನಿರ್ದಿಷ್ಟವಾದ ಅನನ್ಯ (ತದ್ರೂಪ) ವರ್ಣತಂತುಗಳಿರುತ್ತವೆ. ಮ್ಯಾ. ಸಿಲ್ವ್ಯಾಟಿಕಾ ಪ್ರಭೇದದಲ್ಲಿ ಹೆಚ್ಚು ಸಂಖ್ಯೆಯ ವರ್ಣತಂತುಗಳು (30) ಚಿಕ್ಕ ವಿಧಗಳಾಗಿವೆ. ಹಣ್ಣಿನ ಆಕಾರದ ಆಧಾರದ ಮಾವಿನ ಹಣ್ಣಿನ ತಳಿಗಳ ಬಾಹ್ಯ ರೂಪ ವರ್ಗೀಕರಣವು, ಕೇಂದ್ರಕಗಳ ವರ್ಣತಂತು ಸಂಖ್ಯೆಗಳ ಪ್ರಕಾರದ ವರ್ಗೀಕರಣದೊಂದಿಗೆ ಯಾವ ಮಹತ್ವದ ಪರಸ್ಪರ ಸಂಬಂಧವನ್ನು ತೋರಿಸುವುದಿಲ್ಲ. ಕ್ಷೀಣ ವಿಭಜನೆಯ ಕಾಲದಲ್ಲಿ ವರ್ಣತಂತುಗಳು 20 ದ್ವಿಸಂಯೋಗ (ಬೈವೇಲೆಂಟ್) ಸಾಮರ್ಥ್ಯ ಜೋಡಿಗಳಾಗುತ್ತವೆ. ಅನಂತರ ಕ್ರಮವಾಗಿ ಅಗಲುತ್ತವೆ. ಬಹು ಸಂಯೋಗ ಸಾಮರ್ಥ್ಯ ಕಂಡುಬಂದಿಲ್ಲ. ವರ್ಣತಂತುಗಳು ಕವಲುವ ಅಥವಾ ಪ್ರತ್ಯೇಕವಾಗುವ ಕ್ಷೀಣ ವಿಭಜನೆಯ ಅಕ್ರಮಗಳು ಕಂಡುಬಂದಿಲ್ಲ. ಮೆಟಾಫೇಸ್‌ನಲ್ಲಿ ದ್ವಿಸಂಯೋಗ ಸಾಮರ್ಥ್ಯವು ಎಂಟು ಅಂಕಗಳಾಗಿರುವುದರ ದ್ವಿತೀಯ ಸಂಯೋಜನೆಯನ್ನು ತೋರಿಸುತ್ತವೆ. ಇದು ಮ್ಯಾಂಜಿಫೆರಾದಲ್ಲಿ ಮೂಲ ಸಂಖ್ಯೆ ಎಂಟು ಎಂಬುದನ್ನು ಸೂಚಿಸುತ್ತದೆ. ಎಂಟು, ನಿರ್ದಿಷ್ಟ ವರ್ಣತಂತು ವಿಧಗಳೂ ಇದನ್ನು ಬೆಂಬಲಿಸುತ್ತವೆ. ಮಾವಿನ ಸಮರೂಪ ಪ್ರಭೇದಗಳಾದ ರುಸ್ ಮತ್ತು ಸೆವೆ.ಕಾರ್ಪರ್ ಪ್ರಭೇದಗಳಲ್ಲಿ ಕ್ರಮವಾಗಿ $2n = 20$ ಮತ್ತು $2n = 30$ ಇರುವಿಕೆ ಅನಾಕಾರ್ಡಿಯೆಸಿಯಯಲ್ಲಿ ಎರಡು ಮೂಲ ಸಂಖ್ಯೆಗಳು ಇರಬಹುದೆಂದು ಮತ್ತು ಮ್ಯಾಂಜಿಫೆರಾದ ಮೂಲಸಂಖ್ಯೆ ಎಂಟು ಎಂಬುದು ಐದು ಅಥವಾ ಐದರ ಅಪವರ್ತ್ಯದಿಂದ ಇವು ಉದ್ಭವಿಸಿರಬಹುದೆಂದು ಸೂಚಿಸುತ್ತದೆ.

ಮ್ಯಾಂಜಿಫೆರಾ ದಲ್ಲಿ ಬಹುಗುಣಿತ (ಪಾಲಿಪ್ಲಾಯಿಡಿ) ಸರಣಿ ಇಲ್ಲದಿರುವಿಕೆ, ಅಧಿಕ ಸಂಖ್ಯೆಯ ವರ್ಣತಯಗಳು ಮತ್ತು ಸಂಬಂಧಪಟ್ಟ ಅಧಿಕ ಸಂಖ್ಯೆಯ ಕೇಂದ್ರಕ ವರ್ಣತಂತುಗಳನ್ನು ಮುಖರ್ಜಿ (1951)ಯವರು ಗಮನಿಸಿದ್ದಾರೆ. ಇದು ಮಾವಿನ ಸ್ವಭಾವವನ್ನು ಸೂಚಿಸುತ್ತದೆ. ಮಾವಿನ ವಿವಿಧ ತಳಿಗಳನ್ನು ಕೊಟ್ಟ ಮೂಲರೂಪದ ಬಗೆ ಅಥವಾ ಬಗೆಗಳು ಆಲೊಪಾಲಿಪ್ಲಾಯಿಡಿ ಮೂಲಕ ದೊರೆತಿವೆ. ಇವುಗಳು ಬಹುವಾಗಿ ಆಂಫಿಡಿಪ್ಲಾಯಿಡಿ ಮೂಲಕ ದೊರೆತಿವೆ. ಪಾಲಿಪ್ಲಾಯಿಡಿಯಲ್ಲಿ ಇದ್ದಂತೆ ತಳಿಗಳ ಬಾಹ್ಯ ರಚನೆಯು ಕ್ರಮೇಣ ಮುಂದುವರಿದು ಬದಲಾವಣೆಯನ್ನು ಸೂಚಿಸುತ್ತದೆ. ಸಮಲಕ್ಷಣ (ಫಿನೋಟೈಪಿಕ್) ಮತ್ತು ಸಮಸಂರಚನಾ (ಜಿನೊಟೈಪಿಕ್) ಗುಣಗಳೆರಡೂ ಒಂದೇ ಸಮನೆ ಬದಲಾವಣೆಗಳನ್ನು ಸೂಚಿಸುತ್ತವೆ. ಅಸಂಖ್ಯಾತ ಭಿನ್ನತಳಿಗಳಾಗಿರುವಿಕೆಯು ವಂಶವಾಹಿ ಉತ್ಪರಿವರ್ತನೆ ಮೂಲದಿಂದ ಆರಿಸಿದ ತಳಿಗಳನ್ನು ನಿರ್ಲಿಂಗ ರೀತಿಯಿಂದ ವೃದ್ಧಿ ಮಾಡಲಾಗಿದೆ. ತಳಿಗಳಲ್ಲಿ ಅನು

ರೂಪತಿ ಇದ್ದು ಪ್ರಾಯಶಃ ಭಿನ್ನ ತಳಿಗಳ ಪರಸ್ಪರ ಸಂಕರಣವು ಹೊಸ ಮಾವಿನ ತಳಿಗಳ ಉತ್ಪಾದನೆಗೆ ಇನ್ನೊಂದು ಮುಖ್ಯ ಕಾರಣ.



ಚಿತ್ರ 4 : ಮಾವಿನ ಬೇಸಾಯ ಕೇಂದ್ರಗಳು

ಅಧ್ಯಾಯ 3

ತಳಿಗಳ ವಿವರಣೆ

ಭಾರತದಲ್ಲಿ ಬೇಸಾಯದಲ್ಲಿರುವ ನಿರ್ದಿಷ್ಟ ತಳಿಗಳ ಒಟ್ಟು ಸಂಖ್ಯೆ 500ರಿಂದ 1000 ಎಂದು ಅಂದಾಜು ಮಾಡಲಾಗಿದೆ. ಮಾವಿನ ಓಟೆಗಳಿಂದ ಮರಗಳನ್ನು ಬೆಳೆಸಿದರೆ, ಆ ಪ್ರತಿಯೊಂದು ಮರವೂ ಒಂದು ಪ್ರತ್ಯೇಕ ತಳಿಯಾಗುತ್ತದೆ ; ಇಂಥವನ್ನೂ ಪಟ್ಟಿಗೆ ಸೇರಿಸಿದರೆ ಪಟ್ಟಿ ಇನ್ನಷ್ಟು ದೊಡ್ಡದಾಗುತ್ತದೆ. ಆದರೂ, ಈ ತಳಿಗಳಲ್ಲಿ ಬಹುಮಟ್ಟಿನವು ಯಾವುದೇ ಉತ್ತಮ ದರ್ಜೆ ಅಥವಾ ವಾಣಿಜ್ಯ ಪ್ರಾಮುಖ್ಯತೆಯಿಂದ ಕೂಡಿರುವುದಿಲ್ಲ. ಪ್ರಸ್ತುತ ಅಧ್ಯಯನವು ದೇಶದಲ್ಲಿ ಬೆಳೆಯುತ್ತಿರುವ ಎಲ್ಲಾ ಒಟ್ಟು 210 ಮುಖ್ಯ ತಳಿಗಳನ್ನು ಒಳಗೊಂಡಿದೆ.

ಪ್ರಮುಖ ಮಾವಿನ ಬೇಸಾಯ ಕೇಂದ್ರಗಳಲ್ಲಿ ಅಭ್ಯಸಿಸಲಾದ ತಳಿಗಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ

ರಾಜ್ಯ	ಕೇಂದ್ರ	ಅಭ್ಯಸಿಸಿದ ತಳಿಗಳ ಸಂಖ್ಯೆ
ಉತ್ತರಪ್ರದೇಶ	(ಅ) ಮಾಲಿಹಬಾದ್	31
	(ಆ) ಸಹರಾನ್‌ಪುರ	28
ಬಾಂಬೆ	(ಅ) ರತ್ನಗಿರಿ	10
	(ಆ) ಪೂನಾ	20
	(ಇ) ಬರೋಡಾ ಫಾರ್ಮ್ಸ್	6
ತಮಿಳುನಾಡು ಮತ್ತು ಆಂಧ್ರ	ಕೊಡೂರು, ಸೇಲಂ ಮತ್ತು ವಿಶಾಖಪಟ್ಟಣ	55
ಹೈದ್ರಾಬಾದ್	ಹೈದ್ರಾಬಾದ್ ಮತ್ತು ಸಂಗರೆಡ್ಡಿ	11
ಬಿಹಾರ್	ಸಾಬೂರ್	20
ಪಶ್ಚಿಮ ಬಂಗಾಳ	ಕೃಷ್ಣಗರ್ ಮತ್ತು ಮುರ್ಷಿದಾಬಾದ್	18

ಪಂಜಾಬ್	ಗುರುದಾಸ್‌ಪುರ್, ಪಾಣಿಪತ್ ಮತ್ತು ಕರ್ನಾಲ್	10
ಒರಿಸ್ಸಾ	ಕಟಕ್	1
	ಒಟ್ಟು	210

ವಿಂಧ್ಯಪ್ರದೇಶ, ಮಧ್ಯಪ್ರದೇಶ, ಮಧ್ಯಭಾರತ, ರಾಜಸ್ಥಾನ, ಮತ್ತು ಸೌರಾಷ್ಟ್ರಗಳಲ್ಲಿ ನಡೆಸಿದ ತನಿಖೆಗಳಿಂದ ಈ ಪ್ರದೇಶಗಳಲ್ಲಿನ ವಾಣಿಜ್ಯ ಮಾವಿನ ತಳಿಗಳು ಪಕ್ಕದ ರಾಜ್ಯದ ತಳಿಗಳನ್ನು ಹೋಲುತ್ತವೆಂದು ತಿಳಿದುಬಂದಿದೆ. ಆದ್ದರಿಂದ, ಮೇಲ್ಕಂಡ ಪ್ರದೇಶಗಳಲ್ಲಿನ ಮಾವಿನ ತಳಿಗಳನ್ನು ಅಭ್ಯಾಸಕ್ಕಾಗಿ ಆರಿಸಿಕೊಳ್ಳಲಾಗಿದೆ. ಅಸ್ಸಾಂನಲ್ಲೂ ಸಹ ಮಾವಿನ ತಳಿ ಸಮೀಕ್ಷೆಯನ್ನು ನಡೆಸಲಿಲ್ಲ. ಇದಕ್ಕೆ ಕಾರಣ ಮಾವಿನ ಬೇಸಾಯಕ್ಕೆ ಸಂಬಂಧಿಸಿದಂತೆ ಅಥವಾ ಮಾವಿನ ತಳಿ ಸಂಪತ್ತಿನ ಬಗ್ಗೆ ಆ ರಾಜ್ಯವು ಅಷ್ಟೇನೂ ಪ್ರಾಮುಖ್ಯವಾಗಿಲ್ಲದಿರುವಿಕೆ ಹಾಗೂ ದುರ್ಗಮ ದೂರದ ತೊಂದರೆಗಳು.

ಬೇಸಾಯದಲ್ಲಿರುವ ಅಸಂಖ್ಯಾತ ತಳಿಗಳನ್ನು ಕುರಿತಾಗಿ ಯಾವ ವರ್ಗೀಕರಣ ಶಾಸ್ತ್ರಜ್ಞನೂ ಅವುಗಳ ಪೂರ್ಣ ವಿಷಯವನ್ನು ಮರೆಯದಂತೆ ಜ್ಞಾಪಕದಲ್ಲಿಟ್ಟುಕೊಳ್ಳುವುದು ಸಹ ಅಸಾಧ್ಯ. ಆದಕಾರಣ ಮೊದಲು ಸಂಶೋಧಕರು ಮಾಡಿರುವ ವಿವರಣೆ, ಚಿತ್ರಗಳು ಅಥವಾ ಒಣ ಸಸ್ಯಸಂಗ್ರಹಣ (ಹರ್ಬೇರಿಯಂ) ಮಾದರಿಗಳನ್ನು ಅವಲಂಬಿಸುವುದು ಅಗತ್ಯವಾಗುತ್ತದೆ, ಎಂದು ಹೆಡ್ರಿಕ್ ಹೇಳಿದ್ದಾನೆ. ಆದ್ದರಿಂದ ಕೊಡುವ ವಿವರಣೆ ನಿರ್ದಿಷ್ಟವಾಗಿ ಮತ್ತು ವ್ಯಾಪಕವಾಗಿರಬೇಕು ಎಂದೂ ಸಹ ಹೇಳಿದ್ದಾನೆ. ನಮ್ಮ ದೇಶದಲ್ಲಿ ಹಣ್ಣಿನ ಬೆಳೆಗಳ ವ್ಯವಸ್ಥಿತ ಕಾರ್ಯದಲ್ಲಿ ಗುಣಗಳನ್ನು ಸಾಕಷ್ಟು ವಿವರವಾಗಿ ಅಭ್ಯಾಸ ಮಾಡದಿರುವುದು ಮುಖ್ಯದೋಷವೆಂದು ಅಭಿಪ್ರಾಯಪಟ್ಟಿದ್ದಾನೆ. ಕೊಡುವ ವಿವರಣೆ ನಿರ್ದಿಷ್ಟವಾಗಿರಬೇಕು. ಆದರೆ ಮುಖ್ಯವಾದ ಲಕ್ಷಣಗಳನ್ನು ಬಿಟ್ಟಿರುವುದರಿಂದ ಅಥವಾ ಮುಖ್ಯವಲ್ಲದ ವಿಷಯ ಸೇರಿಸಿರುವುದರಿಂದ, ಇದುವರೆವಿಗೂ ಮಾಡಿರುವ ಅಭ್ಯಾಸ ನಂಬಿಕೆಗೆ ಅರ್ಹವಲ್ಲ ಎಂದಿದ್ದಾನೆ. ಅಲ್ಲದೆ ವಾಸ್ತವಿಕ ವಿಷಯವೂ ಸ್ಪಷ್ಟವಾಗಿಲ್ಲ.

ಆದ್ದರಿಂದ, ಸಸ್ಯದ ಪ್ರತಿಯೊಂದು ಭಾಗವನ್ನು ವಿವರಿಸಬೇಕಾಗಿಲ್ಲ ; ಪ್ರಮುಖವಾಗಿರುವ ವಿಷಯಗಳನ್ನು ಮಾತ್ರ ಪರಿಶೀಲಿಸಬೇಕು. ಎಲ್ಲಾ ವಿಷಯಗಳನ್ನು ನಮೂದಿಸಿದರೆ ಆಗ ಬಹಳ ಮುಖ್ಯವಾದ ಅಂಶಗಳಿಗೆ ಪ್ರಾಧಾನ್ಯತೆ ನೀಡಬೇಕು.

ಹಿಂದಿನ ಸಂಶೋಧಕರು ಮಾವಿನ ತಳಿಗಳ ಬಗ್ಗೆ ನೀಡಿರುವ ವಿವರಣೆಯಲ್ಲಿ ಪರಿಮಾಣಾತ್ಮಕ ಗುಣಗಳಿಗಿಂತ ಗುಣಮಟ್ಟವು ಸ್ಥಿರವಾದುದು ಮತ್ತು ಮುಖ್ಯವೆಂದು ಒತ್ತಿ ಹೇಳಿದ್ದಾರೆ. ಉದಾಹರಣೆಗೆ, ಒಂದು ತಳಿಯ ಹಣ್ಣಿನ ಆಕಾರವು ಗಾತ್ರಕ್ಕೆ ಹೋಲಿಸಿದಾಗ ಅದು ಬೆಳೆಯುವ ವಾತಾವರಣಕ್ಕೆ ಸಂಬಂಧವಿಲ್ಲದಂತೆ ಸ್ಥಿರವಾಗಿರುತ್ತದೆ. ಇದರಂತೆ, ಎಲೆಗಳ ಗಾತ್ರಕ್ಕಿಂತ, ಅವು ಹಿಂಬಾಗಿರುವಿಕೆ ಹಾಗೂ ಅವುಗಳ ಆಕಾರಗಳು ಸ್ಥಿರವಾಗಿರುತ್ತವೆ. ನಾಯಕ್ ಮತ್ತು ಗಂಗೂಲಿ (1950) ಯವರು ಮಾವಿನ ತಳಿಗಳ ಕಾರ್ಯದಲ್ಲಿ ಎಲ್ಲಾ ಎಲೆಯ ಗುಣಗಳನ್ನು ತೋರಿಸಿದ್ದಾರೆ. ಇವರು ಎಲೆಯ ತುದಿ ಮತ್ತು ಎಲೆಗಳು ಮಡಚಿರುವಿಕೆಗಳಿಗೆ ಪ್ರಥಮ ಪ್ರಾಮುಖ್ಯತೆಯನ್ನೂ ಎಲೆಯ ಆಕಾರ ಮತ್ತು ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣಕ್ಕೆ ದ್ವಿತೀಯ ಪ್ರಾಮುಖ್ಯತೆಯನ್ನೂ ನೀಡಿದ್ದಾರೆ. ಈ ಸಂಶೋಧಕರು ಹೂಗಳ ಸ್ವಭಾವದಲ್ಲಿ, ಕೇವಲ ಹೂಗೊಂಚಲ ಆಕಾರವನ್ನು ಅವಲಂಬಿಸಿದ್ದಾರೆ. ಹಣ್ಣಿನ ಗುಣಗಳಲ್ಲಿ, ಹಣ್ಣಿನ ಆಕಾರದ ಜೊತೆಗೆ ಕೊಕ್ಕು ಇರುವಿಕೆ ಅಥವಾ ಇಲ್ಲದಿರುವಿಕೆಯನ್ನು ಪ್ರಮುಖವಾಗಿ ಗಣಿಸಿದ್ದಾರೆ. ನಾರಿನ ಸ್ವಭಾವ ಮತ್ತು ವ್ಯಾಪ್ತಿ ಮತ್ತು ಓಟೆಯಲ್ಲಿನ ನಾಳಗಳ ಸ್ವಭಾವವನ್ನು ತಳಿಗಳ ಸಾಂಕೇತಿಕ ಗುಣವಾಗಿ ಪರಿಗಣಿಸಿದ್ದಾರೆ.

ನಾಯಕ್ ಮತ್ತು ಗಂಗೂಲಿಯವರು (1950) ಉಪಯೋಗಿಸಿರುವ ವಿವರಣಾತ್ಮಕ ಪರಿಭಾಷೆ ಮತ್ತು ಮಾದರಿಗಳನ್ನು ಆರಿಸುವ ವಿಧಾನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅವರ ಸಂಶೋಧನೆಯ ಸಮಂಜಸ ಭಾಗಗಳನ್ನು ಮುಂದೆ ಬರುವ ಪುಟಗಳಲ್ಲಿ ಪುನರಾವರ್ತನೆ ಮಾಡಲಾಗಿದೆ.

ಮಾದರಿಗಳ ಆಯ್ಕೆ

ಮಾವು ಬೆಳೆಯುವ ಪ್ರಾತಿನಿಧಿಕ ಕೇಂದ್ರದಲ್ಲಿ ಪ್ರತಿಯೊಂದು ತಳಿಯ, ಪ್ರಾಪ್ತ ವಯಸ್ಸಿನ ಫಲ ಬಿಡುವ, ಆರೋಗ್ಯವಾಗಿರುವ ಮತ್ತು ಸುಧಾರಣ ಬೆಳವಣಿಗೆಯ ಸಾಂಕೇತಿಕ ಮರವನ್ನು ಆರಿಸಿಕೊಂಡನಂತರ, ಮರದಲ್ಲಿನ ವಿವಿಧ ಭಾಗಗಳನ್ನು ವಿವರವಾದ ಅಭ್ಯಾಸಕ್ಕೆ ಉಪಯೋಗಿಸಿಕೊಳ್ಳಲಾಯಿತು. ಆ ಕಾಲದ, ಬೆಳವಣಿಗೆ ಮುಕ್ತಾಯಗೊಂಡಿರುವ ಕಾಂಡ (ಷೂಟ್) ಭಾಗ ಮತ್ತು ಎಲೆಗಳನ್ನು ಆರಿಸಿಕೊಳ್ಳಲಾಯಿತು. ಮರದ ಒಳಭಾಗದಲ್ಲಿರುವ ಅಸಾಮಾನ್ಯ ಲಕ್ಷಣಗಳ ರೆಂಬೆಗಳು ಅಭ್ಯಾಸಕ್ಕೆ ಯೋಗ್ಯವಲ್ಲ. ಮರದ ಹೊರಭಾಗದಲ್ಲಿ ಎಚ್ಚರಿಕೆಯಿಂದ ಪರೀಕ್ಷೆ ಮಾಡಿ, ಗಾಯಗಳಾಗಿಲ್ಲದ, ಹೊಸದಾಗಿ ಬೆಳೆಯುವ 12 ಕಾಂಡ ಭಾಗಗಳನ್ನು

ಅಭ್ಯಾಸಕ್ಕಾಗಿ ಆರಿಸಿಕೊಳ್ಳಲಾಯಿತು. ಆಯ್ಕೆಯನ್ನು ಹೂ ಬಿಟ್ಟಿಲ್ಲದರೆಂಬೆಗಳಿಗೆ ಸೀಮಿತಗೊಳಿಸಲಾಯಿತು.

ಮರದಲ್ಲಿ, ಹೊರ ಭಾಗದಲ್ಲಿರುವ ಸಾಂಕೇತಿಕ ಪ್ರತಿಸಿಧಿ ರೆಂಬೆಗಳಲ್ಲಿ ತುದಿಯಲ್ಲಿರುವ ಪುಷ್ಪ ವಿನ್ಯಾಸ ಮತ್ತು ಹೂವುಗಳನ್ನು ಮಾತ್ರ ಅಭ್ಯಾಸಕ್ಕೆ ಸೀಮಿತಗೊಳಿಸಲಾಯಿತು. ಕಂಕುಳಲ್ಲಿ ಗುಂಪಾಗಿರುವ ಅಥವಾ ಮಿಶ್ರಗೊಂಚಲುಗಳನ್ನು ಅಭ್ಯಾಸಕ್ಕೆ ತೆಗೆದುಕೊಂಡಿಲ್ಲ. ಇದರಂತೆಯೇ ಬಹಳ ಚೈತನ್ಯಭರಿತವಾದ ಅಥವಾ ಕುಳ್ಳಾದ ಅಥವಾ ಅಸಾಮಾನ್ಯವಾದ ಮತ್ತು ಬಲಿಯುವುದಕ್ಕೆ ಮೊದಲು ಬಿಟ್ಟಿರುವ ಅಥವಾ ನಿಧಾನವಾಗಿ ಬಿಟ್ಟಿರುವ ರೆಂಬೆಗಳಲ್ಲಿನ ಹೂಗೊಂಚಲುಗಳನ್ನು ಅಭ್ಯಾಸಕ್ಕೆ ಸೇರಿಸಿಲ್ಲ.


ಮರದ ತೆರೆದಿರುವ ಕಡೆಗಳಲ್ಲಿರುವ ಭಾಗಗಳಲ್ಲಿ ಅಲ್ಲಲ್ಲಿ ಹನ್ನೆರಡು ಹಣ್ಣುಗಳನ್ನು ಆರಿಸಿಕೊಂಡು, ಹಣ್ಣಿನ ವಿವರಣೆಯನ್ನು ನಮೂದಿಸಲಾಯಿತು. ಇವುಗಳಲ್ಲಿ, ಅಂತಿಮವಾಗಿ ಕೇವಲ ಒಂದೇ ಒಂದನ್ನು ಮಾತ್ರ ಪೂರ್ಣವಾದ ಹಣ್ಣಿನ ವಿವರಣೆ ನೀಡಲು ತೆಗೆದುಕೊಳ್ಳಲಾಯಿತು. ಹಣ್ಣಿನ ಬಣ್ಣ, ವಾಸನೆ ಮತ್ತು ರುಚಿಯ ವಿವರಣೆಗಳನ್ನು ಕೊಡಲು, ಮರದಲ್ಲಿಯೇ ಬಲಿತು ಹಣ್ಣಾಗಿರುವ ಹಣ್ಣುಗಳನ್ನು ಆರಿಸಿಕೊಳ್ಳಲಾಯಿತು. ಸಮತೂಕವಾಗಿ ಬಲಿತಿರುವುದನ್ನು ಸಮರ್ಥವಾಗಿ ತೀರ್ಮಾನಿಸಲು ಸಿಪ್ಪೆಯ ಮೇಲಿನ ಚುಕ್ಕೆಗಳು ನಿರ್ದಿಷ್ಟವಾಗಿ ಕಾಣುವ, ಕಾಯಿ ಕೀಳುವಾಗ ಕಡಮೆ ರಸ ಸುರಿದಿರುವ ಮತ್ತು ಇತರ ಸಂಪೂರ್ಣ ಗುಣಗಳಿಂದ ಕೂಡಿರುವ ಕಾಯಿಗಳನ್ನು ಪರಿಶೀಲಿಸಲಾಯಿತು.

ಮರದ ಆಕಾರವು, ಎಲೆಗಳ ಸ್ಥಿತಿಯನ್ನು ನಿಕಟವಾಗಿ ಅವಲಂಬಿಸಿರುವುದರಿಂದ ಪೂರ್ಣವಾದ ಅಭ್ಯಾಸಕ್ಕೆ ಎಲೆಗಳ ಸರಿಯಾದ ವಿವರಣೆ ಅಗತ್ಯ.

ತೋಟಗಾರಿಕೆ ಉಲ್ಲೇಖಗಳಲ್ಲಿ ಸೂಚಿಸಿರುವ ಎತ್ತರ, ಮಧ್ಯಮ ಮತ್ತು ಕುಳ್ಳ ಮುಂತಾದ ಎತ್ತರದ ವಿವರಣೆ, ತುಲನಾತ್ಮಕವಾದುದಾಗಿದೆ. ಈ ಪದಗಳು ತಳಿಯ ಗುಣವಿವರಣೆಯನ್ನು ಉತ್ಪ್ರೇಕ್ಷೆಗೊಳಿಸಬಹುದು. ತಳಿಗಳ ವರ್ಗೀಕರಣದಲ್ಲಿ ಈ ವಿವರಣೆಯು ಪರಿಮಾಣದ ಅಂಕಿಅಂಶಗಳು ಇಲ್ಲದೆ ಇದ್ದರೆ, ಅಷ್ಟು ಮಹತ್ವದ್ದಾಗಿರುವುದಿಲ್ಲ. ಆದಕಾರಣ ಅಂಕಿಅಂಶಗಳನ್ನೂ ಸಂಗ್ರಹಿಸಲಾಗಿದೆ.

(ಅನುಬಂಧ-2)


ಮರವು ತನ್ನ ಎತ್ತರಕ್ಕಿಂತ ಬಹಳ ಕಡಮೆ ಅಗಲವಾಗಿದ್ದು ಹರಡಿದ್ದರೆ, ಅಂಥ ವನ್ನು ಅಂಡಾಕಾರವೆಂದೂ ಹರಡಿಕೆ ಮತ್ತು ಎತ್ತರಗಳೆರಡೂ ಸುಮಾರು ಸಮವಾಗಿ



ಚಿತ್ರ 5 : ಎ) ಎಲೆಯ ಸ್ಥಿತಿ ಬಿ) ಎಲೆಯ ಆಕಾರ

ದ್ದರೆ ಗುಂಡಾಕಾರವೆಂದೂ ಎತ್ತರಕ್ಕಿಂತ ಹರಡಿಕೆಯೇ ಪ್ರಮುಖವಾಗಿದ್ದರೆ ಗೋಪುರ ಕಾರವೆಂದೂ ಕರೆಯಲಾಗಿದೆ.

ಎಲೆ ಇರುವ ಸ್ಥಿತಿಯು, ಎಲೆ ಮತ್ತು ರೆಂಬೆಗೆ ಮಧ್ಯೆ 45°ಗಿಂತ ಕಡಮೆ ಕೋನವನ್ನು ಉಂಟುಮಾಡಿದ್ದರೆ ಆಗ ಎಲೆಗಳನ್ನು ನೇರವಾಗಿವೆ ಎಂದು ಕರೆಯಲಾಗಿದೆ. ಇನ್ನೊಂದು ಕಡೆ, ಎಲೆ ಮತ್ತು ರೆಂಬೆಗೆ ಮಧ್ಯೆ ಸಮಕೋನ ಅಥವಾ ಇನ್ನೂ ಅಗಲವಾಗಿದ್ದರೆ ಆಗ ಜೋಲು ಬಿದ್ದಿರುವ ಎಲೆಗಳು ಎಂದು ಕರೆದಿದೆ ಮತ್ತು ಈ ಎರಡು ಸ್ಥಿತಿಗಳ ನಡುವಣ ಸ್ಥಿತಿಯನ್ನು ಮಧ್ಯವರ್ತಿ ಎಂದು ಕರೆದಿದೆ (ಚಿತ್ರ5ಅ).



6a-

ಚಿತ್ರ 6ಅ : ಎಲೆ ಸುಕ್ಕಾಗುವಿಕೆ

ಎಲೆ ಸ್ಥಿತಿಯ ಜೊತೆಗೆ ಎಲೆಯ ಆಕಾರ ಹಾಗೂ ಮಾವಿನ ತಳಿಗಳ ಗುಣ ನಿರ್ದಿಷ್ಟವಾಗಿರುತ್ತವೆ. ನರ್ಸರಿ ಮಾಲೀಕರು ಮತ್ತು ರೈತರಿಗೆ ತಳಿಗಳ ಗುಣವನ್ನು ಸರಳವಾಗಿ ಮತ್ತು ನಿರ್ದಿಷ್ಟವಾಗಿ ಗುರುತಿಸಲು ಇದು ಸಾಧ್ಯವಾಗಿದೆ. ಎಲೆಗಳು

ನೇರವಿದ್ದು ಭರ್ಜಿಯಾಕಾರವಾಗಿದ್ದರೆ ಅವುಗಳನ್ನು ಕದಿರಿನ ಅಂಡವೃತ್ತ ಭರ್ಜಿಯಾಕಾರ ಎಂದು ಕರೆಯುತ್ತಾರೆ. ಎಲೆಯು ಭರ್ಜಿಯಾಕಾರವಾಗಿರುವುದರ ಜೊತೆಗೆ, ಅದರ ಮಧ್ಯಭಾಗದಲ್ಲಿ ಅತ್ಯಂತ ಹೆಚ್ಚು ಅಗಲವಾಗಿದ್ದರೆ ಅದನ್ನು ಅಂಡ ಭರ್ಜಿಯಾಕಾರ ಎಂದು ಕರೆಯುತ್ತಾರೆ. ಅಂತೆಯೇ, ಎಲೆಯು ಭರ್ಜಿಯಾಕಾರದ ಜೊತೆಗೆ ಅದರ ಬುಡದಲ್ಲಿ ಅತ್ಯಂತ ಅಗಲವಾಗಿದ್ದರೆ ಅದನ್ನು ಅಂಡಾಕಾರಿತ ಭರ್ಜಿಯಾಕಾರ ಎಂದು ಕರೆಯುತ್ತಾರೆ (ಚಿತ್ರ 5b).



ಚಿತ್ರ 6ಬಿ : ಎಲೆ ಮಡಿಚಿಕೆ ಗುಣ

ಕೆಲವು ಮಾವಿನ ತಳಿಗಳ ಎಲೆಗಳು ಸುಕ್ಕಾಗಿರುವುದು, ಅವುಗಳ ಸಾಂಕೇತಿಕ ಲಕ್ಷಣ. ಹಾಗೆಯೇ ಇತರ ಕೆಲವು ತಳಿಗಳಲ್ಲಿ ಎಲೆಗಳು ತಿರುಚಿರುವುದು (ನುಲುಚಿ ಕೊಂಡಿರುವುದು) ಪ್ರಧಾನವಾಗಿರುತ್ತದೆ. ಅಲೆಯಂತಹ ಅಂಚುಗಳೂ ತಳಿಯ ಗುಣವಾಗಿದ್ದು ಇದರ ಬಗ್ಗೆ ವಿಶೇಷ ಗಮನ ನೀಡಬೇಕಾಗುತ್ತದೆ (ಚಿತ್ರ 6a).

ಕೆಲವು ತಳಿ ಎಲೆಗಳು. ಬಾಗಿರುವುದು ಅಥವಾ ನಡುದಿಂಡಿನ ಮೇಲೆ ಹಿಂಬಾಗಿರುವುದು ಬಹಳ ಗಮನಾರ್ಹ ಮತ್ತು ಇತರ ಕೆಲವು ತಳಿಗಳಲ್ಲಿ ಇದು ಸಂಪೂರ್ಣವಾಗಿ ಇರುವುದಿಲ್ಲ. ಸ್ವಲ್ಪ ಹಿಂಬಾಗಿರುವುದು ಅಥವಾ ದೃಢವಾಗಿ ಹಿಂಬಾಗಿರುವುದು ಮುಂತಾದ ಹೋಲಿಕೆ ಸೂಚನೆಗಳನ್ನು ಹಿಂಬಾಗಿರುವುದರ ಪರಿಮಾಣವನ್ನು ಸೂಚಿಸಲು ಉಪಯೋಗಿಸಿದೆ.

ಎಲೆಗಳು ಮಡಚಿರುವ ಸ್ವಭಾವವು, ತಳಿಗಳನ್ನು ಗುರುತಿಸುವ ಇನ್ನೊಂದು ವಿಶೇಷ ಲಕ್ಷಣ. ಕೆಲವು ತಳಿಗಳ ಎಲೆಗಳು ಚಪ್ಪಟೆಯಾಗಿರುತ್ತವೆ ಮತ್ತು ಇನ್ನಿತರ ತಳಿಗಳ ಎಲೆಗಳು ವಿವಿಧ ಪ್ರಮಾಣದಲ್ಲಿ ಮೇಲ್ಭಾಗಕ್ಕೆ ತಿರುಗುತ್ತವೆ; ಹಿಂದಿನ ಸಂದರ್ಭದಲ್ಲಿ ಮಡಚಿರುವ ಪ್ರಮಾಣಕ್ಕೆ ಅನುಗುಣವಾಗಿ ಸ್ವಲ್ಪ ಮಡಚಿವೆ ಅಥವಾ ದೃಢವಾಗಿ (ಚೆನ್ನಾಗಿ) ಮಡಚಿವೆ ಎಂದು ಕರೆಯುತ್ತಾರೆ (ಚಿತ್ರ 6b).

ಮೇಲ್ಕಂಡ ಎಲ್ಲಾ ಎಲೆಯ ಗುಣಗಳ ಪ್ರಾಮುಖ್ಯತೆ ಸ್ವತಸ್ಸಿದ್ಧ. ಈ ಗುಣಗಳಲ್ಲಿ ಯಾವ ಗುಣವೂ ಮಹತ್ವವಾದವಲ್ಲ ಮತ್ತು ಎಲೆಯ ತುದಿಯ ಸ್ವಭಾವವನ್ನು ಕೆಲವು ಹಣ್ಣಿನ ಶಾಸ್ತ್ರಜ್ಞರು ಮಾವಿನ ವರ್ಗೀಕರಣಕ್ಕೆಮೂಲಧಾರವಾಗಿ ಬಳಸಿಕೊಂಡಿದ್ದಾರೆ. ಮಾವಿನ ಎಲೆಯ ತುದಿ ಮೊನಚು ಬಿಂದುವಿನಲ್ಲಿ ಮುಂದುವರಿದಿರಬಹುದು (ಲಂಬಾಗ್ರ) ಮತ್ತು ಒಂದು ಬಿಂದುವಿನಲ್ಲಿ ಮುಗಿದಿರಬಹುದು (ಮೊನಚು) ಅಥವಾ ಎರಡು ಸ್ಥಿತಿಗಳ ಮಧ್ಯವರ್ತಿ (ಸ್ವಲ್ಪ ಲಂಬಾಗ್ರ–1 ಚಿತ್ರ 7a)ಯಾಗಿರಬಹುದು.

ಹೊಸದಾಗಿ ಹೊರಬರುತ್ತಿರುವ ಮಾವಿನ ಎಲೆಗಳ ಬಣ್ಣ ಒಂದು ಸ್ಥಿರವಾದ ಗುಣ. ಇದು ಭಿನ್ನತೆಯಿಂದ ಕೂಡಿರುವ ಮಾವಿನ ಬೇಸಾಯ ಸ್ಥಿತಿಗೆ ಒಳಪಡುವುದಿಲ್ಲ. ಒಂದೇ ಮರದಲ್ಲಿಯ ಎಲೆಗಳ ಬಣ್ಣದ ಛಾಯೆಯು ಎಲೆಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ವಿವಿಧವಾಗಿರುತ್ತದೆ. ಇದರಿಂದಾಗಿ ಬೆಳವಣಿಗೆ ಕಡಮೆ ಕಾಲದಲ್ಲಿನ ಬದಲಾವಣೆಗಳನ್ನು ಆಗಾಗ್ಗೆ ವಿವರಿಸುವುದು ಅಗತ್ಯವಾಗುತ್ತದೆ. ಪೂರ್ಣ ವಿವರಣೆಗಳನ್ನು ಸಂಗ್ರಹಿಸಲು ಸಕಾಲಕ್ಕೆ ಮಾವು ಬೆಳೆಯುವ ಕೇಂದ್ರಗಳಿಗೆ ಪ್ರವಾಸವನ್ನು ಏರ್ಪಡಿಸಲು ಹಲವು ತೊಂದರೆಗಳಿಂದಾಗಿ ಅಡ್ಡಿಯುಂಟಾಯಿತು. ಅದೃಷ್ಟವಶಾತ್ ಬಹುಪಾಲು ತಳಿ ಮತ್ತು ಮರಗಳಲ್ಲಿ ಬಲಿಯದೇ ಇರುವ ವಿವಿಧ ಎಲೆಗಳ ವಿವಿಧ ಹಂತಗಳು ಯಾವಾಗಲೂ ಸಿಕ್ಕುತ್ತವೆ. ಇದರಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ವಿಷಯವನ್ನು ಸಂಗ್ರಹಿಸಲು ಅನುಕೂಲವಾಯಿತು.

ನೇರವಾಗಿ ಬೆಳೆಯುವ ರೆಂಬೆಗಳ ದಪ್ಪ ಮತ್ತು ಸ್ವಭಾವ ಮಾವಿನ ತಳಿಗಳ ಅಭ್ಯಾಸಕ್ಕೆ ಉಪಯುಕ್ತ ಗುಣಗಳನ್ನು ನೀಡುತ್ತವೆ. ಕೆಲವು ತಳಿಗಳಲ್ಲಿ ನೇರವಾಗಿ



ಮೊಂಡು ಮೊನಚು ಕಡಮೆ ಲಂಬಾಗ್ರ ಲಂಬಾಗ್ರ

7a



ಶಂಕಾಕಾರ ಗೋಪುರಾಕಾರ ವಿಶಾಲ ಗೋಪುರಾಕಾರದ

7b

ಚಿತ್ರ 7 : a. ಎಲೆ ತುದಿಯ ಗುಣ b. ಹೂಗೊಂಚಲಿನ ಆಕಾರ

ಬೆಳೆಯುವ ರೆಂಬೆಗಳು ತುಂಬ ಸಣ್ಣವಾಗಿದ್ದು ಜೋಲು ಬಿದ್ದಿರುತ್ತವೆ ಇನ್ನು ಕೆಲವು

ತಳಿಗಳಲ್ಲಿ ಬಹಳ ದಪ್ಪವಾಗಿರುತ್ತವೆ ಮತ್ತೆ ಕೆಲವು ತಳಿಗಳಲ್ಲಿ ಈ ಎರಡೂ ಅತಿರೇಕಗಳ ಮಧ್ಯವರ್ತಿಯಾಗಿರುತ್ತವೆ.

ಹೂಗಳ ಲಕ್ಷಣ

ಮಿಶ್ರ ಹೂಗೊಂಚಲಿನ ಆಕಾರ, ತಳಿಗಳ ಬಹು ಮುಖ್ಯವಾದ ಗುಣಗಳನ್ನು ಪ್ರತಿನಿಧಿಸುತ್ತವೆ (ಚಿತ್ರ 7ಬಿ). ಕೆಲವು ತಳಿಗಳಲ್ಲಿ ಶಂಕಾಕಾರದ ಮಿಶ್ರ ಹೂಗೊಂಚಲಿನಲ್ಲಿ ಮುಖ್ಯ ಅಕ್ಷದ ಉದ್ದ ಹರಡಿಕೆಗಿಂತ ನಿರ್ದಿಷ್ಟವಾಗಿ ಗಮನಾರ್ಹವಾಗಿರುತ್ತದೆ. ಇನ್ನು ಕೆಲವು ತಳಿಗಳಲ್ಲಿ ಗೋಪುರಾಕಾರದ ಪುಷ್ಪವಿನ್ಯಾಸದಲ್ಲಿ ಉದ್ದದಷ್ಟೆ ಅಗಲವಿರುವುದು ಗಮನಾರ್ಹ ಲಕ್ಷಣ. ಮತ್ತೆ ಕೆಲವು ತಳಿಗಳಲ್ಲಿ ವಿಶೇಷವಾಗಿ ನಿರ್ದಿಷ್ಟ ಉದ್ದಗಲಗಳ ಅಳತೆ ವಿವರಣೆಯು ಜೊತೆಗೂಡಿದ್ದರೆ ಮಿಶ್ರ ಹೂಗೊಂಚಲಿನ ಗಾತ್ರವೂ ಮತ್ತೊಂದು ಸುಲಭವಾಗಿ ಗುರುತಿಸಬಲ್ಲ ಗಮನಾರ್ಹ ಲಕ್ಷಣವಾಗುತ್ತದೆ. ಪ್ರಸ್ತುತ ಅಧ್ಯಯನಗಳಲ್ಲಿ ಅಕ್ಷದ ಉದ್ದ ಮತ್ತು ಹರಡಿಕೆಗಳ ಅಳತೆಯನ್ನು ಮಿಶ್ರಹೂಗೊಂಚಲಿನ ಗಾತ್ರವನ್ನು ಸೂಚಿಸುವುದಕ್ಕೆ ಉಪಯೋಗಿಸಿದೆ.

ಇತರ ಹಣ್ಣುಗಳಲ್ಲಿಯಂತೆ ಮಾವಿನಲ್ಲಿ, ಮಿಶ್ರ ಹೂಗೊಂಚಲಿನಲ್ಲಿರುವ ರೋಮದ ಗುಣ ಗುರ್ತಿಸುವುದು ಗಮನಾರ್ಹ ಗುಣವಾಗಿದೆ. ರೋಮದ ಗುಣವನ್ನು ಸೂಚಿಸಲು ನುಣುಪು ಚರ್ಮ (ಗ್ಲಾಬ್ರಿಟ್) ಅಥವಾ ತೆಳುವಾದ ಮೃದುತುಪ್ಪಳು, ಸಾಧಾರಣ ಮೃದುತುಪ್ಪಳು ಮತ್ತು ದಟ್ಟ ಮೃದುತುಪ್ಪಳು ಎಂಬ ಪದಗಳು ಸಾಕು.

ಸ್ಟ್ಯಾಂಡರ್ಡ್ ಕಲರ್ ಡಿಕ್ಷನರಿ ಸಹಾಯದಿಂದ ಹೂಗೊಂಚಲ ಬಣ್ಣ ನೋಡುವುದು ವಾಸ್ತವ ಪ್ರಾಯೋಗಿಕ ಪ್ರಾಮುಖ್ಯದ ಪ್ರಾಮುಖ್ಯತೆ ಪಡೆಯುತ್ತದೆ; ಅದರ ಬಣ್ಣದ ವಿವರಣೆ ವೈಯಕ್ತಿಕ ನಿರ್ಣಯವನ್ನವಲಂಬಿಸಿದ್ದಾಗ, ಮರದಲ್ಲಿ ತೆರೆದಿರುವ ಭಾಗದಿಂದ ಸಾಂಕೇತಿಕ ಹೂಗೊಂಚಲನ್ನು ಆರಿಸದೆ ಇದ್ದರೆ ಬಣ್ಣದ ವಿವರಣೆ ಉಪಯೋಗವಿಲ್ಲದಂತಾಗುತ್ತದೆ.


ಬಂಜೆ ಕೇಸರಗಳು ಅಭಿವೃದ್ಧಿಯಾಗಿರುವುದು, ಕೆಲವು ತಳಿಗಳ ಸಾಮಾನ್ಯ ಅಭ್ಯಾಸಕ್ಕೂ ಸಹ ಸಾಕಷ್ಟು ಪ್ರಮುಖವಾದ ಗುಣವಾಗುತ್ತದೆ. ಚೆನ್ನಾಗಿ ಅಭಿವೃದ್ಧಿಯಾಗಿರುವ ಮತ್ತು ಚೆನ್ನಾಗಿ ಅಭಿವೃದ್ಧಿಯಾಗಿಲ್ಲದ ಬಂಜೆ ಕೇಸರಗಳು ಎಂಬ ಎರಡು ಗುಂಪುಗಳು ತಳಿಗಳ ವ್ಯತ್ಯಾಸವನ್ನು ತಿಳಿಯಲು ಸಾಕು.

ಮೇಲ್ಕಂಡ ವಿವರಣೆಗಳ ಜೊತೆಗೆ, ಕೇಸರಗಳು ಮತ್ತು ಸ್ತ್ರೀಣಾಂಗ (ಹೆಣ್ಣು ಭಾಗ)ದ ಸಾಪೇಕ್ಷ ಬೆಳವಣಿಗೆಯನ್ನು ಅಭ್ಯಾಸ ಮಾಡಬೇಕು. ಮಾವಿನ ತಳಿಗಳಲ್ಲಿ ಕೇಸರಗಳು ಮತ್ತು ಸ್ತ್ರೀಣಾಂಗ ಗಾತ್ರ ಮತ್ತು ಅವು ಹೂ ಬಿಲ್ಲೆಯ ಮೇಲಿರುವ ಸ್ಥಿತಿ ಇವು ಗಮನಾರ್ಹ ವ್ಯತ್ಯಾಸ ಹೊಂದಿರುತ್ತವೆ. ಕೆಲವು ತಳಿಗಳಲ್ಲಿ ಕೇಸರಗಳು ಹೆಣ್ಣು ಭಾಗಕ್ಕಿಂತ ಎತ್ತರವಾಗಿರುತ್ತವೆ; ಮತ್ತು ಕೆಲವು ತಳಿಗಳಲ್ಲಿ ಹೆಣ್ಣು ಭಾಗಕ್ಕೆ ಸಮವಾಗಿರುತ್ತವೆ ಮತ್ತು ಕೆಲವು ತಳಿಗಳಲ್ಲಿ ಹೆಣ್ಣು ಭಾಗವು ಕೇಸರಗಳಿಗಿಂತ ಎತ್ತರವಾಗಿರುತ್ತದೆ. ಕೇಸರಗಳು ಮತ್ತು ಹೆಣ್ಣು ಭಾಗಗಳು ತೌಲನಿಕವಾಗಿ ಪರಸ್ಪರ ಸಮಾನಾಂತರ ಅಥವಾ ಓರೆಯಾಗಿರಬಹುದು.

ಹಣ್ಣಿನ ಗುಣಗಳು

ಹಣ್ಣಿನ ವಿವರಣೆಗಳನ್ನು (ಚಿತ್ರ 8) ಸಮೀಕರಿಸಲು, ಈ ಕೆಳಕಂಡ ಮಾಡಿಕೆಯಲ್ಲಿರುವ ವಿಧಾನಗಳನ್ನು ಅಳವಡಿಸುವುದು ಸೂಕ್ತ. ಹಣ್ಣು ಸಾಮಾನ್ಯ ಸ್ಥಿತಿಯಲ್ಲಿ ಮರದಲ್ಲಿ ನೇತಾಡುತ್ತಿರುತ್ತದೆ. ಕೊಕ್ಕು ಮತ್ತು ನಿಮ್ನ ಮಧ್ಯ ಭಾಗ ಎಡಭಾಗಕ್ಕೂ ಮತ್ತು ಉಬ್ಬಿದ ಭಾಗವು ಬಲಭಾಗಕ್ಕೂ ಇರುವಂತೆ ಪ್ರೇಕ್ಷಕ ಪರಿಶೀಲಿಸುತ್ತಾನೆ. ತೊಟ್ಟಿರುವ ಭಾಗವನ್ನು ಬುಡ ಎಂತಲೂ ಇದರ ಅಭಿಮುಖ ಭಾಗವನ್ನು ತುದಿ ಎಂತಲೂ ಕರೆಯುತ್ತಾರೆ. ಬಹು ತಳಿಗಳಲ್ಲಿ ಎಡಭಾಗವು ದೊಡ್ಡದಾಗಿರುತ್ತದೆ. ಇದನ್ನು ಎಡ ಅಥವಾ ಕೆಳಭುಜವೆಂದು, ಇದರ ಅಭಿಮುಖ ಭಾಗವನ್ನು ಬಲ ಅಥವಾ ಮೇಲ್ಭುಜವೆಂದೂ ಕರೆಯುತ್ತಾರೆ. ಹಣ್ಣು ಮತ್ತು ಮರಕ್ಕೆ ಸೇರಿರುವ ತೊಟ್ಟಿನ ಗಾತ್ರ ಮತ್ತು ಸ್ವಭಾವ, ಹಾಗೆಯೇ ತೊಟ್ಟು ಹಣ್ಣಿಗೆ ಸೇರಿರುವ ರೀತಿಗಳಿಗೆ ಸ್ವಲ್ಪ ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಕೆಲವು ತಳಿಗಳಲ್ಲಿ ತೊಟ್ಟು ಹಣ್ಣಿಗೆ ಸೇರಿರುವ ಬಿಂದುವಿನಲ್ಲಿ ತಗ್ಗಾದ ಭಾಗವಿರುತ್ತದೆ. ಇದನ್ನು ಕುಳಿ ಎಂದು ಕರೆಯುತ್ತಾರೆ. ಕೊಕ್ಕಿನಿಂದ ಸ್ವಲ್ಪ ಮೇಲ್ಭಾಗದಲ್ಲಿರುವ ನಿಮ್ನ ಮಧ್ಯಭಾಗವನ್ನು ಹೊಕ್ಕಳು ಎಂದು ಕರೆಯುತ್ತಾರೆ. ತೊಟ್ಟು ಹಣ್ಣಿಗೆ ಅಂಟಿಕೊಂಡಿರುವ ಬಿಂದುವಿನಿಂದ ಹಿಡಿದು ತುದಿಯ ಕೊನೆಯವರೆಗಿನ ಸ್ಥಳವನ್ನು ಹಣ್ಣಿನ ಉದ್ದ ಎಂದು ಕರೆಯುತ್ತಾರೆ. ಎರಡು ಭುಜಗಳ ನಡುವಣ ಅತ್ಯುನ್ನತ ದೂರವನ್ನು ಪ್ರಧಾನ ವ್ಯಾಸವೆಂದು ಕರೆಯುತ್ತಾರೆ. ಹಾಗೆಯೇ ಒಂದು ನಯವಾದ ಭೂಮಿಕೆಯ ಮೇಲೆ ಸ್ವಾಭಾವಿಕ ಸ್ಥಿತಿಯಲ್ಲಿ ಹಣ್ಣನ್ನಿಟ್ಟು ಅದರ ಮೇಲ್ಭಾಗದಿಂದ ನೆಲೆಸಿರುವ ಹಣ್ಣಿನ ಭೂಮಿಕೆಯವರೆಗಿನ ಅತ್ಯಂತ ಹೆಚ್ಚಿನ ದೂರವನ್ನು ಅಪ್ರಧಾನ ವ್ಯಾಸವೆಂದು ಕರೆಯುತ್ತಾರೆ.

ಹಣ್ಣಿನ ರೂಪು (ಚಿತ್ರ 9) ತಳಿಗಳ ಪ್ರಮುಖ ಗುಣವನ್ನು ತೋರಿಸುತ್ತವೆ. ಈ ಕಾರಣದಿಂದ ಹಿಂದಿನಿಂದಲೂ ಈ ಗುಣವನ್ನು ಮಾವಿನ ವರ್ಗೀಕರಣದಲ್ಲಿ ಉಪಯೋಗಿಸಲಾಗುತ್ತದೆ. ಅಸಾಮಾನ್ಯ ಅಥವಾ ಭಿನ್ನವಾದ ಹಣ್ಣುಗಳನ್ನು ಬಿಟ್ಟು ಈ




ಚಿತ್ರ 8 : ಹಣ್ಣಿನ ಭಾಗಗಳು

ಬುಡ	ಕೆಳತುದಿ
ತೊಟ್ಟು	ಮೇಲ್ತುದಿ
ಭುಜ	ನಾರು
ಕೆಳಭುಜ	ನಾಳ
ಮೇಲ್ಭುಜ	ಓಟೆಯ ದಪ್ಪ
ಹೊಕ್ಕಳು (ಬಾಗು)	ಅಪ್ರಧಾನ ವ್ಯಾಸ
ಕೊಕ್ಕು	ಓಟೆಯ ದಪ್ಪ
ಪ್ರಧಾನ ವ್ಯಾಸ	

ಗುಣವು ಭಿನ್ನ ವಾತಾವರಣ ಸ್ಥಿತಿಗಳಲ್ಲಿ ಬಹಳ ಮಹತ್ವದ್ದಾಗಿದೆ. ಭುಜಗಳು ಸಮಾನವಾಗಿ ಮತ್ತು ಸಮತೂಕವಾಗಿ ಬರುವಂತೆ ಕತ್ತರಿಸಬಹುದಾದ ಹಣ್ಣುಗಳನ್ನು ಸಮರೂಪಿ ಹಣ್ಣುಗಳು ಎಂದು ಕರೆಯುತ್ತಾರೆ. ಸಮವಾಗಿ ಕತ್ತರಿಸಲು ಸಾಧ್ಯ


ವಾಗದೇ ಇರುವ ಹಣ್ಣುಗಳನ್ನು ಅಸಮರೂಪಿ ಹಣ್ಣುಗಳು ಎಂದು ಕರೆಯುತ್ತಾರೆ. ಅಸಮರೂಪದ ಭುಜಗಳು ಒಂದಕ್ಕಿಂತ ಇನ್ನೊಂದು ಗಮನಾರ್ಹವಾದ ಎತ್ತರವಾಗಿ



ಚಿತ್ರ 9 : ಹಣ್ಣಿನ ಆಕಾರಗಳು

ರುವ ಗುಂಪು ಸಹ ಇದೆ. ಈ ಗುಂಪಿನ ಹಣ್ಣುಗಳನ್ನು ಓರೆಯಾಕಾರದ ಹಣ್ಣುಗಳು

ಎಂದು ವರ್ಗೀಕರಣ ಮಾಡಲಾಗಿದೆ. ಮಾವಿನ ಹಣ್ಣುಗಳಲ್ಲಿ ಬಹಳ ಸಾಮಾನ್ಯವಾದ ಆಕಾರದ ಹಣ್ಣುಗಳು ಎಂದರೆ, ಗುಂಡಾಕಾರ, ಅಂಡಾಕಾರ, ಮೊಟ್ಟೆಯಾಕಾರ,




ಚಿತ್ರ 9 : ಹಣ್ಣಿನ ಆಕಾರಗಳು

ದೀರ್ಘಚತುರಸ್ರ, ಹೃದಯಾಕಾರ, ಮೂತ್ರಪಿಂಡಾಕಾರ, ಪೀಂಟೊ ಇತ್ಯಾದಿ.

ಇವುಗಳ ಜೊತೆಗೆ ಮೇಲ್ಕಂಡವುಗಳ ಅನೇಕ ಮಧ್ಯವರ್ತಿ ಆಕಾರಗಳೂ ಇರುತ್ತವೆ. ಈ ತನಿಖೆಯ ಕಾಲದಲ್ಲಿ ಕಂಡುಬಂದ ಆಕಾರಗಳ ಸಂಯೋಜನೆಗಳನ್ನು ಚಿತ್ರ 9ರಲ್ಲಿ ತೋರಿಸಿದೆ.


ಮಾವಿನ ಹಣ್ಣಿನ ಗಾತ್ರವು ನಿಸ್ಸಂದೇಹವಾಗಿ ಕೇವಲ ಸಂಬಂಧಾತ್ಮಕ ಪ್ರಾಮುಖ್ಯತೆಯನ್ನು ಪಡೆದಿದೆ. ಅದು ವ್ಯಾಸ, ತೂಕ ಇತ್ಯಾದಿಗಳ ನಿರ್ದಿಷ್ಟವಾದ



ಚಿತ್ರ 10 : a. ತೊಟ್ಟಿನ ಆಕಾರಗಳು b. ಬುಡದ ಆಕಾರಗಳು

ಅಂಕಿಅಂಶಗಳಿಂದ ಕೂಡಿದ್ದರೆ ಮಾತ್ರ ಉಪಯುಕ್ತ. ಆದ್ದರಿಂದ ಈ ಅಭ್ಯಾಸದಲ್ಲಿ

ಇವುಗಳನ್ನು ಸಂಗ್ರಹಿಸಿ ದಾಖಲು ಮಾಡಿದ್ದು ಪುಸ್ತಕದ ಕೊನೆಯಲ್ಲಿ ಅನುಬಂಧ-2 ರಲ್ಲಿ ಕಾಣಿಸಿಡೆ.




ಚಿತ್ರ 11 : a. ಹೊಕ್ಕಳು ಮತ್ತು ತುದಿಯ ಆಕಾರಗಳು b. ಭುಜದ ಆಕಾರಗಳು

ತೊಟ್ಟು ಹಣ್ಣುಗಳಿಗೆ ಸೇರಿರುವುದರಲ್ಲಿ ಎರಡು ಮುಖ್ಯ ವಿಧಗಳಿವೆ. ಹಣ್ಣಿನ ಅಕ್ಷಕ್ಕೆ ತೊಟ್ಟು ನೇರವಾಗಿ ಸೇರಿದ್ದರೆ ಅದನ್ನು ಚಚ್ಚೌಕ ಎಂದು ಕರೆಯುತ್ತಾರೆ.

ಕೆಲವು ತಳಿ ಮಾವಿನ ಹಣ್ಣುಗಳಿಗೆ ತೊಟ್ಟುಸೇರಿರುವ ಸ್ಥಳದಲ್ಲಿ ಬುಡ ಮುಂದುವರಿಕೆ ಇದ್ದರೆ, ಇದನ್ನು ಸಂಪೂರ್ಣ ವಿವರಣೆಯಲ್ಲಿ ಸೇರಿಸಬೇಕಾಗುತ್ತದೆ.


ಮಾವಿನ ಹಣ್ಣಿನ ಬುಡದ ತುದಿ, ಗುಂಡು ಸ್ವಲ್ಪ ಚಪ್ಪಟೆ, ಓರೆಚಪ್ಪಟೆ, ಕುತ್ತಿಗೆಯಂತೆ ಅಥವಾ ಓರೆ ಗುಂಡಾಗಿರುತ್ತದೆ ವಿಸ್ತಾರವಾದ ವಿವರಣೆಯನ್ನು ತಪ್ಪಿಸಲು ಚಿತ್ರ 10ಬಿಯಲ್ಲಿ ವಿವಿಧ ಆಕಾರದ ಹಣ್ಣುಗಳನ್ನು ತೋರಿಸಲಾಗಿದೆ.



ಚಿತ್ರ 12 : ಕುಳಿಯ ಆಕಾರಗಳು

ಇದೇ ರೀತಿಯಲ್ಲಿ ತುದಿ, ಹೊಕ್ಕಳು ಮತ್ತು ಹಣ್ಣು ಮಾಗಿಯುವ ವಿವಿಧ ಆಕಾರಗಳನ್ನು ಚಿತ್ರ 11ಎನಲ್ಲಿ ಕಾಣಿಸಲಾಗಿದೆ.

ಭುಜಗಳು ಗಾತ್ರದಲ್ಲಿ ಗಮನಾರ್ಹವಾಗಿ ಭಿನ್ನವಾಗಿರುತ್ತವೆ. ಅವು ಅಸಮವಾಗಿದ್ದರೆ, ಎರಡರಲ್ಲಿ ಯಾವುದು ಅಗಲ ಮತ್ತು ಪ್ರಮುಖ ಎಂಬುದನ್ನು ಸೂಚಿಸ



ಚಿತ್ರ 13 : ಕೊಕ್ಕಿನ ಆಕಾರಗಳು

ಬೇಕು. ಎರಡು ಭುಜಗಳು ಇಲ್ಲದೆ ಇರುವ ತಳಿಗಳು ಸಹ ಇವೆ. ಭುಜಗಳು ಗಾತ್ರಕ್ಕೆ ಸಂಬಂಧವಿಲ್ಲದಂತೆ, ಅವು ಒಂದೇ ಮಟ್ಟದಲ್ಲಿ ಇರಬಹುದು ಅಥವಾ

ಒಂದು ಇನ್ನೊಂದಕ್ಕಿಂತ ಎತ್ತರವಾಗಿರಬಹುದು. ಭುಜಗಳ ವಿವಿಧ ಆಕಾರಗಳನ್ನು ಚಿತ್ರ 11ಬಿನಲ್ಲಿ ಕಾಣಿಸಿದೆ.

ಕೆಲವು ತಳಿಗಳಲ್ಲಿ ಕುಳಿ ಇಲ್ಲದೆ ಇರಬಹುದು. ಕೆಲವು ತಳಿಗಳಲ್ಲಿ ಸ್ವಲ್ಪ ಕುಳಿ ಇರಬಹುದು ಮತ್ತು ಇತರ ಕೆಲವು ತಳಿಗಳಲ್ಲಿ ಅದು ಆಳವಾಗಿರಬಹುದು (ಚಿತ್ರ 12).

ಮಾವಿನ ಹಣ್ಣುಗಳಲ್ಲಿ ಕೊಕ್ಕಿನ ಗಾತ್ರ ಆಕಾರ ಮತ್ತು ಪ್ರಧಾನತೆ ಸುಲಭವಾಗಿ ಗಮನಿಸಬಹುದಾದ ಸಾಂಕೇತಿಕ ಲಕ್ಷಣ. ಹಾಗೆಯೇ ಕೆಲವು ತಳಿಗಳಲ್ಲಿ ಕೊಕ್ಕು ಇಲ್ಲದೆ ಇರಬಹುದು, ಕೆಲವು ಹಣ್ಣುಗಳಲ್ಲಿ ಬಿಂದುವಿನಲ್ಲಿ ಇರಬಹುದು, ಸ್ವಲ್ಪವಿದ್ದು ನಿರ್ದಿಷ್ಟವಾಗಿರಬಹುದು, ಸ್ವಲ್ಪ ಪ್ರಮುಖವಾಗಿರಬಹುದು, ಪ್ರಮುಖವಾಗಿರಬಹುದು, ಸ್ತನ್ಯಾಕಾರವಾಗಿರಬಹುದು, ಕೊಕ್ಕಿನಂತಿರಬಹುದು, ನೇರವಾಗಿರಬಹುದು, ಕೊಕ್ಕೆಯಂತಿರಬಹುದು ಅಥವಾ ಬಾಗಿರಬಹುದು.

ಹಣ್ಣಿನ ಬಣ್ಣ ವಿವಿಧವಾಗಿದ್ದು ಮಿಶ್ರವಾಗಿರುತ್ತದೆ, ನಿರ್ದಿಷ್ಟ ಗುಣಗಳನ್ನು ನೀಡುತ್ತದೆ ಮತ್ತು ಇವುಗಳ ಸ್ಪಷ್ಟ ವಿವರಣೆ ಕೊಡುವುದು ಕಷ್ಟ. ಈ ಬಗೆಯ ಗೊಂದಲಕ್ಕೆ ಬಹುವಾಗಿ ಹಿಂದೆ ವಿವಿಧ ದರ್ಜೆಗಳನ್ನು ಅಳವಡಿಸಿರುವುದು ಕಾರಣವಾಗಿದೆ.

ಈ ಅಭ್ಯಾಸದಲ್ಲಿನ ವಿವಿಧ ಬಣ್ಣದ ವಿವರಣೆಗಳಲ್ಲಿ, ಮೆರ್ಜ್ ಮತ್ತು ಪಾಲ್ ರವರ ಕಲರ್ ಡಿಕ್ಷನರಿಯನ್ನು ಉಪಯೋಗಿಸಲಾಗಿದೆ. ಬಣ್ಣವೆಂದರೆ ಇಲ್ಲಿ ಹಣ್ಣಿನ ಸಿಪ್ಪೆಯ ಮೇಲ್ಭಾಗಕ್ಕೆ ಅನ್ವಯಿಸುತ್ತದೆ. ಚುಕ್ಕೆ ಮತ್ತು ಮಚ್ಚೆಗಳಿಗೆ ಇದು ಅನ್ವಯಿಸುವುದಿಲ್ಲ. ಕಪೋಲ ಅಥವಾ ಭುಜಗಳ ಮಚ್ಚೆಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ.

ತೋಟಗಾರಿಕೆ ಪರಿಭಾಷೆಯಲ್ಲಿ ಲೆಂಟಿಸೆಲ್‌ಗಳನ್ನು ಚುಕ್ಕೆಗಳು (ಡಾಟ್ಸ್) ಎಂದು ಕರೆಯುತ್ತಾರೆ. ಇವು ಸಾಮಾನ್ಯವಾಗಿ ಸಿಪ್ಪೆಯ ಒಳಗೆ ಇರುತ್ತವೆ. ವಿವಿಧ ತಳಿಗಳಲ್ಲಿ ಚುಕ್ಕೆಗಳ ಗಾತ್ರ ಮತ್ತು ವ್ಯಾಪಕತೆ ಭಿನ್ನವಾಗಿರುತ್ತವೆ. ವಿವಿಧ ತಳಿಗಳಲ್ಲಿನ ಚುಕ್ಕೆಗಳ ಗಾತ್ರದ ವ್ಯತ್ಯಾಸವನ್ನು ಸೂಚಿಸಲು ಸಣ್ಣ, ಮಧ್ಯಮ ಮತ್ತು ದೊಡ್ಡವು ಎಂಬ ಪದಗಳನ್ನು, ವ್ಯಾಪಕತೆಯನ್ನು ಸೂಚಿಸಲು ಹತ್ತಿರ, ಸಾಧಾರಣ ದೂರ ಅಥವಾ ದೂರ ಎಂಬ ಪದಗಳನ್ನು ಬಳಸಿದೆ.

ಹಣ್ಣಿನ ಸಿಪ್ಪೆಯ ದಪ್ಪವನ್ನು ವಿವರಿಸಲು, ಇಂತಹದೇ ಪರಿಭಾಷೆಯನ್ನು ಉಪಯೋಗಿಸಲಾಗಿದೆ. ಸಿಪ್ಪೆಯ ಸ್ವಭಾವ ಸೂಚಿಸಲು, ತೆಳುವು, ಚರ್ಮದಂತೆ ಅಥವಾ ಒರಟು, ಮುಟ್ಟಲು ಬಿರುಸು ಎಂಬ ಶಬ್ದಗಳನ್ನು ಉಪಯೋಗಿಸಲಾಗಿದೆ. ತಿರುಳಿನ ರಚನೆ, ವಾಸನೆ, ರಸಭರಿತತೆ ಮತ್ತು ಇತ್ಯಾದಿ ಹಣ್ಣಿನ ಗುಣಗಳು ಬಹಳ ಮುಖ್ಯವಾದವು. ಆದ್ದರಿಂದ ಇವುಗಳನ್ನು ಸೂಚಿಸಲು ಅಗತ್ಯವಿದೆ. ಆದರೆ ಇವುಗಳನ್ನು ವಿವರಿಸುವ ಪರಿಭಾಷೆಯ ನಿರ್ದಿಷ್ಟತೆಗೆ ಸರಿಯಾದ ಅಳತೆಗೋಲು ಇಲ್ಲ.

ನಾರಿರುವಿಕೆ ಮತ್ತು ಇಲ್ಲದಿರುವಿಕೆ, ಇದರ ರಚನೆ ಮತ್ತು ಗಾತ್ರಗಳೂ ಸಹ ಬಹು ಮುಖ್ಯವಾದ ಗುಣಧರ್ಮಗಳಾಗಿವೆ. ಆದರೆ ಇವುಗಳ ವಿವರಣೆಯನ್ನು ತುಲನಾತ್ಮಕ ಶಬ್ದಗಳಲ್ಲಿ ವಿವರಿಸಿದೆ.

ತಿರುಳನ್ನು ವಿವರಿಸಲು, ಬೆಣ್ಣೆಯಂತೆ, ಮಾಂಸದಂತೆ, ಮೆದು ಮತ್ತು ಗಟ್ಟಿ ಎಂದು ಸೂಚಿಸಿದರೆ ಸಾಕು ವಾಸನೆಯನ್ನು ಸೂಚಿಸಲು ಹಿತಕರ, ಸುಗಂಧಯುಕ್ತ (ಪರಿಮಳಭರಿತ), ಹುಳಿ, ಸ್ವಲ್ಪ ಹುಳಿ, ಮಧುರ ಮತ್ತು ಖಾರ ಎಂಬ ಶಬ್ದಗಳಿಂದ ಹೋಲಿಸಬಹುದು. ಹಣ್ಣಿನ ದರ್ಜೆಯ ಎಲ್ಲಾ ವಿವರಗಳನ್ನೂ ವೈಯಕ್ತಿಕ ತಳಿ ಹಣ್ಣುಗಳ ಅವಲೋಕನದಿಂದ ಅಂದಾಜು ಮಾಡಿದರೆ ಅವು ಪ್ರಾಯೋಗಿಕ ಮೌಲ್ಯವನ್ನು ಹೆಚ್ಚಿಸುತ್ತವೆ. ಇದನ್ನು ಸಾಧ್ಯವಾದಲ್ಲೆಲ್ಲಾ ಅನುಸರಿಸಲಾಗಿದೆ. ಕೀಳು, ಸುಮಾರು (ತಕ್ಕಮಟ್ಟಿನದು), ಮಧ್ಯಮ, ಉತ್ತಮ, ಬಹಳ ಉತ್ತಮ ಮತ್ತು ಅತ್ಯುತ್ತಮ ಮುಂತಾದ ಪದಗಳನ್ನು, ದರ್ಜೆಯ ಅಂದಾಜು ಮಾಡಲು ಉಪಯೋಗಿಸಿದೆ.

ಹಣ್ಣಿಗೆ ಸಂಬಂಧಿಸಿದ ಬೀಜ ಅಥವಾ ಓಟೆಯ ರೂಪ, ಗಾತ್ರ ಮತ್ತು ಆಕಾರವನ್ನು ಎಚ್ಚರಿಕೆಯಿಂದ ಮತ್ತು ಪೂರ್ಣವಾಗಿ ಸೂಚಿಸುವುದು ಅಗತ್ಯ. ತೂಕ ಮತ್ತು ವ್ಯಾಸ ಇವುಗಳ ಜೊತೆಗೂಡಬೇಕಾಗುತ್ತದೆ. ತಳಿಗಳನ್ನು ಗುರುತಿಸುವುದಕ್ಕೆ ನಾರಿನ ರಚನೆ ಮತ್ತು ಸ್ಥಾನ ವಿನ್ಯಾಸ, ಉತ್ತಮ ಮಾಹಿತಿಯನ್ನು ಕೊಡುತ್ತದೆ. ಕೆಲವು ತಳಿಗಳಲ್ಲಿ ನಾರು, ಓಟೆಯ ಕೆಳ ಅಂಚಿಗೆ ಮಾತ್ರ ಸೀಮಿತವಾಗಿರುತ್ತದೆ ಮತ್ತು ಇದು ತಿರುಳಿನ ಒಳಗೆ ವ್ಯಾಪಿಸಿರುವುದಿಲ್ಲ. ಹಾಗೆಯೇ ಇನ್ನು ಕೆಲವು ತಳಿಗಳಲ್ಲಿ ನಾರು ಎಲ್ಲಾ ಭಾಗಗಳಿಗೆ ವ್ಯಾಪಿಸಿರುತ್ತದೆ. ಕೆಲವು ತಳಿಗಳಲ್ಲಿ, ಕೆಳ ಅಂಚಿನಲ್ಲಿ ಸ್ವಲ್ಪ ನಾರು ಇದ್ದು ಮತ್ತು ಉಳಿದ ಇತರ ಭಾಗಗಳಲ್ಲಿ ಗಿಡ್ಡ (ಕುಳ್ಳ) ನಾರು ಇರುತ್ತದೆ. ನಾರುಗಳು ಒರಟು, ಬಿರುಸು ಅಥವಾ ಮೃದುವಾಗಿರಬಹುದು. ಅವುಗಳ ಪರಿಮಾಣ, ತೆಳುವು, ಹೆಚ್ಚು ಅಥವಾ ಮಧ್ಯವರ್ತಿಯಾಗಿರಬಹುದು. ಓಟೆಯ

ಮೇಲಿನ ನಾಳಗಳು, ಅವುಗಳ ಪ್ರಾಮುಖ್ಯತೆ ಮತ್ತು ಅವು ಹರಿಯುವ ಮಾರ್ಗ ಬಹಳ ಮುಖ್ಯವಾದ ಗುಣಗಳಾಗಿದ್ದು ಅವುಗಳನ್ನು ಸೂಚಿಸಬೇಕಾಗುತ್ತದೆ. ಅವು ಸಾಧಾರಣವಾಗಿ ಸಮಾನಾಂತರ ಅಥವಾ ಕವಲೊಡೆದಿರುತ್ತವೆ ಮತ್ತು ಸ್ವಲ್ಪ ಉಬ್ಬಿರಬಹುದು ಅಥವಾ ತಗ್ಗಾಗಿರಬಹುದು ಮತ್ತು ಅಪರೂಪವಾಗಿ ಬಹಳ ತಗ್ಗಾಗಿರಬಹುದು ಅಥವಾ ಬಹಳ ಉಬ್ಬಿರಬಹುದು.

ಅದೆ-ಹಯಾತ್

ಈ ತಳಿಯು ಉತ್ತಮವಾದ ರುಚಿ ಮತ್ತು ವಾಸನೆಯಿಂದ ಕೂಡಿದೆ. ಇದು ಅನಿಯಮಿತ ಫಲಕಾರಿ. ಇದರ ಮೂಲವಾಸಸ್ಥಾನ ಮತ್ತು ಇತಿಹಾಸಗಳು ತಿಳಿದಿಲ್ಲ.

ಮರ : ಮಧ್ಯಮ ಗಾತ್ರ ಕಸುವುಭರಿತ, ಹರಡಿ ಬೆಳೆಯುತ್ತದೆ, ಮಧ್ಯಮ ಇಳುವರಿ, ಪ್ರತಿವರ್ಷ ಫಲ ; ದುಂಡು ನೆತ್ತಿ ; ದಪ್ಪ ಬುಡ ; ರೆಂಬೆಗಳು ಮಧ್ಯಮ ಗಾತ್ರ.

ಎಲೆಗಳು : ಮಧ್ಯಮದಿಂದ ದೊಡ್ಡಗಾತ್ರದವು, ಹರಡಿರುತ್ತವೆ, ನಡುದಿಂಡಿನ (ಮಧ್ಯಮ ನಾಳದ್ದು) ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಅಂಚು ; ಸುಮಾರು ಪ್ರಮುಖ ಪತ್ರನಾಳಗಳು ; ಮೊನಚು ತುದಿ ; ಗುಂಡು ಅಥವಾ ಮೊನಚಾದ ಎಲೆ ಬುಡ ; ಹೊಸ ಎಲೆಗಳ ಬಣ್ಣ ಪೈರೈಟ್ ಹಳದಿ ; ಬೆಳೆಯುತ್ತಿರುವ ಎಲೆಗಳ ಬಣ್ಣ ಬಿಸ್ಟರ್ ಗ್ರೀನ್ (ಕಂದು ಹಸುರು) ಅನಂತರ ಹುಲ್ಲಿನ ಹಸುರು ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಮಧ್ಯಮದಿಂದ ದೊಡ್ಡವು, ಶಂಕಾಕಾರ, ಬಣ್ಣ ಪೈರೈಟ್ ಎಲ್ಲೊ, ಸಾಧಾರಣವಾದ ಮೃದುತುಪ್ಪಳು ; ಅಂಡಾಶಯಕ್ಕೆ ಓರೆಯಾದ ದೊಡ್ಡ ಕೇಸರಗಳು ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಮಧ್ಯಮ ಗಾತ್ರ, ಅಂಡ ದೀರ್ಘಚತುರಸ್ರ ; ಬುಡ ಓರೆ ವೃತ್ತಾಕಾರದಿಂದ ಓರೆ ಚಪ್ಪಟೆ ; ತೊಟ್ಟು ಓರೆಯಾಗಿ ಸೇರಿದೆ ; ಕುಳಿಯಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ವೃತ್ತಾಕಾರ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ಪ್ರಧಾನ ; ಸ್ವಲ್ಪ ಹೊಕ್ಕಳು ; ತುದಿಯು ಗುಂಡಾಕಾರದಿಂದ ಸ್ವಲ್ಪ ಚಪ್ಪಟೆ ; ತೆಳುವಿನಿಂದ

ಮಧ್ಯಮ ದಪ್ಪದ ಸಿಪ್ಪೆ, ನಯ, ಹೊಂಬಣ್ಣ ; ಗಾತ್ರದ ಚುಕ್ಕೆಗಳು ದೂರವಾಗಿರುತ್ತವೆ ; ಸಿಪ್ಪೆಯ ಮೇಲ್ಭಾಗದಿಂದ ಹೊರಟಿರುತ್ತವೆ ; ತಿರುಳು ಮೆದುವಿನಿಂದ ಸಾಧಾರಣವಾದ ಗಟ್ಟಿ, ನಾರು ಇರುವುದಿಲ್ಲ, ಬಣ್ಣ ಪ್ರಿಮ್ಯೂಲೈನ್ ಎಲ್ಲೋ ; ಹಿತಕರವಾದ ಕಂಪು ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರಿತ ದೀರ್ಘಚತುರಸ್ರ ; ನಾರುಯುತ, ಮಧ್ಯಮ ಮೃದು, ನಾರು ಎಲ್ಲಾ ಭಾಗಗಳಲ್ಲಿ ಇರುತ್ತದೆ ಮತ್ತು ಕೆಳ ತುದಿಯಲ್ಲಿ ಸಾಧಾರಣ ; ಸಮಾನಾಂತರ ನಾಳಗಳು ಕವಲೊಡೆದಿರುತ್ತವೆ ಮತ್ತು ಸ್ವಲ್ಪ ಮಟ್ಟಿಗೆ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನ ಕಾಲದ ಫಲ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಸಾಧಾರಣ ಉಳಿಯುವ ಮತ್ತು ಸಿಪ್ಪೆಯ ಗುಣ.

ಅಲಿಪಸಂದ್

ಈ ತಳಿಯು ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಸ್ಥಳೀಯವಾಗಿದೆ. ಇದರ ಮೂಲಸ್ಥಾನದ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ. ಹಣ್ಣು ಮಧ್ಯಮ ದರ್ಜೆಯದು ಮತ್ತು ಅದರ ಬೇಸಾಯ ಹೆಚ್ಚು ವ್ಯಾಪಕವಾಗಿಲ್ಲ. ವರ್ಷಕ್ಕೆ ಎರಡು ಸಾರಿ ಫಲ ಬಿಡುವುದು ಮತ್ತು ಹಣ್ಣುಗಳು ಹೆಚ್ಚುಕಾಲ ಉಳಿಯುವಿಕೆ ಈ ತಳಿಯ ಏಕೈಕ ವೈಶಿಷ್ಟತೆ.

ಮರ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಸಾಧಾರಣದಿಂದ ನಿಧಾನವಾಗಿ ಬೆಳೆಯುವ ಗುಣ, ನೇರದಿಂದ ಹರಡುತ್ತದೆ, ಮಧ್ಯಮ ಇಳುವರಿ ಮತ್ತು ಅನಿಯಮಿತ ಫಲಕಾರಿ ; ಗುಂಡಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ ; ನಯವಾದ ಅಂಚು ; ಪ್ರಧಾನ ನಾಳರಚನೆ ; ತುದಿ ಸ್ವಲ್ಪ ಲಂಬಾಗ್ರ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳು ಆರೇಂಜ್ ಸಿಟ್ರೈನ್, (ಕಿತ್ತಳೆ

ಹಳದಿ) ಎಳೆಯ ಎಲೆಗಳು ಸ್ಕಾರ್ಲೆಟ್ ಬ್ರೌನ್ (ರಕ್ತನೇರಳೆ ಗಂಡು) ಅನಂತರ ಅವು ಎಮರಾಲ್ಡ್ ಗ್ರೀನ್ (ಪಚ್ಚೆಹಸುರು) ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ದೊಡ್ಡಗಾತ್ರದವು, ಶಂಕಾಕಾರ, ಕೊರ್ಜಗ್ರೀನ್, ಒತ್ತಾದ ಮೃದು ತುಪ್ಪುಳಿನಿಂದ ಕೂಡಿರುತ್ತವೆ ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಮಧ್ಯಮ ಗಾತ್ರ, ದೀರ್ಘಚತುರಸ್ರ ಮೂತ್ರ ಪಿಂಡಾಕಾರ ; ಗುಂಡಾದ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜ ಒಂದೇ ಎತ್ತರ, ಸಮ ಮತ್ತು ವೃತ್ತಾಕಾರ, ಮೇಲ್ಭುಜ ಉದ್ದವಾದ ಸಾಧಾರಣವಾದ ಕೊಂಕಿನಲ್ಲಿ ಮುಗಿಯುತ್ತದೆ ; ಮೊಲೆ ತೊಟ್ಟಿನಾಕಾರ ; ಆಳವಾದ ಹೊಕ್ಕಳು ; ವಿಶಾಲವಾದ ಬಿಂದುವಿನಲ್ಲಿ ತುದಿ ಇದೆ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಹೆಚ್ಚು ಒರಟು, ಚರ್ಮದಂತೆ, ಪ್ರಿಮೂಲೈನ್ ಎಲ್ಲೊ ; ಮಧ್ಯಮ ಸಂಖ್ಯೆಯ ಚುಕ್ಕೆಗಳು ಮತ್ತು ಅವು ಸಮೀಪದಲ್ಲಿರುತ್ತವೆ,ಮೇಲ್ಭಾಗದಿಂದ ಹುಟ್ಟಿರುತ್ತದೆ ; ಬಿಗಿಯಾದ ತಿರುಳು, ಪ್ರಿಮೂಲೈನ್ ಎಲ್ಲೊ, ಸುಮಾರಾದ ನಾರಿನಿಂದ ಕೂಡಿರುತ್ತದೆ ; ನಾರು ದೂರದೂರಕ್ಕಿರುತ್ತವೆ, ಮಧ್ಯಮ ಮತ್ತು ಒರಟು ; ಸುಮಾರಾದ ವಾಸನೆ ; ಮಧ್ಯಮ ಸಿಹಿ ; ಸ್ವಲ್ಪ ರಸ.

ಓಟೆ : ದೀರ್ಘಚತುರಸ್ರ ಮೂತ್ರ ಪಿಂಡಾಕಾರ ; ಎಲ್ಲಾ ಭಾಗಗಳ ಮೇಲೆ ನಯವಾದ ನಾರು ಇರುತ್ತದೆ ; ನಾಳಗಳು ಸಮಾನಾಂತರ ಮತ್ತು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳು ದರ್ಜೆ ; ವರ್ಷಕ್ಕೆ ಎರಡು ಸಾರಿ ಫಲ, ತಡ ಮತ್ತು ಫಲವಿಲ್ಲದ ಕಾಲದಲ್ಲಿ ಫಲ ಸಿಕ್ಕುತ್ತದೆ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಚೆನ್ನಾಗಿ ನಿರೋಧಕತೆ ವ್ಯಕ್ತಪಡಿಸುತ್ತದೆ ; ಉಳಿಕೆ ಗುಣ ಚೆನ್ನಾಗಿರುವುದರಿಂದ ಮಧ್ಯಮ.

ಅಲಂಪೂರ್ ಬಾನೆಷಾನ್

ಈ ತಳಿಯ ಮೂಲಸ್ಥಾನ ಮತ್ತು ವ್ಯಾಪ್ತಿ ಖಚಿತವಾಗಿ ತಿಳಿದುಬಂದಿಲ್ಲ. ಇದು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳ ಮೂಲವಾಸಿ.

ಆಂಧ್ರಪ್ರದೇಶದ, ಕರ್ನೂಲ್ ಜಿಲ್ಲೆಯ ಅಲಂಪೂರ್ ಹಳ್ಳಿಯಲ್ಲಿನ ಬೇಸಾಯದಲ್ಲಿದ್ದ ಮಾವಿನ ಬೆಳೆಯಲ್ಲಿ ದೊರೆತ ಒಂದು ಆಕಸ್ಮಿಕ ಉತ್ತಮ ತಳಿ. ದಿವಂಗತ ಶ್ರೀ ಪಿ ವಿ. ಚಂಗಲರೆಡ್ಡಿಯವರ ತೋಟದಲ್ಲಿನ ಈ ತಳಿಯ ಮರದಿಂದ ವೃದ್ಧಿ ಮಾಡಿದ ಸಸಿಯನ್ನು ಕೊಡೂರು ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಮಾವಿನ ತಳಿಯ ಸಂಗ್ರಹಣೆಗಾಗಿ ನೆಡಲಾಗಿದೆ. ಇತ್ತೀಚೆಗೆ ಈ ಸಂಶೋಧನಾ ಕೇಂದ್ರವು ಈ ತಳಿಯನ್ನು ವಿತರಣೆ ಮಾಡುವ ಪ್ರಮುಖ ಕೇಂದ್ರವಾಗಿದೆ. ಭಾರತ ದೇಶದ ಅತ್ಯುತ್ತಮ ಮಾವಿನ ತಳಿಗಳಲ್ಲಿ ಇದೂ ಒಂದು. ಆದ್ದರಿಂದ, ಆಂಧ್ರ ಮತ್ತು ತಮಿಳುನಾಡಿನ ಬಹು ಜಿಲ್ಲೆಗಳಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದೆ. ಇದು ಹೆಚ್ಚು ಇಳುವರಿ ಕೊಡುವ ಹಾಗೂ ಇತರ ತಳಿಗಿಂತ ಉತ್ತಮ ದರ್ಜೆಯ ಹಣ್ಣುಗಳಿಗೆ ಪ್ರಸಿದ್ಧಿಯಾಗಿದೆ. ಈ ತಳಿಯು, ಹಣ್ಣು ಮತ್ತು ಮರದ ಗುಣಗಳಲ್ಲಿ ಇಮಾಮ್ ಪಸಂದ್ ತಳಿಯನ್ನು ಬಹುಮಟ್ಟಿಗೆ ಹೋಲುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ಹರಡುತ್ತದೆ,ಮಧ್ಯಮ ಫಲಕಾರಿ, ಪ್ರತಿವರ್ಷ ಫಲ ಬಿಡುತ್ತದೆ ; ಗುಂಡಾದ ಮೇಲ್ಭಾಗ ; ಬುಡ ಮಧ್ಯಮದಿಂದ ಸಣ್ಣ ಗಾತ್ರ ; ರೆಂಬೆಗಳು ಸಣ್ಣವು.

ಎಲೆಗಳು : ಸಣ್ಣದರಿಂದ ಮಧ್ಯಮ ಗಾತ್ರದವು, ನೇರವಾಗಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ಚಪ್ಪಟೆ ; ಅಲೆಯ ಅಂಚುಗಳು ; ಸಾಧಾರಣವಾದ ಪ್ರಮುಖವಾದ ನಾಳರಚನೆ ; ಕಡಮೆ ಲಂಬಾಗ್ರ ತುದಿ ; ಮೊನಚಾದ ಬುಡ ; ಹೊರಬರುತ್ತಿರುವ ಚಿಗುರು ಎಲೆಗಳು ಕಂದು ಕಂಚಿನ ಬಣ್ಣ, ಮೆಡಲ್ ಬ್ರಾಂಜ್ ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ, ಫ್ಯಾನ್ಸಿ ಪರ್ಪಲ್, ಫ್ಯಾನ್ಸಿ ನೇರಳೆಗಂಪು ಅನಂತರ ಅವು ಆರೇಂಜ್ ಸಿನ್ನೇಮಾನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಎಂಪೈರ್ ಹಳದಿ, ದಟ್ಟ ಮೃದುತುಪ್ಪಳು ; ಕೇಸರಗಳು ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರ ತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಓರೆ ದೀರ್ಘಚತುರಸ್ರದಿಂದ ದೀರ್ಘಚತ್ರರಸ್ರ ಮೊಟ್ಟೆಯಾಕಾರ ; ಬುಡವು ಓರೆ ಚಪ್ಪಟೆ ; ತೊಟ್ಟು ಓರೆಯಾಗಿ ಸೇರಿರುತ್ತದೆ ಸ್ವಲ್ಪ ಕುಳಿ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಇಳಿಜಾರಾಗಿರುತ್ತದೆ, ಚಿಕ್ಕದಾಗಿರುವ

ಕೊಕ್ಕು, ನಿರ್ದಿಷ್ಟವಾಗಿರುತ್ತದೆ ; ಸ್ವಲ್ಪ ಹೊಕ್ಕಳು, ತುದಿಯು ವೃತ್ತಾಕಾರದಿಂದ ವಿಶಾಲವಾದ ಬಿಂದುವಿನಲ್ಲಿ ಮುಗಿಯುತ್ತದೆ ; ತೆಳುವಾದ ಸಿಪ್ಪೆಯು ಬಣ್ಣ ಪ್ರಿಮೂಲೈನ್ ಎಲ್ಲೊ ; ಸಣ್ಣದಾಗಿರುವ ಚುಕ್ಕೆಗಳು ಸಮೀಪವಾಗಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತದೆ; ತಿರುಳು ಗಟ್ಟಿ, ನಾರು ಇರುವುದಿಲ್ಲ, ಮುಸುಕಿನ ಜೋಳದ ಹಳದಿ ; ಅತ್ಯುತ್ತಮವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಹೆಚ್ಚು ಪ್ರಮಾಣದ ರಸ.

ಓಟೆ : ದೀರ್ಘಚತುರಸ್ರ ; ಓಟೆಯ ಎಲ್ಲ ಭಾಗದ ಮೇಲೆ ಚಿಕ್ಕ ಮೃದುವಾದ ನಾರಿರುತ್ತದೆ. ಕವಲೊಡೆದಿರುವ ನಾಳಗಳು ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮವಾದ ದರ್ಜೆ ; ಕಡಮೆ ಅಥವಾ ಮಧ್ಯಮ ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಉತ್ತಮ ನಿರೋಧಕತೆ ವ್ಯಕ್ತಪಡಿಸುತ್ತದೆ ; ಉತ್ತಮ ಉಳಿಕೆ ಗುಣ.

ಅಲ್ಫಾನ್ಸೊ ಬಾಟ್ಲಿ

ಈ ತಳಿಯನ್ನು ಅಭ್ಯಾಸಕ್ಕಾಗಿ ಪೂನಾದ ಕಿರ್ಕಿಯಲ್ಲಿಯ ಸರ್ಕಾರಿ ಹಣ್ಣಿನ ಕೇಂದ್ರದಿಂದ ಆರಿಸಿಕೊಂಡಿದೆ. ಇದರ ಮೂಲವಾಸ ಮತ್ತು ಪ್ರಸರಣೆಯ ಇತಿಹಾಸ ತಿಳಿದು ಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ದರ್ಜೆಯದು ಮತ್ತು ಉತ್ತಮ ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿರುವುದರಿಂದ ಇತರ ಮಾವು ಬೆಳೆಯುವ ಪ್ರದೇಶಗಳಿಗೆ ವಿಸ್ತರಿಸಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕುಸುವು, ವಿಶಾಲವಾಗಿ ಹರಡುತ್ತದೆ, ಹೆಚ್ಚು ಫಲದಾಯಕ, ಪ್ರತಿವರ್ಷ ಫಲಕಾರಿ ; ಮೊಟ್ಟೆಯಾಕಾರದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಭಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ಸ್ವಲ್ಪ ಮಡಚಿಕೊಂಡಿರುತ್ತವೆ ; ನಯವಾದ ಅಂಚು ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗ ಹೊರಬರುತ್ತಿರುವ ಚಿಗುರು ಎಲೆಗಳ ಬಣ್ಣ ಇಸಬೆಲ್ಲಾ (ಬೂದು ಹಳದಿ) ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿನ್ನಮಾನ್ ಬ್ರೌನ್; ಅನಂತರ ಅವು ಬಹು ಸಿಟ್ರೈನ್ ಬಣ್ಣಕ್ಕೆತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಅಬ್‌ಸಿಂತ್ತೇ ಹಸುರು, ಸಾಧಾರಣ ಮೃದುತುಪ್ಪುಳು, ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರದಿಂದ ದೀರ್ಘ ಚತುರಸ್ರ ಓಲೆಯಾಕಾರ ; ಬುಡ ಗುಂಡು ; ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ವೃತ್ತಾಕಾರ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ತುದಿ ಅಗಲವಾದ ಬಿಂದುವಿನಲ್ಲಿರುತ್ತದೆ ಅಥವಾ ಗುಂಡಾಕಾರ ; ತೆಳುವಾದ ಸಿಪ್ಪೆ, ನಯವಾಗಿರುತ್ತದೆ ಮತ್ತು ಆಳವಾದ ಕ್ರೋಮ್ ಬಣ್ಣ ; ಸಣ್ಣದಾದ ಚುಕ್ಕೆಗಳು ದೂರವಾಗಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ತಿರುಳು ಗಟ್ಟಿ, ನಾರಿರುವುದಿಲ್ಲ, ಬಣ್ಣ ಕ್ಯಾಡ್‌ಮಿಯಮ್ ಎಲ್ಲೊ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಚಿಕ್ಕ ಮೂತ್ರಪಿಂಡಾಕಾರ; ಇದರ ಎಲ್ಲಾ ಭಾಗದಲ್ಲಿ ದೂರ ದೂರದಲ್ಲಿ ಚಿಕ್ಕ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಹೆಚ್ಚು ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತ್ವ ; ಕಡಮೆ ಅಥವಾ ಮಧ್ಯಮ ಉಳಿಯುವ ಗುಣ.

ಅಲ್ಫಾನ್‌ಸೊ ಬಿಹಾರ್

ಈ ತಳಿಯ ಮೂಲಸ್ಥಾನ ಬಿಹಾರವೆಂದು ಇದರ ಹೆಸರೇ ಸೂಚಿಸುತ್ತದೆ. ಇದರ ಮೂಲಸ್ಥಾನ ಮತ್ತು ಪ್ರಸರಣೆಯ ಬಗ್ಗೆ ಖಚಿತವಾಗಿ ತಿಳಿದುಬಂದಿಲ್ಲ. ಇದು ಅಲ್ಫಾನ್‌ಸೊ ಬಾಂಬೆ ತಳಿಯಿಂದ ದೊರೆತ ಆಕಸ್ಮಿಕ ಸಸಿ ಎಂದು ಭಾವಿಸಲಾಗಿದೆ. ಇದು ತನ್ನ ಅನೇಕ ಗುಣಗಳಲ್ಲಿ ಅಲ್ಫಾನ್‌ಸೊ ಬಾಂಬೆ ತಳಿಯನ್ನು ಹೋಲುತ್ತದೆ. ಇದು ಹೆಚ್ಚು ಫಸಲು ಕೊಡುವುದರಿಂದ ಬಿಹಾರ್ ರಾಜ್ಯದಲ್ಲಿ ವಾಣಿಜ್ಯ ಪ್ರಾಮುಖ್ಯತೆಯನ್ನು ಗಳಿಸಿರುವ ತಳಿಯಾಗಿದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣವಾದ ಕಸುವು, ಹರಡಿರುತ್ತದೆ, ಹೆಚ್ಚು ಫಲಕಾರಿ, ಪ್ರತಿ ವರ್ಷ ಫಸಲು ; ಗುಂಡಾಕಾರದ ಮೇಲ್ಭಾಗ ; ದಪ್ಪದಿಂದ ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ನಡುದಿಂಡಿನ ಮೇಲೆ ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಂಚುಗಳು

ತಿರುಚಿಕೊಂಡಿರುತ್ತವೆ ; ಸಾಧಾರಣ ಪ್ರಮುಖ ನಾಳ ರಚನೆ ; ಲಘು ಲಂಬಾಗ್ರ ತುದಿ ; ಮೊನಚಾದ ಬುಡ : ಹೊಸದಾಗಿ ಹೊರಬರುತ್ತಿರುವ ಚಿಗುರು ಎಲೆಗಳ ಬಣ್ಣ ಹಳದಿ ಸಿಟ್ರೈನ್ ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೊಆಲಿವ್, ಅನಂತರ ಅವು ರೈನೆಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಬಣ್ಣ ಲೈಮ್ ಗ್ರೀನ್, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಅಂಡ ಓರೆಯಾಕಾರ ; ಸ್ವಲ್ಪ ಓಟೆ ಚಪ್ಪಟೆಯಾಗಿರುವ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುವುದಿಲ್ಲ ; ಕುಳಿ ಇರುವುದಿಲ್ಲ ; ಭುಜಗಳು ಸಮ, ಕೆಳಭುಜ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ, ಕೆಳಭುಜ ವೃತ್ತಾಕಾರ, ಮೇಲ್ಭುಜ ಸಾಧಾರಣವಾದ ಭುಜದಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿ ಇಲ್ಲದ ಕೊಕ್ಕು ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ತೆಳುವಾದ ಸಿಪ್ಪೆ, ನಯ, ಆಳವಾದ ಕ್ರೋಮ್ ಬಣ್ಣ ; ಸಾಧಾರಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ತಿರುಳು ಗಟ್ಟಿ, ನಾರು ಇರುವುದಿಲ್ಲ, ಬಣ್ಣ ಕ್ಯಾಡ್ಮಿಯಮ್ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣವಾದ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಇದರ ಎಲ್ಲಾ ಭಾಗದಲ್ಲಿ ಚಿಕ್ಕದಾಗಿರುವ ಮತ್ತು ಮೃದುವಾಗಿರುವ ನಾರು ಇರುತ್ತದೆ ; ಸಮಾನಾಂತವಾಗಿರುವ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಹೆಚ್ಚು ಫಲಕಾರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧವನ್ನು ವ್ಯಕ್ತಪಡಿಸುತ್ತದೆ ; ಉತ್ತಮವಾದ ಉಳಿಯುವ ಗುಣ, ಮಧ್ಯಮ ಸುಲಿಯುವ ಗುಣ.

ಅಲ್ಫಾನ್ಸೊ ಬ್ಲ್ಯಾಕ್

ಈ ತಳಿಯನ್ನು ಬೊಂಬಾಯಿಯ ರತ್ನಗಿರಿ ಜಿಲ್ಲೆಯಿಂದ ಅಭ್ಯಾಸಕ್ಕಾಗಿ ತರಿಸಿದೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇಸಾಯದಲ್ಲಿರುವ ಇದೇ ಹೆಸರಿನ ತಳಿಗಿಂತ ಪೂರ್ಣ

ವಾಗಿ ಭಿನ್ನವಾಗಿದೆ. ಈ ತಳಿಯ ಹಣ್ಣು ಮಧ್ಯಮ ದರ್ಜೆಯದಾದ್ದರಿಂದ ಹೆಚ್ಚು ವಿಸ್ತರಣೆಗೆ ಯೋಗ್ಯವಾಗಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ಹರಡುತ್ತದೆ, ಸಾಧಾರಣ ಇಳುವರಿ, ಪ್ರತಿವರ್ಷ ಫಸಲು ; ಗುಂಡಾಕಾರದಿಂದ ಗುಮ್ಮಟಾಕಾರದ ಮೇಲ್ಭಾಗ ; ಬುಡ ಮಧ್ಯಮ ಗಾತ್ರ ; ರೆಂಬೆಗಳು ಮಧ್ಯಮದಿಂದ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣವಾದ ಪ್ರಧಾನವಾಗಿರುವ ನಾಳ ರಚನೆ ; ಸ್ವಲ್ಪ ಲಂಬಾಗ್ರದಿಂದ ಲಂಬಾಗ್ರವಾಗಿರುವ ತುದಿ ; ಹೊಸದಾಗಿ ಹೊರಬರುತ್ತಿರುವ ಚಿಗುರು ಎಲೆ ಸಿಟ್ರೈನ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳು ಇಸಾಬೆಲ್ಲಾ (ಬೂದುಹಳದಿ) ಬಣ್ಣ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕಾರಲ್‌ರೆಡ್ ಹವಳಗೆಂಪು ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದಪ್ಪ, ಅಂಡದೀರ್ಘ ಚತುರಸ್ರ ; ಬುಡ ಓರೆ ಚಪ್ಪಟೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಸ್ವಲ್ಪ ಕುಳಿ ; ಭುಜಗಳು ಸಮ, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಇದ್ದರೆ ಒಂದು ಬಿಂದುವಿನಲ್ಲಿ ಇರುತ್ತದೆ ; ಸ್ವಲ್ಪ ಹೊಕ್ಕಳು ; ತುದಿ ಗುಂಡಾಗಿರುತ್ತದೆ ; ಸಿಪ್ಪೆ ಮಧ್ಯಮ ದಪ್ಪ ನಯ ಕ್ಯಾಡ್‌ಮಿಯಮ್ ಎಲ್ಲೊ ಬಣ್ಣ; ಹತ್ತಿರದಲ್ಲಿರುವ ಚುಕ್ಕೆಗಳು ಮಧ್ಯಮ ಗಾತ್ರದವು, ಮೇಲಿನಿಂದ ಹೊರಬಂದಿರುತ್ತವೆ; ಸಾಧಾರಣದಿಂದ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಎಲ್ಲಾ ಭಾಗದಲ್ಲಿ ಒತ್ತಾದ ತುಂಡಾದ ಮತ್ತು ಮೃದುವಾದ ನಾರು ; ನಾಳಗಳು ಕವಲೊಡೆದಿರುತ್ತವೆ ಮತ್ತು ತುಸು ತಗ್ಗಾಗಿರುತ್ತವೆ.

ಹಣ್ಣಿನ ಗುಣ : ಗಾತ್ರದಲ್ಲಿ ಮಧ್ಯಮ ; ನಿಧಾನ ಕಾಲದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಮಧ್ಯಮ ಉಳಿಯುವ ಮತ್ತು ಸುಲಿಯುವ ಗುಣ.

ಅಲ್ಫಾನ್ಸೊ ಬಾಂಬೆ

ಇದು ಬೊಂಬಾಯಿಯ ಪ್ರಮುಖ ವಾಣಿಜ್ಯ ಮತ್ತು ಅತ್ಯುತ್ತಮ ತಳಿಗಳಲ್ಲಿ ಒಂದು. ಇದರ ಉತ್ತಮ ಗುಣಗಳ ಕಾರಣದಿಂದ ಇದು ಬೊಂಬಾಯಿ, ತಮಿಳು ನಾಡು, ಹೈದರಾಬಾದ್ ಮತ್ತು ತಿರುವಾಂಕೂರು, ಕೊಚ್ಚಿನ್ ರಾಜ್ಯಗಳ ಬಹು ಜಿಲ್ಲೆಗಳಿಗೆ ವ್ಯಾಪಿಸಿದೆ. ಭಾರತ ದೇಶದ ಪಶ್ಚಿಮತೀರ ಪ್ರದೇಶದ ನಿರ್ದಿಷ್ಟ ಶೀತ ಜಿಲ್ಲೆಗಳಿಗೆ ಚೆನ್ನಾಗಿ ಹೊಂದಿಕೊಂಡಿದೆ. ಈ ತಳಿ ತೀರ ಪ್ರದೇಶದಷ್ಟು ಚೆನ್ನಾಗಿ ಒಣ ಪ್ರದೇಶಗಳಲ್ಲಿ ಸಮೃದ್ಧಿಯಾಗಿ ಬೆಳೆಯುವಂತೆ ಕಂಡು ಬರುವುದಿಲ್ಲ. ವಿವಿಧ ಮಾವು ಬೆಳೆಯುವ ವಲಯಗಳಲ್ಲಿ ಇದಕ್ಕೆ ಭಿನ್ನ ಹೆಸರುಗಳು ಬಳಕೆಯಲ್ಲಿವೆ. ಮೈಸೂರು ರಾಜ್ಯದಲ್ಲಿ ಈ ತಳಿಯನ್ನು ಬಾದಾಮಿ ಎಂದು ಕರೆಯುತ್ತಾರೆ. ತಮಿಳುನಾಡಿನ ಮಧ್ಯ ಜಿಲ್ಲೆಗಳಲ್ಲಿ, ವಿಶೇಷವಾಗಿ ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳಲ್ಲಿ ಇದನ್ನು 'ಗುಂಡು' ಎಂದು ಕರೆಯುತ್ತಾರೆ ತಮಿಳುನಾಡಿನ ತಿನ್ನಿವೆಲ್ಲಿ ಜಿಲ್ಲೆಯಲ್ಲಿ ಈ ತಳಿಯನ್ನು ಪಾಟ್ನಾಮ್ ಜಾತಿ ಮತ್ತು ಮದ್ರಾಸಿನಲ್ಲಿ ಕಾದರ್ ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಂಕಣ ಪ್ರದೇಶದಲ್ಲಿ ಆಪ್ಪಾಸ್ ಎಂಬ ಹೆಸರು ಬಳಕೆಯಲ್ಲಿ ಇದೆ, ಕೆಲವು ಸಂದರ್ಭಗಳಲ್ಲಿ ಹಾಫಸ್ ಅಥವಾ ಕಗಡಿ ಹಾಫ್‌ಸನ್ನು ಕತ್ತರಿಸಿ ಹಾಕುತ್ತಾರೆ (ಕಗಡಿ ಎಂಬುದು ಹಣ್ಣಿನ ತೆಳುವಾದ ಸಿಪ್ಪೆಗೆ ಅನ್ವಯಿಸುತ್ತದೆ).

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಕಸವಿನಿಂದ ನೇರವಾಗಿ ಬೆಳೆಯುತ್ತದೆ, ಉತ್ಪಾದಕ, ವಾರ್ಷಿಕ ಇಲ್ಲವೇ ದ್ವೈವಾರ್ಷಿಕ ಫಲ ; ಮೊಟ್ಟೆಯಾಕಾರದಿಂದ ಕುಲಶಾಕಾರ ಅಥವಾ ಕಳಸದಂತಿರುವ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ಗಾತ್ರ.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ದೃಢವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸುಕ್ಕಾಗಿರುತ್ತವೆ, ಲಘುವಾಗಿ ಮಡಚಿಕೊಂಡಿರುತ್ತವೆ ; ನಯವಾದ ಅಂಚು ತಿರುಚಿರುತ್ತವೆ; ಸಾಧಾರಣದಿಂದ ಪ್ರಮುಖವಾಗಿರುವ ನಾಳರಚನೆ ; ಲಂಬಾಗ್ರ ತುದಿ ; ಮೊನಚಾದ ಬುಡ ; ಹೊರಬರುತ್ತಿರುವ ಚಿಗುರು ಎಲೆ ; ಸಿನ್ನಮಾನ್ ಬ್ರೌನ್, ಅನಂತರ ಬಸ್ಸಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ವಿಶಾಲ ಗೋಪುರಾಕಾರ, ಪ್ರೂಸಿಯನ್ ರೆಡ್, ಸಾಧಾರಣ ಮೃದುತುಪ್ಪುಳು ; ಚಿಕ್ಕದಾಗಿರುವ ಕೇಸರಗಳು ಅಂಡಾಶಯಕೆ. ಸಮಾನಾಂತರ : ಬಂಜೆ ಕೇಸರಗಳು ಚೆನ್ನಾಗಿ ಬೆಳೆದಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಬುಡ ಓರೆ ಚಪ್ಪಟೆ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಕೆಳ ಭುಜ ಮೇಲ್ಭುಜಕ್ಕಿಂತ ವಿಶಾಲ ಮತ್ತು ಎತ್ತರ, ಕೆಳಭುಜ ಉಬ್ಬಿ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿ ಇರುತ್ತದೆ ; ಸ್ವಲ್ಪ ಹೊಕ್ಕಳು ; ಗುಂಡಾದ ತುದಿ ; ಸಿಪ್ಪೆ ಮಧ್ಯಮ ದಪ್ಪ, ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕಾಪುಸ್ಸೈನ್ ಎಲ್ಲೊ ಬಣ್ಣ ; ಮಧುರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣ ಅಥವಾ ಹೆಚ್ಚು ಪ್ರಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಎಲ್ಲಾ ಭಾಗವು ಒರಟಾದ ದೃಢವಾದ ನಾರಿನಿಂದ ಆವರಿಸಿರುತ್ತದೆ ಮತ್ತು ಕೆಳ ಅಂಚಿನಲ್ಲಿ ಮಧ್ಯಮ ನಾರು ; ಸ್ವಲ್ಪ ತಗ್ಗಾಗಿರುವ ನಾಳ ಕವಲೊಡದಿರುತ್ತದೆ.

ಹಣ್ಣಿನ ಗುಣ : ಅತ್ಯುತ್ತಮ ಗುಣ ; ಮಧ್ಯಮದಿಂದ ಹೆಚ್ಚು ಫಸಲು ; ಮಧ್ಯಕಾಲಿಕ ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ಸಿರೋಧಕತೆ ; ಉತ್ತಮ ಉಳಿಯುವ ಗುಣ ; ಡಬ್ಬೀಕರಣ (ಕ್ಯಾನಿಂಗ್)ಕ್ಕೆ ಉತ್ತಮ ತಳಿ.

ಅಲ್ಫಾನ್‌ಸೊ ಪಂಜಾಬ್

ಈ ತಳಿ ಪೂರ್ವ ಪಂಜಾಬಿನ ಮೂಲವಾಸಿ, ಇದರ ಮೂಲಸ್ಥಾನದ ಇತಿಹಾಸ ಮತ್ತು ಹಂಚಿಕೆ ತಿಳಿದುಬಂದಿಲ್ಲ. ಹಣ್ಣು ಉತ್ತಮ ಉಳಿಯುವ ಗುಣವುಳ್ಳದ್ದು ಮತ್ತು ವಾಣಿಜ್ಯ ತೋಟಗಳಲ್ಲಿ ಬೆಳೆಯಲು ಸೂಕ್ತ. ಹಣ್ಣಿನ ಗುಣಗಳ ಸಂಬಂಧದಲ್ಲಿ ಇದು ಅನೇಕ ವಿಧಗಳಲ್ಲಿ ಬಾಂಬೆ ಅಲ್ಫಾನ್‌ಸೊ ತಳಿಯನ್ನು ಹೋಲುತ್ತದೆ ; ಆದರೆ ಮರ ಮತ್ತು ಹೂ ಬಿಡುವ ಗುಣಗಳಲ್ಲಿ ಪೂರ್ಣವಾಗಿ ಭಿನ್ನವಾಗಿರುತ್ತದೆ. ಅಗ್ರಿಕಲ್ಚರಲ್ ಫಾರ್ಮ್, ಕರ್ನಾಲ್, ಪಂಜಾಬ್‌ನಲ್ಲಿ ಇದರ ಅಭ್ಯಾಸ ಮಾಡಲಾಯಿತು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ವಿಶಾಲವಾಗಿ ಹರಡುತ್ತದೆ ; ಉತ್ಪನ್ನದಾಯಕ, ಪ್ರತಿವರ್ಷ ಫಸಲು ; ಗುಂಡಾದ ಮೇಲು ಭಾಗ ; ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನಡುದಿಂಡಿನ ಮೇಲೆ ಸ್ವಲ್ಪ ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ಲಘುವಾಗಿ ಮಡಚಿರುತ್ತವೆ ; ನಯ ಅಥವಾ ಅಲೆ ಅಂಚು ; ಸಾಧಾರಣ ಪ್ರಮುಖವಾದ ನಾಳರಚನೆ ; ಲಘು ಲಂಬಾಗ್ರ ತುದಿ ; ಮೊನಚಾದ ಬುಡ ; ಹೊರಬರುತ್ತಿರುವ ಚಿಗುರು ಎಲೆ ಎಕ್ರೂ ಆಲಿವ್. ಬಲಿಯುತ್ತಿರುವ ಎಳೆಯ ಎಲೆಗಳು ಎಕ್ರೂ ಗ್ರೀನ್ ; ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆ್ಯಬ್ಸಿಂನ್ತ್ ಗ್ರೀನ್ ಬಣ್ಣ, ವಿರಳ ಮೃದು ತುಪ್ಪುಳು ; ಅಸಮವಾದ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಬೆಳೆದಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಬುಡ ಓರೆ ಚಪ್ಪಟೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ, ಕೆಳ ಭುಜ ದುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಒಂದು ಬಿಂದುವಿನಲ್ಲಿ ಇರುತ್ತದೆ ಅಥವಾ ಇರುವುದಿಲ್ಲ ; ಹೊಕ್ಕಳು ಇಲ್ಲ ; ತುದಿ ವಿಶಾಲವಾದ ಮೊನಚು ; ಮಧ್ಯಮದಿಂದ ದಪ್ಪ ಸಿಪ್ಪೆ, ನಯ, ಹೊಂಬಣ್ಣದ ಹೊಳಪು ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲಂಚಿನಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲಘು ಕ್ಯಾಡ್ಮಿಯಮ್ ಬಣ್ಣ ; ಹಿತಕರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪ್ರಮಾಣದ ರಸ.

ಓಟೆ : ಮಧ್ಯಮ ಗಾತ್ರ, ದೀರ್ಘಚತುರಸ್ರದಿಂದ ಮೊಟ್ಟೆಯಾಕಾರ ; ಎಲ್ಲಾ ಭಾಗದಲ್ಲಿ ನಿಬಿಡವಾದ, ಚಿಕ್ಕ, ಮೃದು ನಾರು; ಕವಲೊಡೆದಿರುವ ನಾಳಗಳು ಲಘು ಅಥವಾ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ಗುಣಗಳು : ಉತ್ತಮ ಗುಣ ; ಹೆಚ್ಚು ಫಲದಾಯಕ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಉತ್ತಮ ಉಳಿಯುವ ಗುಣ ; ಮಧ್ಯಮ ಸುಲಿಯುವ ಗುಣ.

ಆಲ್ಫಾನ್‌ಸೊ ವೈಟ್

ಈ ತಳಿ ಬೊಂಬಾಯಿ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಬೇಸಾಯದಲ್ಲಿದೆ. ಇದು ಮೂಲಸ್ಥಾನದ ಇತಿಹಾಸ ಮತ್ತು ಹರಡಿರುವುದರ ಬಗ್ಗೆ ವಿವರಗಳು ತಿಳಿದಿಲ್ಲ. ಈ ತಳಿಯ ಎಳೆಯ ಕಾಯಿಗಳು ಬಿಳಿಯ ಬಣ್ಣವಿರುವುದರಿಂದ ಆಲ್ಫಾನ್‌ಸೊ ವೈಟ್ ಎಂದು ಕರೆಯಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇದನ್ನು ಬಿಳಿ ಇಸಾಡ ಎಂದು ಕರೆಯುತ್ತಾರೆ. ಈ ತಳಿಯು ಮಧ್ಯಮ ಗುಣದ್ದಾಗಿರುವುದರಿಂದ ಇದನ್ನು ಜನಪ್ರಿಯತೆಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ವಿಶಾಲವಾಗಿ ಹರಡುತ್ತದೆ, ಮಧ್ಯಮ ಫಲಕಾರಿ, ಪ್ರತಿವರ್ಷ ಫಲಕಾರಿ ; ತುಂಡಾದ ಮೇಲ್ಭಾಗ, ದಪ್ಪವಾದ ಬುಡ, ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ, ಸುಕ್ಕು, ಅಂಚುಗಳು ತಿರುಚಿರುತ್ತವೆ ; ಪ್ರಧಾನ ನಾಳರಚನೆ ; ಮೊನಚಾದ ತುದಿ ; ಹೊರಬರುವ ಚಿಗುರು ಎಲೆಗಳು. ಆಳವಾದ ಕ್ರೈಸೊಲೈಟ್ ಗ್ರೀನ್ ಬಣ್ಣ ; ಬಲಿಯುತ್ತಿರುವ ಎಳೆಯ ಎಲೆಗಳು ಮಿಗ್ನೊನೆಟ್ಟೆ ಗ್ರೀನ್, ಇವು ಅನಂತರ ಬಫ್ಸಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಸಾಕಾರ್ ಡೊಸ್ ಅಂಬರ್ ಬಣ್ಣ ; ಕಡಮೆ ಮೃದುತುಪ್ಪಳು ; ಅಸಮವಾದ ಕೇಸರಗಳು ; ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಬೆಳೆದಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದಪ್ಪ, ಅಂಡ ಓರೆಯಾಕಾರ ; ಬುಡ ಓರೆ ಚಪ್ಪಟೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಹೆಚ್ಚು ಆಳವಿಲ್ಲದ ಅಥವಾ ಆಳವಾಗಿರುವ ಕುಳಿ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ವಿಶಾಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಲಘುವಾಗಿ ಪ್ರಮುಖವಾಗಿರುತ್ತದೆ ; ಹೊಕ್ಕಳು ಇರುವುದಿಲ್ಲ ; ತುದಿ ಗುಂಡಾಗಿರುತ್ತದೆ ; ಮಧ್ಯಮ ದಪ್ಪದ ಸಿಪ್ಪೆ, ನಯ ಅಥವಾ ಒರಟು, ಕಾಪುಸೈನ್ ಎಲ್ಲೊ ಬಣ್ಣ ;

ಗಾತ್ರದಲ್ಲಿ ಸಣ್ಣದಾಗಿರುವ ಚುಕ್ಕೆಗಳು ಹತ್ತಿರ ಇರುತ್ತವೆ. ಮೇಲಂಚಿನಿಂದ ಹೊರ ಬಂದಿರುತ್ತವೆ ; ಗಟ್ಟಿಯಿಂದ ಮೆದುವಾಗಿರುವ ತಿರುಳು, ನಾರು ಇರುವುದಿಲ್ಲ. ಮಸ್ಟರ್ಡ್ ಎಲ್ಲೊ ; ಹಿತಕರವಾದ ವಾಸನೆ ; ಸಾಧಾರಣದಿಂದ ಸಿಹಿಯಾಗಿರುವ ರುಚಿ ಕಡಮೆಯಿಂದ ಸಾಧಾರಣ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಎಲ್ಲಾ ಭಾಗದಲ್ಲಿ ಯಥೇಚ್ಛವಾಗಿ ಒತ್ತಾಗಿರುವುದಕ್ಕೆ ನಾರು ಇರುತ್ತದೆ ; ಲಘುವಾಗಿ ತಗ್ಗಿರುವ ನಾಳಗಳು ಕವಲೊಡೆದಿರುತ್ತವೆ.

ಹಣ್ಣಿನ ಗುಣ : ಮಧ್ಯಮ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕಡಮೆಯಿಂದ ಮಧ್ಯಮ ಉಳಿಯುವ ಗುಣ ; ಮಧ್ಯಮ ಸಿಪ್ಪೆ ಸುಲಿಯುವ ಗುಣ.

ಅಮಾನ್ ಅಬ್ಬಾಸಿ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ನಿಶ್ಚಿತವಾಗಿ ತಿಳಿದು ಬಂದಿಲ್ಲ. ಇದು ಉತ್ತರ ಪ್ರದೇಶದ ಮೂಲವಾಸಿ ಎಂದು ಭಾವಿಸಲಾಗಿದೆ. 'ಅಮಾನ್'' ಎಂದರೆ ಉದ್ದವಾಗಿರಬಹುದು, 'ಅಬ್ಬಾಸಿ' ಎಂಬುದು ವೃದ್ಧಿ ಮಾಡಿರುವ ವ್ಯಕ್ತಿಗೆ ಅನ್ವಯಿಸುತ್ತದೆ. ಉತ್ತರಪ್ರದೇಶದ, ಹರಡೊಯಿ ಜಿಲ್ಲೆಯ ಸಂಡಿಲ್ಲಾದಲ್ಲಿನ ರೈಸ್ ಅಬ್ಬಾಸ್ ಅಲಿ ಎಂಬುವನ ತೋಟದಲ್ಲಿ ಇದು ಆಕಸ್ಮಿಕ ಸಸಿಯಾಗಿ ದೊರೆತಿದೆಯೆಂದು ಭಾವಿಸಲಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ಬೆಳೆದು ವಿಶಾಲವಾಗಿ ಹರಡಿರುತ್ತದೆ ; ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ, ಲಘುವಾಗಿ ಮಡಚಿರುತ್ತವೆ ; ನಯವಾದ ಅಂಚು, ಸಾಧಾರಣ ಪ್ರಮುಖವಾದ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊರಬರುತ್ತಿರುವ ಚಿಗುರು ಎಲೆಗಳು ಎಕ್ರೂಆಲೀವ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳು ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಆಭ್‌ಸಿಂತ್ ಗ್ರೀನ್, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಓರೆ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ, ಓರೆಯಾಕಾರ ; ಬುಡ ಓರೆ ಚಪ್ಪಟೆಯಿಂದ ಗುಂಡು ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಲಘುವಾದ ಕುಳಿ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜ ಕ್ಕಿಂತ ಎತ್ತರ ಮತ್ತು ವಿಶಾಲ, ಕೆಳಭುಜ ಉಬ್ಬಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇಲ್ಲ ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ತುದಿ ಗುಂಡಾಗಿರುತ್ತದೆ. ತೆಳು ಚರ್ಮ, ನಯ, ಹೊಂಬಣ್ಣದ ಹೊಳಪು, ಮಧ್ಯಮದಿಂದ ದೊಡ್ಡಗಾತ್ರದ ಚುಕ್ಕೆಗಳು, ದೂರ ದೂರ ಕ್ಕಿರುತ್ತವೆ ; ಅಂಚಿನಿಂದ ಹೊರಬಂದಿರುತ್ತವೆ, ಗಟ್ಟಿಯಾದ ತಿರುಳು, ನಾರು ಇರು ವುದಿಲ್ಲ ; ಎಂಪೈರ್ ಹಳದಿ ಬಣ್ಣ ; ಹಿತಕರದಿಂದ ಮಧುರವಾದ ವಾಸನೆ ; ಸಿಹಿ ಯಾದ ರುಚಿ ; ಸಾಧಾರಣ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ಎಲ್ಲಾ ಭಾಗಗಳಲ್ಲಿ ಒತ್ತಾದ ಚಿಕ್ಕ ಮೆದು-ನಾರು ಆವರಿಸಿರುತ್ತದೆ ; ಸಮಾನಾಂತರವಾದ ನಾಳಗಳು ಲಘುವಾಗಿ ಉಬ್ಬಿರುತ್ತವೆ.

ಹಣ್ಣಿನ ಗುಣ : ಉತ್ತಮವಾದ ಗುಣ ; ಮಧ್ಯಮ ಉತ್ಪನ್ನದಾಯಕ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧ ಕತೆ ; ಮಧ್ಯಮ ಉಳಿಯುವ ಮತ್ತು ಸುಲಿಯುವ ಗುಣ.

ಅಮಾನ್ ಅಂಗೋರಿ

ಈ ತಳಿಯು ಉತ್ತರಪ್ರದೇಶದ ಹರಡೊಯಿ ಜಿಲ್ಲೆಯ ಷಹಬಾದ್‌ನಲ್ಲಿ ಇನಾ ಯಿಕೆ ಅಮೀನ್‌ಖಾನ್ ಎಂಬುವನ ತೋಟದಲ್ಲಿ ಆಕಸ್ಮಿಕ ಸಸಿಯಾಗಿ ದೊರೆತಿದ್ದು ಅನಂತರ ಬಿಹಾರ್ ರಾಜ್ಯದ ಮಾವು ಬೆಳೆಯುವ ಪ್ರದೇಶಕ್ಕೆ ಹರಡಿದೆ. ಹಿಂದಿ ಭಾಷೆಯಲ್ಲಿ "ಅಮಾನ್" ಎಂದರೆ ಉದ್ದವಾಗಿರುವುದು, ಅಂಗೋರಿ ಎಂದರೆ ದ್ರಾಕ್ಷಿ, ಈ ತಳಿಯ ಹಣ್ಣು ಉದ್ದವಾಗಿದ್ದು, ದ್ರಾಕ್ಷಿ ಬಣ್ಣದಿಂದ ಕೂಡಿರುವುದರಿಂದ ಅಮಾನ್ ಅಂಗೋರಿ ಎಂಬ ಹೆಸರು ಬಂದಿದೆ. ಈ ತಳಿಯು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಹೆಚ್ಚು ಜನಪ್ರಿಯಗೊಳಿಸಬೇಕಾದ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಚಿಕ್ಕದರಿಂದ ಮಧ್ಯಮ, ಸಾಧಾರಣದಿಂದ ನಿಧಾನವಾಗಿ ಬೆಳೆಯುವ ಗುಣ, ವಿಶಾಲವಾಗಿ ಹರಡಿರುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ, ಮಧ್ಯಮ ಗಾತ್ರದ ಬುಡ ; ರೆಂಬೆಗಳು ಸಣ್ಣದರಿಂದ ಮಧ್ಯಮ ಗಾತ್ರ.

ಎಲೆಗಳು : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಲಘುವಾಗಿ ಮಡಚಿರುತ್ತವೆ; ನಯವಾದ ಅಂಚುಗಳು; ಸಾಧಾರಣ ಪ್ರಮುಖವಾದ ನಾಳರಚನೆ; ಲಂಬಾಗ್ರ ತುದಿ; ಗುಂಡಾಕೃತಿಯಿಂದ ಮೊನಚಾದ ಬುಡ; ಹೊರಬರುತ್ತಿರುವ ಚಿಗುರು ಎಲೆಗಳು ಸಿನ್ನೆಮಾನ್ ಬ್ರೌನ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳು ಆಳವಾದ ಕ್ರೈಸೊಲೈಟಗ್ರೀನ್ ಬಣ್ಣ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೋರ್ಜಿಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಬೆಳವಣಿಗೆಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ ದೀರ್ಘಚತುರಸ್ರ ; ಬುಡ ಓರೆ ಗುಂಡು ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಸ್ವಲ್ಪ ಎತ್ತರ, ಕೆಳಭುಜ ವೃತ್ತಾಕಾರ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಾದ ತುದಿ ; ಮಧ್ಯಮದಿಂದ ಸಾಧಾರಣ ದಪ್ಪದ ಸಿಪ್ಪೆ, ಹೊಂಬಣ್ಣದ ಹೊಳಪು ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲಂಚಿನಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇಲ್ಲ, ಲೇಮನ್ ಕ್ರೋಮ್ ; ಲಘು ಹಿತಕರ ವಾಸನೆ ; ಮಧ್ಯಮದಿಂದ ಸಿಹಿಯಾದ ರುಚಿ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಎಲ್ಲಾ ಭಾಗದಲ್ಲಿ ಒತ್ತಾದ ಚಿಕ್ಕಮೃದು ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ಗುಣ : ಗಾತ್ರದಲ್ಲಿ ಮಧ್ಯಮ ; ಮಧ್ಯಮ ಪ್ರಮಾಣದ ಉತ್ಪನ್ನ ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧ ಕತೆ ; ಉಳಿಯುವ ಗುಣ ಉತ್ತಮ ; ಮಧ್ಯಮ, ಸುಲಿಯುವ ಗುಣ.

ಅಂಬಾಲವಿ

ಈ ತಳಿಯನ್ನು ಸರ್ಕಾರಿ ಹಣ್ಣು ಸಂಶೋಧನಾ ಕೇಂದ್ರ ಕೊಡೂರು (ಆಂಧ್ರ ಪ್ರದೇಶ)ನಲ್ಲಿ ಅಭ್ಯಾಸ ಮಾಡಲಾಯಿತು. ಇದು ಮಧ್ಯವರ್ತಿ ಗುಣಗಳಿಂದ ಕೂಡಿದ್ದು ತಡವಾಗಿ ಫಸಲು ಕೊಡುತ್ತದೆ. ಇದರ ಮೂಲಸ್ಥಾನದ ಇತಿಹಾಸ ತಿಳಿದುಬಂದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ ; ಕಸಿಯಿಂದ ಬೆಳೆದು, ವಿಶಾಲವಾಗಿ ಹರಡುತ್ತದೆ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ದಪ್ಪವಾದ ಬುಡ, ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಜೋತು ಬಿದ್ದಿರುತ್ತವೆ, ತುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಆಂಡ ಭರ್ಜಿಯಾಕಾರ, ಚಪ್ಪಟೆ ಅಥವಾ ಲಘುವಾಗಿ ಮಡಚಿರುತ್ತವೆ ; ನಯ ಅಥವಾ ಅಲೆ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊರ ಬರುತ್ತಿರುವ ಚಿಗುರು ಎಲೆಗಳು ಕ್ರೋಮ್ ಲೆಮನ್ ಬಣ್ಣ, ಬಲಿಯುತ್ತಿರುವ ಳಿಯ ಎಲೆಗಳು ಕಾರಿಂಥಿಯಾನ್ ಕೆಂಪು ಬಣ್ಣ, ಅನಂತರ ಇವು ರನೆಟ್‌ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು ; ಗೋಪುರಾಕಾರ ; ಕ್ರೈಸೊಲೈಟ್‌ಗ್ರೀನ್ ಬಣ್ಣ, ಕಡಮೆ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ದೊಡ್ಡವು ಮತ್ತು ಓರೆ ; ಬಂಜೆಕೇಸರಗಳು ಚೆನ್ನಾಗಿ ಬೆಳವಣಿಗೆಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಬುಡ ಇಳಿಜಾರಿನಿಂದ ತೊತ್ತಿಗೆಯಾಕಾರವಿರುತ್ತದೆ ; ತೊಟ್ಟು ಚಕ್ರಾಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಭುಜಗಳು ಸಮ ಮತ್ತು ಒಂದೇ ಎತ್ತರ ಕೆಳಭುಜ ಇಳಿಜಾರಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಬೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿಲ್ಲ ಕೊಕ್ಕು ; ತುದಿ ಗುಂಡಾಗಿರುತ್ತದೆ ; ತೆಳುವಾದ ಸಿಪ್ಪೆ, ನಯ, ಕೆಲವು ಸಾರಿ

ಒರಟಾಗಿರುತ್ತದೆ, ಪ್ರಿಮೂಲೈನ್ ಎಲ್ಲೊ ಬಣ್ಣ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲಿನಿಂದ ಹೊರಬಂದಿರುತ್ತವೆ ; ಗಟ್ಟಿಯಾದ ಮೆದುವಾದ ತಿರುಳು ಸಾಧಾರಣವಾದ ನಾರಿನಿಂದ ಕೂಡಿರುತ್ತದೆ ; ಆಳವಾದ ಕ್ರೋಮ್ ಬಣ್ಣ ; ಘಾಟುವಾಸನೆ, ಹುಳಿಯಿಂದ ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘ ಚತುರಸ್ರ; ಸಾಧಾರಣ ನಾರು, ಮಧ್ಯಮದಿಂದ ಒಟು, ಎಲ್ಲಾ ಭಾಗದಲ್ಲಿ ಸಾಧಾರಣವಾಗಿರುತ್ತದೆ ಮತ್ತು ಕೆಳತುದಿಯಲ್ಲಿ ಹೆಚ್ಚಾಗಿರುತ್ತದೆ ; ಸಮಾನಾಂತರ ನಾಳಗಳು, ಕವಲೊಡೆದಿರುತ್ತವೆ ಮತ್ತು ಟೊಳ್ಳಾಗಿರುತ್ತವೆ.

ಹಣ್ಣಿನ ಗುಣ : ಗಾತ್ರದಲ್ಲಿ ಮಧ್ಯಮ, ಸಿಧಾನಕಾಲಿಕ ಫಸಲು ; ಗಾಳಿ ಮತ್ತು ಕಪ್ಪಾಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉಳಿಯುವ ಮತ್ತು ಸುಲಿಯುವ ಗುಣ ಮಧ್ಯಮ.

ಅಮೀನ್ ಅಬ್ದುಲ್ ಅಹೆದ್‌ಖಾನ್

ಅಬ್ದುಲ್ ಅಹೆದ್‌ಖಾನ್ ಎಂಬುವನ ತೋಟದಲ್ಲಿ ಈ ತಳಿಯು ಉದ್ಭವಿಸಿರುವುದರಿಂದ ಈ ಹೆಸರು ಬಂದಿದೆ. ಈ ತಳಿಗೆ ಕೊಹಿನೂರ್ ಮತ್ತು ದಂಡವಾಲಿ ಎಂಬ ಹೆಸರುಗಳು ಸಹ ಬಳಕೆಯಲ್ಲಿವೆ. ಈ ಹಣ್ಣಿನ ವಿಶೇಷ ಗುಣಗಳ ಕಾರಣದಿಂದಾಗಿ ಕೊಹಿನೂರ್ ಎಂಬ ಹೆಸರು ಬಂದಿದೆ. ದಂಡಿವಾಲಿ ಎಂದರೆ 'ದಂಡಿನಿಂದ' ಎಂಬ ಅರ್ಥವನ್ನು ಕೊಡುತ್ತದೆ. ಈ ತಳಿಯ ತಾಯಿ ಮರವು ದಿಂಡಿನ ಮೇಲೆ ಬೆಳೆದುದೆಂದು ಹೇಳಲಾಗಿದೆ. ಅಮೀನ್ ಎಂದರೆ ಉದ್ದವಾಗಿರುವ ಹಣ್ಣು ಎಂದು ಅರ್ಥ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ನೇರ ಅಥವಾ ವಿಶಾಲವಾಗಿ ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಿನಿಂದ ಕೆಳಗಿನಂತಿರುವ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂದಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಮೊನಚಾದ ತುದಿ ;

ಮೊನಚು ಬುಡ ; ಹೊರಬರುತ್ತಿರುವ ಚಿಗುರು ಎಲೆಗಳು ವಿರಿಡೈನ್ ಗ್ರೀನ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳು ಮಾರ್ಷಿಯಸ್ ಎಲ್ಲೊ, ಅನಂತರ ಇವು ಅಬ್ ಸಿಂಥ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರ್ಜ್‌ಗ್ರೀನ್, ಸಾಧಾರಣ ಮೃದು ತುಪ್ಪಳು, ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ, ಬಂಜೆ ಕೇಸರಗಳು ಚೆನ್ನಾಗಿ ಬೆಳೆದಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರ ಮೊಟ್ಟೆಯಾಕಾರಿತ ; ಬುಡ ವೃತ್ತಾಕಾರದಿಂದ ಓರೆ ವೃತ್ತಾಕಾರ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಲಘುವಾಗಿರುತ್ತದೆ ಅಥವಾ ಇರುವುದಿಲ್ಲ ; ಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಲಘು ಪ್ರಮುಖವಾಗಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ : ವಿಶಾಲವಾಗಿ ಮೊನಚಿನಿಂದ ಗುಂಡಾಗಿರುವ ತುದಿ ; ದಪ್ಪವಾದ ಸಿಪ್ಪೆ, ಒರಟು, ಪಾರಸಿಥಿಯ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಇವು ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರಿನಿಂದ ಕೂಡಿರುವುದಿಲ್ಲ, ಮಸ್ಟರ್ಡ್ ಎಲ್ಲೊ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ ದೊಡ್ಡದು, ದೀರ್ಘಚತುರಸ್ರ ; ಇದರ ಎಲ್ಲಾ ಭಾಗದಲ್ಲಿ ಒತ್ತಾದ ಚುಕ್ಕೆ ಮೃದುನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ಗುಣ : ಉತ್ತಮ ಗುಣ ; ಮಧ್ಯಮದಿಂದ ಹೆಚ್ಚು ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಉಳಿಯುವ ಮತ್ತು ಸುಲಿಯುವ ಗುಣ.

ಅಮೀನ್ ಹೀರಾ

ಈ ತಳಿಯು ಉತ್ತರ ಪ್ರದೇಶದ ಫತೇಪುರ ಜಿಲ್ಲೆಯಿಂದ ಬಂದಿದೆ. ಇದು

ಮೊದಲು ಆಕಸ್ಮಿಕ ಸಸಿಯಾಗಿ ದೊರೆತಿದ್ದು ಮುಂದೆ ಸಿಂಧೂ-ಗಂಗಾ ನದಿಯ ಬಯಲಿನ ವಿವಿಧ ಭಾಗಗಳಿಗೆ ಹರಡಿದೆ ಎಂದು ಭಾವಿಸಲಾಗಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಇತಿಹಾಸ ತಿಳಿದಿಲ್ಲ. ಹಿಂದಿ ಭಾಷೆಯಲ್ಲಿ ಅಮೀನ್ ಎಂದರೆ ಉದ್ದ, ಹೀರಾ ಎಂದರೆ ಒಡವೆ ಎಂದು ಅರ್ಥ. ಹೀಗೆ ಈ ಹಣ್ಣು, 'ಹಣ್ಣುಗಳ ಒಡವೆ' ಎಂಬ ಅರ್ಥವನ್ನು ಕೊಡುತ್ತದೆ. ಈ ಹೆಸರಿಗೆ ಇನ್ನಾವ ಹಿನ್ನೆಲೆಯೂ ಇಲ್ಲ, ಹೀರಾ ಎಂಬ ಮಹಿಳೆಯ ತೋಟದಲ್ಲಿ ಇದನ್ನು ಮೊದಲ ಬಾರಿಗೆ ಬೆಳೆಸಲಾಯಿತು. ಆದ್ದರಿಂದ ಈ ಹೆಸರು ಎಂಬುದು ಕೆಲವರ ಅಭಿಪ್ರಾಯ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ವಿಶಾಲವಾಗಿ ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಲಘುವಾಗಿ ಮಡಚಿರುತ್ತವೆ ; ನಯವಾದ ಅಂಚುಗಳು, ಸಾಧಾರಣ ಪ್ರಮುಖವಾದ ನಾಳರಚನೆ ; ಮೊನಚಾದ ತುದಿ ; ಗುಂಡಾದ ಬುಡ ; ಚಿಗುರು ಮತ್ತು ಬಲಿಯುತ್ತಿರುವ ಎಳೆಯ ಎಲೆಗಳು ಆರ್‌ಸಿಂನ್ಸ್‌ಗ್ರೀನ್ ಬಣ್ಣ, ಅನಂತರ ಇವು ಬಫ್ಫಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಕೋರ್ಜ್‌ಗ್ರೀನ್ ಬಣ್ಣ, ಸಾಧಾರಣವಾದ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ತುಸು (ಸ್ವಲ್ಪ) ಮೂತ್ರಪಿಂಡಾಕಾರ ; ಬುಡ ಗುಂಡಾಗಿರುತ್ತದೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ. ಅಸಮವಾದ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ನಿರ್ದಿಷ್ಟವಾದ ಬಿಂದುವಿನಲ್ಲಿ ಇರುತ್ತದೆ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕೊಕ್ಕಳು ; ತುದಿ ಗುಂಡಾಗಿರುತ್ತದೆ ; ಮಧ್ಯಮ ದಪ್ಪದ ಸಿಪ್ಪೆ, ನಯ, ಪ್ರಿಮ್ಯೂಲೈನ್ ಎಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ ; ಗಟ್ಟಿಯಾದ ತಿರುಳು, ನಾರು

ಇರುವುದಿಲ್ಲ, ಏಪ್ರಿಕಾಟ್ ಎಲ್ಲೊ ; ಹಿತದಿಂದ ಮಧುರ ವಾಸನೆ ; ಸಿಹಿಯಾದ ರುಚಿ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಎಲ್ಲಾ ಭಾಗದಲ್ಲಿ ಒತ್ತಾದ, ಸಣ್ಣ, ಮೃದುನಾರು ; ಕವಲೊಡೆದಿರುವ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ಗುಣ : ಅತ್ಯುತ್ತಮವಾದ ಗುಣ ; ಮಧ್ಯಮದಿಂದ ನಿಧಾನ ಕಾಲಿಕ ಫಸಲು; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಉಳಿಯುವ ಮತ್ತು ಸುಲಿಯುವ ಗುಣ.

ಅಮೀನಿ

ಈ ತಳಿ ಅಡುಗೆ ಗುಣಗಳಿಂದ ಕೂಡಿದೆ, ವಿಶೇಷವಾಗಿ ಉಪ್ಪಿನಕಾಯಿ ಮತ್ತು ಚಟ್ನಿ ತಯಾರಿಕೆಗೆ ಯೋಗ್ಯವಾಗಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಇತಿಹಾಸ ತಿಳಿದು ಬಂದಿಲ್ಲ. ಈ ತಳಿಯನ್ನು ಮಹಾರಾಷ್ಟ್ರದ, ಪೂನಾದಲ್ಲಿರುವ, ಕಿರ್ಕಿ ಗೌರ್ನಮೆಂಟ್ ಫ್ರೂಟ್ ರೀಸರ್ಚ್ ಸ್ಟೇಷನ್ ಮತ್ತು ಕೇರಳದ, ಟ್ರಿಚೂರು ಜಿಲ್ಲೆಯಲ್ಲಿನ ಒಳ್ಳುಕಾರದ ಗೌರ್ನಮೆಂಟ್ ರೀಸರ್ಚ್ ಸ್ಟೇಷನ್‌ನಲ್ಲಿ ಅಭ್ಯಾಸ ಮಾಡಲಾಯಿತು. ಇದನ್ನು ಹೆಚ್ಚು ಪ್ರಚಾರಗೊಳಿಸಬೇಕಾದ ಇನ್ನಾವ ವಿಶೇಷ ಗುಣಗಳೂ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನಿಧಾನವಾಗಿ ಬೆಳೆಯುವ ಗುಣ, ನೇರವಾಗಿ ಅಥವಾ ಹರಡುತ್ತದೆ, ಅನುತ್ಪಾದನಾಕಾರಿ ಇಲ್ಲವೆ ಮಧ್ಯಮ ಉತ್ಪಾದನಾಕಾರಿ, ಪ್ರತಿವರ್ಷ ಫಲಕಾರಿ ; ಮೇಲ್ಭಾಗ ಗುಂಡಾಗಿರುತ್ತದೆ ; ಮಧ್ಯಮ ಗಾತ್ರದ ಬುಡ ; ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡುವುದರಿಂದ ಜೋತು ಬಿದ್ದಿರುತ್ತವೆ ನಡುದಿಂಡಿನ ಮೇಲೆ ಸಾಧಾರಣದಿಂದ ದೃಢವಾಗಿ ಹಿಂಭಾಗಿರುತ್ತವೆ,ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿಕೊಂಡಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಕಡಮೆ ಲಂಬಾಗ್ರ ತುದಿ ; ಮೊಂಡಾದ ಬುಡ ; ಹೊರಬರುತ್ತಿರುವ ಚಿಗುರು ಎಲೆಗಳು ಮಿಗ್ನೊನೆಟ್ ಗ್ರೀನ್, ಬಲಿಯುತ್ತಿರುವ

ಎಳೆಯ ಎಲೆಗಳು ವೆರೊನಾ ಬ್ರೌನ್ ಬಣ್ಣ, ಅನಂತರ ರೈನೆಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಶಂಕುವಿನಾಕಾರ, ರೋಸ್ ಡೋರ್ ಬಣ್ಣ, ಒತ್ತಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಬೆಳವಣಿಗೆಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ವಿಶಾಲ ಮೊಟ್ಟೆಯಾಕಾರ ; ಬುಡ ಲಘುವಾಗಿ ಚಪ್ಪಟೆಯಾಗಿರುತ್ತದೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಭುಜಗಳು ಸಮ ಮತ್ತು ಒಂದೇ ಮಟ್ಟದಲ್ಲಿರುತ್ತವೆ. ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಒಂದು ಬಿಂದುವಿನಲ್ಲಿರುತ್ತದೆ. ಸ್ವಲ್ಪ ಹೊಕ್ಕಳು ; ತುದಿ ಗುಂಡಾಗಿರುತ್ತದೆ ; ಸಿಪ್ಪೆ ಮಧ್ಯಮ ದಪ್ಪ, ನಯದಿಂದ ಒರಟು ; ಸೂರ್ಯಕಾಂತಿಯ ಹೂವಿನ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ಸಾಧಾರಣವಾದ ನಾರಿನಿಂದ ಕೂಡಿರುತ್ತದೆ, ಕ್ಯಾಡ್ಮಿಯಂ ಎಲ್ಲೊ ಬಣ್ಣ; ಅಮ್ಲವಾಸನೆ ; ಹುಳಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು ; ದೀರ್ಘಚತುರಸ್ರ; ಇದರ ಎಲ್ಲಾ ಭಾಗದಲ್ಲಿ ಮಧ್ಯಮ ; ಮೃದು ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ಗುಣ : ತಿನ್ನುವ ಹಣ್ಣಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿಲ್ಲ, ಆದರೆ ಅಡುಗೆಗೆ ಉತ್ತಮವಾಗಿದೆ ; ಮಧ್ಯಮದಿಂದ ನಿಧಾನಕಾಲದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸುಲಭವಾಗಿ ತುತ್ತಾಗುತ್ತದೆ ; ಕೀಳು ಉಳಿಯುವ ಗುಣ ; ಮಧ್ಯಮ ಸುಲಿಯುವ ಗುಣ.

ಅಮೀನ್ ಇಬ್ರಾಹಿಮ್‌ಪುರ್

ಅಮೀನ್ ಎಂದರೆ ಉದ್ದವಾದ (ಹಣ್ಣು) ಎಂದರ್ಥ. ಇಬ್ರಾಹಿಮ್‌ಪುರ್ ಎಂಬುದು ಉತ್ತರಪ್ರದೇಶದ ಲಕ್ನೋ ಜಿಲ್ಲೆಯ ಮಾಲಿಹಬಾದಿನ ಇಬ್ರಾಹಿಮ್‌ಪುರ್

ಎಂಬ ಹಳ್ಳಿಯನ್ನು ಸೂಚಿಸುತ್ತದೆ; ಈ ತಳಿಯ ಹಣ್ಣು ಉದ್ದವಾಗಿದ್ದು, ಇಬ್ರಾಹಿಮ್ ಪುರದ ಮೂಲಸ್ಥಾನದ್ದಾಗಿರುವುದರಿಂದ ಅಮೀನ್ ಇಬ್ರಾಹಿಮ್‌ಪುರ್ ಎಂಬ ಹೆಸರು ಬಂದಿದೆ. ಇತ್ತೀಚೆಗೆ ಈ ತಳಿ ಲಕ್ನೋ ಜಿಲ್ಲೆಯ ಪಕ್ಕದ ಜಿಲ್ಲೆಗಳಿಗೆ ಹರಡುತ್ತಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪರ್ಯಾಯ ವರ್ಷಗಳಲ್ಲಿ ಫಲ ಬಿಡುವ ಪ್ರವೃತ್ತಿ; ಗುಂಡಾದ ಮೇಲ್ಭಾಗ; ಗಾತ್ರದಲ್ಲಿ ಮಧ್ಯಮದಿಂದ ಕಿರಿದಾದ ಬುಡ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ; ನಯದಿಂದ ಅಲೆಯಾಗಿರುವ ಅಂಚು; ಸಾಧಾರಣದಿಂದ ಹೆಚ್ಚು ಪರಿಮಾಣದ ನಾಳರಚನೆ; ಲಘು ಲಂಬಾಗ್ರ ತುದಿ; ಗುಂಡಾದ ಬುಡ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕುವಿನಾಕಾರ, ಬಣ್ಣ ಲೂವಿಯರ್ ಗ್ರೀನ್, ಲಘು ಮೃದುಕುಪ್ಪುಳು; ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು, ಇದಕ್ಕೆ ಓರೆಯಾಗಿರುತ್ತವೆ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ; ಲಘು ಚಪ್ಪಟೆಯಿಂದ ಗುಂಡಾಗಿರುವ ಬುಡ; ಚಚ್ಚೌಕವಾಗಿ ಸೇರಿರುವ ತೊಟ್ಟು; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ; ಸಮವಾದ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ; ಕೊಕ್ಕು ಇರುವುದಿಲ್ಲ ಅಥವಾ ಒಂದು ಬಿಂದುವಿನಲ್ಲಿ ಇರುತ್ತದೆ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು; ವಿಶಾಲವಾದ ಬಿಂದುವಿನಲ್ಲಿರುವ ತುದಿ; ದಪ್ಪವಾದ ಸಿಪ್ಪೆ, ಒರಟಾಗಿರುವ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಎಲ್ಲೋ; ಚಿಕ್ಕ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಎಂಪೈರ್ ಎಲ್ಲೋ; ಹಿತಕರದಿಂದ ಮಧುರವಾದ ವಾಸನೆ; ಸಿಹಿಯಿಂದ ಬಹಳ ಸಿಹಿಯಾಗಿರುವ ರುಚಿ; ಕಡಿಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ದೀರ್ಘಚತುರಸ್ರ; ಇದರ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಆವರಿಸಿರುತ್ತದೆ ; ಸಮಾನಾಂತರವಾದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಬಹಳ ಉತ್ತಮ ; ಶೀಘ್ರಕಾಲಿಕ ಫಸಲು; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಉಳಿಕೆಯ ಗುಣ ; ಉತ್ತಮ ಸುಲಿಯುವ ಗುಣ.

ಅಮೀನ್ ಖುರ್ದ್

ಅಮೀನ್ ಎಂದರೆ ಉದ್ದವಾದ ಮತ್ತು ಖುರ್ದ್ ಎಂದರೆ ಕಿರಿಯ ಎಂದು ಅರ್ಥ. ಈ ತಳಿಯು ಉದ್ದವಾಗಿದ್ದು ಕಿರಿಯದಾಗಿರುವುದರಿಂದ ಇದನ್ನು ಅಮೀನ್ ಖುರ್ದ್ ಎಂಬ ಹೆಸರಿನಿಂದ ಕರೆಯುತ್ತಾರೆ. ಇದು ಉತ್ತರ ಪ್ರದೇಶದ ಮಾಲಿಹಬಾದ್‌ನ ಬುಲಾಂದ್ ಖಾನ್‌ರಬುಲಾಂದ್‌ಬಾಗ್‌ನಲ್ಲಿ ಆಕಸ್ಮಿಕ ಸಸಿಯಾಗಿ ಉದ್ಭವಿಸಿದ್ದು, ಉತ್ತರ ಪ್ರದೇಶದ ಪಕ್ಕದ ರಾಜ್ಯಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ. ಉತ್ಪನ್ನಕಾರಿ, ಪ್ರತಿ ವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದ ಬುಡ ; ಮಧ್ಯಮದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ಅಲೆಯಂಚು ಮತ್ತು ಕೆಲವು ಸಾರಿ ತಿರುಚಿಕೊಂಡಿರುತ್ತವೆ ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕಚ್ಚಾ ಅಂಬರ್ ಬಣ್ಣ, ಸಾಧಾರಣವಾದ ಮೃದುವಾದ ತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಓರೆ ಗುಂಡಾಗಿರುವ ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟವಾದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ದಪ್ಪವಾದ ಸಿಪ್ಪೆ, ನಯ ಸಿಪ್ಪೆಯ ಮೇಲ್ಭಾಗ ಪ್ರಿಮೂಲೈನ್ ಎಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇಲ್ಲ, ಬಣ್ಣ ವಿಕಾಡೊ ಆರೆಂಜ್ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರದಿಂದ ತುಸು ಮೂತ್ರಪಿಂಡಾಕಾರ ; ಇದರ ಎಲ್ಲಾ ಭಾಗದ ಮೇಲೆ ಹೆಚ್ಚು ಸಿಬಿತವಾಗಿಲ್ಲದ, ಕುಳ್ಳಾದ ಮೃದುವಾದ ನಾರು ಆವರಿಸಿರುತ್ತದೆ ; ಕವಲೊಡೆದಿರುವ ನಾಳಗಳು ತಗ್ಗಾಗಿ ಟೊಳ್ಳಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಹೆಚ್ಚು ಉತ್ತಮ ; ಹೆಚ್ಚು ಫಲಕಾರಿ, ಮಧ್ಯಕಾಲಿಕ ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಅಮೀನ್ ಮಹಮುದ್ ಯುನಸ್‌ಖಾನ್

ಉತ್ತರ ಪ್ರದೇಶದ ಮಾಲಿಹಬಾದ್‌ನ ಬಳಿ ಒಂದು ಬಾವಿಯ ಪಕ್ಕದಲ್ಲಿ ಇನ್ನೂ ಜೀವಂತವಾಗಿರುವ ಈ ತಳಿಯ ಮರವನ್ನು ಮೊದಲು ಗುರುತಿಸಿದ ಅಮೀನ್ ಮಹಮದ್ ಯುನಸ್‌ಖಾನ್‌ನ ಜ್ಞಾಪಕಾರ್ಥವಾಗಿ ಈ ಹೆಸರು ಕೊಡಲಾಗಿದೆ. ಇದು ಉತ್ತಮ ದರ್ಜೆಯ ಹೆಚ್ಚು ಇಳುವರಿ ಕೊಡುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಸಣ್ಣದಾದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ ಮತ್ತು ಕೆಲವು ಸಾರಿ ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚು ಮತ್ತು ಕೆಲವು ಸಾರಿ ಅಲೆ ಅಂಚು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಮೊನಚಾದ ಬುಡ ; ಹೊಸದಾಗಿ, ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಪಾಮ್‌ಗ್ರೀನ್, ಇವು ಕ್ರಮೇಣ ಚಕ್ಕೋತನ ಹಣ್ಣಿನ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆಯಾಗಿ ಚಪ್ಪಟೆಯಾಗಿರುವ ಬುಡ ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳ ಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಗುಂಡಾಗಿ, ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ; ಸ್ವಲ್ಪ ಅಥವಾ ಇಲ್ಲದ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಿನಿಂದ ಸ್ವಲ್ಪ ಚಪ್ಪಟೆಯಾಗಿರುವ ತುದಿ ; ಸಾಧಾರಣ ದಪ್ಪವಿರುವ ಸಿಪ್ಪೆ, ನಯವಾದ ಮೇಲ್ಭಾಗದ ಸಿಪ್ಪೆಯ ಬಣ್ಣ ಸೈರಿತ್ರಮ್ ಎಲ್ಲೊ ; ಸಾಧಾರಣ ಗಾತ್ರದ ಚುಕ್ಕೆಗಳು ದೂರಕ್ಕೆ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ. ಸಾಧಾರಣ ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬ್ರಾಸ್ ಬಣ್ಣ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು ; ದೀರ್ಘಚತುರಸ್ರ, ನಾರಿನಿಂದ ಕೂಡಿರುತ್ತದೆ ; ಮಧ್ಯಮ ಗಾತ್ರದ, ಮೃದುವಾದ ನಾರು, ಇದರ ಎಲ್ಲಾ ಭಾಗದ ಮೇಲೆ ಇರುತ್ತದೆ ; ಕೆಳತುದಿಯಲ್ಲಿ ಮಧ್ಯಮ ಪರಿಮಾಣದ ನಾರಿರುತ್ತದೆ ; ಸಮಾನಾಂತರ ನಾಳಗಳು, ಕವಲೊಡೆದಿರುತ್ತವೆ, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಅಮೀನ್ ಸಹಯ್

ಈ ತಳಿಯು, ಉತ್ತರ ಪ್ರದೇಶದ ಮಾಲಿಹಬಾದ್‌ನಲ್ಲಿಯ ಸಹಯ್ ಎಂಬ ಮಾಲಿಯು ಆಕಸ್ಮಿಕ ಸಸಿಯಿಂದ ಆರಿಸಿದ್ದರಿಂದ ಉದ್ಭವಿಸಿದೆ. ಅಮೀನ್ ಎಂದರೆ ಉದ್ದವಾದ (ಹಣ್ಣು) ಮತ್ತು ಸಹಯ್ ಎಂಬುದು ಮಾಲಿಯ ಹೆಸರು ಈ ತಳಿಯ ಹಣ್ಣು ಉದ್ದವಾಗಿದ್ದು ಇದನ್ನು ಸಹಯ್ ಎಂಬ ಮಾಲಿ ಕಂಡುಹಿಡಿದಿದ್ದರಿಂದ ಈ ತಳಿಗೆ ಅಮೀನ್ ಸಹಯ್ ಎಂಬ ಹೆಸರು ಬಂದಿದೆ. ಈ ತಳಿಯ ಕೆಲವು ಕಸಿ ಸಸಿಗಳನ್ನು ಸಹಯಿಯು ಮಾಲಿಹಬಾದಿನ ಸಫ್‌ದಾರ್ ನರ್ಸರಿಗೆ ಬಳುವಳಿಯಾಗಿ ಕೊಟ್ಟನು. ಈಗ ಈ ನರ್ಸರಿಯು ಅಮೀನ್‌ಸಹಯ್ ತಳಿಯ ಮುಖ್ಯ ಮೂಲವಾಗಿದೆ. ತಳಿಯು ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿದ್ದು ಹೆಚ್ಚು ಇಳುವರಿಯನ್ನು ಕೊಡುವುದರಿಂದ ಇವನ್ನು ಜನಪ್ರಿಯಗೊಳಿಸಬೇಕಾದ ಅಗತ್ಯವಿದೆ.

ಮರ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಸಾಧಾರಣ ಹಸುವು, ನೇರದಿಂದ ವಿಶಾಲವಾಗಿ ಬೆಳೆಯುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿಕೊಂಡಿರುತ್ತವೆ ; ಸ್ವಲ್ಪ ಅಲೆ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೊ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫ್ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಅಸಮವಾದ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಒರೆಯಾಗಿ ಇರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಗುಂಡಾದ ಬುಡ ; ಚಪ್ಪಟೆಕದಿಂದ ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜದ ಉದ್ದವಾದ ಡೊಂಕು ಇಳಿಜಾರಾಗಿ ಮುಗಿಯು

ತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡಾದ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗವು ಪ್ರಿಮೂಲೈನ್ ಎಲ್ಲೊ ಬಣ್ಣ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬೀದಿರು ತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಎಲ್ಲೊ ಬಣ್ಣ ; ಹಿತಕರದಿಂವ ಮಧುರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ಒತ್ತಾದ, ಕುಳ್ಳಾದ ಮತ್ತು ಮೃದುವಾದ ನಾರು ಆವರಿಸಿರುತ್ತದೆ; ಸಮಾನಾಂತರ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಬಹಳ ಉತ್ತಮ ; ಮಧ್ಯಕಾಲಿಕ ಫಸಲು; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖ ರಣೆ ಮತ್ತು ಸುಲಿಯುವ ಗುಣ.

ಅಮೀನ್ ತೆಹಸಿಲ್

ಈ ತಳಿಯು ಉತ್ತರ ಪ್ರದೇಶದ ಮಾಲಿಹಬಾದ್ ತೆಹಸಿಲ್‌ನಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ. ಅಲ್ಲಿಂದ ಇದನ್ನುಉತ್ತರ ಪ್ರದೇಶದ ಇತರ ಭಾಗಗಳಿಗೆ ಒಯ್ಯಲಾಗಿದೆ. ಈ ತಳಿಯ ಹಣ್ಣು ಬಹಳ ಆಕರ್ಷಕ ವಾಗಿರುವುದರಿಂದ ಇದನ್ನು ಪ್ರಿನ್ಸ್ ಎಂದು ಕರೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ಬಹಳ ಫಲದಾಯಕ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ; ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನಯವಾದ ಅಂಚು, ಕೆಲವು ಸಾರಿ ಅಲೆ ಅಂಚು ; ಸಾಧಾ ರಣ ಪ್ರಮುಖವಾದ ನಾಳರಚನೆ ; ಲಘು ಲಂಬಾಗ್ರತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ

ಎಲೆಗಳ ಬಣ್ಣ ಸಿನ್ನೆಮಾನ್ ಬ್ರೌನ್, ಇವು ಅನಂತರ ಆರೆಂಜ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಶಂಕಾಕಾರ, ತಿಳಿ ಕೊರಿಥಿಂಯಾನ್ ಬಣ್ಣ, ಸಾಧಾರಣವಾದ ಮೃದು ತುಪ್ಪುಳು ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು ಅವಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಓರೆಯಾಕಾರ ; ಓರೆ ಚಪ್ಪಟೆಯಾಗಿರುವ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಸ್ವಲ್ಪ ಕುಳಿ ; ಅಸಮವಾದ ಭುಜಗಳು, ಕೆಳಭುಜ ಅಗಲ ಮತ್ತು ಇದು ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟವಾದ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡಾದ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಹೊಂಬಣ್ಣದ ಹೊಳಪು ; ಸಣ್ಣ ಚುಕ್ಕೆಗಳು, ಹತ್ತಿರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಎಂಪ್ಟೈರ್ ಎಲ್ಲೊ ಬಣ್ಣ ; ಮಧುರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ದೀರ್ಘ ಚತುರಸ್ರ ; ಮೇಲ್ಭಾಗದ ಎಲ್ಲಾ ಭಾಗದಲ್ಲಿ ನಿಬಿಡವಾಗಿ ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಬಹಳ ಉತ್ತಮದಿಂದ ಅತ್ಯುತ್ತಮ ; ಹೆಚ್ಚು ಫಲದಾಯಕ ಮತ್ತು ಶೀಘ್ರಕಾಲಿಕ ; ಕುಪ್ಪಳಿಸುವ ಕೀಟಗಳಿಗೆ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ ; ಉತ್ತಮ ಸಿಪ್ಪೆ ಸುಲಿಯುವ ಗುಣ.

ಅಮ್ಲೆಟ್

ಈ ತಳಿ ತಮಿಳುನಾಡಿನ ಸೇಲಂ ಜಿಲ್ಲೆಯಲ್ಲಿ ಹೆಚ್ಚು ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಕೆಲವು

ಸಾರಿ ಇದನ್ನು ಹ್ಯಾಮ್ಲೆಟ್ ಎಂದು ಕರೆಯುವುದೂ ಉಂಟು. ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಇದನ್ನು ಮನೋರಂಜನಿ ಎಂದು ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ಈ ಹಣ್ಣು ಆರೆಂಜ್ ಎಲ್ಲೊ ಬಣ್ಣದ ಸಿಪ್ಪೆಯ ಹಿನ್ನೆಲೆಯಲ್ಲಿ ಕಪೋಲಗಳ ಮೇಲಿನ ಉಜ್ವಲ ಕೆಂಬಣ್ಣದ ಕಾಂತಿಯಿಂದ ತುಂಬ ಆಕರ್ಷಕವಾಗಿರುತ್ತದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಪ್ರಮಾಣದ ಉತ್ಪನ್ನ, ಪ್ರತಿವರ್ಷ ಫಸಲು ; ಗುಮ್ಮಟಾಕಾರದ ಮೇಲ್ಭಾಗ ; ದಪ್ಪದಿಂದ ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನಡುದಿಂಡಿನ ಮೇಲೆ ಲಘುವಾಗಿ ಅಥವಾ ದೃಢವಾಗಿ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಲಘುವಾಗಿ ಅಥವಾ ದೃಢವಾಗಿ ಮಡಚಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಕ್ರಮೇಣ ಆಲಿವ್ ಲೇಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆಯಿಲ್‌ಗ್ರೀನ್ ಬಣ್ಣ ; ಒತ್ತಾದ ಮೃದು ತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು ಅದಕ್ಕೆ ಸಮಾನಾಂತರವಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡಮೂತ್ರ ಪಿಂಡಾಕಾರ ; ಬುಡ ಸ್ವಲ್ಪ ಚಪ್ಪಟೆಯಾಗಿರುತ್ತದೆ, ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಸ್ವಲ್ಪ ಕುಳಿ; ಗುಂಡಾದ ಮೇಲ್ಭುಜಕ್ಕೆ ಕೆಳಭುಜ ಸಮ ಮತ್ತು ಎರಡು ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಪ್ರಮುಖವಾಗಿರುವ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು; ತುದಿ ವಿಶಾಲವಾದ ಬಿಂದುವಿನಲ್ಲಿರುತ್ತದೆ; ಸಿಪ್ಪೆ ಮಧ್ಯಮ ದಪ್ಪ, ಭುಜಗಳ ಮೇಲೆ ಕೊರಿಂಥಿಯಾನ್ ರೆಡ್ ಮಚ್ಚೆಗಳು, ಇನ್ನುಳಿದ ಭಾಗ ಪ್ರಿಮೂಲೈನ್ ಎಲ್ಲೊ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ತುಸು ಆಳವಾಗಿರುತ್ತವೆ ; ಮೆದುವಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಪ್ರಿಮೂಲೈನ್ ಎಲ್ಲೊ ; ಹಿತಕರ ವಾಸನೆ ; ಸಿಹಿಯಾದ ರುಚಿ;

ಓಟೆ : ದೀರ್ಘಚತುರಸ್ರ ; ಇವರ ಎಲ್ಲಾ ಭಾಗದಲ್ಲಿ ಮಧ್ಯಮ ಗಾತ್ರದ, ಮೃದುವಾದ ನಾರು ಇರುತ್ತದೆ, ಕವಲೊಡೆದಿರುವ ನಾಳಗಳು ಸ್ವಲ್ಪದಿಂದ ಪ್ರಮುಖ ವಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮದಿಂದ ಉತ್ತಮ ; ಮಧ್ಯಮದಿಂದ ಕಡಮೆ ಫಸಲು, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆಯ ಗುಣ.

ಅನಾರ್ ಮಲ್‌ಗೋವ

ಈ ತಳಿ ಹೈದ್ರಾಬಾದ್ (ಡೆಕ್ಕನ್) ಪ್ರದೇಶದಲ್ಲಿ ಹೆಚ್ಚಿನ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಇತಿಹಾಸ ತಿಳಿದುಬಂದಿಲ್ಲ. ಇದು ಮನೆ ಗಳ ಪಕ್ಕದಲ್ಲಿ ಬೆಳೆಸಲು ಅತ್ಯುತ್ತಮ ತಳಿಯಾದ್ದರಿಂದ ಇದನ್ನು ಜನಪ್ರಿಯಗೊಳಿ ಸುವ ಅಗತ್ಯವಿದೆ.

ಮರ : ಗಾತ್ರದಲ್ಲಿ ಚಿಕ್ಕದು, ನಿಧಾನ ಬೆಳವಣಿಗೆ, ಹರಡಿರುತ್ತದೆ, ಮಧ್ಯಮ ಪ್ರಮಾಣದ ಇಳುವರಿ, ವಾರ್ಷಿಕ ಫಲಬಿಡುವುದರಿಂದ ಖಚಿತವಿಲ್ಲದ ಫಸಲು ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಲಘುವಾಗಿ ಮಡಚಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಉಂದಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಆಲಿವ್ ಒಕ್ರೆ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಆಲಿವ್, ಇವು ಅನಂತರ ಒಕ್ರೆ ಸಿಯಸ್ ಬಫ್ಫ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೆಟ್ಯೂಸ್‌ಗ್ರೀನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಸಮವಾದ ಕೇಸರಗಳು ಅಂಡಾ ಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವು ದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಗುಂಡಾದ ಬುಡ; ತೊಟ್ಟು ಚಪ್ಪಟೆಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಸಮವಾದ ಭುಜಗಳು ಒಂದೇ ಮಟ್ಟದಲ್ಲಿ ಇರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಇಳಿಜಾರಾದ ಮೇಲ್ಭುಜ, ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಾದ ತುದಿ ; ದಪ್ಪವಾದ ಸಿಪ್ಪೆ, ಸಿಪ್ಪೆಯ ಮೇಲ್ಭಾಗ ಒರಟು ಮತ್ತು ಸ್ವಲ್ಪ ಸಣ್ಣಗಂತಿಗಳಿರುತ್ತವೆ, ಇದರ ಬಣ್ಣ ರಸೆಟ್ ಗ್ರೀನ್ ; ಚಿಕ್ಕ ಗಾತ್ರದ ಚುಕ್ಕೆಗಳು ಒತ್ತಾಗಿದ್ದು ಸಿಪ್ಪೆಯಲ್ಲಿ ತುಸು ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಮಸ್ಟರ್ಡ್ ಎಲ್ಲೊ ; ಹಿತಕರದಿಂದ ಮಧುರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲ್ಭಾಗದಲ್ಲಿ ತೆಳುವಾಗಿ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ಗುಣಮಟ್ಟ ; ಮಧ್ಯಕಾಲಿಕದಿಂದ ನಿಧಾನಕಾಲಿನ ಫಸಲು; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಮಧ್ಯಮ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಅನೊಖ ಸಾರ್ದ

'ಅನೋಕ್' ಎಂದರೆ ಅದ್ಭುತ ಮತ್ತು 'ಸಾರ್ದ' ಎಂದರೆ ಕಲ್ಲಂಗಡಿಯ ಒಂದ ತಳಿ. ಮೇಲ್ಕಂಡ ತಳಿಯು ದೊಡ್ಡ ಗಾತ್ರದ ಕಲ್ಲಂಗಡಿ ಸಾರ್ದ ತಳಿಯನ್ನು ಹೋಲುವುದರಿಂದ ಇದಕ್ಕೆ ಅನೊಖ ಸಾರ್ದ ಎಂಬ ಹೆಸರು ಬಂದಿದೆ. ಇದು ಉತ್ತರ ಪ್ರದೇಶದ ಸಹರಾನ್‌ಪುರ್ ಹತ್ತಿರದ ಕಾಲಿಸ್‌ಪುರ ಹಳ್ಳಿಯಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿತು ಎಂದು ವರದಿಯಾಗಿದೆ. ಅಲ್ಲಿ ಖಾನ್ ಬಹದ್ದೂರ್ ನಯೀಮ್‌ಖಾನ್ ಎಂಬ ಜಮೀನ್ದಾರನು ಈ ತಳಿಯ ಮೊದಲ ಕಸಿಯನ್ನು ತನ್ನ ತೋಟದಲ್ಲಿ ನಾಟಿ ಮಾಡಿದ. ಹೀಗಾಗಿ ಇದು ಮೂಲತಃ ತೋಟದ ಮರ ಎಂಬರ್ಥದ ಖೊರ್ಮಾಲ ಎಂದೂ ಹೆಸರಾಗಿತ್ತು. ಸಹರಾನ್‌ಪುರದಲ್ಲಿರುವ ಹೆನ್‌ಬಾನ್ ನರ್ಸರಿಯ ಮಾಲೀಕನಾದ್ದ ಕುರ್ಬಾನ್‌ಅಲಿಖಾನ್ ಎಂಬುವನು ಈ ತಾಯಿ ಮರದ ದೊಡ್ಡ ಹಣ್ಣಿನಿಂದ ಆಕರ್ಷಿತನಾದ. ಈ ಮರದ ದೊಡ್ಡ ಗಾತ್ರದ ಹಣ್ಣುಗಳಿಂದಾಗಿ ಈತ ಇದಕ್ಕೆ ಅನೊಖ ಸಾರ

ಎಂಬ ಹೆಸರು ಕೊಟ್ಟು ಇದನ್ನು ತನ್ನ ನರ್ಸರಿಯಲ್ಲಿ ನಾಟಿ ಮಾಡಿದ. ಈಗ ಈ ನರ್ಸರಿಯು ಅನೋಖ್‌ಸಾರ್ಡ್ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಪ್ರಮಾಣದ ಇಳುವರಿ, ಪರ್ಯಾಯ ಫಸಲು ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ ; ಅಲೆಯ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚಾದ ತುದಿ : ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಪ್ರೌಟ್ಸ್‌ಬ್ರೌನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿನ್ನಮಾನ್ ಬ್ರೌನ್, ಇವು ಕ್ರಮೇಣ ಪ್ರೌಟ್ಸ್ ಬಣ್ಣಕ್ಕೆ ತಿರುಗುತ್ತವೆ.

ಹೂಗೊಂಚಲು : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಬಣ್ಣದಲ್ಲಿ ಬ್ರಿಕ್ ರೆಡ್, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡ ದೀರ್ಘಚತುರಸ್ರದಿಂದ ತುಸು ಮೂತ್ರ ಪಿಂಡಾಕಾರ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕೆಳಭುಜ ಮೇಲ್ಭುಜಕ್ಕಿಂತ ಗಾತ್ರದಲ್ಲಿ ದೊಡ್ಡದು, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಊರ್ಧ್ವವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖವಾದ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಾದ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗದ ಬಣ್ಣ ಪ್ರಿಮ್ಯೂಲೈನ್ ಎಲ್ಲೋ ; ಚಿಕ್ಕ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಮೆದುವಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಕ್ಯಾಡ್‌ಮಿಯಮ್ ಎಲ್ಲೋ ; ಅಲ್ಪ ಪ್ರಮಾಣದ ಟರ್‌ಪೆಂಟೈನ್ ಇರುವ ಹಿತಕರ ವಾಸನೆ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ತುಸು ಮೂತ್ರ ಪಿಂಡಾಕಾರ ; ಇದರ ಮೇಲ್ಭಾಗದಲ್ಲಿ ಸಿಬಿಡವಾದ, ಕಠಿಣವಾದ ಮತ್ತು ಮೃದುವಾದ ನಾರು

ಆವರಿಸಿರುತ್ತದೆ ಮತ್ತು ಕೆಳತುದಿಯಲ್ಲಿ ನಾರು ಮಧ್ಯವರ್ತಿ ; ಕವಲೊಡೆದಿರುವ ನಾಳ ಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ: ಗಾತ್ರದಲ್ಲಿ ಮಧ್ಯಮ ; ಮಧ್ಯಕಾಲಿಕ ಫಸಲು ; ಕುಪ್ಪಳಿ ಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಉತ್ತಮ ನಿರೋಧಕತೆ ; ಮಧ ವರ್ತಿ ಶೀಖರಣೆ ಗುಣ ; ಕೀಳು ದರ್ಜೆಯ ಸುಲಿಯುವ ಗುಣ.

ಅನೊಪಾನ್

ಈ ತಳಿಯನ್ನು, ಪಶ್ಚಿಮ ಬಂಗಾಳ ರೈಸ್ ಮಿರ್ಜಾ ಬೇಗಾನ್‌ನಿಂದ ಉತ್ತರ ಪ್ರದೇಶಕ್ಕೆ ತರಲಾಗಿದೆ ಎಂದು ಹೇಳಲಾಗಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಬಗ್ಗೆ ತಿಳಿದುಬಂದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರವಾಗಿ ಬೆಳೆದು ಹೆಚ್ಚು ಇಳುವರಿ ಕೊಡುತ್ತದೆ, ಪರ್ಯಾಯ ವಾರ್ಷಿಕ ಫಸಲು ; ಕಳಸಾಕಾರದ ಮೇಲ್ಭಾಗ, ಗಾತ್ರ ಸಣ್ಣದರಿಂದ ಮಧ್ಯಮದ ಬುಡ ; ಸಣ್ಣಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಚಿಕ್ಕದರಿಂದ ಮಧ್ಯಮ, ನೇರವಾಗಿರುತ್ತವೆ, ನಡು ದಿಂಡಿನ ಮೇಲೆ ಲಘುವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ತುಸು ಮಡ ಚಿರುತ್ತವೆ ; ಲಘುವಾದ ಅಲೆಯ ಅಂಚು ; ಅಸ್ಪಷ್ಟ ನಾಳರಚನೆ ; ಲಘು ಲಂಬಾಗ್ರ ತುದಿ ; ಮೊನಚಾದ ಬುಡ ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಳವಾದ ಕ್ರೈಸೊಲೈಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣ, ಶಂಕಾಕಾರ, ಲೆಟ್ಯೂಸ್‌ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಲಘುವಾಗಿ ಚಪ್ಪಟೆಯಾಗಿ ರುವ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಸಮ ವಾದ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳ ಮತ್ತು ಮೇಲ್ಭುಜ ಗಳು; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡಾದ ತುದಿ ; ಮಧ್ಯಮ ದಪ್ಪದಿಂದ ದಪ್ಪವಾಗಿರುವ ಸಿಪ್ಪೆ, ಪ್ರಿಮ್ಯೂಲೈನ್ ಎಲ್ಲೊ ಬಣ್ಣ ; ಗಟ್ಟಿಯಾದ

ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತದೆ, ಓರ್‌ರಿಕ್ ಎಲ್ಲೊ ಬಣ್ಣ ; ಹಿತಕರ ವಾಸನೆ ; ಓಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಅಂಡಾಕಾರ ; ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಆವರಿಸಿರುತ್ತದೆ ಮತ್ತು ಕೆಳ ಅಂಚಿನಲ್ಲಿ ಮಧ್ಯವರ್ತಿ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಅಧಿಕ ಇಳುವರಿ, ಮಧ್ಯಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕ ; ಮಧ್ಯಮ ಶೇಖರಣೆ ಗುಣ ; ಉತ್ತಮವಾದ ಸುಲಿಯುವ ಗುಣ.

ಅನೊರ

ಈ ತಳಿಯ ಮೂಲಸ್ಥಾನ, ವ್ಯಾಪ್ತಿಯ ಬಗ್ಗೆ ಹೆಚ್ಚಿನ ವಿವರಗಳು ಖಚಿತವಾಗಿ ತಿಳಿದುಬಂದಿಲ್ಲ. ಇದು ಉತ್ತರ ಪ್ರದೇಶದ ಷಹರಾನ್‌ಪುರದ ಹತ್ತಿರವಿರುವ ಕೈಲಾಸಪುರದ ಮಾಗಸೊ ಅಲಿಖಾನರ ತೋಟದಲ್ಲಿ ಆಕಸ್ಮಿಕ ಸಸಿಯಾಗಿ ದೊರೆತಿರುವುದಾಗಿ ತಿಳಿದುಬಂದಿದೆ.

ಈ ತಳಿಯ ಹಣ್ಣು ಅಷ್ಟೇನೂ ಉತ್ತಮ ಗುಣಗಳನ್ನು ಹೊಂದಿಲ್ಲದ ಕಾರಣ ಇದನ್ನು ಜನಪ್ರಿಯಗೊಳಿಸುವ ವಿಶೇಷ ಪ್ರಯತ್ನ ಅಗತ್ಯವಿಲ್ಲ. ಇದರ ಕೇವಲ ಒಂದು ಆಕರ್ಷಕ ಗುಣವೆಂದರೆ ಇದರ ದೊಡ್ಡ ಗಾತ್ರದ ಹಣ್ಣು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಪರಿಮಾಣದ ಇಳುವರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ, ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ತುಸು ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ತುಸು ಮಡಚಿರುತ್ತವೆ, ಸ್ವಲ್ಪ ಸುಕ್ಕಾಗಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳರಚನೆ; ಮೊನಚಾದ ತುದಿ ; ಮೊನಚಾದ ಬುಡ ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ವೆರೊನಾ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ರಿಮೂಲೈನ್ ಯೆಲ್ಲೊ ಬಣ್ಣ, ಸಾಧಾರಣವಾದ ಮೃದುತುಪ್ಪಳು; ಅಸಮವಾದ ಕೇಸರಗಳು, ಇವು ಗಾತ್ರದಲ್ಲಿ ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ತುಸು ಮೂತ್ರಪಿಂಡಾಕಾರ ; ಓರೆಯಾಗಿ ಗುಂಡಾದ ಬುಡ ; ತೊಟ್ಟು ಓರೆಯಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ; ಅಸಮವಾದ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ವಿಶಾಲ,ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಇಳಿಜಾರು; ನಿರ್ದಿಷ್ಟದಿಂದ ತುಸು ಪ್ರಮುಖವಾಗಿರುವ ಕೊಕ್ಕು ; ಹೆಚ್ಚು ಆಳವಿಲ್ಲದ ಕೊಕ್ಕಳು; ತುದಿ ಗುಂಡಾಗಿರುತ್ತದೆ ; ಸಾಧಾರಣದಿಂದ ದಪ್ಪವಾಗಿರುವ ಸಿಪ್ಪೆ, ಸಯಿಂದ ಒರಟಾಗಿರುವ ಸಿಪ್ಪೆಯ ಮೇಲ್ಭಾಗದ ಬಣ್ಣ ಲೆಟ್ಯೂಸ್ ಗ್ರೀನ್ ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಗಟ್ಟಿಯಾದ ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತದೆ, ಪ್ರಿಮೂಲೈನ್ ಎಲ್ಲೊ ಬಣ್ಣ ; ಹಿತಕರವಾದ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪ್ರಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು ; ಇದರ ಮೇಲ್ಭಾಗದಲ್ಲೆಲ್ಲಾ ಸಿಬಿಡವಾದ, ಉದ್ದದಲ್ಲಿ ಕುಳ್ಳಿಸಿಂದ ಮಧ್ಯಮವಾಗಿರುವ ನಾರು ಆವರಿಸಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಕೀಳು ; ಮಧ್ಯಮ ಪರಿಮಾಣದ ಫಸಲು, ಮಧ್ಯಕಾಲಿಕ ಫಲ ; ಗಾಳಿಗೆ ಸಾಧಾರಣ ಸಿರೋಧಕತೆ ; ಕೀಳು ದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಅಸ್‌ರುಫ್-ಉಸ್-ಸಮಾರ್

ಈ ತಳಿಯು ಹೈದರಾಬಾದ್ (ಡೆಕ್ಕನ್) ಪ್ರದೇಶದಲ್ಲಿ ಹೆಚ್ಚಿನ ಬೇಸಾಯದಲ್ಲಿ ಇದೆ. ಇದರ ಮೂಲಸ್ಥಾನದ ಇತಿಹಾಸ ಮತ್ತು ವ್ಯಾಪ್ತಿಯ ಬಗ್ಗೆ ಹೆಚ್ಚಿನ ವಿಷಯ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ಶೇಖರಣೆ ಗುಣದಿಂದ ಕೂಡಿರುವುದರಿಂದ ಹೆಚ್ಚಿನ ಜನಪ್ರಿಯತೆ ಗಳಿಸಿದೆ.

ಮರ : ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಇಳುವರಿಯಲ್ಲಿ ಮಧ್ಯಮ, ಪ್ರತಿವರ್ಷ ಫಲ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ತುಸು ಅಲೆ ಅಂಚು ; ಸಾಧಾರಣದಿಂದ ಪ್ರಮುಖವಾಗಿರುವ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳು ಡ್ರೆಸ್‌ಡೆನ್ ಬ್ರೌನ್ ಮತ್ತು ಬೆಳೆಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿನ್ನೆಮಾನ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಶಂಕಾಕಾರ, ಬಣ್ಣದಲ್ಲಿ ಟನಿಅಲಿವ್, ಸಾಧಾರಣ ಮೃದುತುಪ್ಪಳ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರದಿಂದ ಹಿಡಿದು ಅಂಡ ಗುಂಡಾಕಾರ ; ಗುಂಡಾದ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿಯಿಲ್ಲ ; ಅಸಮವಾದ ಭುಜಗಳು, ಒಂದೇ ಮಟ್ಟದಲ್ಲಿ ಇರುತ್ತವೆ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಚಿಕ್ಕ ಕೊಕ್ಕು ; ಹೊಕ್ಕಳು ಸ್ವಲ್ಪ ಇಲ್ಲವೇ ಇರುವುದಿಲ್ಲ ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗ, ಬಣ್ಣ ಪ್ರಿಮುಲೈನ್ ಎಲ್ಲೋ ; ಸಣ್ಣ ಚುಕ್ಕೆಗಳು, ನಿಬಿಡವಾಗಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಮುಸುಕಿನ ಜೋಳದ ಹಳದಿ ; ಹಿತಕರದಿಂದ ಅಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ; ಕುಳ್ಳಾದ ನಿಬಿಡವಾದ ಮತ್ತು ಮೃದುವಾದ ನಾರು ಇದರ ಎಲ್ಲಾ ಭಾಗದಲ್ಲಿ ಆವರಿಸಿರುತ್ತದೆ, ಕೆಳಅಂಚಿನಲ್ಲಿ ನಾರಿನ ಪ್ರಮಾಣದ ಮಧ್ಯಮ ; ಕವಲೊಡೆದಿರುವ ನಾಳಗಳು ತುಸು ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮದಿಂದ ಉತ್ತಮ ; ಮಧ್ಯಕಾಲಿಕ ಫಸಲು ; ಗಾಳಿಗೆ ಮತ್ತು ಕೀಟಗಳಿಗೆ ಉತ್ತಮ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಅಸೋಜಿಯ

ಹಿಂದೂ ಪಂಚಾಂಗದ ಪ್ರಕಾರ 'ಅಸು' ಎಂದರೆ ಆಗಸ್ಟ್-ಸೆಪ್ಟಂಬರ್ ತಿಂಗಳು, 'ಜಿಯ' ಎಂದರೆ ಹಣ್ಣು ಬಿಡುವುದು ಎಂದು ಅರ್ಥ. ಈ ತಳಿಯು ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ಹಣ್ಣು ಬಿಡುವುದರಿಂದ ಅಸೋಜಿಯ ಎಂಬ ಹೆಸರು ಬಂದಿದೆ. ಇದರ ಮೂಲಸ್ಥಾನದ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬಂದಿಲ್ಲ. ಇದರ ಬೇಸಾಯ ಉತ್ತರಪ್ರದೇಶಕ್ಕೆ ಸೀಮಿತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ಫಲಕಾರಿ, ಪ್ರತಿವರ್ಷ ಫಲ ; ಗುಂಡು ಅಥವಾ ಗುಮ್ಮಟಾಕಾರದ ಮೇಲ್ಭಾಗ ; ಮಧ್ಯಮ ಅಥವಾ ಸಣ್ಣ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ದೀರ್ಘವೃತ್ತ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಮೊನಚಾದ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಲೈಟ್ ಗ್ರೀನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳು ಎಲ್ಲೊಯಿಷ್ ಸಿಟ್ರೈನ್, ಅನಂತರ ಕ್ರೈಸೋಲೈಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಎಟ್ರುಸ್ಕಾನ್ ರೆಡ್, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ, ಮೊಟ್ಟೆಯಾಕಾರ ; ಗುಂಡಾಗಿರುವ ಬುಡ ಮತ್ತು ತುಸು ಮುಂದುವರಿದಿರುತ್ತದೆ ; ತೊಟ್ಟು ಜಚ್ಚ್ಯಾಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳಭುಜ ಮೇಲ್ಭುಜಕ್ಕಿಂತ ಉದ್ದವಾದ ಜೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು; ಗುಂಡಾಗಿರುವ ತುದಿ ; ಮಧ್ಯಮ ದಪ್ಪವಾಗಿರುವ ಸಿಪ್ಪೆ, ನಯವಾದ ಮೇಲ್ಭಾಗ ಮತ್ತು ಕೊಸ್ಸೆಗ್ರೀನ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತದೆ ಮತ್ತು ಸಿಪ್ಪೆಯಲ್ಲಿ

ಆಳವಾಗಿರುತ್ತದೆ ; ಗಟ್ಟಿಯಿಂದ ಮೃದುವಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಎಂಪೈರ್ ಯೆಲ್ಲೊ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಎಲ್ಲಾ ಭಾಗದಲ್ಲಿ ಹೆಚ್ಚಾದ, ತುಂಡಾದ ಮೃದು ನಾರು ಆವರಿಸಿರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ ಆದರೆ ಹೆಚ್ಚು ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಅತಿಮಧುರಂ

ಈ ತಳಿ ಆಂಧ್ರಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಬಗ್ಗೆ ವಿವರಗಳು ತಿಳಿದಿಲ್ಲ. ಈ ತಳಿಯ ಹಣ್ಣು ಬಹಳ ಸಿಹಿಯಾಗಿರುವ ಉತ್ತಮ ಗುಣದಿಂದ ಕೂಡಿರುವುದರಿಂದ ಪ್ರಖ್ಯಾತಿಯನ್ನು ಗಳಿಸಿದೆ. ಇದು ಮನೆಗಳ ಪಕ್ಕದಲ್ಲಿ ಬೆಳೆಸಲು ಬಹಳ ಸೂಕ್ತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ ; ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ತುಸು ಹಿಂಬಾಗಿರುತ್ತವೆ, ಅಂಡ ವೃತ್ತಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನಯವಾದ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಎಲೆಗಳ ಬಣ್ಣ ಕ್ಯಾಡ್ ಮಿಯಮ್ ಆರೆಂಜ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಪಂಪೈಕ್ ರೆಡ್, ಇವು ಅನಂತರ ಬಫ್ಫಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಅಸಮವಾದ ಕೇಸರಗಳು ಅಂಡಾಶಯ

ಕ್ಕಿಂತ ಚಿಕ್ಕವು ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರ ; ಬುಡ ಸ್ವಲ್ಪ ಚಪ್ಪಟೆಯಾಗಿರುತ್ತದೆ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಹೆಚ್ಚು ಆಳವಿಲ್ಲದ ಕುಳಿ : ಸಮವಾದ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಲವು ಸಾರಿ ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಎರಡು ಭುಜಗಳು ಗುಂಡಾಗಿರುತ್ತವೆ : ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕೊಕ್ಕಳು : ತುದಿ ಗುಂಡಾಗಿರುತ್ತದೆ ; ಸಿಪ್ಪೆ ಮಧ್ಯಮ ದಪ್ಪ, ಒರಟಿನಿಂದ ಗಂಟುಯುತ, ಟಾ-ವಿಂಗ್ ಬಣ್ಣ ; ಒತ್ತಾಗಿರುವ ಸಣ್ಣ ಚುಕ್ಕೆಗಳು, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತದೆ, ಬಣ್ಣ ಲಘುವಾದ ಸಾಲ್‌ಮನ್ ಆರೆಂಜ್ ; ಹಿತಕರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಎಲ್ಲಾ ಭಾಗದ ಮೇಲೆ ಕುಳ್ಳಾದ, ಮೃದುವಾದ ನಾರು ಮತ್ತು ಕೆಳತುದಿಯಲ್ಲಿ ಮಧ್ಯಮ ನಾರು ಇರುತ್ತದೆ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಸಾಧಾರಣ ಫಸಲು ; ಮಧ್ಯಕಾಲಿಕ; ಕುಪ್ಪಳಿಸುವ ಕೀಟಗಳಿಗೆ ಸುಲಭವಾಗಿ ತುತ್ತಾಗುತ್ತವೆ, ಗಾಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಅಜೀಜ್ ಪಸಂದ್

ಈ ತಳಿಯು ಉತ್ತರ ಪ್ರದೇಶದ ಮಾಲಿಹಬಾದ್‌ನ ಕೇವಲ್‌ಖಾನ್ ಮೊಹಲ್ಲಾದ ಹಸನ್‌ಯಾರ್‌ಖಾನ್‌ರ ತೋಟದಲ್ಲಿ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ. ಹಸನ್‌ಯಾರ್‌ಖಾನ್, ಸ್ವತಃ ತೋಟಗಾರಿಕೆಯಲ್ಲಿ ಆಸಕ್ತಿಯುಳ್ಳವನಲ್ಲ, ಆದರೆ ಈತನ ಮಕ್ಕಳಲ್ಲಿ ತೋಟಗಾರಿಕೆಯಲ್ಲಿ ಉತ್ಸಾಹಶಾಲಿಯಾದ ಒಬ್ಬನು ಇದನ್ನು ವೃದ್ಧಿಮಾಡಿ ತನ್ನ ಹೆಸರನ್ನು ಕೊಟ್ಟಿದ್ದಾನೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪಾದನಾಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ದಪ್ಪ ಅಥವಾ ಮಧ್ಯಮ ಗಾತ್ರದ ಬುಡ ; ರೆಂಬೆಗಳು ಮಧ್ಯಮ ದಪ್ಪ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಅಂಡ ಭರ್ಜಿಯಾಕಾರ, ಪ್ಪಟೆ ; ಸ್ವಲ್ಪ ಅಲೆಯಂತಿರುವ ಅಂಚು ; ಸಾಧಾರಣ ಪ್ರಮುಖವಾದ ನಾಳ ತನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಮತ್ತು ರಿಯುತ್ತಿರುವ ಎಳೆಯ ಎಲೆಗಳು ಲೆಟ್ಯೂಸ್ ಬಣ್ಣ, ಇವು ಕ್ರಮೇಣ ಎಕ್ರೂ ಆಲಿವ ಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಸ್ಪಿನೆಲ್‌ರೆಡ್, ಸಾಧಾ ಣ ಮೃದುತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು, ಅದಕ್ಕೆ ರಿಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಗುಂಡಾಗಿರುವ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಗಾತ್ರದಲ್ಲಿ ಸಮವಾಗಿರುವ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಅಥವಾ ಇಲ್ಲದ ಕೊಕ್ಕು ; ಸ್ವಲ್ಪ ಅಥವಾ ಇಲ್ಲದ ಹೊಕ್ಕಳು ; ಗುಂಡಾಗಿರುವ ತುದಿ ; ದಪ್ಪವಾದ ಸಿಪ್ಪೆ, ನಯ, ಬಣ್ಣದಲ್ಲಿ ಹೊಂಬಣ್ಣದ ಹೊಳಪು ; ಸಣ್ಣ ಗಾತ್ರದ ಚುಕ್ಕೆ ಗಳು, ಸಾಧಾರಣವಾದ ದೂರದಲ್ಲಿರುತ್ತವೆ, ಮೇಲಂಚಿನಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರಿನಿಂದ ಕೂಡಿರುವುದಿಲ್ಲ, ಬಣ್ಣ ತಿಳಿ ಕ್ಯಾಡ್‌ಮಿಯಮ್ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಕುಳ್ಳಾದ ನಾರು, ನಿಬಿಡವಾಗಿ ಎಲ್ಲಾ ಭಾಗವನ್ನೂ ಆವರಿಸಿರುತ್ತದೆ ; ಕವಲೊಡೆ ದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಅತ್ಯುತ್ತಮ ಶೇಖರಣೆ, ಮತ್ತು ಸಾಗಿಸುವ ಗುಣ.

ಅಬುವಸ್-ಉಸ್-ಸವರ್

ಈ ತಳಿಯು ಹೈದರಾಬಾದ್ (ಡೆಕ್ಕನ್) ಪ್ರದೇಶದಲ್ಲಿ ಹೆಚ್ಚಿನ ಬಳಕೆಯಲ್ಲಿದೆ. ಇದರ ಮೂಲಸ್ಥಾನ ಮತ್ತು ವ್ಯಾಪ್ತಿಯ ಇತಿಹಾಸ ತಿಳಿದಿಲ್ಲ. ಹಣ್ಣು ಉತ್ತಮ ದರ್ಜೆಯದು ಮತ್ತು ಮನೆಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯವಾಗಿದೆ.

ಮರ : ಮಧ್ಯಮ ಗಾತ್ರ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಪ್ರಮಾಣದ ಇಳುವರಿ, ಪ್ರತಿವರ್ಷ ಫಲಬಿಡುತ್ತದೆ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಕಿರಿದಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ದೀರ್ಘಚತುರಸ್ರ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡಾದ ಬುಡ : ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳು ಆಳ ಕ್ರೈಸೊಲೈಟ್ ಗ್ರೀನ್ ಬಣ್ಣ, ಅನಂತರ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಬ್‌ಸಿನ್ತೆ ಗ್ರೀನ್ ಬಣ್ಣ, ಸುಮಾರು ಪ್ರಮುಖವಾಗಿರುತ್ತವೆ ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ತುಸು ಮೂತ್ರಪಿಂಡಾಕಾರ ; ಬುಡ ಗುಂಡು ; ತೊಟ್ಟು ಓರೆಯಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಧಾನ ಅಥವಾ ಮೊಲೆತೊಟ್ಟಿನಾಕಾರದ ಕೊಕ್ಕು ; ಹೆಚ್ಚು ಆಳವಿಲ್ಲದ ಅಥವಾ ಆಳವಾಗಿರುವ ಕೊಕ್ಕಗಳು ; ಗುಂಡಾದ ತುದಿ : ಸಿಪ್ಪೆ ಮಧ್ಯಮ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬಣ್ಣ ಏಪ್ರಿಕಾಟ್ ಯಲ್ಲೊ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಎಲ್ಲಾ ಭಾಗದಲ್ಲಿ ತುಂಡಾದ ರೋಮಗಳಿರುತ್ತವೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಮಕಾಲಿಕ ಫಸಲು ; ಗಾಳಿ ಮತ್ತು ಕಪ್ಪುಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸಿಪ್ಪೆ ಸುಲಿಯುವ ಗುಣ.

ಬಾಗಲ್ ಸಹಯ್

ಈ ತಳಿಯನ್ನು ಕಾಸಿರು ಸಾಮೆಶ್ ಎಂದು ಕರೆಯುವುದುಂಟು. ಇದು ಬಂಗಾಳ ರಾಜ್ಯದ ಮುರ್ಷಿದಾಬಾದ್‌ನ ಮೂಲವಾಸಿ. ಇದನ್ನು ಉತ್ತರ ಪ್ರದೇಶದ ಮಾಲಿಹಬಾದ್‌ನಲ್ಲಿರುವ ಸಫ್‌ದಾರ್ ನರ್ಸರಿಗೆ ತಂದಿದ್ದು, ಈಗ ಉತ್ತರ ಪ್ರದೇಶಕ್ಕೆ ಹಂಚುವ ಮುಖ್ಯ ಕೇಂದ್ರವಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದಿಲ್ಲ. ಈ ತಳಿಯು ಪ್ರತಿಯೊಂದು ಮಾವಿನ ತೋಟದಲ್ಲಿ ನೆಡಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಪ್ರತಿ ವರ್ಷ ಫಲಕಾರಿ ; ಗುಮ್ಮಟಾಕಾರದ ಮೇಲ್ಭಾಗ ; ದಪ್ಪ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ ; ನಯವಾದ ಅಂಚು, ಕೆಲವು ಸಾರಿ ತಿರುಚುವ ಮತ್ತು ಸುಕ್ಕಾಗಿರುವ ಪ್ರವೃತ್ತಿ ; ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಮೊನಚು ತುದಿ ; ಗುಂಡು ಬುಡ ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ವಿರಿಡೈನ್ ಗ್ರೀನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಇವು ಕ್ರಮೇಣ ಕೊರ್ಜ್‌ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಓಲ್ಡ್ ರೋಸ್ ಬಣ್ಣ, ಸಾಧಾರಣವಾದ ಮೃದು ತುಪ್ಪುಳು ; ಅಂಡಾಶಯಕ್ಕಿಂತ ದೊಡ್ಡದಾಗಿರುವ ಕೇಸರ ಗಳು ಅದಕ್ಕೆ ಓರೆಯಾಗಿರುತ್ತವೆ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರು ವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ ; ದೀರ್ಘ ಚತುರಸ್ರ ತುಸು ಮೂತ್ರ ಪಿಂಡಾಕಾರ ; ಗುಂಡಿನಿಂದ ಓರೆ ಚಪ್ಪಟೆಯಾಗಿರುವ ಬುಡ ; ಓರೆಯಾಗಿ ಸೇರಿರುವ

ತೊಟ್ಟು ; ಸ್ವಲ್ಪ ಅಥವಾ ಇಲ್ಲದೆ ಇರುವ ಕುಳಿ ; ಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯ ತ್ತದೆ ; ಇಲ್ಲದಿರುವ ಅಥವಾ ಬಿಂದುವಿನಲ್ಲಿರುವ ಕೊಕ್ಕು; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ದಪ್ಪವಾದ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಸಣ್ಣ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಎಂಪೈರ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ: ಗಾತ್ರದಲ್ಲಿ ದೊಡ್ಡದು, ದೀರ್ಘ ಚತುರಸ್ರ; ಇದರ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಆವರಿಸಿರುತ್ತದೆ ; ಸಮಾನಾಂತರ ನಾಳಗಳು ಟೊಳ್ಳಾಗಿರುತ್ತವೆ.

ಹಣ್ಣಿನ ದರ್ಜೆ: ದರ್ಜೆಯಲ್ಲಿ ಹೆಚ್ಚು ಉತ್ತಮ ; ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಬೆಂಗಳೂರಾ

ಇದು ದಕ್ಷಿಣ ಭಾರತದ ಒಂದು ವಾಣಿಜ್ಯ ತಳಿ. ಬೆಂಗಳೂರಾ ಎಂಬ ಹೆಸರು ಬೆಂಗಳೂರಿಗೆ ಸಂಬಂಧಿಸಿದೆ. ಈ ಹಣ್ಣನ್ನು ತೋತಾಪುರಿ ಎಂದು ಕರೆಯುವುದು ವಿಚಿತ್ರವಾದ ಸಂಗತಿ. ಕಲ್ಲಾಮಯಿ, ತವಡಿಯಾ ಮೂತಿ (ತಮಿಳುನಾಡು ಜಿಲ್ಲೆಗಳಲ್ಲಿ), ಕಲೆಕ್ಟರ್ (ಸಿರ್‌ಕಾರ್‌ನಲ್ಲಿ) ಮತ್ತು ತೋತಾಪುರಿ, ಸುಂದರಾಶಾ, ಬುರ್‌ಮೊಡಿಲ್ಲಾ, ಕಿಳಿಮುಕ್ಕು ಮತ್ತು ಗಿಳಿಮೂಗು ಮುಂತಾದ ಹಲವು ಹೆಸರುಗಳಿಂದ ಕರೆಯುತ್ತಾರೆ. ಮೇಲ್ಕಂಡ ಹೆಸರುಗಳು ಈ ತಳಿಯ ಹಣ್ಣಿನ ಲಕ್ಷಣಗಳಿಂದ ಉದ್ಭವಿಸಿವೆ. ತಮಿಳು ಭಾಷೆಯಲ್ಲಿ ಕಲ್ ಎಂದರೆ 'ಕಲ್ಲು', ಅಮಯ ಎಂದರೆ 'ಹಾಗೆ ಇರುವ' ಎಂದು ಅರ್ಥ, ಈ ತಳಿಯ ಹಣ್ಣು ಗಟ್ಟಿಯಾಗಿರುವುದರಿಂದ ಕಲ್ಲಾಮಯ ಎಂಬ ಹೆಸರು ಬಂದಿದೆ, ಈ ತಳಿಯ ಹಣ್ಣಿನ ಕೊಕ್ಕು ಮೊನಚಾಗಿ ಉದ್ದವಾದ, ಗಿಳಿಯಂತಹ ಕೊಕ್ಕಿನಿಂದ ಕೂಡಿರುವುದರಿಂದ ಇದಕ್ಕೆ ತೋತಾಪುರಿ ಎಂಬ ಹೆಸರು ಬಂದಿದೆ. ತಮಿಳಿನಲ್ಲಿ ತವಡಿ ಎಂದರೆ ವೇಶ್ಯೆ, ಮೂತಿ ಎಂದರೆ ಮುಖ ಎಂದು ಅರ್ಥ; ಈ ಹಣ್ಣು

ಸುಂದರವಾಗಿರುವುದರಿಂದ ತೆವಡಿಯಾ ಮೂತಿ ಎಂಬ ಹೆಸರು ಬಂದಿದೆ. ಕೋತಾಪುರಿ ಮಾವಿನ ಹಣ್ಣು ಆಕರ್ಷಕ ಬಣ್ಣದಿಂದ ಕೂಡಿದೆ. ತಿರುಳಿನ ಬಣ್ಣ ಕ್ರಿಮ್‌ಸನ್ ರೆಡ್, ಇದರ ಭುಜಗಳ ಮೇಲೆ ಹಳದಿ ಬಣ್ಣದ ಹಿನ್ನೆಲೆ ಇರುವುದರಿಂದ ಸುಂದರವಾಗಿ ಕಾಣುತ್ತದೆ. ಈ ತಳಿಯನ್ನು ಉಷ್ಣವಲಯದ ಅಮೇರಿಕಾ ದೇಶದಿಂದ ತರಲಾಗಿದ್ದು, ಇಲ್ಲಿ ಇದು ಜನಪ್ರಿಯತೆಯನ್ನು ಗಳಿಸಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಹಿಡಿದು ಸಾಧಾರಣ ಕಸುವಿನ ವರೆಗೆ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ತುಸು ಹಿಂಭಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳ ರಚನೆ; ಮೊನಚು ತುದಿ ; ಗುಂಡು ಬುಡ; ಹೊರ ಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲೆಬೋರ್ ಗ್ರೀನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳು ಆರೆಂಜ್ ಸಿಟ್ರೈನ್, ಇವು ಅನಂತರ ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೋರಲ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಕುತ್ತಿಗೆಯ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಕುಳಿ ಇರುವುದಿಲ್ಲ ; ಭುಜಗಳು ಸಮ ಮತ್ತು ಒಂದೇ ಎತ್ತರದಲ್ಲಿ ಇರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೇಲ್ಭುಜದ ಇಳಿಜಾರು ತಟಕ್ಕನೆ ಮುಗಿದು ಹೋಗುತ್ತದೆ ; ಪ್ರಮುಖವಾಗಿರುವ ಕೊಕ್ಕು, ಹೊರಬಾಗಿರುತ್ತದೆ ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಹೆಚ್ಚು ಆಳವಿಲ್ಲದ ಹೊಕ್ಕಳು ; ದಪ್ಪವಾದ ಸಿಪ್ಪೆ,ಕೆಂಗಂದು ಕಾಂತಿಯುತ ಗೋಲ್ಡನ್ ಕಾರ್ನ್ ಬಣ್ಣ ; ನಯ ; ಮಧ್ಯಮ ಗಾತ್ರದ ಚುಕ್ಕೆಗಳು, ನಿಬಿಡವಾಗಿರುತ್ತವೆ ; ಮೇಲ್ಭಾಗದಿಂದ ಹೊರಬಂದಿರುತ್ತವೆ, ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ ; ಮಸ್ಟರ್ಡ್ ಯೆಲ್ಲೋ ಬಣ್ಣ ; ಸ್ವಲ್ಪ ಹುಳಿ ವಾಸನೆ ; ಸಪ್ಪೆಯಿಂದ ಸಾಧಾರಣ ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ; ಇದರ ಎಲ್ಲಾ ಭಾಗದಲ್ಲಿ ಮೃದುವಾದ ನಾರ ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಕೀಳಿನಿಂದ ಮಧ್ಯಮ ದರ್ಜೆ ; ಅಧಿಕ ಫಸಲು ಮಧ್ಯಕಾಲಿಕ ಫಲ ; ಗಾಳಿ ಪುತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಹೆಚ್ಚು ಉತ್ತಮವಾದ ಶೇಖರಣೆ ಗುಣ, ಮಧ್ಯಮ ಸುಲಿಯುವ ಗುಣ.

ಬಂಗನ್‌ಪಲ್ಲಿ

ಇದು ತಮಿಳುನಾಡಿನಲ್ಲಿ ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿರುವ ತಳಿ. ಇದರ ಮೂಲಸ್ಥಾನದ ಬಗ್ಗೆ ಹೆಚ್ಚು ತಿಳಿದಿಲ್ಲ. ಇದುವರೆಗೆ ನಮೂದಿಸಿರುವ ಅಂಕಿ ಅಂಶಗಳಂತೆ ಇದು ಎಲ್ಲಾ ಶುಷ್ಕ ವಾತಾವರಣದಲ್ಲೂ ಚೆನ್ನಾಗಿ ಬೆಳೆಯುತ್ತದೆ. ಶೀತ ಪ್ರದೇಶದಲ್ಲಿ ಅಷ್ಟು ಉತ್ತೇಜಕವಾಗಿಲ್ಲ. ಈ ತಳಿಯನ್ನು ಪರಿಮಿತ ಪ್ರಮಾಣದಲ್ಲಾದರೂ ಭಾರತದ ಬಹುತೇಕ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ.

ಉತ್ತರ ಭಾರತದಲ್ಲಿ ಇದಕ್ಕೆ ಚಪ್ತಾ, ಸಫೇದ ಎಂದೂ, ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಬಾನೆಷಾನ್ ಎಂತಲೂ, ಈ ತಳಿಯ ಹಣ್ಣು ಚಪ್ಪಟೆಯಾಗಿರುವುದರಿಂದ ಚಪ್ಟಾಯ್ ಎಂಬ ಹೆಸರಿನಿಂದಲೂ ಬಳಕೆಯಲ್ಲಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ, ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು ; ಸಾಧಾರಣ ಪ್ರಮುಖವಾದ ನಾಳರಚನೆ ; ಮೊನಚು ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಕೋರ್ಜ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಪೈರೈಟ್ ಯೆಲ್ಲೊ, ಅನಂತರ ಇವು ಆಲಿವ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಆಯಿಲ್

ಸಮಾನಾಂತರ ; ಬಂಡೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಓರೆ ಹೊಟ್ಟೆಯಾಕಾರ ; ಓರೆ ಚಪ್ಪಟೆಯಾಗಿರುವ ಬುಡ ; ಸ್ವಲ್ಪ ಓರೆಯಾಗಿ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ; ಎತ್ತರವಾಗಿರುತ್ತದೆ, ಕೆಳಭುಜ ಗಮನಾರ್ಹವಾಗಿ ಅಗಲವಾಗಿದ್ದು ಮೇಲ್ಭುಜಕ್ಕಿಂತ ಎತ್ತರವಾಗಿರುತ್ತದೆ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಿಂದ ಇಲ್ಲದಿರುವ ಕೊಕ್ಕು ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಹೆಚ್ಚು ಆಳವಿಲ್ಲದ ಕೊಕ್ಕಳು ; ತೆಳು ಸಿಪ್ಪೆ, ನಯವಾದ ಮೇಲ್ಭಾಗ ಹೊಳಪು, ಬಣ್ಣ ಹೊಂಬಣ್ಣದ ಹೊಳಪು: ಮಧ್ಯಮ ಗಾತ್ರದ ಚುಕ್ಕೆಗಳು,ದೂರವಾಗಿರುತ್ತವೆ, ಸಿಪ್ಪೆಯಲ್ಲಿ ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ಮಾಸದಂತಿರುವ ತಿರುಳು, ನಾರು ಇರುವುದಿಲ್ಲ, ಬಣ್ಣ ವ್ಯಾಜ್ ಎಲ್ಲೊ ; ಹಿತಕರದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕಡಮೆ ಪರಿಮಾಣದ ಮೃದು ನಾರು ಆವರಿಸಿರುತ್ತದೆ ; ಕವಲೊಡೆದ ನಾಳಗಳು ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮವಾದ ದರ್ಜೆ ; ಅಧಿಕ ಫಸಲು, ಮಧ್ಯಕಾಲದಲ್ಲಿ ಫಲ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಬಂಕಾ

ಈ ತಳಿಯನ್ನು ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಆಯ್ಕೆ ಮಾಡಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಬಗ್ಗೆ ವಿವರಗಳು ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿರುವುದರಿಂದ ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರದಿಂದ ಹರಡುವ ಗುಣ ; ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾಕಾರದಿಂದ

ಗೋಪುರಾಕಾರದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ; ಮಧ್ಯಮ ಗಾತ್ರದ ರೆಂಬೆ.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು; ಸಾಧಾರಣ ಪ್ರಮುಖವಾದ ನಾಳರಚನೆ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಕೋರಲ್ ಪಿಂಕ್, ಬಲಿಯು ತ್ತಿರುವ ಎಳೆಯ ಎಲೆಗಳ ಬಣ್ಣ ಕೋಬ್ರಾ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ,ಬಣ್ಣ ಪ್ರಷ್ಯನ್‌ರೆಡ್, ಕಡಮೆ ಮೃದುತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿ ರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಗುಂಡು ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಗುಂಡಾ ಗಿರುವ ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಿಂದ ಗುಂಡಾಗಿರುವ ತುದಿ ; ಮಧ್ಯಮ ದಪ್ಪದಿಂದ ದಪ್ಪವಾಗಿರುವ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಆಳ ವಾದ ಕ್ರೋಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರು ತ್ತವೆ ; ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ನಾರು ಇರು ವುದಿಲ್ಲ, ಬಣ್ಣ ಪ್ರಿಮ್ಯೂಲೈನ್ ಯೆಲ್ಲೊ ; ಹಿತಕರವಾದ ವಾಸನೆ ; ಸಾಧಾರಣ ಸಿಹಿ ಯಾದ ರುಚಿ ; ಸಾಧಾರಣ ಪರಿಮಾಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಸ್ವಲ್ಪ ಮೂತ್ರಪಿಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕಡಮೆ ಪರಿಮಾಣದಲ್ಲಿ ಮೃದುವಾದ ನಾರು ಆವರಿಸಿರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪ ಉಬ್ಬಿರು ತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಲ ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಯನ್ನೂ ಚೆನ್ನಾಗಿ ತಡೆದುಕೊಳ್ಳಬಲ್ಲದು ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಬನ್ ಸೊಡ್

ಈ ತಳಿಯನ್ನು, ಪೂನಾ ಹತ್ತಿರ ಇರುವ ಕಿರ್ಕಿ ಸರ್ಕಾರಿ ಹಣ್ಣು ಸಂಶೋಧನಾ ಕೇಂದ್ರದಲ್ಲಿ ಆಯ್ಕೆ ಮಾಡಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿದೆ. ಆದ್ದರಿಂದ ಇದನ್ನು ಜನಪ್ರಿಯಗೊಳಿಸಬೇಕಾದ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ; ಮಧ್ಯಮದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪದಿಂದ ದೃಢವಾಗಿ ಮಡಚಿರುತ್ತವೆ, ಅಂಚು ನಯದಿಂದ ತಿರುಚಿರುವ ಪ್ರವೃತ್ತಿ; ಪ್ರಮುಖವಾಗಿರುವ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ : ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಕ್ರೈಸೊಲೈಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳು ಕೈಸೊರ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬ್ರಿಕ್‌ರೆಡ್ (ಇಟ್ಟಿಗೆ ಗೆಂಪು) ಬಣ್ಣ, ಸಾಧಾರಣದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಅಂಡದೀರ್ಘಚತುರಸ್ರದಿಂದ ಮೊಟ್ಟೆಯಾಕಾರ ; ಸ್ವಲ್ಪ ಚಪ್ಪಟೆಯಾಗಿರುವ ಬುಡ ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಸಮವಾದ ಭುಜಗಳು ಒಂದೇ ಕೊಂಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಸಾಧಾರಣವಾದ ಡೆನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ;

ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ಹೊಕ್ಕಳು ; ವಿಶಾಲವಾದ ಬಿಂದುವಿನಲ್ಲಿ ಇರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಹೊಂಬಣ್ಣದ ಹೊಳಪು ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿ ಇರುತ್ತವೆ, ಇವು ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಹೆಚ್ಚು ಹಿತವಲ್ಲದ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ ಕುಳ್ಳಾದ ಮೃದುವಾದ ನಾರು ಇರುತ್ತದೆ, ಕೆಳಗಿನ ಅಂಚಿನಲ್ಲಿ ನಾರಿನ ಪರಿಮಾಣ ಮಧ್ಯಮ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಲ ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಬಾರಾಮಾಸಿಯ

ಈ ತಳಿಯು ವರ್ಷದಲ್ಲಿ ಎರಡು ಸಾರಿ ಫಲ ಕೊಡುವುದರಿಂದ ಬಾರಮಾಸಿಯ ಅಥವಾ ವರ್ಷಾದ್ಯಂತ ಎಂಬ ಹೆಸರು ಬಂದಿದೆ. ಇದು ಉತ್ತರ ಪ್ರದೇಶದಲ್ಲಿ ಬೇಸಾಯದಲ್ಲಿದೆ. ಇದು ಮೂಲಸ್ಥಾನ ಮತ್ತು ಹರಡಿರುವುದರ ಬಗ್ಗೆ ಏನೂ ತಿಳಿದು ಬಂದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯದಿಂದ ಅಲೆ ಪ್ರವೃತ್ತಿಯ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ

ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೊ ಅಲಿವ್ ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ರಷ್ಯನ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಚಿಕ್ಕ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಗುಂಡಾದ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮವಾದ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತವೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಎಲ್ಲೊ ; ಮಧ್ಯಮ ಸಂಖ್ಯೆಯ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಬಿಗಿಯಾದ ತಿರುಳು, ನಾರು ಇರುವುದಿಲ್ಲ ; ಬಣ್ಣ ಎಂಪೈರ್ ಯೆಲ್ಲೊ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ದೀರ್ಘಚತುರಸ್ರ ; ನಿಬಿಡವಾದ ಕುಳ್ಳಾದ ಮತ್ತು ಮೃದುವಾದ ನಾರು ಇದರ ಎಲ್ಲಾ ಭಾಗವನ್ನು ಆವರಿಸಿರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರದಿಂದ ನಿಧಾನ ಕಾಲಿಕ ಫಲ ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ.

ಬೇಗಂ ಪಸಂದ್

ಈ ತಳಿಯು ಪಶ್ಚಿಮ ಬಂಗಾಳದಲ್ಲಿ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯು ಕೆಲವು ಕಸಿ ಸಸಿ

ಮುರ್ಷಿದಾಬಾದ್‌ನ ರಾಯಿಸ್ ಮಿರ್ಜಾ ಬೇಗನರ ತೋಟದಲ್ಲಿ ನಾಟಿ
ಗಳನ್ನು ಮುರ್ಷಿದಾಬಾದ್‌ನ ರಾಯಿಸ್ ಮಿರ್ಜಾ ... ವಿತರಣ ಕೇಂದ್ರವಾಗಿದೆ. ಇದು ಮಧ್ಯ
ಮಾಡಲಾಗಿದ್ದು, ಈಗ ಈ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ. ಇದು ಮಧ್ಯ
ವರ್ತಿ ಗುಣದಿಂದ ಕೂಡಿರುವುದರಿಂದ ಇದನ್ನು ಜನಪ್ರಿಯಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು
ತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ;
ಗಂಟುಗಳಿಂದ ಕೂಡಿದ ಬುಡ ; ಮಧ್ಯಮ ಗಾತ್ರದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಸಡಿಲಿಂಡಿನ ಮೇಲೆ
ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪದಿಂದ ದೃಢವಾಗಿ ಮಡಚಿ
ರುತ್ತವೆ ; ತಿರುಚಿರುವ ಪ್ರವೃತ್ತಿಯ ಅಂಚು ; ಸಾಧಾರಣ ಪ್ರಮುಖವಾದ ನಾಳ
ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರ
ಬರುತ್ತಿರುವ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ
ಬಣ್ಣ ಮಿನರಲ್ ಗ್ರೀನ್, ಇವು ಅನಂತರ ಲೆಟ್ಯೂಸ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ ; ಗೋಪುರಾಕಾರ ; ಮಿನರಲ್
ಗ್ರೀನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಓರೆ
ಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಅಂಡ ದೀರ್ಘಚತುರಸ್ರ ;
ಸ್ವಲ್ಪದಿಂದ ಓರೆ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ;
ಸ್ವಲ್ಪ ಕುಳಿ : ಅಸಮವಾದ ಭುಜಗಳು, ಅಗಲವಾದ ಕೆಳಭುಜ ಮೇಲ್ಭುಜಕ್ಕಿಂತ
ಸ್ವಲ್ಪ ಎತ್ತರವಾಗಿರುತ್ತದೆ, ಗುಂಡಾದ ಕೆಳಭುಜ, ಮೇಲ್ಭುಜ ಊರ್ಧ್ವವಾದ ರೊಂಕಿ
ನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ತುದಿ ಗುಂಡಾ
ಗಿರುತ್ತದೆ ; ತೆಳುವಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಭುಜ
ಗಳ ಮೇಲೆ ಕ್ಯಾಡ್‌ಮಿಯಮ್ ಆರೆಂಜ್ ಬಣ್ಣದ ಕಾಂತಿಯುತ ಪ್ರಿಮೂಲೈನ್ ಎಲ್ಲೊ
ಬಣ್ಣ ; ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿ
ರುತ್ತವೆ. ಗಟ್ಟಿಯಾದ ಮೃದುವಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಂ
ಎಲ್ಲೊ ಬಣ್ಣ; ಸ್ವಲ್ಪ ಹಿತಕರವಾದ ವಾಸನೆ ; ಸಾಧಾರಣ ಸಿಹಿಯಾದ ರುಚಿ ;
ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ದೀರ್ಘಚತುರಸ್ರ ; ಇದರ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನ ಮೇಲೆ ಮಧ್ಯಮ ಪರಿಮಾಣದ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮ ; ಮಧ್ಯಮ ಪರಿಮಾಣದ ಫಸಲು, ಮಧ್ಯಕಾಲಿಕ ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಕೆಳದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಬೆಲ್‌ಕ್ಲಾಸ್

ಈ ತಳಿಯನ್ನು ಪೂನಾದ ಹತ್ತಿರವಿರುವ ಕಿರ್ಕಿ ಸರ್ಕಾರಿ ಸಂಶೋಧನಾ ಕೇಂದ್ರದಲ್ಲಿ ಆಯ್ಕೆ ಮಾಡಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಬಗ್ಗೆ ಯಾವ ಮಾಹಿತಿಯೂ ದೊರೆತಿಲ್ಲ. ಇದರ ಹಣ್ಣು ಮಧ್ಯಮ ಗುಣದಿಂದ ಕೂಡಿರುವುದರಿಂದ ಇದನ್ನು ಜನಪ್ರಿಯಗೊಳಿಸಬೇಕಾದ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಅಲೆಯ ಅಂಚು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಕಡಮೆ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಚಿಗುರು ಎಲೆಗಳು ಎಕ್ರೂ ಗ್ರೀನ್ ಬಣ್ಣ ಬಲಿಯುತ್ತಿರುವ ಎಳೆಯ ಎಲೆಗಳು ಡಾರ್ಕ್ ಸಿಟ್ರೈನ್, ಇವು ಅನಂತರ ಎಕ್ರೊ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊಸೆಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ; ಗುಂಡು ಬುಡ; ತೊಟ್ಟು ಚಚ್ಚೌಕವಾಗಿ ಸೇರಿರುತ್ತದೆ ; ಸ್ವಲ್ಪ ಕುಳಿ ; ಸಮವಾಗಿರುವ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಗುಂಡಾದ ಕೆಳಭುಜ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಯೆಲ್ಲೊ ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ವಿರಳವಾಗಿ ನಾರು, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ; ಸ್ವಲ್ಪ ಹಿತಕರವಾದ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ ಮಧ್ಯಮ ಗಾತ್ರದಲ್ಲಿ ಮೃದುವಾದ ನಾರು ಆವರಿಸಿರುತ್ತವೆ ; ಕವಲೊಡೆದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಬೆನಾಜಿರ್ ಸಂಡಿಲ್ಲ

ಈ ತಳಿಯು,ಉತ್ತರ ಪ್ರದೇಶದ ಲಕ್ನೋ ಜಿಲ್ಲೆಯ ಮಾಲಿಹಬಾದ್ ತೆಹಸಿಲ್‌ನ ಸಂಡಿಲಾ ಎಂಬ ಹಳ್ಳಿಯ ತೋಟ ಒಂದರಲ್ಲಿ ಆಕಸ್ಮಿಕ ಸಸಿಯಾಗಿ ದೊರೆತಿದೆ ; 'ಬೆನಾಜಿರ್' ಎಂದರೆ ಸಾಟಿಯಿಲ್ಲದ ಮತ್ತು 'ಸಂಡಿಲಾ' ಎಂಬುದು ಹಳ್ಳಿಯ ಹೆಸರು. ಈ ತಳಿಯು ಅತ್ಯುತ್ತಮ ಗುಣಗಳಿಂದ ಕೂಡಿದ್ದು ಸಂಡಿಲಾ ಹಳ್ಳಿಯಲ್ಲಿ ಉದ್ಭವಿಸಿರುವುದರಿಂದ ಜಿನಾಜಿರ್ ಸಂಡಿಲಾ ಎಂಬ ಹೆಸರು ಬಂದಿದೆ. ಸಂಡಿಲಾ ಹಳ್ಳಿಯ ಬಹಳ ಸುಂದರವಾಗಿರುವ ಸ್ತ್ರೀಯ ಮನೆಯ ಹಿಂದೆ ಇದ್ದ ಮರದಿಂದ ಈ ತಳಿ ಉದ್ಭವಿಸಿರುವ ಕಾರಣ ಈ ಬೆನಾಜಿರ್ ಸಂಡಿಲಾ ಎಂಬ ಹೆಸರು ಬಂದಿದೆ ಎಂದು ವರದಿ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆಯುತ್ತದೆ, ಬಹಳ ಹೆಚ್ಚು ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ದಪ್ಪವಾದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಿಂದ ಸ್ವಲ್ಪ ಮಡಚಿರುತ್ತವೆ ; ಅಲೆಯ ಅಂಚು ; ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರತುದಿ; ಮೊನಚು ಬುಡ : ಹೊಸದಾಗಿ ಹೊರಬರುತ್ತಿರುವ ಚಿಗುರು ಎಲೆಗಳ ಬಣ್ಣ ಆಲಿವ್ ಲೇಕ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಫಾರೆಸ್ಟ್ ಗ್ರೀನ್, ಇವು ಅನಂತರ ಬಿಳಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಎಟ್ರುಸ್ಕಾನ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳ ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು, ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡವು, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಅಂಡಾಕಾರ ; ಓರೆ ಚಪ್ಪಟೆಯಿಂದ ಗುಂಡಾಗಿರುವ ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿ ಇರುತ್ತದೆ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಎಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು ದೂರವಾಗಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ, ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲೆಮನ್ ಕ್ರೋಮ್ ಬಣ್ಣ ; ಹಿತಕರವಾದ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಅಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ನಾರು ಇರುತ್ತದೆ ಮತ್ತು ಕೆಳಗಿನ ಅಂಚಿನಲ್ಲಿ ಮಧ್ಯಮ ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮದಿಂದ ಉತ್ತಮ : ಅಧಿಕ ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧ

ಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಬಾದ್ರುಲ್ ಅಸ್‌ಮಾರ್

'ಬಾದ್‌ರುಲ್' ಎಂದರೆ ಚಂದ್ರ, 'ಅಸ್‌ಮಾರ್' ಎಂದರೆ ಹಣ್ಣು ಎಂದು ಅರ್ಥ. ಭಾರತ ದೇಶದ ಕೆಲವು ಭಾಗಗಳಲ್ಲಿ ಈ ತಳಿಯನ್ನು 'ಜಹಾಂಪಸಂದ್' ಎಂಬ ಹೆಸರಿನಿಂದಲೂ ಸಹ ಕರೆಯುತ್ತಾರೆ. ಲಕ್ನೋ ಜಿಲ್ಲೆಯಲ್ಲಿರುವ ಡಾಕೋರಿ ಎಂಬ ಹಳ್ಳಿಯಲ್ಲಿ ಮುನ್ಷಿ ಇಹೆತಿ ಷಾನ್‌ಆಲಿ ಎಂಬುವನು ಇದರ ಆಕಸ್ಮಿಕ ಸಸಿಯನ್ನು ಕಂಡು ಆಕರ್ಷಿತನಾಗಿ, ವೃದ್ಧಿ ಮಾಡಿದ. ಈ ಮೂಲವು ಬಾದ್‌ರುಲ್‌ಅಸ್‌ಮಾರ್ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಿಂದ ಸ್ವಲ್ಪ ಮಡಚಿರುತ್ತವೆ ; ನಯದಿಂದ ಅಲೆ ಪ್ರವೃತಿಯ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಎಳೆಯ ಎಲೆಗಳು ಲೈವರ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳು ಕ್ರೈ ಸೊಲೈಟ್ ಗ್ರೀನ್, ಇವು ಕ್ಯಾಲಿಸೆಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರಿನ್‌ಥಿಯಾನ್ ರೆಡ್ ಬಣ್ಣ ; ಸಾಧಾರಣವಾದ ಮೃದುತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ; ಓರೆ ಗುಂಡಾದ ಬುಡ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮವಾದ ಭುಜಗಳು, ಮೇಲ್ಭುಜಕ್ಕಿಂತ ಅಗಲವಾಗಿರುವ ಕೆಳಭುಜವು ಅದಕ್ಕಿಂತ ಎತ್ತರವಾಗಿರುತ್ತದೆ, ಕೆಳಭುಜವು ಎತ್ತರವಾಗಿ ಅನಂತರ ಗುಂಡಾಗುತ್ತದೆ ; ಮೇಲ್ಭುಜವು ಇಳಿಜಾರಾಗಿ ಉದ್ದ

ವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು, ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಆಳವಾದ ಕ್ರೀಮ್; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮುಲೈನ್ ಯೆಲ್ಲೊ ಬಣ್ಣ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲೀನ ಫಲ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಭಾದುರಿಯ

ಹಿಂದೂ ಪಂಚಾಂಗದ ಪ್ರಕಾರ, ಭಾದಾನ್ ಎಂದರೆ ಜುಲೈ–ಆಗಸ್ಟ್ ತಿಂಗಳಿಗೆ ಅನ್ವಯಿಸುತ್ತದೆ. ಆದ್ದರಿಂದ ಮೇಲ್ಕಂಡ ಹೆಸರು ಬಂದಿದೆ. ಹಣ್ಣು ಬಹಳ ನಿಧಾನವಾಗಿ ಕೊಯ್ಲಿಗೆ ಅಂದರೆ ಕೆಲವು ಸಾರಿ ಸುಮಾರು ಆಗಸ್ಟ್ ತಿಂಗಳಲ್ಲಿ ಬರುವುದರಿಂದ ಇದಕ್ಕೆ 'ಭಾದುರಿಯ' ಎಂಬ ಹೆಸರು ಬಂದಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ಸರಿಯಾಗಿ ತಿಳಿದುಬಂದಿಲ್ಲ. ಇದರ ಬೇಸಾಯ ಉತ್ತರ ಪ್ರದೇಶದ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿದೆ.

ಮರ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು, ನೇರದಿಂದ ಹರಡಿರುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಿನಿಂದ ಕಳಸಾಕಾರದ ಮೇಲ್ಭಾಗ ; ಸಣ್ಣದಾಗಿರುವ ಬುಡ ; ಮಧ್ಯಮದಿಂದ ದಪ್ಪವಾಗಿರುವ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ದೃಢವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ;

ನಯವಾದ ಅಂಚುಗಳು, ಕೆಲವು ಸಾರಿ ತಿರುಚಿಕೊಂಡಿರುವ ಪ್ರವೃತ್ತಿ ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸ ದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್, ಬಲಿಯುತ್ತಿರುವ ಎಳೆಯ ಎಲೆಗಳು ಬಣ್ಣ ಅಂಬರ್ ಬ್ರೌನ್, ಇವು ಅನಂತರ ಸೂಡಾನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ದೊಡ್ಡವು, ಕೋನಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಂಡಾಶಯಕ್ಕಿಂತ ಸಣ್ಣ ಕೇಸರಗಳು, ಅವಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಸ್ವಲ್ಪ ಕುಳಿ ; ಸಮವಾದ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ ; ಸ್ವಲ್ಪದರಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮದಿಂದ ದಪ್ಪವಾಗಿರುವ ಸಿಪ್ಪೆ, ನಯವಾಗಿರುವ ಮೇಲು ಭಾಗದ ಬಣ್ಣ ಗೋಲ್ಡನ್ ಗ್ಲೋ ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ಹೆಚ್ಚು ನಾರು, ಪ್ರಿಮೂಲೈನ್ ಎಲ್ಲೊ ಬಣ್ಣ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಬಹಳ ಉತ್ತಮ ; ನಿಧಾನಕಾಲಿಕ ಫಸಲು; ಮತ್ತು ಹೆಚ್ಚು ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಭವಾನಿ ಚೌರಸ್

ಈ ತಳಿಯು ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಹೆಚ್ಚಿನ ಬೇಸಾಯದಲ್ಲಿದೆ. ಇದರ ಮೂಲಸ್ಥಾನದ ಇತಿಹಾಸ ತಿಳಿದುಬಂದಿಲ್ಲ. ಇದು ಮುರ್ಷಿದಾಬಾದಿನ ರಾಯಿಸ್ ಮಿರ್ಜಾ ಜಗಾನ್‌ನ ತೋಟದಲ್ಲಿನ ಕಸಿ ಸಸ್ಯಗಳಿಂದ ವೃದ್ಧಿಯಾಗಿವೆ ಎಂದು ಭಾವಿಸಲಾಗಿದೆ. ಈ ತಳಿಯು ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಮತ್ತು ನಾಡಿಯ ಜಿಲ್ಲೆಗಳಲ್ಲಿ ವಿಶೇಷವಾಗಿ ಹರಡಿದೆ ಮತ್ತು ಸ್ವಲ್ಪಮಟ್ಟಿಗೆ ಹೂಗ್ಲಿ ಮತ್ತು 24- ಪರ್ಗಣ ಜಿಲ್ಲೆಗಳಲ್ಲಿ ಹರಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಪ್ರವೃತ್ತಿ; ಗುಂಡಾದ ಮೇಲ್ಭಾಗ; ಮಧ್ಯಮದಿಂದ ಸಣ್ಣ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಅಂಚು, ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗ್ನೊನೆಥ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕ್ರೈಸೊಲೈಟ್ ಗ್ರೀನ್, ಇವು ಕ್ರಮೇಣ ಬಫ್ಫಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿಮಧ್ಯಮ, ಗೋಪುರಾಕಾರ, ಕೊಬ್ರಾ ಬ್ರೌನ್ ಬಣ್ಣ, ಒತ್ತಾದ ಮೃದುತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಓರೆ ಗುಂಡಾದ ಬುಡ ; ಚಚ್ಚೌಕವಾಗಿ ಸೇರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಅಗಲವಾದ ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ; ಗುಂಡಿನಿಂದ ವಿಶಾಲ ಬಿಂದುವಿನಲ್ಲಿರುವ ತುದಿ ; ತೆಳು ಸಿಪ್ಪೆ, ನಯವಾದ ಮೇಲ್ಭಾಗ ಟಾ–ಮಿಂಗ್ ಬಣ್ಣ ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿ ಇರುತ್ತವೆ ; ಮೇಲ್ಭಾಗದಿಂದ

ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾಗಿರುವ ತಿರುಳು ವಿರಳವಾದ ನಾರಿನಿಂದ ಕೂಡಿರುತ್ತದೆ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸ್ವಲ್ಪ ಟರ್‌ಪೆಂಟೈನ್ ಇರುವ ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ದೀರ್ಘಚತುರಸ್ರ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ಮತ್ತು ಕೆಳಗಿನ ಅಂಚಿನಲ್ಲಿ ಮಧ್ಯಮ ನಾರು ; ಸಮಾನಾಂತರ ಮತ್ತು ಟೊಳ್ಳಾದ ನಾಳಗಳು.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮದಿಂದ ಉತ್ತಮ ; ಮಧ್ಯಕಾಲಿಕ ಫಸಲು, ಮಧ್ಯಮ ಪ್ರಮಾಣದ ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಉತ್ತಮ ನಿರೋಧಕತೆ ; ಕೆಳದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಭಾರತ್‌ಭೋಗ್

ಇದು ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಸ್ಥಳೀಯ ತಳಿ ಎಂದು ವರದಿಯಾಗಿದೆ. ಮಾಲ್ಡಾ ಪ್ರದೇಶದಲ್ಲಿ ಇದನ್ನು ಲೋಹ ಜಾಂಗ್ ಎಂದು ಕರೆಯುತ್ತಾರೆ. ಈ ಹೆಸರಿಗೆ ಮುಖ್ಯ ಕಾರಣವೆಂದರೆ ಇದರ ಶ್ರೇಷ್ಠ ಶೇಖರಣೆ ಗುಣ. ಬಿಹಾರದ ಬಾಗಲೂರಿನ ವಾಸಿಯಾದ ಭರತ್‌ಲಾಲ್ ಎಂಬುವನು ಈ ತಳಿಯನ್ನು ಮೊಟ್ಟಮೊದಲು ಮಾಲ್ಡಾದಿಂದ ಬಿಹಾರ್ ರಾಜ್ಯಕ್ಕೆ ತಂದನು. ಈಗ ಬಿಹಾರ್ ರಾಜ್ಯದಲ್ಲಿ ಇದನ್ನು ಭಾರತ್‌ಭೋಗ್ ಎಂದು ಕರೆಯುತ್ತಾರೆ. ಈ ಹೆಸರು ಇದನ್ನು ಮೊದಲು ಬಿಹಾರ್ ರಾಜ್ಯಕ್ಕೆ ತಂದ ಭರತ್‌ಲಾಲ್‌ನ ಜ್ಞಾಪಕಾರ್ಥವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ. ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣದರಿಂದ ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು

ಳು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಮೊನಚು ತುದಿ ; ಮೊನಚು ುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಳವಾದ ಸಿಟ್ರೈನ್, ಲಿಯುತ್ತಿರುವ ಎಳೆಯ ಎಲೆಗಳು ಬಫ್ಬಿ ಆಲಿವ್, ಅನಂತರ ಸಿಟ್ರೈನ್ ಬಣ್ಣಕ್ಕೆ ರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಫ್ಬಿ ಸಿಟ್ರೈನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮವಾದ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಓರೆ ಮೊಟ್ಟೆಯಾಕಾರದಿಂದ ದೀರ್ಘ ಚತುರಸ್ರ ; ಓರೆಗುಂಡಿನಿಂದ ಚಪ್ಪಟೆಯಾಗಿರುವ ಬುಡ ; ಸ್ವಲ್ಪ ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಅಗಲವಾದ ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ದಪ್ಪವಾದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗ್ರಾಸ್ ಗ್ರೀನ್ ; ದೊಡ್ಡ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿಯಾದ ತಿರುಳು. ನಾರು ಇರುವುದಿಲ್ಲ, ಆರೆಂಜ್ ಬಣ್ಣ ; ಹಿತಕರವಾದ ಮಧುರವಾದ ವಾಸನೆ ; ಸಿಹಿಯಾದ ರುಚಿ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ: ಮಧ್ಯಮ ದರ್ಜೆ ; ಮಧ್ಯಮ ಪರಿಮಾಣದ ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಭೋಪ್ಲಿ

ಇದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಸ್ಥಳೀಯ ತಳಿಯಾಗಿದ್ದು ಜಿಲ್ಲೆಯ ಹಳೆಯ ತಳಿಗಳನ್ನು ಪ್ರತಿನಿಧಿಸುವ ತಳಿಯಾಗಿದೆ. ಇದರ ಮೂಲಸ್ಥಾನ ಮತ್ತು

ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರಲ್ಲಿ ಯಾವ ಉತ್ತಮ ಗುಣಗಳೂ ಇಲ್ಲದಿರುವ ಕಾರಣ ಇದನ್ನು ಜನಪ್ರಿಯಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ನೇರವಾಗಿ ಬೆಳೆಯುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯಫಲ ; ಮೊಟ್ಟೆಯಾಕಾರದ ಮೇಲ್ಭಾಗ; ಗಂಟುಗಳಿರುವ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಅನಿರ್ದಿಷ್ಟ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲ ; ಬಲಿಯುತ್ತಿರುವ ಎಳೆಯ ಎಲೆಗಳು ಆರೆಂಜ್ ಸಿಟ್ರೈನ್, ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ವಿಶಾಲವಾದ ಗೋಪುರಾಕಾರ, ಬಣ್ಣ ಎಕ್ರೂಗ್ರೀನ್, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಗುಂಡಾಕಾರದಿಂದ ಗುಂಡು ಓರೆಯಾಕಾರ ; ಓರೆ ಚಪ್ಪಟೆಯಾದ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಸಮಭುಜಗಳು, ಕೆಳಭುಜ ಅನೇಕ ವೇಳೆ ಮೇಲ್ಭುಜಕ್ಕಿಂತ ಎತ್ತರ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ, ಬಣ್ಣ ಕ್ಯಾಡ್ಮಿಯಮ್ ಯೆಲ್ಲೊ ; ಸ್ವಲ್ಪ ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಮೊಟ್ಟೆಯಾಕಾರ, ಇದರ ಮೇಲೆ ಎಲ್ಲಾ ಭಾಗದಲ್ಲಿ, ಕಡಮೆ ಪರಿಮಾಣದ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ನಾರು ; ಕವಲೊಡೆದಿರುವ ನಾಳಗಳು ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳುದರ್ಜೆ ; ಮಧ್ಯಮ ಪ್ರಮಾಣದ ಫಸಲು, ನಿಧಾನ ಕಾಲಿಕ ಫಲ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ, ಗಾಳಿಗೆ ಸುಲಭವಾಗಿ ಬಲಿಯಾಗುತ್ತವೆ ; ಕೆಳಮಟ್ಟದ ಶೇಖರಣೆ ಗುಣ ; ಮಧ್ಯಮ ಬಲಿಯುವ ಗುಣ.

ಬ್ಲ್ಯಾಕ್ ಆ್ಯಂಡ್ರೂಸ್

ಇದು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳ ಸ್ಥಳೀಯ ತಳಿ ಇದರ ಮೂಲ ಸ್ಥಾನದ ಇತಿಹಾಸ ತಿಳಿದಿಲ್ಲ. ಇದರ ಹಣ್ಣು ಯಾವ ವಿಶೇಷ ಗುಣಗಳಿಂದಲೂ ಕೂಡಿಲ್ಲದಿರುವುದರಿಂದ ಇದನ್ನು ಜನಪ್ರಿಯಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ನಡುದಿಂದಿನ ಮೇಲೆ ಸ್ವಲ್ಪ ಹಿಂಬಾಗಿರುತ್ತದೆ, ಮಧ್ಯಮ ಉತ್ಪನ್ನಕಾರಿ, ಅನಿಶ್ಚಿತ ಫಸಲು ; ಗುಮ್ಮಟಾಕಾರದ ಮೇಲ್ಭಾಗ ; ದಪ್ಪದಿಂದ ಮಧ್ಯಮಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ವಾದ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಫಾರೆಸ್ಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳು ಡಾರ್ಕ್ ಪರ್ಪಲ್ ಬಣ್ಣವಿದ್ದು ಅನಂತರ ಒಕ್ರೆ ರೆಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶ್ರಿಂಪ್ ಪಿಂಕ್ ಬಣ್ಣ, ಕಡಮೆ ಮೃದುತುಪ್ಪುಳು ; ಕೇಸರಗಳು ಸಮ ಮತ್ತು ಅಂಡಾಶಯಕ್ಕೆ ಓರೆ ಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿ ಹೊಂದಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಸ್ವಲ್ಪ ಕುಳಿ ; ಕೆಳಭುಜ ಮೇಲ್ಭುಜಕ್ಕೆ ಸಮ, ಕೆಳಭುಜ ಗುಂಡಾಗಿರುತ್ತದೆ ; ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯು ತ್ತದೆ.

ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ; ಚರ್ಮದಂತಿರುತ್ತದೆ, ಪ್ರಿಮ್ಯೂಲೈನ್ ಎಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ಸಿಪ್ಪೆ, ನಾರು ಇರುವುದಿಲ್ಲ, ತಿಳಿ ಕ್ಯಾಡ್ಮಿಯಮ್ ಬಣ್ಣ ; ಹಿತಕರವಾದ ರುಚಿ; ಮಧ್ಯಮ ಸಿಹಿರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಪೆಟ್ಟಿಯಾಕಾರ; ಇದರಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಮ ಪರಿಮಾಣದ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಬೊಂಬಾಯಿ

ಇದು ಬಿಹಾರ್ ರಾಜ್ಯದ ವಾಣಿಜ್ಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದುಬಂದಿಲ್ಲ. ಬಿಹಾರ್ ರಾಜ್ಯದಲ್ಲಿ ಮಾವಿನ ಹಣ್ಣಿನ ಕಾಲದಲ್ಲಿ ಈ ತಳಿ ಮೊದಲು ಫಸಲು ಕೊಡುತ್ತದೆ. ಈ ತಳಿಯ ಬೇಸಾಯ ಲಾಭದಾಯಕವಾದ್ದರಿಂದ ಅನೇಕ ಬೇಸಾಯಗಾರರು ಇದರ ಬೇಸಾಯವನ್ನು ಇಚ್ಛಿಸುತ್ತಾರೆ. ಪಶ್ಚಿಮ ಬಂಗಾಳ ಮತ್ತು ಬಿಹಾರ್ ರಾಜ್ಯಗಳಲ್ಲಿ ಇದನ್ನು 'ಮಾಲ್ಡಾ' ತಳಿಯೆಂದು ಸಹ ಕರೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಹಸುವು, ನಿಧಾನವಾಗಿ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಬಿಡುವಿಕೆಯಿಂದ ಅನಿಶ್ಚಿತ ಫಸಲು ; ಗುಂಡಾಕಾರದಿಂದ ಕಳಸಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ, ನಯವಾದ ಅಂಚುಗಳು

ತಿರುಚಿರುತ್ತವೆ : ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್, ಇನ್ನೂ ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕೈಸೆರ್ ಬ್ರೌನ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಎಕ್ರೂ ಆಲಿವ್ ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಸಣ್ಣ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಸ್ವಲ್ಪ ಕುಳಿ ; ಅಸಮ ಭುಜಗಳು, ಅಗಲವಾಗಿರುವ ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತವೆ ; ಇಲ್ಲದ ಅಥವಾ ಬಿಂದುವಿನಲ್ಲಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮದಿಂದ ದಪ್ಪವಾಗಿರುವ ಸಿಪ್ಪೆ, ನಯವಾದ ಮೇಲ್ಭಾಗ, ಪ್ರಿಮೂಲೈನ್ ಎಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ; ಸಾಧಾರಣ ಸಿಹಿಯಾದ ರುಚಿ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಪೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ಒತ್ತಾದ, ಕುಳ್ಳಾದ ಮೃದುವಾದ ನಾರು ಇರುತ್ತದೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಶೀಘ್ರಕಾಲಿಕ ಫಸಲು ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಬೊಂಬಾಯಿ ಅಬ್ದುಲ್ ಹಕ್

ಈ ತಳಿಯನ್ನು ಉತ್ತರ ಪ್ರದೇಶದ, ಲಕ್ನೋ ಜಿಲ್ಲೆಯ ಮಾಲಿಹಬಾದಿನ ಸಫ್ದರ್ ನರ್ಸರಿಯಲ್ಲಿ ಅಭ್ಯಾಸ ಮಾಡಲಾಗಿದೆ. ಇದರ ತಾಯಿ ಮರವು ಮಾಲಿಹಬಾದಿನ ಹತ್ತಿರದ ಅಮಾಸಿಗಂಜ್ ಬಳಿ ಇದೆ, ಇಲ್ಲಿಂದ ಸಫ್ದರ್ ನರ್ಸರಿಯ ಮಾಲೀಕರು ಇದನ್ನು ವೃದ್ಧಿ ಮಾಡಿದ್ದಾರೆ. ಇದು ಮಧ್ಯಮ ಗುಣದ, ಮಧ್ಯಕಾಲಿಕ ಫಸಲು ಕೊಡುವ ತಳಿ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಅನಿಶ್ಚಿತ ಫಲದಾಯಕ ; ಗುಂಡಾದ ಮೇಲ್ಭಾಗ ; ದಪ್ಪವಾದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ಮತ್ತು ಮಡಚಿರುವ ಪ್ರವೃತ್ತಿ ; ಅಲೆಯ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಓಲ್ಡ್ ಗೋಲ್ಡ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಓಲ್ಡ್ ಗೋಲ್ಡ್ ಇದ್ದು ಮುಂದೆ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತದೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಚಾಲೆಟ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಓರೆ ಚಪ್ಪಟೆಯಾಗಿರುವ ಬುಡ; ಓರೆಯಾಗಿ ಸೇರುವ ತೊಟ್ಟು; ಸ್ವಲ್ಪ ಕುಳಿ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ಪ್ರಮುಖವಾಗಿರುತ್ತದೆ ; ಹೊಕ್ಕಳು ಇರುವುದಿಲ್ಲ ; ವಿಶಾಲವಾದ ಅಗಲವಾಗಿರುವ ತುದಿ, ಮಧ್ಯಮ ಗಾತ್ರದಿಂದ ದಪ್ಪವಿರುವ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಲೆಮನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಗಟ್ಟಿಯಾದ ತಿರುಳು, ಸಾಧಾರಣ ಪರಿಮಾಣದ

ನಾರು, ಲೈಟ್‌ಕ್ರೋಮ್ ಬಣ್ಣ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ ; ದೀರ್ಘಚತುರಸ್ರ, ನಾರಿನಿಂದ ಕೂಡಿರುತ್ತದೆ ; ತೆಳುವಾದ ನಾರು, ಇದರ ಮೇಲೆ ಎಲ್ಲಾ ಭಾಗದಲ್ಲಿ ಮೃದುವಿನಿಂದ ಮಧ್ಯಮವಾದ ಕುಳ್ಳಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ನಾರು ; ಸಮಾನಾಂತರವಾಗಿ ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಸಾಧಾರಣ ಶೇಖರಣೆ ಮತ್ತು ಸುಲಿಯುವ ಗುಣ.

ಚಾಂಬೆ ಭುಟ್ಟೊ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದುಬಂದಿಲ್ಲ. ಇದನ್ನು ಮೊದಲು ಕಿರ್ಕಿ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ನಾಟಿ ಮಾಡಲಾಗಿತ್ತು, ಅಲ್ಲಿಂದ ಇದು ಸ್ವಲ್ಪಮಟ್ಟಿಗೆ ದೇಶದ ಇತರ ಭಾಗಗಳಿಗೆ ಹರಡಿದೆ. ಇದು ಮಧ್ಯವರ್ತಿ ಗುಣದ ತಳಿಯಾಗಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತವೆ,ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ, ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ಅಲೆ ಅಂಚು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಕಡಮೆ ಲಂಬಾಗ್ರ ತುದಿ ;

ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸುಡಾನ್ ಬ್ರೌನ್, ಬಲಿಯುತ್ತಿರುವ ಎಲೆಗಳ ಬಣ್ಣ ವೆರೊನಾ ಬ್ರೌನ್, ಇವು ಅನಂತರ ಆಳವಾದ ಕ್ರೈಸೊಲೈಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಟಾನಿ ಆಲಿವ್ ಬಣ್ಣ, ಸಾಧಾರಣ ಮೃದುತುಪ್ಪಳು; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆಯಾಗಿರುವ ಬುಡ ; ಚಕ್ರಾಕಾರವಾಗಿ ಸೇರಿರುವ ತೊಟ್ಟು ; ಸ್ವಲ್ಪ ಕುಳಿ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೋ, ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಿಂದ ಸಪ್ಪೆ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲೂ ಒತ್ತಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮದಿಂದ ಕೀಳು ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕೀಳಿನಿಂದ ಮಧ್ಯಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಚಾಂಬಿ ದರ್ಶಾ

ಈ ತಳಿಯನ್ನು ಪೂನಾದ ಕಿರ್ಕಿ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಅಭ್ಯಾಸ ಮಾಡಲಾಯಿತು. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣಿನ ಗುಣ ಮಧ್ಯಮವಾಗಿರುವುದರಿಂದ ಇದನ್ನು ಜನಪ್ರಿಯಗೊಳಿಸಿ ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಇಳುವರಿಯಲ್ಲಿ ಮಧ್ಯಮದಿಂದ ಕಡಮೆ ಉತ್ಪನ್ನಕಾರಿ, ಪ್ರತಿ ವರ್ಷ ಫಲಬಿಡುತ್ತದೆ ; ಗುಂಡಾದ ಮೇಲ್ಭಾಗ ; ದಪ್ಪ ಬುಡ ; ಸಣ್ಣದರಿಂದ ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿ ರುತ್ತವೆ ; ನಯವಾದ ಅಂಚು, ಕೆಲವು ಸಾರಿ ಅಲೆಯ ಪ್ರವೃತ್ತಿಯವು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸ ದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ಗೋಪುರಾಕಾರ, ಆಲಿವ್ ಒಕ್ರೆ ಬಣ್ಣ, ಸಾಧಾರಣ ಮೃದು ತುಪ್ಪಳು ; ಅಸಮ ಕೇಸರಗಳು ಅಂಡಾ ಶಯಕ್ಕಿಂತ ದೊಡ್ಡವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ; ಇಳಿಜಾರಿನಿಂದ ಓರೆ ಗುಂಡಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜ ಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ, ಅಥವಾ ಒಂದು ಬಿಂದುವಿನಲ್ಲಿರುತ್ತದೆ ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ವಿಶಾಲ ಬಿಂದುವಿನಿಂದ ಗುಂಡಾಗಿರುವ ತುದಿ ; ದಪ್ಪದಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಕಾವು

ಸ್ಟೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ಸ್ವಲ್ಪ ನಾರು, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಿಂದ ಸಪ್ಪೆಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ಸಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ನಾರು ; ಸ್ವಲ್ಪ ಕವಲೊಡೆದಿರುವ ನಾಳಗಳು ಉಬ್ಬಿರುತ್ತವೆ.

ಹೆಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕಡಮೆಯಿಂದ ಮಧ್ಯಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಬಾಂಬೆ ಗ್ರೀನ್

ಈ ತಳಿಯ ಮೂಲಸ್ಥಾನದ ಇತಿಹಾಸ ತಿಳಿದುಬಂದಿಲ್ಲ. ಇದು ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆಯೆಂದು ಭಾವಿಸಲಾಗಿದೆ. ಈ ತಳಿಯು ಶೀಘ್ರ ಕಾಲಿಕ ಫಸಲನ್ನು ಕೊಟ್ಟು ಹೆಚ್ಚು ಲಾಭದಾಯಕವಾಗುವುದರಿಂದ ಗಂಗಾ ನದಿಯ ಮೈದಾನದಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದೆ. ಉತ್ತರ ಭಾರತದಲ್ಲಿ ಇದಕ್ಕೆ ಮಾಲ್ದಾ ಎಂಬ ಹೆಸರು ಸಾಮಾನ್ಯ ಬಳಕೆಯಲ್ಲಿ ಇದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದಿಂದ ದಪ್ಪವಾಗಿರುವ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ತುಸು ಮಡಚಿರುತ್ತವೆ ; ಅಲೆ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ

ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫ್ ಸಿಟ್ರೈನ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್ ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪುಳು ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡದೀರ್ಘಚತುರಸ್ರದಿಂದ ದೀರ್ಘಚತುರಸ್ರ ಮೂತ್ರಪಿಂಡಾಕಾರ ; ಓರೆ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ದಪ್ಪವಾದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಸ್ಪಿನಾಚ್ ಗ್ರೀನ್ ; ದೊಡ್ಡ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೃದುವಾದ ತಿರುಳು, ನಾರು ಇರುವುದಿಲ್ಲ, ಮಿಕಾಡೊ ಆರೆಂಜ್ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಮತ್ತು ಕೆಳ ಅಂಚಿನಲ್ಲಿ ಸಾಧಾರಣ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ ಹೆಚ್ಚು ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆಯ ಗುಣ ; ಉತ್ತಮ ಸುಲಿಯುವ ಗುಣ.

ಬಾಂಬೆ ಯೆಲೊ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದುಬಂದಿಲ್ಲ. ಇದು ಬಾಂಬೆಯಲ್ಲಿ ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿರಬೇಕೆಂದು ಭಾವಿಸ

ಲಾಗಿದೆ. ಇದರ ಶೀಘ್ರಕಾಲಿಕ ಫಸಲು ಮಾರುಕಟ್ಟೆಯಲ್ಲಿ ಹೆಚ್ಚು ಲಾಭವನ್ನು ತರುವುದರಿಂದ ಗಂಗಾ ನದಿಯ ಮೈದಾನದಲ್ಲಿ ಹೆಚ್ಚು ಪ್ರಖ್ಯಾತವಾಗಿದೆ. ಸಿಪ್ಪೆಯ ಮೇಲ್ಭಾಗದ ಬಣ್ಣದ ಗುಣ ಒಂದನ್ನು ಬಿಟ್ಟರೆ ಇದು ಬಾಂಬೆ ಗ್ರೀನ್ ತಳಿಯನ್ನು ಹೋಲುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ, ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಪ್ರವೃತ್ತಿಯ ಅಂಚುಗಳು; ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಮೊನಚು ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆ್ಯಂಟಿಕ್ ಬ್ರೌನ್ ಬಣ್ಣ, ಸಾಧಾರಣ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅಂಡಾಶಯಕ್ಕಿಂತ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಸ್ವಲ್ಪ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಸಾಧಾರಣ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೋ ; ದೊಡ್ಡ ಚುಕ್ಕೆಗಳು, ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕಾಪು ಸ್ಟೈನ್ ಯೆಲ್ಲೋ ಬಣ್ಣ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಆವರಿಸಿರುತ್ತದೆ ; ಕೆಳಅಂಚಿನಲ್ಲಿ ಇದರ ಪರಿಮಾಣ ಮಧ್ಯಮ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಬಹಳ ಉತ್ತಮ ದರ್ಜೆ ; ಮಧ್ಯಮ ಉತ್ಪನ್ನಕಾರಿ ಮತ್ತು ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟ ಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆಯ ಗುಣ ; ಉತ್ತಮ ಸುಲಿ ಯುವ ಗುಣ.

ಬೊರ್ಷಾ ಕಲಾಮ್ ಸಾರ್

ಇದು ಗುಜರಾತ್ ರಾಜ್ಯದ ಸ್ಥಳೀಯ ಹಾಗೂ ಹೆಚ್ಚು ಜನಪ್ರಿಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ಬೇಸಾಯ ಮಧ್ಯಪ್ರದೇಶದ ಬೆರಾರ್ ಮತ್ತು ಮಹಾರಾಷ್ಟ್ರದ ಮಾರಟ್‌ವಾಡ ಪ್ರದೇಶದಲ್ಲಿ ಸ್ವಲ್ಪಮಟ್ಟಿಗಿದೆ. ಈ ತಳಿಯನ್ನು ಪೂನಾದ ಕಿರ್ಕಿ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಅಭ್ಯಾಸ ಮಾಡಲಾಗಿದೆ.

ಮರ : ಗಾತ್ರದಲ್ಲಿ ಸಣ್ಣದರಿಂದ ಮಧ್ಯಮ, ನಿಧಾನವಾಗಿ ಬೆಳೆಯುವ ಗುಣ ದಿಂದ ಸಾಧಾರಣ ಕಸುವಿನಿಂದ ಬೆಳವಣಿಗೆ, ನೇರದಿಂದ ಹರಡುವ ಗುಣವುಳ್ಳದ್ದು, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಯಂತ ತಿರುಚಿರುವ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ; ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಇವು ಅನಂತರ ಟಾನಿ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಗೋಪುರಾಕಾರ,

ಸ್ಪ್ರಿನೆಲ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪುಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ದೊಡ್ಡವು, ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಅಂಡಾಕಾರದಿಂದ ಅಂಡ ದೀರ್ಘಚತುರಸ್ರ ; ಸ್ವಲ್ಪ ಚಪ್ಪಟೆಯಿಂದ ಗುಂಡಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು : ಕುಳಿ ಇರುವುದಿಲ್ಲ ; ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಸ್ವಲ್ಪ ಕೊಕ್ಕಳು : ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಭುಜಗಳ ಮೇಲೆ ಕೊರಿಂಥಿಯಾನ್ ರೆಡ್, ಇತರ ಭಾಗಗಳಲ್ಲಿ ಪ್ರಿಮೂಲೈನ್ ಯೆಲ್ಲೊ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ಒತ್ತಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮವಾದ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಬೃಂದಾವನಿ

ಈ ತಳಿಯು ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಉದ್ಭವಿಸಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ಸರಿಯಾಗಿ ತಿಳಿದುಬಂದಿಲ್ಲ. ಮುರ್ಷಿದಾಬಾದಿನ ರಾಯಿಸ್‌ಮಿರ್ಜಾ ಬೇಗಾನ್‌ನ ತೋಟದಿಂದ ಹರಡಿದೆ ಎಂದು ವರದಿಯಾಗಿದೆ. ಈ ತಳಿಯು ಮನೆಗಳ ಪಕ್ಕದಲ್ಲಿ ನೆಡಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷದಿಂದ ಹಿಡಿದು ಖಚಿತವಿಲ್ಲದ ಫಸಲು ; ದುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪ ರೆಂಬೆ ಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸುಕ್ಕಾಗಿರುವ ಪ್ರವೃತ್ತಿ, ಸ್ವಲ್ಪ ಸುಡಚಿಕೊಂಡಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖದಿಂದ ಖಚಿತವಲ್ಲದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸ ದಾಗಿ ಹೊರಬರುತ್ತಿರುವ ಎಲೆಗಳು ಮಸ್ಟರ್ಡ್ ಯೆಲ್ಲೊ, ಬಲಿಯುತ್ತಿರುವ ಎಳೆಯ ಎಲೆಗಳು ಲೈಟ್ ಗ್ರೀನ್, ಇವು ಅನಂತರ ಕ್ರೈಸೊಲೈಟ್ ಗ್ರೀನ್ ಬಣ್ಣಕ್ಕೆ ತಿರುಗು ತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೆಟ್ಯೂಸ್‌ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಂಡಾಶಯಕ್ಕಿಂತ ಓರೆಯಾಗಿರುವ ಹಾಗೂ ತುಂಡಾಗಿರುವ ಕೇಸರಗಳು ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವು ದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರದಿಂದ ದೀರ್ಘ ಚತುರಸ್ರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಸ್ವಲ್ಪ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾ ಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವು ದಿಲ್ಲ ಅಥವಾ ಸ್ವಲ್ಪ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ತೆಳು ಸಿಪ್ಪೆ, ನಯ ವಾದ ಮೇಲ್ಭಾಗ, ಡೀಪ್ ಕ್ರೋಮ್ ಬಣ್ಣ; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕಾವು ಸ್ಟೈನ್ ಯೆಲ್ಲೊ ಬಣ್ಣ; ಹಿತಕರವಾದ ವಾಸನೆ ; ಸಿಹಿ ಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರ ; ಇದರ ಮೇಲ್ಭಾಗದಲ್ಲಿ ನಿಬಿಡವಾದ ಮತ್ತು ಕುಳ್ಳಾದ ಮೃದುವಾದ ನಾರು ಇರುತ್ತದೆ; ಸಮಾನಾಂತರವಾದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮವಾದ ದರ್ಜೆ ; ಮಧ್ಯಮ ಪರಿಮಾಣದ ಫಸಲು; ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಬುದ್ದಿ ಪಸಂದ್

ಇದು ಆಂಧ್ರ ರಾಜ್ಯದ ಚಿತ್ತೂರು ಮತ್ತು ಕಡಪ ಜಿಲ್ಲೆಗಳ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ವ್ಯಾಪ್ತಿಯು ಸೀಮಿತವಾಗಿದ್ದು, ಇದರಲ್ಲಿ ಯಾವ ಉತ್ತಮ ಗುಣಗಳೂ ಇಲ್ಲದಿರುವುದರಿಂದ ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ. ಚಿತ್ತೂರಿನಲ್ಲಿರುವ ನರ್ಸರಿಗಳಿಂದ ಈ ತಳಿಯನ್ನು ತಮಿಳುನಾಡಿಗೆ ಒಯ್ಯುತ್ತಾರೆ. ಕಾರಣ, ಈ ತಳಿಯ ಹಣ್ಣಿನ ಕರ್ಷಕ ಲಕ್ಷಣ. ಹಣ್ಣಿಗೆ ಕೊಕ್ಕಿಯಂತಿರುವ ಕೊಕ್ಕು ಇರುವುದರಿಂದ ಇದನ್ನು ಇತರ ತಳಿಗಳಿಂದ ಸುಲಭವಾಗಿ ಗುರುತಿಸಬಹುದಾಗಿದೆ.

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳು ಮೆಡಲ್ ಬ್ರಾಂಜ್, ಇವು ಅನಂತರ ಯೆಲ್ಲೋಯಿಷ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊಸೆಗ್ರೀನ್ ಬಣ್ಣ, ಸಾಧಾರಣವಾದ ಮೃದುತುಪ್ಪುಳು ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡಾಕಾರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಹೆಚ್ಚು ಆಳವಿಲ್ಲದಿರುವುದರಿಂದ ಆಳ ; ಭುಜಗಳು ಸಮ, ಒಂದೇ ಮಟ್ಟದಲ್ಲಿರುತ್ತವೆ ಮತ್ತು ಗುಂಡಾಗಿರುತ್ತವೆ ; ಕೊಕ್ಕು ಪ್ರಧಾನ, ಒಳಗಡೆಗೆ ಬಾಗಿರುತ್ತವೆ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಸಿಪ್ಪೆ ಮಧ್ಯಮ ದಪ್ಪ, ಗೋಲ್ಡನ್ ಗ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರುತ್ತವೆ, ಇವು ಸಿಪ್ಪೆಯಲ್ಲಿ ಆಳವಾಗಿರುವುದರಿಂದ ಹಿಡಿದು ಮೇಲ್ಭಾಗದಿಂದಲೂ ಹೊರಬಂದಿರುತ್ತವೆ ; ತಿರುಳು ಮೃದುವಾಗಿರುವುದರಿಂದ ಹಿಡಿದು ಬೆಣ್ಣೆಯಂತೆ, ನಾರು ಇರುವುದಿಲ್ಲ, ದಟ್ಟವಾದ ಕ್ರೀಮ್ ಬಣ್ಣ; ಸುಮಾರು ಹಿತಕರವಾದ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಕಡಮೆಯಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲೂ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತವೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ನಾರು ; ಕವಲೊಡೆದಿರುವ ನಾಳಗಳು ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮ ಪರಿಮಾಣದ ಮಧ್ಯಕಾಲಿಕ ಫಸಲು ; ಗಾಳಿಗೆ ಸುಲಭವಾಗಿ ತುತ್ತಾಗುತ್ತದೆ ; ಕುಪ್ಪಳಿಸುವ ಕೀಟಗಳಿಗೆ ವಿಪರೀತ ವಾಗಿ ಬಲಿಯಾಗುತ್ತದೆ ; ಮಧ್ಯಮ ಶೇಖರಣೆ ಗುಣ.

ಬುದ್ದು ಕಾ ಕೆಲ್ವಾ

ಈ ತಳಿಯು, ಉತ್ತರ ಪ್ರದೇಶದ ಮಾಲಿಹಬಾದಿನಲ್ಲಿರುವ ಮೌಲನಾ ಮೌಲ್ವಿ ಇಮ್‌ದಾದ್ ಸಾಹೇಬ್ ಹೊಂದಿರುವ ಷಮ್‌ಸೂಲ್ ಉಲೆಮ ಎಂಬ ತೋಟದಲ್ಲಿ ಉತ್ತಮ ಗುಣದ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ. ಇದರ ನಿಜವಾದ ಹೆಸರು ಕೆಲ್ವಾಮಿಶ್ರ. ಇದು ಅತ್ಯುತ್ತಮ ಗುಣಗಳಿಂದ ಕೂಡಿರುವುದ ರಿಂದ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಬಹಳ ಭಾಗಗಳಿಗೆ ಹರಡಿದೆ. ಇದನ್ನು ಮೊದಲು ಬುದ್ದು ಎಂಬ ಮಾಲಿ ವೃದ್ಧಿಮಾಡಿದ್ದರಿಂದ ಬುದ್ದುಕಾ ಕೆಲ್ವಾ ಎಂಬ ಹೆಸರು ಬಂದಿದೆ.

ಮರ : ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ

ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಮತ್ತು ತಿರುಚಿಕೊಂಡಿರುವ ಅಂಚುಗಳು ; ಸಾಧಾರಣ ಪ್ರಮುಖವಾಗಿರುವ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್ ಲೇಕ್, ಬಲಿಯುತ್ತಿರುವ ಎಳೆಯ ಎಲೆಗಳು ಸಿಟ್ರೈನ್, ಇವು ಅನಂತರ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಡೀಪ್ ವಿನೇಷಿಯಸ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಂಡಾಶಯಕ್ಕಿಂತ ಸಣ್ಣ ಕೇಸರಗಳು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಗುಂಡು ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮವಾದ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಇಳಿಜಾರಾಗುತ್ತದೆ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ತಿಳಿಯಾದ ಕ್ರೋಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪಿನಾರ್ಡ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ; ಕುಳ್ಳಾದ ನಿಬಿಡವಾದ ಮತ್ತು ಮೃದುವಾದ ನಾರು ಇದರ ಎಲ್ಲಾ ಭಾಗದಲ್ಲಿ ಆವರಿಸಿರುತ್ತದೆ, ಕೆಳಅಂಚಿನಲ್ಲಿ ನಾರಿನ ಪ್ರಮಾಣದ ಮಧ್ಯಮ ; ಕವಲೊಡೆದಿರುವ ನಾಳಗಳು ತುಸು ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ಗುಣಮಟ್ಟ ; ಮಧ್ಯಕಾಲಿಕದಿಂದ ನಿಧಾನಕಾಲಿನ ಫಸಲು; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಮಧ್ಯಮ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಚಂಬಾತಾನ್

ಈ ತಳಿಯನ್ನು, ಆಂಧ್ರ ಪ್ರದೇಶದ ಕೊಡೂರು ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಅಭ್ಯಾಸಮಾಡಲಾಗಿದೆ. ಇದರ ಮೂಲಸ್ಥಾನ, ಇತಿಹಾಸ ತಿಳಿದು ಬಂದಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಮ್ಮಟಾಕಾರದ ಮೇಲ್ಭಾಗ ; ದಪ್ಪ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಚೆನ್ನಾಗಿ ಹಿಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ಸ್ವಲ್ಪ ತಿರುಚಿಕೊಂಡಿರುತ್ತವೆ ; ಸಾಧಾರಣ ಪ್ರಧಾನವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಚಾಲೆಟ್ ರೆಡ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಲೈಟ್ ರಸೆಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಗೋಪುರಾಕಾರ, ಚಕ್ಕೋತನ ಹಣ್ಣಿನ ಬಣ್ಣ, ಕಡಮೆ ಮೃದುತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ; ಓರೆ ಗುಂಡಾದ ಬುಡ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲವಾಗಿ ಇರುತ್ತದೆ ; ಮೇಲ್ಭುಜ ತಟಕ್ಕನೆ ಮುಗಿದು ಅನಂತರ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಚಪ್ಪಟೆ ತುದಿ ; ತೆಳುವಿನಂದ ಸಾಧಾರಣ ದಪ್ಪದ ಸಿಪ್ಪೆ, ನಯದಿಂದ ಕೆಲವು ಸಾರಿ ಸಣ್ಣ ಗಂತಿಗಳಿರುವ ಮೇಲ್ಭಾಗದ ಬಣ್ಣ ಆಳವಾದ ಕ್ರೋಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ಕಡಮೆ ಪರಿಮಾಣದ ನಾರು, ಗೋಲ್ಡನ್ ಗ್ಲೋ ಬಣ್ಣ ; ಸ್ವಲ್ಪ ಹಿತಕರವಾದ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ನಾರಿನಿಂದ ಕೂಡಿರುತ್ತದೆ; ಮಧ್ಯಮ ನಾರು, ಇದರ ಮೇಲೆ ಎಲ್ಲಾ ಭಾಗದಲ್ಲಿರುತ್ತದೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮ ಕಾಲದಿಂದ ನಿಧಾನ ಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಚಂದ್ರಕಾರನ್

ಇದು ಕೇರಳ ರಾಜ್ಯದ ಬಹು ಪ್ರೌಢ ತಳಿ. ಇದು ಹೆಚ್ಚು ಪರಿಮಾಣದ ರಸದಿಂದ ಕೂಡಿರುವ ಕಾರಣ ಆ ರಾಜ್ಯದ ಕೆಲವು ವರ್ಗದ ಜನಪ್ರಿಯತೆಯನ್ನು ಗಳಿಸಿದೆ. ಇದು ಗೊಂಚಲುಗಳಲ್ಲಿ ಫಲವನ್ನು ಬಿಡುತ್ತದೆ. ಇದರ ಒಂದು ಕೊರತೆಯೆಂದರೆ ಬಹಳ ಸಣ್ಣ ಗಾತ್ರದ ಹಣ್ಣುಗಳು.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಷ್ಯಾಡೋ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಅಬ್‌ಸಿನ್ತೆ ಗ್ರೀನ್, ಇವು ಕ್ರಮೇಣ ಆಲಿವ್ ಲೀಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೋರಲ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು, ಅದಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣ, ದೀರ್ಘಚತುರಸ್ರ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿ ಇರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಥಟಕ್ಕನೆ ಇಳಿ ಜಾರಾಗುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಮೆದುವಾದ ತಿರುಳು, ಕ್ಯಾಡ್ಮಿಯಮ್ ಯೆಲ್ಲೋ ಬಣ್ಣ ; ಸಾಧಾರಣ ನಾರಿನಿಂದ ಕೂಡಿರುತ್ತದೆ, ಮಧ್ಯಮ ಪರಿಮಾಣದ ನಾರು, ಮೃದುವಾಗಿರುತ್ತದೆ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮದಿಂದ ಸಿಹಿಯಾಗಿರುವ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ : ಮಧ್ಯಕಾಲಿಕ, ಹೆಚ್ಚು ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾಗಿ ಬಲಿಯಾಗುತ್ತದೆ ; ಕೆಳ ದರ್ಜೆಯ ಶೇಖರಣೆ ಗುಣ.

ಚೆರಕುರಸಂ

ಇದು ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ವಾಣಿಜ್ಯ ತಳಿ, ಇದರ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದುಬಂದಿಲ್ಲ. ಗೊಂಚಲುಗಳಲ್ಲಿ ಹೆಚ್ಚು ಇಳುವರಿ ಕೊಡುವ ಈ ತಳಿ ಒಣ ಪ್ರದೇಶಗಳ ಬೇಸಾಯಕ್ಕೆ ಯೋಗ್ಯವಾಗಿದೆ. ಹೊಸದಾಗಿ ಬೇಸಾಯ ಮಾಡಿದ ಸ್ಥಳಗಳಲ್ಲಿ ಇದು ಯಶಸ್ವಿಯಾಗಿರುವುದರಿಂದ, ತಮಿಳುನಾಡಿನಲ್ಲಿ ನಿಧಾನವಾಗಿ ವ್ಯಾಪಿಸುತ್ತಿದೆ. ಇದು ಉತ್ತರ ಭಾರತಕ್ಕೆ ತಲುಪುವ ನಿರೀಕ್ಷಣೆಯೂ ಇದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಯೆಲ್ಲೋಯಿಷ್ ಸಿಟ್ರೈನ್, ಅನಂತರ ಇವು ಅನಂತರ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೋರಲ್ ಪಿಂಕ್, ಸಾಧಾರಣ ಮೃದುತುಪ್ಪಳು : ಅಂಡಾಶಯಕ್ಕಿಂತ ಚಿಕ್ಕದಾಗಿರುವ ಕೇಸರಗಳು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಸ್ವಲ್ಪ ಓರೆ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಸಮ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಕೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಗೋಲ್ಡನ್ ಗ್ಲೋ ಬಣ್ಣ ; ಹೆಚ್ಚು ಪರಿಮಾಣದ ನಾರಿನಿಂದ ಕೂಡಿರುತ್ತದೆ ; ಮಧ್ಯಮ ಉದ್ದದ ಮೃದುವಾದ ನಾರು ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ, ಮೃದುವಾದ ನಾರು ಇರುತ್ತದೆ; ಸಮಾನಾಂತರ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮ ದರ್ಜೆ ; ಗೊಂಚಲುಗಳಲ್ಲಿ ಬಿಡುವ ಹೆಚ್ಚು ಇಳುವರಿ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ, ಅತ್ಯುತ್ತಮವಾದ ಶೇಖರಣೆ ಗುಣ.

ಚಿನ್ನರಸಂ

ಇದು ಆಂಧ್ರ ಪ್ರದೇಶದ ಕೃಷ್ಣ ಮತ್ತು ಗೋದಾವರಿ ಜಿಲ್ಲೆಗಳಲ್ಲಿ ಅಧಿಕ ಬೇಸಾಯದಲ್ಲಿದೆ. ಈ ಪ್ರದೇಶಗಳಲ್ಲಿ ಇದು ಅಚ್ಚು ಮೆಚ್ಚಿನ ತಳಿಯಾಗಿದೆ. ಇದರಲ್ಲಿ ನಾರಿರುವ ಗುಣದಿಂದ ಇತರ ಜಿಲ್ಲೆಗಳಲ್ಲಿ ಇದು ಜನಾನುರಾಗಿಯಾಗಿಲ್ಲ. ರಸಭರಿತ ಮಾವನ್ನು ಇಚ್ಛಿಸುವ ಬೇಸಾಯಗಾರರು ಇದರ ಬೇಸಾಯವನ್ನು ಮಾಡಬಹುದು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾಕಾರದಿಂದ ಕಳಸಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನೇರವಾಗಿರುತ್ತವೆ, ನಡುದಿಂಡಿನ ಮೇಲೆ ದೃಢವಾಗಿ ಹಿಂಬಾಗಿರುತ್ತವೆ ಮತ್ತು ಮಡಿಚಿರುತ್ತವೆ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಳವಾದ ಸಿಟ್ರೈನ್, ಅನಂತರ ಇವು ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡವು, ಎಕ್ರೂ ಆಲಿವ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ಸಣ್ಣದು, ದೀರ್ಘ ಚತುರಸ್ರದಿಂದ ಓರೆಯಾಕಾರ ; ಓರೆಗುಂಡಿನಿಂದ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು; ಹೊಕ್ಕಳು ಇಲ್ಲ ಅಥವಾ ಸ್ವಲ್ಪ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ತಿಳಿ ಕ್ಯಾಡ್ಮಿಯಮ್ ಬಣ್ಣ ; ಮೆದುವಾದ ತಿರುಳು, ಪ್ರಿಮೂಲೈನ್ ಯೆಲ್ಲೊ ಬಣ್ಣ ; ನಾರಿನಿಂದ ಕೂಡಿರುತ್ತದೆ, ಮಧ್ಯಮ ಉದ್ದದ ಮೃದುವಾದ ನಾರು ಹೆಚ್ಚು ಪರಿಮಾಣದಲ್ಲಿರುತ್ತದೆ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ; ಇದರ ಮೇಲೆ ಎಲ್ಲಾ ಭಾಗದಲ್ಲಿ ಉದ್ದವಾದ ಮೃದುವಾದ ನಾರು ಇರುತ್ತದೆ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ; ಮಧ್ಯಮ ಪರಿಮಾಣದ ಇಳುವರಿ, ಶೀಘ್ರದಿಂದ ಮಧ್ಯಕಾಲಿಕ ಫಸಲು; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ; ಗಾಳಿಗೆ ಸುಲಭವಾಗಿ ಬಲಿಯಾಗುತ್ತದೆ; ಉತ್ತಮದಿಂದ ಕೀಳು ಶೇಖರಣೆ ಗುಣ.

ಥೋಟಾ ಜಹಾಂಗೀರ್

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಬಗ್ಗೆ ಅಧಿಕೃತ ಮಾಹಿತಿ ದೊರೆತಿದೆ. ಇದರ ಮೂಲಸ್ಥಾನ ಆಂಧ್ರಪ್ರದೇಶದ ವಿಶಾಖಪಟ್ಟಣವೆಂದು ತಿಳಿದು ಬಂದಿದೆ. ಇದರ ವ್ಯಾಪ್ತಿ ಬಹಳ ಕಡಮೆ. ಕೇರಳ ರಾಜ್ಯದ ಟ್ರಿಚೂರು ಹತ್ತಿರ ವಿರುವ ಬಳ್ಳೂರ್ ಕಾರ ಸರ್ಕಾರಿ ಕೇಂದ್ರ ತೋಟಕ್ಕೆ ಇದನ್ನು ತಂದು ಇಲ್ಲಿಂದ ಆಂಧ್ರಪ್ರದೇಶದ ಕೊಡೂರು ಹಣ್ಣಿನ ಸಂಶೋಧನಾ ಕೇಂದ್ರಕ್ಕೆ ಒಯ್ಯಲಾಗಿದೆ. ಇತ್ತೀಚೆಗೆ ಈ ಎರಡು ಕೇಂದ್ರಗಳು ಥೋಟಾ ಜಹಾಂಗೀರ್ ತಳಿಯನ್ನು ವಿತರಣೆ ಮಾಡುವ ಕೇಂದ್ರಗಳಾಗಿವೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ನಿಂದಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರು ತ್ತವೆ; ನಯವಾದ ಅಂಚುಗಳು; ಸಾಧಾರಣ ಪ್ರಮುಖ ನಾಳರಚನೆ; ಮೊನಚು ತುದಿ; ಮೊನಚು ಬುಡ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ತಿಳಿವಾದ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಅನಂತರ ಎಕ್ರೊ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊಜ್F ಗ್ರೀನ್ ಬಣ್ಣ, ನಿಬಿಡವಾದ ಮೃದುತುಪ್ಪಳು ; ಅಂಡಾಶಯಕ್ಕೆ ಸಮವಾಗಿರುವ ಮತ್ತು ಸಮಾನಾಂತರವಾಗಿರುವ ಕೇಸರಗಳು ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಗುಂಡು, ಓರೆ ; ಓರೆ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅದಕ್ಕೆ ಸಮವಾಗಿರುತ್ತದೆ, ವಿಶಾಲ ಗುಂಡಾಕಾರ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಸ್ವಲ್ಪ ಪ್ರಮುಖವಾಗಿರುತ್ತದೆ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ ; ಮೃದುವಾದ ತಿರುಳು, ನಾರು ಇರುವುದಿಲ್ಲ, ನ್ಯಾಪಲ್ಸ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಪೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಸಾಧಾರಣ ಹೆಚ್ಚು ಪರಿಮಾಣದ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ಮತ್ತು ಟೊಳ್ಳಾಗಿರುವ ನಾಳಗಳು.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮದಿಂದ ಹೆಚ್ಚು ಪರಿಮಾಣದ ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸುಲಭವಾಗಿ ಬಲಿಯಾಗುತ್ತದೆ ; ಮಧ್ಯಮ ಶೇಖರಣೆ ಗುಣ.

ಕೋವಾಸ್‌ಜಿ ಪಟೇಲ್

ಇದು ಬೊಂಬಾಯಿ ರಾಜ್ಯದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದನ್ನು ಉತ್ತಮ ಆಕಸ್ಮಿಕ ಸಸಿಯಾಗಿ ವೃದ್ಧಿ ಮಾಡಿದ ವ್ಯಕ್ತಿಯ ಹೆಸರಿನಿಂದ ಈ ಹೆಸರು ಬಂದಿರಬಹುದೆಂದು ಭಾವಿಸಲಾಗಿದೆ. ಈ ತಳಿಯ ಹಣ್ಣು ಕೆಳದರ್ಜೆಯಾದರೂ ಇದನ್ನು ಮೊರಬ್ಬ, ಕ್ಯಾಂಡಿ, ಉಪ್ಪಿನಕಾಯಿ ಮುಂತಾದವುಗಳನ್ನು ಮಾಡಲು ಹೆಚ್ಚಾಗಿ ಉಪಯೋಗಿಸುವುದರಿಂದ ಜನಪ್ರಿಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಹಿಡಿದು ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಕಡಮೆಯಿಂದ ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದ ಬುಡ ; ದಪ್ಪವಾದ ರೆಂಬೆಗಳು

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ಅಲೆಯಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲಿಬೋರ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಅನಂತರ ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೆಟ್ಯೂಸ್ ಗ್ರೀನ್ ಬಣ್ಣ, ಒತ್ತಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅನಿಯತ ಅಂಡಾಕಾರ ; ಗುಂಡಿನಿಂದ ಚಪ್ಪಟೆಯಾದ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕಡಮೆ ಆಳದಿಂದ ಆಳವಾದ ಕುಳಿ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ ; ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ಗುಂಡು ತುದಿ; ದಪ್ಪ ಸಿಪ್ಪೆ, ಒರಟಿನಿಂದ ಗಂಟಿ ಚರ್ಮ, ಸ್ಪಿನಾಚ್ ಗ್ರೀನ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು ದೂರದಲ್ಲಿರುತ್ತವೆ ; ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ಬಿರುಸಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೋ ಬಣ್ಣ ; ಅಮ್ಲ ವಾಸನೆ ; ಹುಳಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾಗಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ನೀರಸಫಲದಂತೆ ಕೀಳುದರ್ಜೆಯದು, ಅಡಿಗೆಗೆ ಉತ್ತಮ ; ಮಧ್ಯದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ

ಸಾಧಾರಣ ನಿರೋಧಕತೆ ; ಕೀಳು ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ದಾದಾಮಿಯೊ

ಇದು ಬರೋಡಾದ ಮುಖ್ಯವಾದ ತಳಿ. ಹೆಚ್ಚು ಇಳುವರಿ ಕೊಡುವ ತಳಿ. ಇದರ ಬೇಸಾಯ ಪರಿಮಿತ ಪ್ರದೇಶಕ್ಕೆ ಸೀಮಿತವಾಗಿದೆ. ಇದರ ಮೂಲಸ್ಥಾನದ ಇತಿಹಾಸ ತಿಳಿದಿಲ್ಲ.

ಮರ : ಮಧ್ಯಮ ಗಾತ್ರ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಪ್ರತಿವರ್ಷ ಫಲಕಾರಿ, ಅಧಿಕ ಉತ್ಪನ್ನಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ ; ನಯವಾದ ಅಂಚುಗಳು ; ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ತಿಳಿಯಾದ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳು ಆರೆಂಜ್, ಇವು ಅನಂತರ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರ್ಜ್ ಗ್ರೀನ್ ಬಣ್ಣ, ಕಡಮೆ ಮೃದುತುಪ್ಪಳು ; ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರವಾಗಿರುವ ಕೇಸರಗಳು ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಅಂಡಾಕಾರ, ಸ್ವಲ್ಪ ಚಪ್ಪಟೆಯಿಂದ ಚೂಪಾಗುವ ಬುಡ ; ಚಚ್ಚೌಕವಾಗಿ ಸೇರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಮೇಲ್ಭುಜ ಕೆಳಭುಜಕ್ಕಿಂತ ಎತ್ತರ, ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪದಿಂದ ನಿರ್ದಿಷ್ಟವಾಗಿರುವ ಕೊಕ್ಕು ; ಚೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ಗುಂಡಿನಿಂದ ಚಪ್ಪಟೆಯಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟಾಗಿರುವ

ಮೇಲ್ಭಾಗ ಆಳವಾದ ಕ್ರೋಮ್ ಬಣ್ಣ, ಕೆಳಭುಜದ ಮೇಲೆ ಪೆಪ್ಪರ್ ರೆಡ್ ಕಾಂತಿ; ಸಣ್ಣದಿಂದ ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ಮಿಯಮ್ ಬಣ್ಣ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ಉದ್ದ, ಅಂಡ ದೀರ್ಘಚತುರಸ್ರ ; ನಾರಿನಿಂದ ಕೂಡಿರುತ್ತದೆ, ಮಧ್ಯಮದಿಂದ ಹೆಚ್ಚು ಪರಿಮಾಣದ ನಾರು, ಸಾಧಾರಣವಾದ ಮೃದುವಾದ ನಾರು ಇದರ ಮೇಲೆ ಎಲ್ಲಾ ಭಾಗದಲ್ಲಿರುತ್ತವೆ, ಕೆಳಅಂಚಿನಲ್ಲಿ ಹೆಚ್ಚು ನಾರಿನ ಪರಿಮಾಣ; ಸಮಾನಾಂತರವಾದ ಕವಲೊಡೆದಿರುವ ಮತ್ತು ಟೊಳ್ಳಾಗಿರುವ ನಾಳಗಳು

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ ಫಲ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ದುಸೆರಿ ಅಮಾನ್

ಈ ತಳಿಯ ಹೆಸರು, ಉತ್ತರ ಪ್ರದೇಶದ ಲಕ್ನೋ ಮತ್ತು ಮಾಲಿಹಬಾದ್ ನಡುವೆ ಇರುವ ಲಕ್ನೋ ನವಾಬನ ವಶದಲ್ಲಿರುವ ಒಂದು ಹಳ್ಳಿಯಿಂದ ಉದ್ಭವಿಸಿದೆ. ನವಾಬನ ತೋಟದಲ್ಲಿ ಉತ್ತಮ ಗುಣದ ಆಕಸ್ಮಿಕ ಸಸಿಯಿಂದ ಈ ತಳಿಯು ಉದ್ಭವಿಸಿದೆ. ಈ ತಳಿಯ ಕೆಲವು ಕಸಿ ಸಸ್ಯಗಳನ್ನು ನವಾಬನು ಮಾಲಿಹಬಾದಿನ ಅಲಮ್ ಗಿರ್ ಖಾನನಿಗೆ ಬಳುವಳಿಯಾಗಿ ಕೊಟ್ಟನು. ಮುಂದೆ ಅಲಮ್‌ಗಿರ್ ಖಾನನ ತೋಟವು ಈ ತಳಿ ಮಾವನ್ನು ವಿತರಣೆ ಮಾಡುವ ಕೇಂದ್ರವಾಗಿದೆ. ಇದನ್ನು ಒಯ್ದು ಬೇಸಾಯ ಮಾಡಿದ ಎಲ್ಲಾ ಸ್ಥಳಗಳಲ್ಲಿ ಉತ್ತಮ ದರ್ಜೆ ಫಲ ಸಿಕ್ಕಿದ್ದು ಪ್ರೋತ್ಸಾಹಕಾರಿಯಾಗಿದೆ. ಈ ತಳಿಯು ಉತ್ತರದಲ್ಲಿ ಸಿಂಧೂ, ಗಂಗಾ ನದಿಯ ಮೈದಾನ ಮತ್ತು ಬಂಗಾಳದಲ್ಲೂ, ದಕ್ಷಿಣದಲ್ಲಿ ಹೈದರಾಬಾದಿನವರೆಗೂ ವ್ಯಾಪಿಸಿದೆ. ಇದು ರುಚಿ, ಮತ್ತು ತಿರುಳಿನ ಬಣ್ಣದಲ್ಲಿ ಬಾಂಬೆ ಅಲ್ಫಾನ್ಸೊ ತಳಿಯನ್ನು ಹೋಲುತ್ತದೆ. ಆದರೆ ಗಾತ್ರದಲ್ಲಿ ಅಲ್ಫಾನ್ಸೊ ತಳಿಗಿಂತ ಚಿಕ್ಕದು. ದಕ್ಷಿಣ ಭಾರತದಲ್ಲಿ ಇದರ ಬೇಸಾಯದಲ್ಲಿ ಕಂಡುಬರುವ ತೊಡಕೆಂದರೆ, ಹಣ್ಣಿನ ಗಾತ್ರ ಸಣ್ಣದಾಗುವುದು ಮತ್ತು ಹಣ್ಣಾದ

ನಂತರ ಉತ್ತರ ಭಾರತದಲ್ಲಿ ಈ ಹಣ್ಣಿಗೆ ಬರುವಂತಹ ಆಳವಾದ ಕಿತ್ತಳೆ ಹಳದಿ ಬಣ್ಣ ಬಾರದಿರುವುದು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು, ಕೆಲವು ಸಾರಿ ಅಲೆಯ ಪ್ರವೃತ್ತಿಯವು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್, ಮುಂದೆ ಇವು ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಮಿಗ್ನೊನೆಟ್ ಗ್ರೀನ್ ಬಣ್ಣ, ಕಡಮೆ ಮೃದುತುಪ್ಪಳು ; ಅಂಡಾಶಯಕ್ಕೆ ಚಿಕ್ಕದಾಗಿರುವ ಮತ್ತು ಅದಕ್ಕೆ ಓರೆಯಾಗಿರುವ ಕೇಸರಗಳು ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸದಿಂದ ದೀರ್ಘ ಚತುರಸ್ರ, ಓರೆಯಾಕಾರ ; ಗುಂಡಿನಿಂದ ಓರೆ ಗುಂಡಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ, ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ಹತ್ತಿರ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕಾಪುಸೈನ್ ಯೆಲ್ಲೊ ಬಣ್ಣ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ದರ್ಜೆ ; ಮಧ್ಯಕಾಲಿಕ, ಹೆಚ್ಚು ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ದಿಲ್‌ಪಸಂದ್

ಇದು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ. ಇದನ್ನು ಒಯ್ದು ಬೇಸಾಯ ಮಾಡಿದ ಒಣ ಪ್ರದೇಶಗಳಲ್ಲಿ ಇದು ಯಶಸ್ವಿಯಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರ ಅಥವಾ ಹರಡುವ ಗುಣ ; ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಿನಿಂದ ಕಳಸಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾಗಿರುವ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರ್ಯುಗ್ರೀನ್, ಇವು ಅನಂತರ ಟಾನಿ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೋರಲ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳ ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಗುಂಡು ಬುಡ ; ಚಪ್ಪಟೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಇಳಿಜಾರಿನಿಂದ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಳೆ ತೊಟ್ಟು

ನಾಕಾರದ ಕೊಕ್ಕು ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಹೆಚ್ಚು ಆಳವಿಲ್ಲದ ಹೊಕ್ಕಳು ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಸನ್ ಫ್ಲವರ್ ; ಮಧ್ಯಮ ಗಾತ್ರದ ಚುಕ್ಕೆಗಳು ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಮಸ್ಟರ್ಡ್ ಯೆಲ್ಲೊ ಬಣ್ಣ ; ಹಿತಕರವಾದ ರುಚಿ ; ಸಾಧಾರಣ ಸಿಹಿಯಾದ ರುಚಿ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮೃದುವಾದ ಕಡಮೆ ಪರಿಮಾಣದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ, ಮಧ್ಯಮಪರಿಮಾಣದ ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸುಮಾರಾಗಿ ಬಲಿಯಾಗುತ್ತದೆ ಮಧ್ಯಮ ಶೇಖರಣೆ ಗುಣ.

ದೊಂಡಕಾಯಾಲುಮಾನು

ಈ ತಳಿಯು ಆಂಧ್ರಪ್ರದೇಶದ ವಿಶಾಖಪಟ್ಟಣದ ಮೂಲವಾಗಿ ಅಲ್ಲಿ ಈ ತಳಿಯು ಅತ್ಯುತ್ತಮವಾಗಿ ಬೆಳೆಯುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ ; ಗುಂಡಾದ ಮೇಲ್ಭಾಗ ; ದಪ್ಪ ರೆಂಬೆಗಳು.

ಎಲೆಗಳು : ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ ಮತ್ತು ಮಡಚಿರುತ್ತವೆ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಲೈವ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಳವಾದ ಕ್ರೈಸೊಲೈಟ್ ಗ್ರೀನ್, ಇವು ಮುಂದೆ ಆಲಿವ್ ಯೆಲ್ಲೊ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಲೈಮ್ ಗ್ರೀನ್ ಬಣ್ಣ, ನಿಬಿಡವಾದ ಮೃದುತುಪ್ಪಳು ; ಸಮವಾಗಿರುವ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೇ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : *ಗಾತ್ರದಲ್ಲಿ ಸಣ್ಣ, ದೀರ್ಘಚತುರಸ್ರ ಮೂತ್ರ ಪಿಂಡಾಕಾ ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಕುಳಿ ಇರುವುದಿಲ್ಲ ; ಕೆಳಭು* ಮೇಲ್ಭುಜಕ್ಕೆ ಸಮ ಮತ್ತು ಅದೇ ಮಟ್ಟದಲ್ಲಿರುತ್ತದೆ, ಉದ್ದವಾದ ಡೊಂಕಿನ ಮುಗಿಯುತ್ತದೆ, ಮೇಲ್ಭುಜ ಇಳಿಜಾರಾಗಲು ತಟಕ್ಕನೆ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಅಥವಾ ಆಳವಾದ ಹೊಕ್ಕಳು ; ಗುಂಡು ತುದಿ ಮಧ್ಯಮ ದಪ್ಪದ ಸಿಪ್ಪೆಯ ಬಣ್ಣ ಗೋಲ್ಡನ್ ಗ್ಲೊ ; ಸಣ್ಣ ಗಾತ್ರದ ಚುಕ್ಕೆಗಳ ಹತ್ತಿರದಲ್ಲಿರುತ್ತವೆ ; ಮೆದುವಾದ ತಿರುಳು, ಆಳವಾದ ಕ್ರೀಮ್ ಬಣ್ಣ, ಸಾಧಾರಣ ವಾದ ನಾರಿನಿಂದ ಕೂಡಿರುತ್ತದೆ, ನಾರು ಉದ್ದ ಮತ್ತು ಮೃದು ; ಆಹ್ಲಾದಕರ ವಾಸನೆ ; ಸಿಹಿಯಿಂದ ಬಹಳ ಸಿಹಿಯಾದ ರುಚಿ ; ಹೆಚ್ಚಿನಿಂದ ಅತಿ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮೃದುವಾದ ಮತ್ತು ಉದ್ದವಾದ ನಾರು ಇರುತ್ತದೆ ; ಸಮಾನಾಂತರ ನಾಳ ಟೊಳ್ಳಾಗಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮವಾದ ದರ್ಜೆ ; ಮಧ್ಯಕಾಲಿಕ, ಹೆಚ್ಚು ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಉತ್ತಮದಿಂದ ಮಧ್ಯಮ ಶೇಖರಣೆ ಗುಣ.

ದೂದಿಯ

ಈ ತಳಿಯು ಹೈದ್ರಾಬಾದ್ ಪ್ರದೇಶದ್ದು, ಇದನ್ನು ದೂದಿಯ ಮಲಗೋವ ಎಂದು ಸಹ ಕರೆಯುವುದುಂಟು. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ಹಣ್ಣು ಉತ್ತಮವಾದ ಗುಣಗಳನ್ನು ಹೊಂದಿರುವುದರಿಂದ ಮನೆಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಕಡಮೆಯಿಂದ ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ

ಗಳು, ಕೆಲವು ಸಾರಿ ಅಲೆ ಅಂಚಿನ ಪ್ರವೃತ್ತಿ ; ಸಾಧಾರಣ ಪ್ರಮುಖವಾದ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಮುಂದೆ ಇವು ಆರೆಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕ್ರೈಸೊಲೈಟ್ ಗ್ರೀನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಸಮ ಮತ್ತು ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡು ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಹೆಚ್ಚು ಆಳವಿಲ್ಲದ ಕುಳಿ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಗುಂಡಾಗಿರುವುದರಿಂದ ಎತ್ತರ ಮತ್ತು ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುವುದಕ್ಕೆ ಗುಂಡಾಗುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ದಪ್ಪ ಸಿಪ್ಪೆ, ನಯ, ಟಾ–ಮಿಂಗ್ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರವಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಮಧ್ಯಮ ಪ್ರಮಾಣದ ರಸ.

ಓಟೆ : ಮಧ್ಯಮ ಗಾತ್ರ, ಅಂಡಾಕಾರದಿಂದ ದೀರ್ಘಚತುರಸ್ರ ; ಇದರ ಮೇಲೆಲ್ಲಾ ಬಹಳ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಫಲಕಾರಿ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ದೋಫೂಲ್

ಈ ತಳಿಯನ್ನು ಒರಿಸ್ಸಾ ರಾಜ್ಯದಲ್ಲಿರುವ ಕಟಕ್‌ನಿಂದ ಅಭ್ಯಾಸಕ್ಕಾಗಿ ತರಿಸಿಕೊಂಡಿದೆ. ಇದು ಪಶ್ಚಿಮ ಬಂಗಾಳ ಮತ್ತು ಬಿಹಾರ್ ರಾಜ್ಯಗಳಲ್ಲಿ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ವರ್ಷಕ್ಕೆ ಎರಡು ಫಸಲು ಕೊಡುವುದರಿಂದ ಇದು ಪ್ರಾಮುಖ್ಯತೆಯನ್ನು ಪಡೆದಿದೆ. ತಳಿ ಶೀಘ್ರಕಾಲಿಕವಾಗಿ ಮಧ್ಯಮದಿಂದ ಹೆಚ್ಚು ಪರಿಮಾಣದ ಇಳುವರಿಯನ್ನು ಕೊಡುತ್ತದೆ ಮತ್ತು ಅಕಾಲದಲ್ಲಿ ಕಡಮೆ ಇಳುವರಿಯನ್ನು ಕೊಡುತ್ತದೆ. ಈ ಕಾರಣದಿಂದಾಗಿ, ಇದು ಮಧ್ಯಮ ಗುಣದ ತಳಿಯಾದರೂ ಸಹ ಇದನ್ನು ಬಹಳ ಕಡೆಗಳಲ್ಲಿ ಬೆಳೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಚಪ್ಪಟೆ ; ನಯ ಅಂಚುಗಳು, ಕೆಲವು ಕಾರಿ ಅಂಚಿನ ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮಿನರಲ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಸ್ಪ್ಯಾನಿಷ್ ಪರ್ಪಲ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ದೊಡ್ಡವು ಮತ್ತು ಅದಕ್ಕೆ ಓರೆಯಾಗಿರುತ್ತವೆ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಅಂಡ ಓರೆಯಾಕಾರ ; ಓರೆ ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ದುಂಡಾದ ಕೆಳಭುಜ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸಿರ್ದಿಷ್ಟದಿಂದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ; ದುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಬ್ರಾಂಜ್

ಯೆಲ್ಲೋ ; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗ ದಿಂದ ಹೊರಬಂದಿರುತ್ತವೆ; ಗಟ್ಟಿಯಾದ ತಿರುಳು,ನಾರು ಇರುವುದಿಲ್ಲ, ಯೆಲ್ಲೋ ಒಕ್ರೆ ಬಣ್ಣ ; ಹಿತಕರವಾದ ಸ್ವಲ್ಪ ವಾಸನೆ ; ಮಧ್ಯಮ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದುವಾದ ನಾರು ಇರುತ್ತದೆ ಮತ್ತು ಕೆಳ ಅಂಚಿನಲ್ಲಿ ಮಧ್ಯಮ ನಾರು ; ಸಮಾನಾಂತರ ನಾಳಗಳು ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಶೀಘ್ರಕಾಲಿಕ ಮತ್ತು ಅಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ; ಉತ್ತಮ ವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಫಜ್ರಿ

ಈ ತಳಿಯು, ಬಿಹಾರ ರಾಜ್ಯದ ಭಾಗಲ್ಪುರದ ಸಿವಾಸಿ ಫಜ್ರಿ ಎಂಬ ಹೆಂಗಸಿನ ಮನೆಯ ಪಕ್ಕದಲ್ಲಿ ಇದ್ದ ಮಾವಿನ ಮರದಲ್ಲಿ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ. ಈ ಮೂಲಸ್ಥಾನದಿಂದ ಇದು ಇತ್ತೀಚೆಗೆ ಗಂಗಾ ನದಿಯ ಮೈದಾ ನಕ್ಕೆ ಹರಡಿದ್ದು, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿ ಬೇಸಾಯಕ್ಕೆ ಬಂದಿದೆ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಹೊಸದಾಗಿ ಬೇಸಾಯ ಮಾಡಿದ ಸ್ಥಳಗಳಲ್ಲಿ ಜನಪ್ರಿಯತೆಗಳಿಸಿದೆ. ಇದು ವಾಣಿಜ್ಯ ದೃಷ್ಟಿಯಿಂದ ಬೇಸಾಯ ಮಾಡುವುದಕ್ಕೆ ಯೋಗ್ಯವಾದ ತಳಿ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡು ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನಯವಾದ ಅಂಚುಗಳು, ಕೆಲವು ಸಾರಿ ಅಲೆಯ ಅಂಚಿನ ಪ್ರವೃತ್ತಿ ; ಸಾಧಾರಣ

ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬು ಹೊಸದಾಗಿ ಹೊರಬರುತ್ತಿರುವ ಎಲೆಗಳ ಮತ್ತು ಬಲಿಯುತ್ತಿರುವ ಎಲೆಗಳ ಬ ಸಿಟ್ರೈನ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : *ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆಲಿವ್ ಓಕ್ರೆ ಬ ಸಾಧಾರಣವಾದ ಪುಷ್ಪತುಚ್ಛಗಳು ; ಸಮ ಕೇಸರಗಳು ಅಂಡಾಶಯಕ್ಕೆ ಸಮ ನಾಂತರ : ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.*

ಹಣ್ಣು : *ಗಾತ್ರದಲ್ಲಿ ದೊಡ್ಡವು, ಓರೆ ಮೊಟ್ಟೆಯಾಕಾರ ; ಓರೆ ಗುಂಡು ಬುಡ : ಚಪ್ಪಟೆಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ* ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ದಿಂದ ಸ್ವಲ್ಪ ಪ್ರಮುಖವಾಗಿರುವ ಕೊಕ್ಕು, ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾಗಿರುತ್ತದೆ, ಸಿಪ್ಪೆಗಂಟಿ ಪ್ರವೃತ್ತಿ, ಲೈಟ್ ಕ್ರೋಮ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೃದುವಾದ ತಿರುಳು, ತಿಳಿ ಕ್ಯಾಡ್‌ಮಿಯಮ್ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲ್ಭಾಗದಲ್ಲಿ ತೆಳುವಾದ, ಕುಳ್ಳಾದ ಮತ್ತು ಮೃದುವಾದ ನಾರು ಎಲ್ಲಾ ಭಾಗದಲ್ಲಿ ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ದರ್ಜೆ ; ಮಧ್ಯಕಾಲದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಫಜ್ರಿ ಜಫ್ರಾನಿ

ಫಜ್ರಿ ಎಂದರೆ ಒಬ್ಬ ಹೆಂಗಸಿನ ಹೆಸರು, ಜಫ್ರಾನ್ ಎಂದರೆ ಹೆಚ್ಚು ಬೆಲೆಯ ಒಂದು ಸುಗಂಧ ವಸ್ತು ಎಂದು ಅರ್ಥ. ಇದಕ್ಕೆ ಕರ್‌ರಾನ್ ಜಾನ್ ಸಾಹೇಬ್

ಎಂಬ ಹೆಸರೂ ಇದೆ, ಕರ್‌ರಾನ್ ಎಂದರೆ ಸೌತೆಗೆ ಸಂಬಂಧಿಸಿದ ಒಂದು ಪ್ರಭೇಧ, ಜಾನ್ ಸಾಹೇಬ್ ಎಂಬುದು, ಇದನ್ನು ಪ್ರಥಮ ಬಾರಿಗೆ ಬೇಸಾಯ ಮಾಡಿದ ಷಹ ರಾನ್‌ಪುರದ ಒಬ್ಬ ಕ್ರಿಶ್ಚಿಯನ್ನನ ಹೆಸರು ಈ ತಳಿ ಸಸ್ಯವನ್ನು ಮೊದಲ ಬಾರಿಗೆ ವೃದ್ಧಿ ಮಾಡಿದ ಹಾಗೂ ನೆಟ್ಟ ವ್ಯಕ್ತಿ ಎಂದರೆ ಮಹಮದ್‌ಖಾನ್. ಈತ ಷಹ ರಾನ್‌ಪುರದಲ್ಲಿನ ಹೆನ್‌ಬೇಸ್ ನರ್ಸರಿಯ ಇಂದಿನ ಮಾಲೀಕನ ಹಿರಿಯ ಅಣ್ಣ. ಈತ ಈ ತಳಿಗೆ ಫಜ್ರಿ ಜಫ್ರಾನಿ ಎಂಬ ಹೆಸರು ಕೊಟ್ಟಿದ್ದಾನೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ನೇರದಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ದಪ್ಪ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಿನ್ನೆಮಾನ್ ಬ್ರೌನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಅನಂತರ ಇವು ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಯೆಲ್ಲೊ ಒಕ್ರೆ ಬಣ್ಣ, ಸಾಧಾರಣವಾದ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಸಣ್ಣವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಸ್ವಲ್ಪ ಮೂತ್ರಪಿಂಡಾಕಾರ ; ಓರೆ ಗುಂಡು ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿದು ಇಳಿಜಾರಾಗುತ್ತದೆ ; ಹೆಚ್ಚು ಆಳವಿಲ್ಲದ ಹೊಕ್ಕಳು, ಗುಂಡು ತುದಿ ; ತೆಳುವಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಬಿರುಸಾಗಿರುವ ಮೇಲ್ಭಾಗ, ಟಾ-ಮಿಂಗ್ ; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ, ಡೀಪ್‌ಕ್ರೋಮ್ ಬಣ್ಣ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಸ್ವಲ್ಪ ಮೂತ್ರಪಿಂಡಾಕಾರ ; ಇವರ ಮೇಲೆ ಎಲ್ಲಾ ಭಾಗದಲ್ಲಿ ಸಿಬಿಡವಾದ, ತುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ : ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಫಕೀರ್‌ವಾಲಾ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದುಬಂದಿಲ್ಲ. ಇದಕ್ಕೆ ಇದನ್ನು ಉತ್ತಮ ಆಕಸ್ಮಿಕ ಸಸಿಯಾಗಿ ಆಯ್ಕೆ ಮಾಡಿದ ಫಕೀರನ ಜ್ಞಾಪಕಾರ್ಥವಾಗಿ ಈ ಹೆಸರು ಕೊಡಲಾಗಿದೆ. ಇದು ಭೂಪಾಲ್ ಮತ್ತು ಅದರ ಸುತ್ತಮುತ್ತಲ ಉತ್ತರಪ್ರದೇಶದ ಭಾಗಗಳಲ್ಲಿ ವ್ಯಾಪಿಸಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದ ಬುಡ ; ಸಣ್ಣದಿಂದ ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು, ಕೆಲವು ಸಾರಿ ಅಲೆಪ್ರವೃತ್ತಿ ಮತ್ತು ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರದಿಂದ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್, ಬಲಿಯುತ್ತಿರುವ ಎಲೆಯ ಎಲೆಗಳ ಬಣ್ಣ ಕೋರಲ್ ರೆಡ್ (ಹವಳಗೆಂಪು).

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್ ಕೋರಲ್ ರೆಡ್ ಬಣ್ಣ, ಕಡಮೆ ಮೃದು ತುಪ್ಪಳು ; ಅಂಡಾಶಯಕ್ಕಿಂತ ಚಿಕ್ಕ ಕೇಸರಗಳು, ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಬಿಂದುವಿನಿಂದ ಗುಂಡಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ ಪ್ರಿಮ್ಯೂಲೈನ್ ಯೆಲ್ಲೋ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು ಹತ್ತಿರವಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ನಾರು ಇರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೋ ಬಣ್ಣ, ಹಿತಕರವಾದ ಸ್ವಲ್ಪ ವಾಸನೆ, ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಮಧ್ಯಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ, ಹೆಚ್ಚಿನಿಂದ ಮಧ್ಯಮ ಪರಿಮಾಣದ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಯನ್ನು ಉತ್ತಮವಾಗಿ ನಿರೋಧಿಸುತ್ತದೆ ; ಕೆಳಗೆಯ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಫಕ್ರ-ಸ್-ಸಮಾರ್

ಇದು ಹೈದ್ರಾಬಾದಿನ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವ ಇತಿಹಾಸ ತಿಳಿದಿಲ್ಲ. ಇದು ಮಧ್ಯಮ ದರ್ಜೆಯ ಹಣ್ಣಿನ ಗುಣಗಳನ್ನು ಹೊಂದಿರುತ್ತದೆ.

ಮರ : ಗಾತ್ರದಲ್ಲಿ ಸಣ್ಣ; ನಿಧಾನವಾಗಿ ಬೆಳೆದು, ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಂಚುಗಳು ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಯಿಲ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್ ಲೇಕ್, ಇವು ಮುಂದೆ ಇಸಬೆಲ್ಲಾ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ ; ಅಬ್‌ಸಿನೆ ಗ್ರೀನ್ ಬಣ್ಣ, ಕಡಮೆ ಮೃದುತುಪ್ಪುಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಸಣ್ಣವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡು ಓರೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯಲು ಗುಂಡಾಗಿರುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ ; ಹೊಕ್ಕಳು ಇರುವುದಿಲ್ಲ ; ಗುಂಡಾದ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾಗಿರುತ್ತದೆ, ಬ್ರಾಸ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಸಿನಾರ್ಡ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಸನದ : ಗಾತ್ರದಲ್ಲಿ ಮಧ್ಯಮ ; ಸಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳನ್ನು ಚೆನ್ನಾಗಿ ಸಿರೋಧಿಸುತ್ತದೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಫಜ್ಲಿ ಮಾಲ್ಡಾ

ಇದು ಪಶ್ಚಿಮ ಬಂಗಾಳದ ವಾಣಿಜ್ಯ ತಳಿ. ಇದಕ್ಕೆ ಫಸ್ಲಿ ಮಾಲ್ಡಾ ಎಂಬ ಹೆಸರೂ ಇದೆ. ಈ ತಳಿಯ ತಾಯಿ ಮರವು ಮಾಲ್ಡಾದಲ್ಲಿನ ತೋಟದ ಒಂದು ಮರ, ಇದು ಬಂಗಾಳ, ಉತ್ತರ ಪ್ರದೇಶ ಮತ್ತು ಬಿಹಾರ್ ರಾಜ್ಯಗಳಲ್ಲಿ ಬೇಸಾಯ ದಲ್ಲಿದೆ. ಈ ತಳಿಯ ಹೆಸರು, ಇದು ಉದ್ಭವಿಸಿರುವ ಸ್ಥಳವನ್ನು ಸೂಚಿಸುತ್ತದೆ.

ಮರ: ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮದಿಂದ ಹೆಚ್ಚು ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ, ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ವಾದ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಲೈವರ್‌ಗ್ರೀನ್, ಇವು ಮುಂದೆ ಇಸಬೆಲ್ಲಾ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೋರಲ್ ಪಿಂಕ್ ಬಣ್ಣ, ಸಾಧಾರಣ ಮೃದುತುಪ್ಪಳು ; ಸಮವಾದ ಕೇಸರಗಳು, ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಓರೆಯಾಕಾರ ; ಓರೆ ಚಪ್ಪಟೆಯಿಂದ ಗುಂಡಾಗಿರುವ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ,ಮೇಲ್ಭುಜ ಇಳಿಜಾರಾಗಿರುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಸೆರ್ರೊ ಗ್ರೀನ್ ; ಮಧ್ಯಮ ಗಾತ್ರದ ಚುಕ್ಕೆಗಳು ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬಲಿತ ಕಾಯಿಯ ಬಣ್ಣ ಕೊಸೆ ಗ್ರೀನ್, ಪೂರ್ಣವಾಗಿ ಹಣ್ಣಾದಾಗ ಪ್ರಿಮೂಲೈನ್

ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ನಿಧಾನಕಾಲಿಕ, ಹೆಚ್ಚು ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಫಜ್ಲಿ ಜುಮ್‌ಕೊ

ಇದು ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಸ್ಥಳೀಯ ತಳಿ. ಮಾಲ್ಡಾ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇದರ ಬೇಸಾಯ ಅಧಿಕವಾಗಿಯೂ ಮತ್ತು ಹೂಗ್ಲಿ ಜಿಲ್ಲೆಯಲ್ಲಿ ಸ್ವಲ್ಪಮಟ್ಟಿಗೂ ಇದೆ. ಈ ತಳಿ ಗೊಂಚಲುಗಳಲ್ಲಿ ಕಾಯಿ ಬಿಡುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಜುಮ್‌ಕೊ ಎಂದರೆ ಗೊಂಚಲುಗಳು ಮತ್ತು ಫಜ್ಲಿ ಎನ್ನುವುದು ಹಣ್ಣಿನ ಲಕ್ಷಣಗಳಲ್ಲಿ ಫಜ್ಲಿ ಮಾಲ್ಡಾ ತಳಿಯನ್ನು ಸೂಚಿಸುತ್ತದೆ. ಈ ತಳಿಯು ವಾಣಿಜ್ಯ ಬೇಸಾಯಕ್ಕೆ ಸೂಕ್ತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷದಿಂದ ಹಿಡಿದು ಪರ್ಯಾಯ ಫಸಲು ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮದಿಂದ ದಪ್ಪಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್ ಇದ್ದು ಮುಂದೆ ಸಕ್ಕರ್ ಡೊಸ್ ಅಂಬರ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೋರಲ್ ಪಿಂಕ ಬಣ್ಣ, ಸಾಧಾರಣ ಮೃದುತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಓರೆಯಾಕಾರ ; ಓರೆ ಚಪ್ಪಟೆಯಿಂದ ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ನಿರ್ದಿಷ್ಟ ಕೊಕ್ಕು ; ಕೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ಇರುತ್ತದೆ ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮದಿಂದ ದಪ್ಪದ ಸಿಪ್ಪೆ, ಕೊಸೆ ಗ್ರೀನ್ ಬಣ್ಣ, ಪೂರ್ಣವಾಗಿ ಬಲಿತಾಗ ಪ್ರಿಮೂಲೈನ್ ಯೆಲ್ಲೊ ಬಣ್ಣ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ತೆಳುವಾಗಿ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ, ಹೆಚ್ಚು ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಫರ್‌ನ್ಯಾಂಡಿನ್

ಇದು ಬೊಂಬಾಯಿ ರಾಜ್ಯದ ಕೊಂಕಣ್‌ನ ಒಂದು ಹಳೆಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಕೆಲವು ಬೇಸಾಯಗಾರರು ಇದರ ಮೂಲಸ್ಥಾನ ಗೋವ ಎಂದೂ ಮತ್ತು ಇದು ಪಕ್ಕದ ರತ್ನಗಿರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಹರಡಿದೆ ಎಂದೂ ಭಾವಿಸುತ್ತಾರೆ. ಇದರ ಹಣ್ಣು ಅತ್ಯುತ್ತಮ ಗುಣಗಳಿಂದ ಕೂಡಿರುವುದರಿಂದ ಇದರ ಬೇಸಾಯವನ್ನು ಹೆಚ್ಚಿಸುವ ಅಗತ್ಯವಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗೋಪುರಾಕಾರದ ಮೇಲ್ಭಾಗ ಮಧ್ಯಮ ಗಾತ್ರದ ಬುಡ ; ಸಣ್ಣದಿಂದ ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಲಂಬಾಗ್ರ ತುದಿ ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್ ಲೇಕ್, ಅನಂತರ ಇವು ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಪ್ರುಸಿಯನ್ ರೆಡ್ ಬಣ್ಣ ; ಒತ್ತಾದ ಮೃದುತುಪ್ಪಳ ; ಸಮ ಕೇಸರಗಳು ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಮೊಟ್ಟೆಯಾಕಾರದಿಂದ ಓರೆ ಮೊಟ್ಟೆಯಾಕಾರ ; ಓರೆ ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಸಿಪ್ಪೆಯ ಬಣ್ಣ ಪ್ರಿಮೂಲೈನ್ ಯೆಲ್ಲೊ, ಭುಜಗಳ ಮೇಲೆ ಕೆಂಬಣ್ಣದ ಕಾಂತಿಯಿರುತ್ತದೆ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲೆಮನ್ ಕ್ರೋಮ್ ಬಣ್ಣ ; ಆಹ್ಲಾದಕರದಿಂದ ಘಾಟು ವಾಸನೆ ; ಸಿಹಿಯಿಂದ ಬಹಳ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ, ಒತ್ತಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾದ ನಾಳಗಳು ಟೊಳ್ಳಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ದರ್ಜೆ ; ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಜಾರ್ಜ್

ಈ ತಳಿಯು ಬೊಂಬಾಯಿಯ ರತ್ನಗಿರಿ ಜಿಲ್ಲೆಯಲ್ಲಿ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರವಾಗಿ ಬೆಳೆಯುತ್ತದೆ, ಮಧ್ಯಮದಿಂದ ಅಲ್ಪ ಫಸಲು, ಅನಿರ್ದಿಷ್ಟದಿಂದ ಪರ್ಯಾಯ ಫಸಲು ; ಮೊಟ್ಟೆಯಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನೇರವಾಗಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ; ನಯವಾದ ಅಂಚುಗಳು, ಕೆಲವು ಸಾರಿ ತಿರುಚಿರುವ ಪ್ರವೃತ್ತಿಯವು ; ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಕ್ಕರ್‌ಡೊಸ್ ಅಂಬರ್, ಇವು ಮುಂದೆ ಆ್ಯಂಟಿಕ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆಲಿವ್ ಒಕ್ರೆಬಣ್ಣ, ಸಾಧಾರಣ ಮೃದು ತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಸಣ್ಣವು ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಓರೆ ಮೊಟ್ಟೆಯಾಕಾರ ; ಓರೆ ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ವಿಶಾಲವಾದ ಬಿಂದುವಿನಿಂದ ಗುಂಡಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ

ಡೀಪ್ ಕ್ರೋಮ್; ದೊಡ್ಡ ಗಾತ್ರದ ಚುಕ್ಕೆಗಳು,ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಹಿತಕರವಾದ ವಾಸನೆ ; ಸಾಧಾರಣದಿಂದ ಸಿಹಿಯಾಗಿರುವ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾಗಿ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಗೋಲ್ಯಾಂಡಸ್

ಇದು ಬೊಂಬಾಯಿಯ ರತ್ನಗಿರಿ ಜಿಲ್ಲೆಯಲ್ಲಿ ಬೇಸಾಯದಲ್ಲಿದೆ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದು ಹೆಚ್ಚು ಬೇಸಾಯಕ್ಕೆ ತರಬೇಕಾದ ಉತ್ತಮ ಗುಣಗಳಿಂದ ಕೂಡಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ,ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಮ್ಮಟಾಕಾರದ ಮೇಲ್ಭಾಗ; ಕುಳ್ಳಾದ (ದಪ್ಪ) ಬುಡ ; ಮಧ್ಯಮ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು, ಕೆಲವು ಸಾರಿ ತಿರುಚಿರುವ ಪ್ರವೃತ್ತಿಯವು ; ಪ್ರಮುಖವಾದ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡಾರ್ಕ್ ಸಿಟ್ರೈನ್, ಇವು ಮುಂದೆ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ವಿರ್‌ಡೈನ್ ಗ್ರೀನ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣ, ಗುಂಡು ಓರೆಯಾಕಾರ ; ಗುಂಡಿನಿಂದ ಓರೆ ಚಪ್ಪಟೆಯಾದ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ, ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯ, ಡೀಪ್ ಕ್ರೋಮ್ ಬಣ್ಣ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ಹೆಚ್ಚು ಪರಿಮಾಣದ ನಾರು, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಹಿತಕರವಾದ ಸ್ವಲ್ಪ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದು, ಗುಂಡು ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ ; ಶೀಘ್ರಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಗಾಳಿಯನ್ನು ಚೆನ್ನಾಗಿ ನಿರೋಧಿಸುತ್ತದೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಗೋಪಾಲ್ ಭೋಗ್

ಈ ತಳಿಯನ್ನು ಉತ್ತರ ಪ್ರದೇಶದ ಷಹರಾನ್‌ಪುರದಿಂದ ಅಭ್ಯಾಸಕ್ಕೆ ತೆಗೆದುಕೊಳ್ಳಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿದೆ. ಇದು ಮನೆಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯ ತಳಿಯಾಗಿದೆ. ಈ ತಳಿಯ ಕೊರತೆ ಎಂದರೆ, ಹಣ್ಣು ಅಷ್ಟು ಆಕರ್ಷಕವಾಗಿಲ್ಲದಿರುವಿಕೆ ಮತ್ತು ಕೆಳದರ್ಜೆಯ ಶೇಖರಣೆ ಗುಣ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖದಿಂದ ಖಚಿತವಿಲ್ಲದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ರೈಸೆಟ್ಟೆ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್ ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿ ಹೊಂದಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಬಿಂದುವಿನಲ್ಲಿರುತ್ತದೆ ಅಥವಾ ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟಾದ ಮೇಲ್ಭಾಗದ ಬಣ್ಣ ಸಿಟ್ರೈನ್ ಮತ್ತು ಪ್ರಿಮೂಲೈನ್ ಯೆಲ್ಲೊ ಮಚ್ಚೆಗಳಿರುತ್ತವೆ ; ಸಣ್ಣಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ ಮಿಯುಮ್ ಬಣ್ಣ : ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಸಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ಮತ್ತು ಕೆಳಅಂಚಿನಲ್ಲಿ ಮಧ್ಯಮ ನಾರು, ಸಮಾನಾಂತರ ನಾಳಗಳು ಕವಲೊಡೆದಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕತೆ ; ಕೆಳದರ್ಜೆಯ ಶೇಖರಣೆ ಗುಣ ; ಉತ್ತಮವಾದ ಸುಲಿಯುವ ಗುಣ.

ಗೋಪ್ಸಾ

ಈ ತಳಿಯನ್ನು ಪೂನಾದ ಕಿರ್ಕಿ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಿಂದ ಅಭ್ಯಾಸಕ್ಕಾಗಿ ಆರಿಸಿಕೊಂಡಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಜನಪ್ರಿಯಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆಯಿಂದ ತಿರುಚಿರುವ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಗ್ರೇಸ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ರೈಸೆಟ್ ಗ್ರೀನ್, ಇವು ಮುಂದೆ ಎಕ್ರೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಕೋನಾಕಾರ, ಕ್ರೆಸ್‌ಗ್ರೀನ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಸ್ವಲ್ಪ ಮೂತ್ರಪಿಂಡಾಕಾರ ; ಗುಂಡುಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಮೇಲ್ಭುಜ ಕೆಳಭುಜಕ್ಕಿಂತ ಅಗಲವಾಗಿರುತ್ತದೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮದಿಂದ ದಪ್ಪವಾಗಿರುವ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೋ ; ಸಣ್ಣ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೋ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ಸಣ್ಣ, ದೀರ್ಘಚತುರಸ್ರದಿಂದ ದೀರ್ಘ ಚತುರಸ್ರ ಮೊಟ್ಟೆಯಾಕಾರ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ಒತ್ತಾದ ಕುಳ್ಳಿನಿಂದ ಮಧ್ಯಮ ಉದ್ದದ, ನಾರು ; ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಉತ್ತಮ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಖುದಾದಾದ್

ಈ ತಳಿಯು ತಮಿಳುನಾಡಿನ ಸೇಲಂ ಜಿಲ್ಲೆಯಲ್ಲಿ ಬೇಸಾಯದಲ್ಲಿದೆ. ಇದರ ಇತಿಹಾಸ ತಿಳಿದುಬಂದಿಲ್ಲ. ಇತ್ತೀಚೆಗೆ ಇದು ಸಮುದ್ರ ತೀರ ಪ್ರದೇಶದ ದಕ್ಷಿಣ ಕನ್ನಡ ಜಿಲ್ಲೆ, ಮಲಬಾರ್ ಮತ್ತು ತಿರುವಾಂಕೂರ್–ಕೊಚ್ಚಿನ್ ಮುಂತಾದ ಜಿಲ್ಲೆಗಳಲ್ಲಿ ಜನಪ್ರಿಯವಾಗಿದೆ. ಇದರ ಜನಪ್ರಿಯತೆಯನ್ನು ಸೀಮಿತಗೊಳಿಸಿರುವ ವಿಷಯವೆಂದರೆ, ಇದರ ಕೆಳದರ್ಜೆ ಶೇಖರಣೆ ಗುಣದಿಂದಾಗಿ ಇದನ್ನು ಹೊರದೇಶಗಳಿಗೆ ಸುಲಭವಾಗಿ ರಫ್ತು ಮಾಡಲಾಗದೆ ಇರುವುದು. ಈ ತಳಿಯ ಹಣ್ಣು ಗಾತ್ರದಲ್ಲಿ ದೊಡ್ಡದು, ಹಳದಿ ಬಣ್ಣದ ಸಿಪ್ಪೆಯು ಹಿನ್ನೆಲೆಯಲ್ಲಿ ಭುಜಗಳಲ್ಲಿ ಕೆಂಬಣ್ಣದ ಕಾಂತಿಯಿದ್ದು ಬಹಳ ಆಕರ್ಷಕವಾಗಿ ಕಾಣುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಿನಿಂದ ಮಧ್ಯಮ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ; ಚಪ್ಪಟೆಯಾಗಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಮುಂದೆ ಆಲಿವ್ ಲೇಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ನೇಪಲ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಸಮವಾದ ಕೇಸರಗಳು ಅಂಡಾಶಯಕ್ಕೆ ಸಮಾನಾಂತರ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ವಿಶಾಲ ಮೊಟ್ಟೆಯಾಕಾರ ; ಗುಂಡಿನಿಂದ ಸ್ವಲ್ಪ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಸ್ವಲ್ಪ ಕುಳಿ ; ಕೆಳ ಭುಜ ಮೇಲ್ಭುಜ ಸಮ, ಅದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿ ರುತ್ತವೆ; ಮೆದುವಾದ ತಿರುಳು, ನಾರು ಇರುವುದಿಲ್ಲ, ಪ್ರಿಮುಲೈನ್ ಯೆಲ್ಲೊ ಬಣ್ಣ : ಆಹ್ಲಾದಕರ ವಾಸನೆ ; ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ ದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು; ಕವಲೊಡೆದಿರುವ ನಾಳಗಳು, ಉಬ್ಬಿರು ತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳು ದರ್ಜೆ ; ಮಧ್ಯಕಾಲಿಕ,ಮಧ್ಯಮ ದಿಂದ ಹೆಚ್ಚು ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಕೀಳು ಶೇಖರಣೆ ಗುಣ.

ಖುದ್ದೂಸ್

ಈ ತಳಿಯು ಆಂಧ್ರ ಪ್ರದೇಶದ ಕೆಲವು ಜಿಲ್ಲೆಗಳ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದು ಶೀಘ್ರಕಾಲಿಕ ಫಲ ಕೊಡುತ್ತದೆ, ಆರೆಂಜ್ ಯೆಲ್ಲೊ ಬಣ್ಣದ ಸಿಪ್ಪೆಯ ಹಿನ್ನೆಲೆಯಲ್ಲಿ ಭುಜಗಳಮೇಲೆ ಡೀಪ್‌ಕ್ರಿಮ್‌ಸನ್ ರೆಡ್ ಬಣ್ಣದ ಕಾಂತಿಯಿಂದ ಆಕರ್ಷಕವಾಗಿ ಕಾಣುತ್ತದೆ. ಈ ಎರಡು ಗುಣಗಳನ್ನು ಬಿಟ್ಟರೆ ಇದರಲ್ಲಿ ಇನ್ನಾವ ಉತ್ತಮ ಗುಣಗಳೂ ಇಲ್ಲ. ಶೀಘ್ರ ಕಾಲಿಕ ಫಸಲು ಕೊಡುವುದರಿಂದ ಬೇಸಾಯಗಾರನಿಗೆ ಉತ್ತಮ ಲಾಭ ಸಿಕ್ಕುತ್ತದೆ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಹಿಡಿದು ಮಧ್ಯಮ ಬೆಳವಣಿಗೆ, ಹರಡುತ್ತದೆ, ಉತ್ಪನ್ನಕಾರಿ ; ಪ್ರತಿವರ್ಷ ಫಲಕಾರಿ; ಗುಮ್ಮಟಾಕಾರದ ಮೇಲ್ಭಾಗ; ದಪ್ಪ (ಕುಳ್ಳಾದ) ಬುಡ ; ದಪ್ಪ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿ ರುತ್ತವೆ ; ಸುಕ್ಕಾಗಿರುತ್ತವೆ ; ನಯವಾದ ಅಂಚುಗಳು ; ಪ್ರಮುಖವಾಗಿರುವ ನಾಳ ರಚನೆ ; ಲಂಬಾಗ್ರ ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮ್ಯಾಗ್ನೊನೆಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲಿಬೊರ್ ಗ್ರೀನ್, ಇವು ಮುಂದೆ ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗು ತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಗೋಪುರಾಕಾರ, ಶ್ರಿಂಪ್ ಪಿಂಕ್ ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾ ಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣ, ಅಂಡ ದೀರ್ಘಚತುರಸ್ರದಿಂದ ಅಂಡಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಒಂದೇ ಮಟ್ಟದಲ್ಲಿರುತ್ತವೆ,ಗುಂಡಾಗಿರುತ್ತದೆ,ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು; ಆಳ ವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಡೀಪ್ ಕ್ರೋಮ್ ಬಣ್ಣ, ಭುಜಗಳ ಮೇಲೆ ಕೋರಲ್ ರೆಡ್ ಬಣ್ಣದ ಕಾಂತಿ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ, ಕಾಪುಸೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಮಧ್ಯಮ ಸಿಹಿ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ ದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು, ಕೆಳ ಅಂಚಿನಲ್ಲಿ ಮಧ್ಯಮ ಉದ್ದದ

ನಾರು ; ಸಮಾನಾಂತರದಿಂದ ಕವಲೊಡೆದಿರುವ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಮಧ್ಯಮ ; ಮಧ್ಯಮದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾಗಿ ತುತ್ತಾಗುತ್ತವೆ ; ಉತ್ತಮವಾದ ಶೇಖರಣೆ ಗುಣ.

ಕಂಟಾಳ್‌ವಾಣಿಪೇಟಾ

ಈ ತಳಿಯು, ಆಂಧ್ರಪ್ರದೇಶದ, ವಿಶಾಖಪಟ್ಟಣದ ಜಿಲ್ಲೆಯ ಬೊಬ್ಬಿಲಿ ತಾಲ್ಲೂಕಿನಲ್ಲಿ ಉದ್ಭವಿಸಿದೆ. ಇದನ್ನು ಬೊಬ್ಬಿಲಿಯಲ್ಲಿ ಉತ್ತಮ ಆಕಸ್ಮಿಕ ತಳಿಗೆ ಕಸಿ ಮಾಡಲಾಗಿದೆ. ಇತ್ತೀಚೆಗೆ ಇದು ನಿಧಾನವಾಗಿ ತಮಿಳುನಾಡಿಗೆ ವ್ಯಾಪಿಸುತ್ತಿದೆ. ಇದಕ್ಕೆ ಬೊಬ್ಬಿಲಿ ಪುನಸಾ ಮತ್ತು ಬೊಬ್ಬಿಲಿ ಪೆದ್ದಕಾಯಾಲು ಪುನಸಾ, ಎಂಬ ಹೆಸರುಗಳು ಉಪಯೋಗದಲ್ಲಿವೆ. ವರ್ಷಕ್ಕೆ ಎರಡು ಫಸಲು ಕೊಡುವುದು ಇದರ ಕೇವಲ ಒಂದೇ ವಿಶೇಷ ಲಕ್ಷಣ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಅನಂತರ ಯೆಲ್ಲೋಯಿಷ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ವಿರಿಡೈನ್ ಗ್ರೀನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಸ್ವಲ್ಪ ಮೂತ್ರಪಿಂಡಾಕಾರ ; ಸ್ವಲ್ಪದಿಂದ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳ ಭುಜ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ; ಬಿಂದುವಿನಲ್ಲಿರುವ ಕೊಕ್ಕು ಅಥವಾ ಇರುವುದಿಲ್ಲ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಕಾಪುಸ್ಸೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆ ಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ, ಸಾಧಾರಣ ನಾರಿನಿಂದ ಕೂಡಿರುತ್ತದೆ, ನಾರು ಮಧ್ಯಮ ಉದ್ದ, ಸಾಧಾರಣ ಮತ್ತು ಮೃದು ; ಸ್ವಲ್ಪ ಹಿತಕರ ವಾಸನೆ, ಸಾಧಾರಣ ರುಚಿ; ಬಹಳ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ ದಲ್ಲಿ ಕುಳ್ಳಾದ, ಮೃದುವಾದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರು ತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮ ಪರಿಮಾಣದ ಫಸಲು ; ಮಧ್ಯಕಾಲಿಕ ಮತ್ತು ಅಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಕೀಳು ಶೇಖರಣೆ ಗುಣ.

ಕಿಷನ್ ಭೋಗ್

ಇದು ಪಶ್ಚಿಮ ಬಂಗಾಳದ ಮುರ್ಷಿದಾಬಾದಿನ ಸ್ಥಳೀಯ ತಳಿ. ನಾಡಿಯ ಮತ್ತು 24 ಪರ್‌ಗಣ ಜಿಲ್ಲೆಗಳಲ್ಲಿ ಇದರ ಬೇಸಾಯವಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದರ ಮೊದಲ ಕೆಲವು ಕಸಿಗಳನ್ನು ರಾಯಿಸ್‌ಬಿಹಾರ್ ಬಗಾನ್ ತೋಟದಲ್ಲಿ ನಾಟಿ ಮಾಡಲಾಗಿತ್ತು ಎಂದು ವರದಿಯಾ ಗಿದೆ. ಈಗ ಈ ತೋಟ ಇದರ ವಿತರಣೆಯ ಮುಖ್ಯ ಕೇಂದ್ರವಾಗಿದೆ. ಮನೆಗಳ ಪಕ್ಕದಲ್ಲಿ ನಾಟಿಮಾಡಲು ಯೋಗ್ಯವಾದ ತಳಿ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದಿಂದ ಸಣ್ಣ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿಕುತ್ತವೆ; ಅಲೆ ಮತ್ತು ತಿರುಚಿರುವ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ; ಸ್ವಲ್ಪ ಲಂಬಾಗ್ರ ತುದಿ ; ಗುಂಡಿನಿಂದ ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡಾರ್ಕ್ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ ; ಬಫ್ ಸಿಟ್ರೈನ್ ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡು ಓರೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಗುಂಡಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪದಿಂದ ನಿರ್ದಿಷ್ಟವಾಗಿರುವ ಕೊಕ್ಕು ; ವಿಶಾಲವಾಗಿ ಅಗಲವಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ಹೆಚ್ಚು ಪರಿಮಾಣದ ನಾರಿನಿಂದ ಕೂಡಿರುತ್ತದೆ, ತಿಳಿ ಕ್ಯಾಡ್ಮಿಯಮ್ ಬಣ್ಣ ; ನಸು ಟರ್ಪೆಂಟೈನ್ ಗಂಧಯುತ ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾದ, ಕುಳ್ಳಾದ ಮತ್ತು ಮೃದುವಾದ ನಾರು; ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಸಮಾನಾಂತರವಾದ ನಾಳಗಳು, ಸ್ವಲ್ಪದಿಂದ ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಕೊಹಿತ್ತೂರ್

ಈ ತಳಿ ಪಶ್ಚಿಮ ಬಂಗಾಳದ ಮುರ್ಷಿದಾಬಾದಿನಲ್ಲಿ ಉದ್ಭವಿಸಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಮುರ್ಷಿದಾಬಾದಿನಲ್ಲಿರುವ ರಾಯಿಸ್ ಮಿರ್ಜಾ ಬಗಾನ್ ತೋಟದಲ್ಲಿ ಈ ತಳಿಯ ಮೊದಲ ಕೆಲವು ಕಸಿ ಸಸ್ಯಗಳನ್ನು ನಾಟಿ ಮಾಡಲಾಗಿದ್ದು ಅಲ್ಲಿಂದ ಇದು ಹರಡಿದೆ ಎಂದು ಭಾವಿಸಲಾಗಿದೆ. ಇದು ವಿಸ್ತಾರವಾಗಿ ಮುರ್ಷಿದಾಬಾದ್ ಮತ್ತು ನಾಡಿಯ ಜಿಲ್ಲೆಗಳಲ್ಲಿಯೂ ಮತ್ತು ಸ್ವಲ್ಪ ಮಟ್ಟಿಗೆ ಹೂಗ್ಲಿ ಮತ್ತು ಪರ್ಗಣ ಜಿಲ್ಲೆಗಳಲ್ಲಿಯೂ ವ್ಯಾಪಿಸಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳನಿಂದ ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಸ್ವಲ್ಪ ಮಡಚಿರುತ್ತವೆ ; ಸಾಧಾರಣ ಪ್ರಮುಖ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಬ್‌ಸಿಂನ್ತೆ ಗ್ರೀನ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುವಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ಅಂಡಾಕಾರದಿಂದ ಅಂಡ ಓರೆಯಾಕಾರ ; ಸ್ವಲ್ಪದಿಂದ ಓರೆ ಚಪ್ಪಟೆ ಬುಡ ; ಪಾರ್ಶ್ವಿಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಗುಂಡಿನಿಂದ ಎತ್ತರವಾಗಿ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ, ಡೀಪ್ ಕ್ರೋಮ್ ಬಣ್ಣ ;

ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡದಿಂದ ಸಾಧಾರಣವಾದ, ಕುಳ್ಳಾದ ಮೃದು ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ದರ್ಜೆಯಲ್ಲಿ ಉತ್ತಮ, ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಕೊಲಾಂಕ ಗೋವ

ಇದು ಆಂಧ್ರಪ್ರದೇಶದ ವಿಶಾಖಪಟ್ಟಣದ ಸ್ಥಳೀಯ ತಳಿ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಒಂದು ಕಾಲದಲ್ಲಿ ತಮಿಳು ನಾಡಿನ ಸಿರ್ಕಾರ್ ವಲಯದಲ್ಲಿ ಇದು ವಾಣಿಜ್ಯ ತಳಿಯಾಗಿತ್ತು. ಈ ವಲಯಕ್ಕೆ ಇನ್ನೂ ಉತ್ತಮ ಇಳುವರಿ ಕೊಡುವ ತಳಿಗಳು ಆಗಮಿಸಿರುವ ಕಾರಣ ಇದರ ಬೇಸಾಯ ಕ್ಷೀಣಿಸುತ್ತಿದೆ. ಈ ತಳಿಯಲ್ಲಿ ಉಲ್ಲೇಖಿಸಬಹುದಾದ ಕೇವಲ ಒಂದೇ ಉತ್ತಮ ಗುಣವೆಂದರೆ ಇದರ ನಿಧಾನಕಾಲಿಕ ಫಸಲು, ಇದಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಸಿಕ್ಕುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಬಿಂಬಾಗಿರುತ್ತವೆ ; ಅಲೆಅ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನೇರವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡಾಗಿರುವ ಓರೆಯಾಗಿರುವ ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ

ಬಣ್ಣ ಆರೆಂಜ್ ಸಿಟ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಅನಂತರ ಸೂಡಾನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಅಕಾಷೂ ರೆಡ್ ಬಣ್ಣ; ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಗುಂಡಿನಿಂದ ಸ್ವಲ್ಪ ಮುಂದುವರಿದಿರುವ ಬುಡ ; ಚಿಕ್ಕಾಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ,ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಹೊರಬಂದಿರುತ್ತದೆ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕೊಕ್ಕಳು ; ಗುಂಡು ತುದಿ; ಮಧ್ಯಮ ದಪ್ಪದ ಸಿಪ್ಪೆ ನಯವಾದ ಮೇಲ್ಭಾಗ ; ಲೆಮನ್ ಕ್ರೋಮ್ ಬಣ್ಣ ; ಸಣ್ಣ ಚುಕ್ಕೆಗಳು, ಹತ್ತಿರ ಹತ್ತಿರವಾಗಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಸ್ವಲ್ಪ ಹಿತಕರವಾದ ವಾಸನೆ ; ಸಾಧಾರಣ ಸಿಹಿ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ; ಕವಲೊಡೆದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಕೊತ್ತಪಲ್ಲಿ ಕೊಬ್ಬರಿ

ಇದು ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿನ ಪಿತಳು ಉತ್ತರ ಸಿರ್‌ಕಾರ್ ಜಿಲ್ಲೆಯ ರಸಭರಿತ ಮಾವಿನ ಹಣ್ಣನ್ನು ಪ್ರೀತಿಸುವ ವ್ಯವಸಾಯಗಾರರನ್ನು ಇದು ಇತ್ತೀಚೆಗೆ ಆಕರ್ಷಿಸಿದೆ. ಈ ತಳಿಯ ಹಣ್ಣು ಹೆಚ್ಚು ನಾರಿನಿಂದ ಕೂಡಿದ್ದು ಸುಲಭವಾಗಿ ಹೆಚ್ಚಲು ಸಾಧ್ಯವಾಗದೆ ಇರುವ ಕಾರಣ ತಿನ್ನಲು ಸೂಕ್ತವಾಗಿಲ್ಲ.

ಇದು ಪೂರ್ವ ಗೋದಾವರಿಯ ಪಿಠಾಪುರಂಗೆ ಕೆಲವು ಮೈಲಿ ದೂರವಿರುವ ಕೊತ್ತಪಲ್ಲಿ ಎಂಬ ಗ್ರಾಮದಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ ; ಗುಮ್ಮಟಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಡಾರ್ಕ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಇವು ಮುಂದೆ ರೈನೆಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ವಿಶಾಲ ಗೋಪುರಾಕಾರ, ಕೊಸೆ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಸಮವಾದ ಕೇಸರಗಳು, ಅಂಡಾಶಯಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರದಿಂದ ದೀರ್ಘಚತುರಸ್ರ ಓರೆಯಾಕಾರ ; ಚಚ್ಚೌಕವಾಗಿ ಸೇರಿದ ತೊಟ್ಟು; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಅದಕ್ಕಿಂತ ಎತ್ತರವಾಗಿರುತ್ತದೆ, ಕೆಳಭುಜ ಸ್ವಲ್ಪ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಸ್ವಲ್ಪ ; ಸ್ವಲ್ಪ ಹೊಕ್ಕಳು ; ಗುಂಡಿನಿಂದ ಓರೆ ಚಪ್ಪಟೆ ತುದಿ ; ಮಧ್ಯಮ ದಪ್ಪದ ಸಿಪ್ಪೆ, ಲೈಟ್ ಕ್ರೋಮ್ ಬಣ್ಣ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ ; ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹೆಚ್ಚು ಪರಿಮಾಣದ ನಾರು, ಉದ್ದ ಮತ್ತು ಒರಟು ; ಆಹ್ಲಾದಕರವಾಸನೆ; ಬಹಳ ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರಿತ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಉದ್ದವಾದ, ಒರಟಾದ ನಾರು ; ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಅಧಿಕ ಪರಿಮಾಣದ ಫಸಲು ; ಗಾಳಿ ಮತ್ತು ಉಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಹೆಚ್ಚು ಉತ್ತಮ ಶೇಖರಣೆ ಗುಣ.

ಕೋಥಿ ಹೈದ್ರಾಬಾದ್

ಈ ತಳಿಯನ್ನು ಉತ್ತರ ಪ್ರದೇಶದ ಷಹರಾನ್‌ಪುರದಲ್ಲಿ ಅಭ್ಯಾಸಕ್ಕಾಗಿ ಆರಿಸಿಕೊಂಡಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಹೈದ್ರಾಬಾದಿನ ಒಂದು ಬಂಗಲೆಯ ಪಕ್ಕದಲ್ಲಿರುವ ಈ ತಳಿಯ ಮರದಿಂದ ಕೆಲವು ಕಸಿ ಸಸಿಗಳನ್ನು ವೃದ್ಧಿಮಾಡಿ, ಷಹರಾನ್‌ಪುರದಲ್ಲಿ ನಾಟಿ ಮಾಡಿದ್ದಾಗಿ ತಿಳಿದು ಬಂದಿದೆ. ಈ ತಳಿಯ ಹಣ್ಣುಗಳು ಮಧ್ಯಮ ಗುಣದಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಮ್ಮಟಾಕಾರದ ಮೇಲ್ಭಾಗ ; ಕುಳ್ಳಾದ (ದಪ್ಪ) ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಸಾಧಾರಣ ಪ್ರಮುಖ ನಾಳರಚನೆ. ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಯ ಬಣ್ಣ ಮೆಡಲ್ ಬ್ರಾಂಜ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕ್ಲೋವ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ಯಾನ್ಸಿ ಪರ್ಪಲ್, ಸಾಧಾರಣವಾದ ಮೃದುತುಪ್ಪಳು ; ಅಸಮವಾದ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ, ಸ್ವಲ್ಪ ಮೂತ್ರಪಿಂಡಾಕಾರ; ಸ್ವಲ್ಪ ಚಪ್ಪಟೆಯಾಗಿರುವ ಮತ್ತು ಮುಂದುವರಿದ ಅಥವಾ ಕುಟಿ

ಯಂತಿರುವ ಬುಡ ; ಚಚ್ಚೌಕವಾಗಿ ಸೇರಿವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳ ಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕಡಮೆ ಆಳದಿಂದ ಆಳವಾಗಿರುವ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿ ರುತ್ತವೆ ; ಮೆದುವಿನಿಂದ ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಮ್ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಿಂದ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಪೂರ್ಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ, ಸ್ವಲ್ಪ ಮೂತ್ರಪಿಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಸಿಬಿಡವಾಗಿ, ಕುಳ್ಳಾದ, ಮೃದುವಾದ ನಾರು ; ಸಮಾನಾಂತರ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಕುಮಾರ್ ಪಹಾರ್

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದು ಬಂದಿಲ್ಲ. ಬಿಹಾರ ರಾಜ್ಯವನ್ನು ಬಿಟ್ಟು ಬೇರೆ ಯಾವ ಸ್ಥಳದಲ್ಲಿಯೂ ಇದರ ಬೇಸಾಯವಿಲ್ಲ ದಿರುವುದರಿಂದ ಬಹುಶಃ ಬಿಹಾರ ರಾಜ್ಯ ಇದರ ಮೂಲಸ್ಥಾನವಾಗಿರಬಹುದೆಂದು ಊಹಿಸಲಾಗಿದೆ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕಪ್ಪಾದ ಬುಡ ; ಮಧ್ಯಮದಿಂದ ದಪ್ಪನಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ ; ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಸುಕ್ಕಾಗಿರುತ್ತವೆ ; ತಿರುಚಿರುವ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರದಿಂದ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲೆಬೊರ್ ಗ್ರೀನ್, ಇವು ಮುಂದೆ ಸಕ್ಯಾರ್‌ಡೊಸ್ ಅಂಬರ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಆರೆಂಜ್ ಸಿಟ್ರೈನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಓರೆ ಮೊಟ್ಟೆಯಾಕಾರ ; ಓರೆ ಗುಂಡಿನಿಂದ ಚಪ್ಪಟೆ ಬುಡ ; ಸ್ವಲ್ಪ ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಹೊಕ್ಕಳು ಇರುವುದಿಲ್ಲ ; ವಿಶಾಲ ಬಿಂದುವಿನಲ್ಲಿರುವ ತುದಿ; ದಪ್ಪ ಸಿಪ್ಪೆ,ನಯವಾದ ಮೇಲ್ಭಾಗ ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮಧ್ಯಮ ಗಟ್ಟಿಯಿಂದ ಮೆದುವಾಗಿರುವ ತಿರುಳು, ನಾರು ಇರುವುದಿಲ್ಲ ; ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾದ, ಕುಳ್ಳಾದ, ಮೃದುವಾದ ನಾರು ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ, ಮಧ್ಯಮದಿಂದ ಅಧಿಕ ಫಸಲು ; ಗಾಳಿ ಮತ್ತು ಕಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ, ಕೆಳದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಕುವಾನ್ ಪಹಾರಿಯು

ಇದು ಪಶ್ಚಿಮ ಬಂಗಾಳದ ಸ್ಥಳೀಯ ತಳಿ. ಇದನ್ನು ಕುವಾನ್ ಪಹಾರ್ ಎಂದು ಸಹ ಕರೆಯುತ್ತಾರೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ, ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮ ಗಾತ್ರದಿಂದ ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ಮತ್ತು ಸುಕ್ಕಾಗಿರುತ್ತವೆ ; ನಯ, ಕೆಲವುವೇಳೆ ತಿರುಚಿರುವ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ; ಸ್ವಲ್ಪ ಲಂಬಾಗ್ರದಿಂದ ಲಂಬಾಗ್ರ ತುದಿ ; ಮೊನಚು ಬುಡ : ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್ , ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲಿಬೊರ್ ಗ್ರೀನ್, ಇವು ಮುಂದೆ ಸಕ್ಕಾರ್‌ಡೊಸ್ ಆ್ಯಂಬರ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ: ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಆರೆಂಜ್ ಸಿಟ್ರೈನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಓರೆ ಮೊಟ್ಟೆಯಾಕಾರ ; ಓರೆ ಗುಂಡಿನಿಂದ ಚಪ್ಪಟೆ ಬುಡ ; ಸ್ವಲ್ಪ ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಸ್ವಲ್ಪ ಹೊಕ್ಕಳು;

ಅಗಲ ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ, ನಯ ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ; ಸಣ್ಣ ಚುಕ್ಕೆಗಳು, ಸುಮಾರು ದೂರವಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮಧ್ಯಮ ಗಟ್ಟಿಯಿಂದ ಮೃದುವಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ; ಇದರ ಮೇಲೆ ಕುಳ್ಳಾದ, ಮೃದುವಾದ ನಾರು, ತೆಳುವಾಗಿರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಕೆಳದರ್ಜೆಯ ಶೇಖರಣೆ ಮತ್ತು ಸುಲಿಯುವ ಗುಣ.

ಲಾಲ್ ಮಲಗೋವ

ಇದು ಆಂಧ್ರಪ್ರದೇಶದ (ಹೈದ್ರಾಬಾದ್) ಸ್ಥಳೀಯ ತಳಿ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿದ್ದು ಮನೆಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಕಸುವಿನಿಂದ ಬೆಳೆದು ನೇರದಿಂದ ಹರಡಿರುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ; ಮೊಣಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರ್ಯಾಂಜ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಶಂಕಾಕಾರ, ಆಬ್‌ಸಿನ್ತ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಸಮ ಕೇಸರಗಳು, ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡಿನಿಂದ ಅಂಡ ಗುಂಡಿನಾಕಾರ ; ಗುಂಡಿನಿಂದ ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಗುಂಡಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು; ಕಡಮೆ ಆಳದಿಂದ ಆಳವಾದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟು, ಭುಜಗಳ ಕೋರಲ್ ರೆಡ್ ಕಾಂತಿಯುಕ್ತ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯುಮ್ ; ದೊಡ್ಡ ಗಾತ್ರದ ಚುಕ್ಕೆಗಳು, ಬಹಳ ಹತ್ತಿರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಬಫ್ಫಿ ಯೆಲ್ಲೋ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಬಹಳ ಸಿಹಿ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ತೆಳುವಾಗಿ, ಕುಳ್ಳಾದ ಮತ್ತು ಮೃದುವಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಪರಿಮಾಣದ ನಾರು.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಸುಲಿಯುವ ಗುಣ.

ಲಾಲ್ ಪೈರಿ

ಇದು ಬೊಂಬಾಯಿಯ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ, ಇದನ್ನು ಜನಪ್ರಿಯಗೊಳಿಸಬೇಕಾದ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣ, ನಿಧಾನವಾಗಿ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ ; ಸಣ್ಣ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ,ಅಂಡ ಭರ್ಜಿಯಾಕಾರ ; ಸ್ವಲ್ಪದಿಂದ ದೃಢವಾಗಿ ಮಡಚಿರುತ್ತವೆ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಕ್ರೈಸೊಲೈಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮ್ಯಾಗ್ನೊನೆಟ್ ಗ್ರೀನ್, ಇವು ಮುಂದೆ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣ, ಗೋಪುರಾಕಾರ, ಪಾಂಪಿಯನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಅಂಡಾಕಾರ : ಗುಂಡಾದ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ, ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು; ಸ್ವಲ್ಪ ಹೊಕ್ಕಳು ; ಅಗಲವಾಗಿ ಗುಂಡಾಗಿರುವ ತುದಿ ; ತೆಳುವಾದ ಸಿಪ್ಪೆ, ನಯವಾದ ಭುಜಗಳು, ಜಾಸ್ಪರ್ ರೆಡ್ ಕಾಂತಿಯುತ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ ; ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ; ಸಾಧಾರಣ ಸಿಹಿ ರುಚಿ ; ಕಡಮೆಯಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದು, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಮಧ್ಯಮ ಉದ್ದದ, ಮೃದು ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ: ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕೆಳದರ್ಜೆಯ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಲಾಂಗ್ರ

ಈ ತಳಿಯ ಮೂಲಸ್ಥಾನದ ಬಗ್ಗೆ ಮೂರು ವಿಧವಾದ ಸುದ್ದಿಗಳಿವೆ. ಆದ್ದರಿಂದ ಇದರ ಮೂಲಸ್ಥಾನವನ್ನು ಕುರಿತು ಖಚಿತವಾಗಿ ತೀರ್ಮಾನಿಸುವುದು ಸಾಧ್ಯವಿಲ್ಲ. ಇದು ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದ್ದು ವಿಶರಣೆಯಾಗಿದೆ ಎಂಬುದು ಖಚಿತ. ಒಂದು ವರದಿಯ ಪ್ರಕಾರ, ಬನಾರಸ್‌ನಲ್ಲಿ ಒಬ್ಬ ಕುಂಟ ಫಕೀರನ ಮನೆಯ ಹಿತ್ತಲ ಮಾವಿನ ಮರದಲ್ಲಿ ಇದು ಆಕಸ್ಮಿಕ ಸಸಿಯಾಗಿ ಉದ್ಭವಿಸಿದ್ದರಿಂದ ಇದಕ್ಕೆ ಲಾಂಗ್ರ ಎಂಬ ಹೆಸರು ಬಂದಿದೆ ; ಲಾಂಗ್ರಾ ಎಂದರೆ ಕುಂಟ. ಇನ್ನೊಂದು ವರದಿಯ ಪ್ರಕಾರ,ಬನಾರಸ್ ಮೇಲೆ ಬೀಸಿದ ಚಂಡಮಾರುತವು ಒಂದು ಮಾವಿನ ಮರದ ಮೇಲೆ ಬೀಸಿ ಇದನ್ನು ಭಾಗಶಃ ನಾಶಮಾಡಿತು, ಈ ಕುಂಟಾದ ಮರದಿಂದ ಉತ್ತಮ ಆಕಸ್ಮಿಕ ಸಸಿ ಸಿಕ್ಕಿರುವುದರಿಂದ ಲಾಂಗ್ರಎಂಬ ಹೆಸರು ಬಂದಿರಬಹುದು. ಮತ್ತೊಂದು ವರದಿಯ ಪ್ರಕಾರ ಈ ತಳಿಯ ಮರವು ಬನಾರಸ್ ಹತ್ತಿರದ ಲಂಗ್ಡಾ ಎಂಬ ಹಳ್ಳಿಯಲ್ಲಿ ಉದ್ಭವಿಸಿರಬಹುದು. ಲಾಂಗ್ರಾ ಎಂಬುದು ಲಾಂಗ್ಡಾ ಎಂಬ ಪದದ ಅಶುದ್ಧ ರೂಪ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಅನಿಯಮಿತ ಫಲಪ್ರವೃತ್ತಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಅರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಮುಂದೆ ಆಲಿವ್ ಲೇಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪೀಚ್ ರೆಡ್ ಬಣ್ಣ; ಸಾಧಾರಣವಾದ ಮೃದುತುಪ್ಪಳು, ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಗುಂಡಿನಿಂದ ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಗುಂಡಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ, ಹೊಕ್ಕಳು ಸ್ವಲ್ಪ ಅಥವಾ ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಲೆಟ್ಯೂಸ್ ಗ್ರೀನ್ ; ಮಧ್ಯಮ ಗಾತ್ರದ ಚುಕ್ಕೆಗಳು ದೂರದಲ್ಲಿರತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ಲೆಮನ್ ಯೆಲ್ಲೊ ಬಣ್ಣ ; ಹೆಚ್ಚು ಹಿತಕರ ವಾಸನೆ ; ಬಹಳ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಚಪ್ಪಟೆ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದುವಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಲಾಂಗ್ರಾ ಲಾರ್ಜ್

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದರ ಹೆಸರು ಲಾಂಗ್ರಾ ತಳಿಯಿಂದ ಬಂದಿದೆ. ಈ ತಳಿಯು ಹಣ್ಣು ಗಾತ್ರದಲ್ಲಿ ಬಿಟ್ಟು ಇನ್ನೆಲ್ಲ ವಿಧಗಳಲ್ಲಿ ಲಾಂಗ್ರಾ ತಳಿಯನ್ನೇ ಹೋಲುತ್ತದೆ. ಈಗ ಇದರ ಬೇಸಾಯ ಉತ್ತರ ಪ್ರದೇಶದ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿದೆ. ಈ ತಳಿಯು ಮನೆಗಳ ಪಕ್ಕದಲ್ಲಿ ಬೆಳೆಸಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು,

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸುಕ್ಕಾಗಿರುತ್ತವೆ ಮತ್ತು ಸ್ವಲ್ಪ ಮಡಚಿರುತ್ತವೆ ; ನಯದಿಂದ ತಿರುಚಿರುವ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಮುಂದೆ ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡವು, ಶಂಕಾಕಾರ, ಕೋಕೋ ಬ್ರೌನ್ ಬಣ್ಣ, ಕಡಮೆ ಮೃದುತುಪ್ಪುಳು ; ಕೇಸರಗಳು, ಅಂಡಾಶಯಕ್ಕೆ ಸಮ ಮತ್ತು ಓರೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ಗುಂಡು ಬುಡ ; ದಪ್ಪ ಸಿಪ್ಪೆ, ನಯದಿಂದ ಒರಟಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ಹೆಚ್ಚು ಪರಿಮಾಣದ ನಾರಿನಿಂದ ಕೂಡಿರುತ್ತದೆ, ಕಾಪುಸೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಕಡಮೆಯಿಂದ ಸಾಧಾರಣ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ನಿಧಾನಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಕೆಳದರ್ಜೆಯ ಸುಲಿಯುವ ಗುಣ.

ಲಷ್ಕಾರ್ ಶಿಕಾನ್

ಇದು ಪಶ್ಚಿಮ ಬಂಗಾಳದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಪರಿಚಯವಿಲ್ಲ. ಈ ತಳಿಯ ಮೊದಲ ಕೆಲವು ಕಸಿಗಳನ್ನು ಮುರ್ಷಿದಾಬಾದಿನ ರಾಯಿಸ್ ಮಿರ್ಜಾ ಬಗಾನ್ ತೋಟದಲ್ಲಿ ನಾಟಿ ಮಾಡಲಾಗಿದ್ದು ಇದು ಮೇಲ್ಕಂಡ ತಳಿಯ ವಿತರಣೆ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣದಿಂದ ಕಸುವಿನ ವರೆಗೆ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನದಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಿಂದ ಸುಕ್ಕಾಗಿರುವ ಪ್ರವೃತ್ತಿ ; ನಯ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬ್ರೌನ್ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಚ್ಚಿ ಸಿಟ್ರೈನ್, ಇವು ಮುಂದೆ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೆಟ್ಯೂಸ್ ಗ್ರೀನ್ ಬಣ್ಣ, ನಿಬಿಡವಾದ ಮೃದುತುಪ್ಪಳು ; ಅಸಮವಾದ ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಗುಂಡಿನಿಂದ ಓರೆ ಗುಂಡು ಬುಡ; ಚಚ್ಚೌಕವಾಗಿ ಸೇರಿದ ತೊಟ್ಟು; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಗುಂಡಾದ ಕೆಳಭುಜ, ಮೇಲ್ಭುಜ ಉದ್ದವಾದ ಜೊಂಕಿನಲ್ಲಿ ಮುಗಿಯುತ್ತದೆ; ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕುಳು ;

ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲ್ಲೈನ್ ಯೆಲ್ಲೊ ; ಸಣ್ಣ ಗಾತ್ರದ ಚುಕ್ಕೆಗಳು ಹತ್ತಿರ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರಿರುವುದಿಲ್ಲ, ಬಣ್ಣ ಕ್ಯಾಡ್ಮಿಯಮ್ ಯೆಲ್ಲೊ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಸಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಸಾಧಾರಣ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ : ಮಧ್ಯಕಾಲಿಕ, ಮಧ್ಯ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ಸಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಮಧ್ಯಮದಿಂದ ಕೆಳದರ್ಜೆಯ ಶೇಖರಣೆ ಗುಣ.

ಲತಾ

ಇದು ಬೊಂಬಾಯಿಯ ರತ್ನಗಿರಿ ಜಿಲ್ಲೆಯ ಸ್ಥಳೀಯ ತಳಿ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ದರ್ಜೆಯಾದ್ದರಿಂದ, ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣದು, ನಿಧಾನವಾಗಿ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಬುಡ ಮತ್ತು ರೆಂಬೆಗಳು ಸಣ್ಣ ಗಾತ್ರದವು.

ಎಲೆಗಳು : ಗಾತ್ರದಲ್ಲಿ ಸಣ್ಣ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ, ಅಂಡ ವೃತ್ತ ಭರ್ಜಿಯಾಕಾರ, ಚಪ್ಪಟೆ ನಯ ಅಂಚುಗಳು, ಅಲೆ ಪ್ರವೃತ್ತಿ ; ಖಚಿತವಲ್ಲದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಫಾರೆಸ್ಟ್ ಗ್ರೀನ್,

ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಮುಂದೆ ಎಕ್ರೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದು, ಶಂಕಾಕಾರ, ರೋಸ್‌ಡೊರೆ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದು, ಗುಂಡಾಕಾರದಿಂದ ಗುಂಡು ಓರೆ ; ಗುಂಡಿನಿಂದ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ, ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಬಿಂದುವಿನಲ್ಲಿರುವ ಹೊಕ್ಕಳು ಅಥವಾ ಇರುವುದಿಲ್ಲ; ಗುಂಡು ತುದಿ ; ಮಧ್ಯನುದಿಂದ ದಪ್ಪ ಸಿಪ್ಪೆ, ನಯ, ಭುಜಗಳ ಮೇಲೆ ಕೊರಿಂಥಿಯಾನ್ ರೆಡ್ ಬಣ್ಣದ ಕಾಂತಿಯುತ ಕಾಪುಸ್ಶೈನ್ ಯೆಲ್ಲೊ ಬಣ್ಣ;ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿನಿಂದ ಕೂಡಿರುತ್ತದೆ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿಯಿಂದ ಸಪ್ಪೆ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದುವಾದ ನಾರು, ಮೇಲ್ಭಾಗದಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಲತೀಫ್ ಅಲಿವಾಲ

ಇದು ಉತ್ತರ ಪ್ರದೇಶದ, ಮೊರಾದಬಾದ್ ಜಿಲ್ಲೆಯ ಅಮ್‌ರೊಹ ಹಳ್ಳಿಯ ಮೂಲವಾಸಿ ಎಂದು ತಿಳಿದುಬಂದಿದೆ. ಇದು ಲತೀಫ್ ಅಲಿಯ ಮಾವಿನ ತೋಟದಲ್ಲಿ

ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ, ಇಲ್ಲಿಂದ ಈ ತಳಿ ಇತ್ತೀಚೆಗೆ ಉತ್ತರ ಪ್ರದೇಶದ ಇತರ ಭಾಗಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚು ; ಗುಂಡು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಂಟಿಕ್ ಬ್ರೌನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ ; ಪಾವ್‌ಗ್ರ್ಯಾನೆಟ್ ಪರ್ಪಲ್ ಬಣ್ಣ ; ಸಾಧಾರಣ ಮೃದುತುಪ್ಪಳ ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಗುಂಡು ಬುಡ; ಚಚ್ಚೌಕವಾಗಿ ಸೇರಿದ ತೊಟ್ಟು; ಕುಳಿ ಇರುವುದಿಲ್ಲ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಎರಡೂ ಭುಜಗಳು ಉದ್ದವಾದ ಡೊಂಕಿನಲ್ಲಿ ಮುಗಿಯುತ್ತವೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ; ಗುಂಡಿನಿಂದ ವಿಶಾಲ ಚೂಪು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಒರಟು ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ ; ನಸು ಟರ್‌ಪೆಂಟೈನ್ ಗಂಧಯುತ ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ ಮೃದು ನಾರು ; ಕವಲೊಡೆದ ನಾಳಗಳು, ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯದಿಂದ ನಿಧಾನಕಾಲಿಕ ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸಾಗಿಸುವ ಗುಣ.

ಲಾಟ್ರಾ

ಈ ತಳಿಯನ್ನು, ಬಿಹಾರ ರಾಜ್ಯದ ಸಾಬೂರಿನಲ್ಲಿರುವ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಅಭ್ಯಾಸ ಮಾಡಲಾಯಿತು. ಇದರ ಇತಿಹಾಸ ಪರಿಚಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಜೋಲುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ನೇರವಾಗಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ನಯ ಅಂಚುಗಳು; ಸಾಧಾರಣ ಪ್ರಮುಖ ನಾಳಗಳು ; ಮೊನಚು ತುದಿ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಕೊಸೆ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಶಂಕಾಕಾರ, ಬಣ್ಣ ಬಿಸ್ಟರ್ ಗ್ರೀನ್, ಕಡಮೆ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣ, ಗುಂಡಾಕಾರ ; ಗುಂಡು ಬುಡ ; ಚೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ಚಪ್ಪಟೆಯಿಂದ ವಿಶಾಲ ಗುಂಡಾಗಿರುವ ತುದಿ ; ತೆಳುವಾದ ಸಿಪ್ಪೆ, ನಯ, ಭುಜಗಳ ಮೇಲೆ ಡೀಪ್ ಕ್ರೋಮ್ ಕಾಂತಿಯಿಂದೊಡಗೂಡಿದ ಎಂಪೈರ್ ಯೆಲ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ಸಾಧಾರಣ ಪರಿ

ಮಾಣದ ನಾರಿನಿಂದ ಕೂಡಿರುತ್ತದೆ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣ, ಮೊಟ್ಟೆಯಾಕಾರ, ನಾರುಯುತ ; ಇದರ ಮೇಲ್ಭಾಗದಲ್ಲಿ ಮಧ್ಯಮ ಪ್ರಮಾಣದ ನಾರುಗಳು ಮೆದುವಾಗಿರುತ್ತವೆ,ಕೆಳಅಂಚಿನಲ್ಲಿ ಉದ್ದವಾದ ನಾರು ; ಸಮಾನಾಂತರವಾದ ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮುಚಲಿ

ಷಹರಾನ್‌ಪುರದಿಂದ ಈ ತಳಿಯನ್ನು ಅಧ್ಯಯನಕ್ಕಾಗಿ ಆರಿಸಿಕೊಂಡಿದೆ. ಇದಕ್ಕೆ ನಾಸ್‌ಟೋಟಿ ಮತ್ತು ಅಮಾನ್ ಫೋರ್ಡ್ ಎಂಬ ಹೆಸರುಗಳೂ ಬಳಕೆಯಲ್ಲಿವೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ದರ್ಜೆಯಿಂದ ಕೂಡಿರುವುದರಿಂದ, ಇದನ್ನು ಜನಪ್ರಿಯಗೊಳಿಸ ಬೇಕಾದ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ,ಮಧ್ಯಮ ಉತ್ಪನ್ನಕಾರಿ, ಅನಿರ್ದಿಷ್ಟ ಫಲಕಾರಿ; ಗುಂಡಾದ ಮೇಲ್ಭಾಗ; ಕುಳ್ಳಾದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಿಂದ ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಪಿನಾರ್ಡ್ ಯೆಲ್ಲೊ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಲೈಮ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಬಫ್ಸಿ ಸಿಟ್ರೈನ್, ಕಡಮೆ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ, ಗುಂಡು ಬುಡ ಮತ್ತು ಮುಂದುವರಿದಿರುತ್ತದೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿ ಇರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಪ್ರಮುಖವಾದ ಮೊಲೆತೊಟ್ಟಿನಾಕಾರದ ಕೊಕ್ಕು ; ಹೆಚ್ಚು ಆಳವಿಲ್ಲದ ಕೊಕ್ಕಳು ; ವಿಶಾಲವಾದ ಗುಂಡಾಕಾರದಿಂದ ಚಪ್ಪಟೆ ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಕಾಪುಸೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಒಟೆ : ದೀರ್ಘಚತುರಸ್ರ ; ಇದರ ಮೇಲೆ ತೆಳುವಾದ, ಕುಳ್ಳಾದ, ಮೃದುವಾದ ನಾರು, ಕವಲೊಡೆದ ನಾಳಗಳು, ಸ್ವಲ್ಪ ಹಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಇಳುವರಿ ; ಗಾಳಿ ಮತ್ತು ಕಪ್ಪುಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸಾಗಿಸುವ ಗುಣ.

ಮಾಲ್ಡಾ ಹುಡ್ಲೆ

ಈ ತಳಿಯು ಉತ್ತರ ಪ್ರದೇಶದ ಷಹರಾನ್ ಪ್ರದೇಶದಲ್ಲಿ ಹೆಚ್ಚು ಬೇಸಾಯದಲ್ಲಿ ಜನಪ್ರಿಯತೆಗಳಿಸಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದು ಪಂಜಾಬಿನ ಮಾಲ್ಡಾ ತಳಿಯನ್ನು ಹೋಲುತ್ತದೆ. ಇದನ್ನು ಉತ್ತರ ಪ್ರದೇಶದಲ್ಲಿ ಬಾಂಬೆ ಗ್ರೀನ್ ಎಂದು ಕರೆಯುತ್ತಾರೆ. ಇದನ್ನು ವಿಸ್ತಾರವಾಗಿ ಮತ್ತು ವಾಣಿಜ್ಯ ತಳಿಯಾಗಿ ಬೆಳೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನದಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದಿಂದ ಸಣ್ಣ ಗಾತ್ರದ ಬುಡ ; ಸಣ್ಣದಿಂದ ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು: ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಿಂದ ಸ್ವಲ್ಪ ಮಡಚಿರುತ್ತವೆ ; ನಯದಿಂದ ಅಲೆ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಅಕಾಷೂ ರೆಡ್‌ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆಯಾಗಿರುವ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಎಂಪೈರ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ಹೆಚ್ಚು ಪರಿಮಾಣದ ನಾರಿನಿಂದ ಕೂಡಿರುತ್ತದೆ, ತಿಳಿ ಕ್ಯಾಡ್‌ಮಿಯಮ್ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದಿರುವ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮಹಾಂಡ್ರಾಗಿ

ಇದು ಸಹರಾನ್‌ಪುರ ಪ್ರದೇಶದ ಸ್ಥಳೀಯ ತಳಿ. ಇತ್ತೀಚೆಗೆ ಇದನ್ನು ಪಂಜಾಬ್‌ನಲ್ಲಿರುವ ಗುರುದಾಸ್‌ಪುರ ವ್ಯವಸಾಯ ಫಾರ್ಮಿಗೆ ಒಯ್ಯಲಾಗಿದೆ. ಜನ ಪ್ರಿಯಗೊಳಿಸಬೇಕಾದ ಯಾವ ಗುಣವೂ ಈ ತಳಿಯಲ್ಲಿಲ್ಲ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ನೆಲದಿಂದ ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಅಲೆ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕೊಸೆಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಶಂಕಾಕಾರ, ಅಕಾಷೊ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ, ಸ್ವಲ್ಪ ಮೂತ್ರಪಿಂಡಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತವೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯು

ತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಒಂದು ಬಿಂದುವಿನಲ್ಲಿರುತ್ತದೆ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಿಂದ ಗುಂಡಾಗಿರುವ ಬುಡ ; ದಪ್ಪ ಸಿಪ್ಪೆ, ಒರಟಿನಿಂದ ಸಿಪ್ಪೆಗಂಟಿಯು ಪ್ರವೃತ್ತಿ, ಲೆಟ್ಯೂಸ್ ಗ್ರೀನ್ ಬಣ್ಣ ; ದೊಡ್ಡ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ, ಹಿತಕರ ವಾಸನೆ ; ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘ ಚತುರಸ್ರ ಪೊಟ್ಟೆಯಾಕಾರ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ, ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರದ ಮತ್ತು ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮಂಕುರಾದ್

ಇದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ವಿಂಗುರ್ಲಾ ಮತ್ತು ಮಲ್‌ವಾನ್‌ದಲ್ಲಿ ಮುಖ್ಯವಾದ ವಾಣಿಜ್ಯ ತಳಿ ; ಇಲ್ಲಿಂದ ಇದು ಮೈಸೂರು ರಾಜ್ಯದ ಉತ್ತರ ಕನ್ನಡ ಜಿಲ್ಲೆ ಮತ್ತು ಗೋವೆಗಳಿಗೆ ಹರಡಿದೆ. ಈ ತಳಿಯು ಹಣ್ಣು ಉತ್ತಮ ಗುಣಗಳಿಂದ ಕೂಡಿರುವುದರಿಂದ ದಖನ್ ಪ್ರದೇಶ ಮತ್ತು ಉತ್ತರ ಭಾರತದ ಒಣ ಪ್ರದೇಶಗಳಲ್ಲಿ ಬೇಸಾಯ ಮಾಡುವುದಕ್ಕೆ ಯೋಗ್ಯವಾಗಿದೆ. ಈ ತಳಿಯ ಒಂದು ತೊಂದರೆ ಎಂದರೆ, ಮಳೆ ವಾತಾವರಣದಲ್ಲಿ ಹಣ್ಣಿನ ಮೇಲೆ ಸುಲಭವಾಗಿ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುವುದು, ಇದರಿಂದ ಮಾರುಕಟ್ಟೆಯಲ್ಲಿ ಇದರ ಬೆಲೆ ಕಡಮೆಯಾಗುತ್ತದೆ. ಈ ಕಾರಣದಿಂದ ಇದರ ವ್ಯಾಪ್ತಿಯು ಬಹಳ ಸೀಮಿತವಾಗಿದೆ. ಇದರ ಬೇಸಾಯವಿರುವ ಪ್ರದೇಶಗಳಲ್ಲಿ ರೈಲಿನ ಸೌಲಭ್ಯವಿಲ್ಲದೆ ಇರುವಿಕೆಯೂ ಇದರ ವ್ಯಾಪ್ತಿಯನ್ನು ತಡೆದಿದೆ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ ; ಪರ್ಯಾಯ ಫಲ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ;

ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ ; ನಯವಾದ ಅಂಚುಗಳು ; ಖಚಿತವಿಲ್ಲದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಲ್ಫೈನ್ ಯೆಲ್ಲೋ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್, ಇವು ಮುಂದೆ ಮಿನರಲ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಬ್‌ಸಿಂತ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಸಾಧಾರಣವಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ;ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಸಿರ್ದಿಷ್ಟವಾಗಿರುತ್ತದೆ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಎಂಪೈರ್ ಯೆಲ್ಲೋ ; ಸಣ್ಣ ಗಾತ್ರದಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯುಮ್ ಯೆಲ್ಲೋ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಬಹಳ ಉತ್ತಮ ದರ್ಜೆ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕೀಳಿನಿಂದ ಮಧ್ಯಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಮನೋರಂಜನ್

ಇದು ತಮಿಳುನಾಡಿನ ಸ್ಥಳೀಯ ತಳಿ. ಆಂಧ್ರಪ್ರದೇಶದ ಕಡಪ ಮತ್ತು ಚಿತ್ತೂರು ಜಿಲ್ಲೆಗಳಲ್ಲಿ ಸ್ವಲ್ಪಮಟ್ಟಿಗೆ ಇದರ ಬೇಸಾಯವಿದೆ. ಹೆಚ್ಚು ಬೇಸಾಯಕ್ಕೆ ತರಬೇಕಾದ ಯೋಗ್ಯ ಗುಣಗಳು ಈ ತಳಿಯಲ್ಲಿಲ್ಲ. ಉತ್ತಮ ಶೇಖರಣೆ ಗುಣವೊಂದೇ ಇದರ ಉತ್ತಮಿಕೆ. ಹೆಚ್ಚು ಕಾಲ ಶೇಖರಣೆ ಮಾಡಿದ ಈ ತಳಿಯ ಹಣ್ಣು, ಇದರ ಕ್ಷೀಣಿಸುವ ಗುಣಗಳು ಕಾಣಿಸದೆ ಇದ್ದಾಗ್ಯೂ ಸಹ ಕಹಿಯಾಗುತ್ತದೆ. ಇದರ ಮೂಲಸ್ಥಾನ ತಿಳಿದು ಬಂದಿಲ್ಲ. ಉತ್ತಮ ಶೇಖರಣೆ ಗುಣವಿರುವ ಸಂಕೀರ್ಣ ತಳಿ ಬಿಡುಗಡೆ ಮಾಡಲು ಈ ತಳಿಯನ್ನು ಉಪಯೋಗಿಸಿಕೊಳ್ಳಬಹುದು.

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮದಿಂದ ಸಣ್ಣ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲೆಬೋರ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್‌ಸಿಟ್ರೈನ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣ, ಗೋಪುರಾಕಾರ, ವಾಲ್‌ನಟ್ ಬ್ರೌನ್ ಬಣ್ಣ, ನಿಬಿಡವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಪ್ಪಟೆಯಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಸ್ವಲ್ಪ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿ

ಯುತ್ತದೆ ; ಮೊಲೆ ತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಕಾಪು ಸ್ಪೈನ್ ಯೆಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರ ಇರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಿಂದ ಬಿರುಸು ತಿರುಳು, ನಾರು ಇರುವುದಿಲ್ಲ, ಡೀಪ್ ಕ್ರೋಮ್ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಿಂದ ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ, ಮಧ್ಯಮದಿಂದ ಕಡಮೆ ಪರಿಮಾಣದ ಫಸಲು ; ಗಾಳಿಯನ್ನು ನಿರೋಧಿಸುತ್ತದೆ ; ಕುಪ್ಪಳಿಸುವ ಕೀಟಗಳಿಗೆ ಬಹಳ ಸುಲಭವಾಗಿ ಬಲಿಯಾಗುತ್ತದೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಮಾರ್ಕಿಯುರ

ಈ ತಳಿ ಉತ್ತರ ಪ್ರದೇಶದ, ಫತೇಪುರ್ ಜಿಲ್ಲೆಯಲ್ಲಿ ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆಯೆಂದು ಭಾವಿಸಲಾಗಿದೆ. ಇದಕ್ಕೆ ಅನಾನಸ್ ಫತೇಪುರಿ ಎಂಬ ಇನ್ನೊಂದು ಹೆಸರು ಇದೆ. ಮಾರ್ಕಿಯುರ ಎಂದರೆ 'ಸಾಟಿಯಿಲ್ಲದ' ಎಂದು ಅರ್ಥ ; ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವ ಕಾರಣ ಮಾರ್ಕಿಯುರ ಎಂಬ ಹೆಸರು ಬಂದಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮದಿಂದ ಕುಳ್ಳಾದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು, ಕೆಲವು ಸಾರಿ ಅಲೆಯೆ ಮತ್ತು ತಿರುಚಿರುವ ಪ್ರವೃತ್ತಿ ; ಖಚಿತ

ವಿಲ್ಲದ್ದರಿಂದ ಸಾಧಾರಣ ನಾಳರಚನೆ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಅಕಾಷೂ ರೆಡ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕೊರಿಂಥಿಯಾನ್ ರೆಡ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಗೋಪುರಾಕಾರ, ಒಕ್ರೆರೆಡ್‌ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟವಾದ ಕೊಕ್ಕು, ಸ್ವಲ್ಪ ಪ್ರಮುಖವಾಗಿರುತ್ತದೆ ; ಹೊಕ್ಕಳು ಇಲ್ಲ ಅಥವಾ ಸ್ವಲ್ಪ ; ವಿಶಾಲ ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ, ಒರಟು ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ಹೆಚ್ಚು ಪರಿಮಾಣದ ನಾರಿನಿಂದ ಕೂಡಿರುತ್ತದೆ; ಬಾರಿಟಾ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ , ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಪೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯದಿಂದ ನಿಧಾನ ಕಾಲಿಕ, ಅಧಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ;. ಗಾಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮೆವಾ ಫಜರಿ

ಮೆವಾ ಎಂದರೆ ಒಣ ದ್ರಾಕ್ಷಿ ಮತ್ತು ಫಜರಿ ಎಂದರೆ ಒಂದು ವಾಣಿಜ್ಯಮಾವಿನ ತಳಿ, ಇದರ ಹಣ್ಣು ಒಣ ದ್ರಾಕ್ಷಿಯಂತೆ ಮತ್ತು ಫಜರಿ ತಳಿಯಂತೆ ಇರುವುದರಿಂದ ಈ ಹೆಸರು ಬಂದಿದೆ. ಈ ತಳಿಯ ಹಣ್ಣು ಫಜರಿ ತಳಿ ಹಣ್ಣಿಗಿಂತ ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ, ಇವೆರಡರಲ್ಲಿ ಭಿನ್ನವೆಣಿಸಲು ಮೆವಾ ಫಜರಿ ಎಂಬ ಹೆಸರು ಕೊಟ್ಟಿದೆ. ಈಗ ಇದರ ಬೇಸಾಯ ಉತ್ತರ ಪ್ರದೇಶಕ್ಕೆ ಸೀಮಿತವಾಗಿದೆ. ಈ ತಳಿಯ ಹಣ್ಣು ಮಧ್ಯಮ ಗುಣದ್ದು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರ್ಯಾಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಕ್ಯಾರ್‌ಡೋಸ್ ಅಂಬರ್, ಇವು ಮುಂದೆ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್‌ಕೋರಲ್ ರೆಡ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ, ಓರೆ ಚಪ್ಪಟೆ ; ಓರೆಯಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು; ಗುಂಡಿನಿಂದ ವಿಶಾಲ, ಬಿಂದುವಿನ

ಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯ, ಮೇಲ್ಭಾಗದ ಬಣ್ಣ ಪಿನಾರ್ಡ್ ಯೆಲ್ಲೊ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಎಂಪೈರ್ ಯೆಲ್ಲೊ ಬಣ್ಣ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರವಾದ ನಾಳಗಳು ಠಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ; ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಉತ್ತಮ ಸುಲಿಯುವ ಗುಣ.

ಮುಹಮುದಾ

ಇದು ಹೈದ್ರಾಬಾದಿನ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅವಶ್ಯಕತೆ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಸಣ್ಣದಿಂದ ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್ ಲೇಕ್, ಇವು ಮುಂದೆ ಮಿಗ್ನೊನೆಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಓರೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ವಿಶಾಲ ಮೊಟ್ಟೆಯಾಕಾರ; ಸ್ವಲ್ಪ ಚಪ್ಪಟೆಯಿಂದ ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಸಮ ಭುಜಗಳು, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ವಿಶಾಲ ಬಿಂದುವಿನಲ್ಲಿರುವ ತುದಿ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೋ, ಭುಜಗಳ ಮೇಲೆ ಕೋರಲ್ ರೆಡ್ ಕಾಂತಿ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ, ಲೈಟ್ ಕ್ಯಾಡ್‌ಮಿಯಮ್ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮೋಹನ್‌ಭೋಗ್

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದು ಉತ್ತಮ ಆಕಸ್ಮಿಕ ಸಸಿಯಾಗಿ ಬಿಹಾರದಲ್ಲಿ ಉದ್ಭವಿಸಿದೆ ಎಂದು ತಿಳಿದುಬಂದಿದೆ. ಅಲ್ಲಿಂದ ಇದು ಉತ್ತರ ಪ್ರದೇಶ ಮತ್ತು ಬಂಗಾಳದ ಕೆಲವು ಭಾಗಗಳಿಗೆ ಹರಡಿದೆ ಎಂದು ಭಾವಿಸಲಾಗಿದೆ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ, ಮಧ್ಯಮದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ, ಸುಕ್ಕಾಗಿರುತ್ತವೆ ಮತ್ತು ಸ್ವಲ್ಪ ಮಡಚಿರುತ್ತವೆ ; ಅಲೆಯಾದ ಮತ್ತು ತಿರುಚಿದ ಅಂಚುಗಳು ; ಸಾಧಾರಣ ಪ್ರಮುಖ ನಾಳ ರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್.

ಪುಷ್ಪವಿನ್ಯಾಸ: ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಶಂಕಾಕಾರ, ಟೌನಿ ಬಣ್ಣ, ಸಾಧಾರಣವಾದ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ, ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಸಾಧಾರಣವಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡಾಕಾರದಿಂದ ಅಂಡ ಓರೆಯಾಕಾರ ; ಸ್ವಲ್ಪದಿಂದ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು; ಸ್ವಲ್ಪ ಹೊಕ್ಕಳು ; ವಿಶಾಲ ಗುಂಡು ತುದಿ ; ಮಧ್ಯಮದಿಂದ ದಪ್ಪ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗ, ಬಣ್ಣ ಪಿನಾರ್ಡ್ ಯೆಲ್ಲೊ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ ; ವ್ಯಾಕ್ಸ್ ಯೆಲ್ಲೊ ಬಣ್ಣ; ಅಲ್ಪ ಪರಿಮಾಣದ, ಹಿತಕರದಿಂದ ಟರ್‌ಪೆಂಟೈನ್ ಗಂಧಯುತ ಸುಗಂಧ ವಾಸನೆ; ಸಾಧಾರಣ ಸಿಹಿಯಿಂದ ಸಿಹಿಯಾದ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು, ಸಾಧಾರಣದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮಲ್‌ಗೋವ

ಇದು ದಕ್ಷಿಣ ಮತ್ತು ಡೆಕ್ಕನ್ ಪ್ರದೇಶದ ವಾಣಿಜ್ಯ ತಳಿ. ಈ ತಳಿಯ ಮೂಲಸ್ಥಾನ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಅತ್ಯುತ್ತಮ ಗುಣಗಳಿಂದ ಕೂಡಿರುವ ಕಾರಣ ಹೆಚ್ಚು ಜನಪ್ರಿಯವಾಗಿದೆ. ಈ ಹಣ್ಣು ತಿನ್ನಲು ಮತ್ತು ಪ್ರದರ್ಶನಕ್ಕೆ ಆದರ್ಶ ತಳಿಯಾಗಿದೆ ಟ್ರಾಪಿಕಲ್ ಅಮೇರಿಕಾಕ್ಕೆ ಬಹಳ ಹಿಂದೆ ಈ ತಳಿಯನ್ನು ಒಯ್ಯಲಾಗಿದೆ. ಇದು ಆಂಧ್ರಪ್ರದೇಶ, ತಮಿಳುನಾಡು ಮತ್ತು ಮೈಸೂರು ರಾಜ್ಯಗಳಲ್ಲಿ ಹೆಸರುವಾಸಿಯಾದ ತಳಿ. ಈ ತಳಿಯು ನಿಧಾನಕಾಲಿಕ ಫಸಲು ಕೊಡುವುದರಿಂದ ಮುಂಗಾರು ಮಳೆಯ ಹೊಡೆತಕ್ಕೆ ಸಿಕ್ಕಿ ನಷ್ಟ ಅನುಭವಿಸುವ ಸಾಧ್ಯತೆ ಇದೆ, ಈ ಕಾರಣದಿಂದ ಮೈಸೂರು ರಾಜ್ಯದಲ್ಲಿ ಇದರ ಜನಪ್ರಿಯತೆ ಕುಗ್ಗುತಿದೆ. ಪಶ್ಚಿಮ ಸಮುದ್ರತೀರ ಪ್ರದೇಶದಲ್ಲಿ ಈ ಫಸಲು ಕೊಯ್ಲಿಗೆ ಬರುವ ಮೊದಲೇ ಮಳೆ ಪ್ರಾರಂಭವಾಗುವುದರಿಂದ ಹಣ್ಣು ಮಾಡಿ ಹುಳುಗಳ ಹಾವಳಿಗೆ ಬಲಿಯಾಗುತ್ತದೆ ; ಇದರಿಂದ ಹಣ್ಣಿನ ದರ್ಜೆ ಕಡಮೆಯಾಗಿ ಮಾರುಕಟ್ಟೆಯಲ್ಲಿ ಕಡಮೆ ಬೆಲೆಗೆ ಮಾರಬೇಕಾಗುತ್ತದೆ. ದಕ್ಷಿಣ ಭಾರತದ ಕೆಲವು ಒಣ ಪ್ರದೇಶಗಳಲ್ಲಿ ನಿಧಾನವಾಗಿ ಮುಂಗಾರು ಮಳೆ ಪ್ರಾರಂಭವಾಗುವುದರಿಂದ, ಇಂತಹ ಪ್ರದೇಶಗಳಲ್ಲಿ ಈ ತಳಿಯ ಬೇಸಾಯಕ್ಕೆ ಯಶಸ್ಸು ದೊರಕಿದೆ. ಈ ತಳಿಯ ಮರವು ವಿಪರೀತವಾಗಿ ಹೂ ಬಿಡುತ್ತದೆ, ಆದರೆ ಹೂಗೊಂಚಲಿನಲ್ಲಿ ದ್ವಿಲಿಂಗ ಹೂಗಳ ಸಂಖ್ಯೆ ಕಡಮೆಯಿರುವುದರಿಂದ ಫಸಲು ನಿರಾಶಾದಾಯಕವಾಗಿರುತ್ತದೆ.

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದವಾಗಿ ಬೆಳೆದು ಹರಡುತ್ತದೆ, ಕಡಮೆ ಉತ್ಪನ್ನಕಾರಿ, ಅನಿಶ್ಚಿತ ಫಲಕಾರಿ ; ಗುಂಡಾದ ಮೇಲ್ಭಾಗ ; ಬುಡ ಮತ್ತು ರೆಂಬೆಗಳು ಸಣ್ಣ.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಓಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಅಂಚು ; ಸಾಧಾರಣದಿಂದ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ

ುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ
ರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮ್ಯಾಡರ್ ಬ್ರೌನ್,
ದು ಮುಂದೆ ಮೊರೊಕೊ ರೆಡ್ ಬಣ್ಣಕ್ಕೆ ತಿರುಗುತ್ತದೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪೈರೈಟ್ ಯೆಲ್ಲೊ
ಣ್ಣ, ಸಾಧಾರಣವಾದ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ,
ಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಗುಂಡು ಓರೆಯಾಕಾರ ; ಓರೆ ಚಪ್ಪಟೆ
ುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಕೆಳಭುಜ
ಮೇಲ್ಭುಜಕ್ಕೆ ಸಮ ಮತ್ತು ಎತ್ತರ, ಎರಡೂ ಭುಜಗಳು ಗುಂಡಾಗಿರುತ್ತವೆ ;
ುರ್ದಿಷ್ಟ ಕೊಕ್ಕು ; ಸ್ವಲ್ಪ ಹೊಕ್ಕಳು ಅಥವಾ ಇರುವುದಿಲ್ಲ ; ಗುಂಡು ತುದಿ ;
ುಧ್ಯಮ ದಪ್ಪದ ಸಿಪ್ಪೆ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ
ತುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಸ್ವಲ್ಪ ಅಳವಾಗಿರುತ್ತವೆ ;
ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಮಸ್ಟರ್ಡ್ ಯೆಲ್ಲೊ ಬಣ್ಣ ; ಆಹ್ಲಾದಕರ
ುಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಪೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ
ದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು
ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ನಿಧಾನಕಾಲಿಕ, ಕಡಮೆ ಫಸಲು ;
ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾಗಿ ತುತ್ತಾಗುತ್ತವೆ ; ಉತ್ತಮ
ವಾದ ಶೇಖರಣೆ ಗುಣ.

ಮುಂಡಪ್ಪ

ಇದು ಮೈಸೂರು ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ತಳಿ. ಈ
ತಳಿ ಹೊಸದಾಗಿ ಉದ್ಭವಿಸಿದ್ದು, ಮಳೆ ಪ್ರದೇಶಗಳಾದ ದಕ್ಷಿಣ ಕನ್ನಡ ಜಿಲ್ಲೆ, ಮಲ
ಬಾರ್, ತಿರುವಾಂಕೂರ್ ಮತ್ತು ಕೊಚ್ಚಿನ್‌ಗಳಲ್ಲಿ ಬಹಳ ಜನಪ್ರಿಯತೆಯನ್ನು ಗಳಿ
ಸಿದೆ. ಈ ತಳಿಯು ನಿಧಾನಕಾಲಿಕವಾಗಿ ಫಸಲು ಕೊಟ್ಟರೂ ಮುಂಗಾರು ಮಳೆಯ

ಇದರ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ. ಈ ತಳಿಯ ಹಣ್ಣು ಬಹಳ ಆಕರ್ಷಕವಾಗಿದ್ದು ನಿಯಮಿತ ಆಕಾರದಲ್ಲಿ ಇರುತ್ತದೆ.

ಮರ: ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ತಿರುಚಿರುತ್ತವೆ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರ್ಯೂಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಳವಾದ ಸಿಟ್ರೈನ್, ಇವು ಅನಂತರ ಎಕ್ರ್ಯೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಗೋಪುರಾಕಾರ, ಕೋಕೋ ಬ್ರೌನ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡಾಗಿರುತ್ತದೆ ; ಬುಡ ಸ್ವಲ್ಪ ಚಪ್ಪಟೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುತ್ತವೆ; ಕೊಕ್ಕು ಮತ್ತು ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ತೆಳುವಾದ ಸಿಪ್ಪೆ, ಡೀಪ್ ಕ್ರೋಮ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸ್ವಲ್ಪ ತಗ್ಗಾಗಿರುತ್ತವೆ ; ಸಾಧಾರಣ ದೂರದಲ್ಲಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲೈಟ್ ಕ್ಯಾಡ್‌ಮಿಯಮ್ ಬಣ್ಣ ; ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ: ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ.

ಮುರ್ಷಿದಾಬಾದ್

ಈ ತಳಿಯು ಹೈದ್ರಾಬಾದ್‌ನ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದು ಆಂಧ್ರ ಪ್ರದೇಶದ ಹೈದ್ರಾಬಾದಿನ ಸುತ್ತಮುತ್ತಲ ಜನಪ್ರಿಯ ತಳಿ.

ಮರ: ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಆಲಿವ್ ಲೇಕ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಒಕ್ರೇಷಿಯಸ್ ಬಫ್ಫ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ದೀರ್ಘಚತುರಸ್ರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು; ಕುಳಿ ಇರುವುದಿಲ್ಲ ; ಸಮವಾದ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ,ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ

ಸಿಪ್ಪೆ, ಒರಟಿನಿಂದ ಸಿಪ್ಪೆಗಂತಿ ಪ್ರವೃತ್ತಿ, ಮೇಲ್ಭಾಗದ ಬಣ್ಣ ಸ್ಪಿನ್ಯಾಚ್ ಗ್ರೀನ್, ಭುಜಗಳ ಮೇಲೆ ಕೋರಲ್ ರೆಡ್ ಕಾಂತಿ ; ಮಧ್ಯಮ ಚುಕ್ಕೆಗಳು, ದೂರ ದೂರ ವಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೋ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ತೆಳುವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಮುಶರಾದ್

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದು ಮೈಸೂರು ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳಾದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಸ್ವಲ್ಪದಿಂದ ದೃಢವಾಗಿ ಮಡಚಿರುತ್ತವೆ ; ನಯವಾದ ಅಂಚುಗಳು ; ಕೆಲವು ಸಾರಿ ಅಲೆ ಮತ್ತು ತಿರುಚಿರುವ ಪ್ರವೃತ್ತಿ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಎಕ್ರ್ಯೂಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆಲಿವ್ ಒಕ್ರೆ ಬಣ್ಣ, ಕಡಮೆ ಮೃದುತುಪ್ಪುಳು ; ಕೇಸರಗಳು, ಅಂಡಾಶಯಕ್ಕೆ ಸಮ, ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖ ಕೊಕ್ಕು; ಸ್ವಲ್ಪ ಹೊಕ್ಕಳು ; ವಿಶಾಲ ಬಿಂದುವಿನಿಂದ ಗುಂಡಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ಭುಜಗಳ ಮೇಲೆ ಕೋರಲ್ ರೆಡ್ ಕಾಂತಿಯುಕ್ತ ನಯವಾದ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೋ ಬಣ್ಣ ; ಹಿತಕರ ವಾಸನೆ ; ಸಿಹಿಯಿಂದ ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಪೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾಗಿ, ಕುಳ್ಳಾದ, ಮೃದುವಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ನಶ್‌ಪಟಿ

ಹಿಂದಿಯಲ್ಲಿ ನಶ್‌ಪಟಿ ಎಂದರೆ ಪಿಯರ್ ಹಣ್ಣು ಎಂದು ಅರ್ಥ. ಈ ತಳಿಯ ಹಣ್ಣು ಪಿಯರ್ ಹಣ್ಣಿನ ವಿಚಿತ್ರ ಆಕಾರದಲ್ಲಿರುವುದರಿಂದ ಈ ಹೆಸರು ಬಂದಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದರ ಬೇಸಾಯ ಈಗ ಉತ್ತರ ಪ್ರದೇಶಕ್ಕೆ ಸೀಮಿತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ನಿಧಾನವಾಗಿ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪರ್ಯಾಯ ಫಲ ಪ್ರವೃತ್ತಿ; ಗುಂಡಾದ ಮೇಲ್ಭಾಗ ; ಸಣ್ಣ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ ; ಚಪ್ಪಟೆಯಿಂದ ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳ

ರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ ; ರೈನೆಟ್ ಗ್ರೀನ್ ಬಣ್ಣ ; ಸಾಧಾರಣವಾದ ಮೃದುತುಪ್ಪಳ ; ಕೇಸರಗಳು ಅಂಡಾಶಯಕ್ಕೆ ಸಮ ; ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ಚಿಕ್ಕದು ; ಗುಂಡು ಓರೆಯಾಕಾರ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಗುಂಡಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ಗುಂಡಾದ ತುದಿ ; ತೆಳುಪಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಓನಾರ್ಡ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ: ಗಾತ್ರದಲ್ಲಿ ಮಧ್ಯಮದಿಂದ ಸಣ್ಣದು, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದಿರುವ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ನಿಧಾನಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಸುಲಿಯುವ ಮತ್ತು ಶೇಖರಣೆ ಗುಣ.

ನಜೀಮ್ ಪಸಂದ್

ಇದು ಆಂಧ್ರಪ್ರದೇಶದ ವಿಶಾಖಪಟ್ಟಣದ ಜಿಲ್ಲೆಯಲ್ಲಿ ಹೆಸರುವಾಸಿಯಾದ ತಳಿ. ಇದನ್ನು ಆಲಮ್ ನಾಡಾದ ಖಾಸಗಿ ತೋಟದಲ್ಲಿ ಅಧ್ಯಯನ ಮಾಡಲಾಯಿತು. ಇದನ್ನು ನಜೀಮ್ ಖಾನ್ ಪಸಂದ್ ಎಂಬ ಇನ್ನೊಂದು ಹೆಸರಿನಿಂದ ಸಹ ಕರೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಜೋಲು ಬಿದ್ದಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಸ್ವಲ್ಪ ಲಂಬಾಗ್ರ ತುದಿ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗ್ನೊನೆಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಜೆರೇನಿಯಮ್ ಪಿಂಕ್ ಬಣ್ಣ, ಒತ್ತಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಸಮಾನಾಂತರವಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡಾಕಾರ ; ಗುಂಡು ಬುಡ, ಮುಂದುವರಿದಿರುತ್ತದೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಅದೇ ಎತ್ತರದಲ್ಲಿರುತ್ತದೆ, ಎರಡು ಭುಜಗಳು ಗುಂಡಾಗಿರುತ್ತವೆ ; ಬಿಂದುವಿನಲ್ಲಿರುವ ಕೊಕ್ಕು ; ಕೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಎಂಪೈರ್ ಯೆಲ್ಲೊ ಬಣ್ಣ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಮೈಜ್ ಯೆಲ್ಲೊ ಬಣ್ಣ ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸ್ವಲ್ಪ ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮ ದರ್ಜೆ ; ನಿಧಾನಕಾಲಿಕ, ಮಧ್ಯಮದಿಂದ ಕಡಮೆ ಫಸಲು ; ಕುಪ್ಪಳಿಸುವ ಕೀಟಗಳಿಗೆ ಬಲಿಯಾಗುತ್ತದೆ, ಗಾಳಿಯನ್ನು ನಿರೋಧಿಸುತ್ತದೆ ; ಉತ್ತಮವಾದ ಶೇಖರಣೆ ಗುಣ.

ನಾಜೂಕ್ ಪಸಂದ್

ಇದು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳ ಸ್ಥಳೀಯ ತಳಿ. ಇದರ ಮೂಲಸ್ಥಾನದ ಇತಿಹಾಸ ತಿಳಿದುಬಂದಿಲ್ಲ. ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿಯೂ ಇದರ ಬೇಸಾಯವಿದೆ. ಈ ತಳಿಯ ಹಣ್ಣು ಕ್ಯಾನಿಂಗ್ ಮಾಡಲು ಯೋಗ್ಯವಾಗಿದೆ. ಇದ

ರಲ್ಲಿ ಹೆಚ್ಚು ಬೇಸಾಯಕ್ಕೆ ತರಬಹುದಾದ ಯಾವ ಉತ್ತಮ ಗುಣಗಳೂ ಇಲ್ಲ. ಬಹಳ ಸುಂದರವಾಗಿ ಕಾಣುವುದೇ ಇದರ ಏಕೈಕ ಉತ್ತಮ ಲಕ್ಷಣ, ಮರದ ಮೇಲ್ಭಾಗ ಪೊದೆಯಂತಿದ್ದು, ಸಣ್ಣ ಎಲೆಗಳಿರುವ ಕಾರಣ ಇದನ್ನು ಸಾಲು ಮರವಾಗಿ ನೆಡಲು ಯೋಗ್ಯವಾಗಿದೆ. ಇದನ್ನು ಹೈದ್ರಾಬಾದ್ ರಾಜ್ಯದ ಕೆಲವು ಕಡೆಗಳಲ್ಲಿ ನಾಜೂಕ್ ಬದನ್ ಎಂದು ಕರೆಯುವುದುಂಟು.

ಮರ : ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ನೇರವಾಗಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪದಿಂದ ದೃಢವಾಗಿ ಹಿಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಲೈಮ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಟಾನಿ ಆಲಿವ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಸಕ್ಯಾರ್ ಡೋಸ್ ಅಂಬರ್ ಬಣ್ಣ, ಕಡಮೆ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬರಡೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಗುಂಡಾದ ಬುಡ ಮುಂದುವರಿದಿರುತ್ತದೆ ; ಚಪ್ಪಟೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಅದೇ ಮಟ್ಟದಲ್ಲಿರುತ್ತದೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಇಳಿಜಾರಾಗಿರುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ಅಥವಾ ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ, ಅಧಿಕ ಫಸಲು ; ಗಾಳಿಗೆ ಸಾಧಾರಣ ನಿರೋಧಕಶಕ್ತಿ ; ಕುಪ್ಪಳಿಸುವ ಕೀಟಗಳಿಗೆ ಬಲಿಯಾಗುತ್ತದೆ ; ಮಧ್ಯಮದಿಂದ ಚೆನ್ನಾಗಿರುವ ಶೇಖರಣೆ ಗುಣ.

ನೀಲಂ

ಇದು ತಮಿಳುನಾಡಿನ ಸ್ಥಳೀಯ ತಳಿ. ಇಲ್ಲಿಂದ ಇತರ ರಾಜ್ಯಗಳಿಗೆ ಇದು ವ್ಯಾಪಿಸಿದೆ. ಇದರ ಮೂಲಸ್ಥಾನದ ಇತಿಹಾಸ ತಿಳಿದುಬಂದಿಲ್ಲ. ಈ ತಳಿ ತಮಿಳುನಾಡಿನ ಎಲ್ಲಾ ಒಣ ಪ್ರದೇಶಗಳಿಗೆ ಮತ್ತು ಆಂಧ್ರಪ್ರದೇಶದ ಕೆಲವು ಒಣ ಪ್ರದೇಶಗಳಿಗೆ ವ್ಯಾಪಿಸಿದ್ದು ಅಲ್ಲಿ ಜನಪ್ರಿಯವಾಗಿದೆ. ಆಂಧ್ರಪ್ರದೇಶದ ಚಿತ್ತೂರು ಮತ್ತು ಕಡಪ ಜಿಲ್ಲೆಗಳಲ್ಲಿ ಮುಖ್ಯ ವಾಣಿಜ್ಯ ತಳಿಯಾಗಿದೆ. ಇದರ ಉತ್ತಮ ಶೇಖರಣೆ ಗುಣದ ಕಾರಣದಿಂದ ಇದನ್ನು ಉತ್ತರ ಭಾರತದ ದೆಹಲಿ ಮುಂತಾದ ಮಾರುಕಟ್ಟೆಗಳಿಗೆ ರವಾನಿಸುತ್ತಾರೆ. ಇದು ಉತ್ತಮವಾದ ವಾಣಿಜ್ಯ ತಳಿಯಾದ್ದರಿಂದ ಇದನ್ನು ದೇಶದ ಎಲ್ಲಾ ಒಣ ಪ್ರದೇಶಗಳಲ್ಲಿ ಬೇಸಾಯ ಮಾಡಬಹುದು.

ಈ ತಳಿ ಕೆಲವು ಸಾರಿ ವರ್ಷಕ್ಕೆ ಎರಡು ಫಸಲು ಕೊಡುತ್ತದೆ, ಮೊದಲನೆಯದು ಜೂನ್ ತಿಂಗಳಲ್ಲಿ, ಎರಡನೆಯದು ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ. ಇದರ ಹೆಸರು, ಕಾಯಿಗಳ ಹಸುರು ಬಣ್ಣದಿಂದ ಉದ್ಭವಿಸಿದೆ. ದಕ್ಷಿಣ ಭಾರತದ ಬಹುತೇಕ ಭಾಷೆಗಳಲ್ಲಿ ನೀಲಂ ಎಂದರೆ ನೀಲಿ ಬಣ್ಣವೆಂದರ್ಥ. ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಇದನ್ನು ಕಾಜಾ ಲಡ್ಡು ಎಂದು ಕರೆಯುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣದಿಂದ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡೈಅನ್ಬೈನ್ ಬ್ರೌನ್, ಇವು ಅನಂತರ ವೆರೋನಾ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಆಯಿಲ್ ಗ್ರೀನ್

ಬಣ್ಣ, ಕಡಮೆ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ; ಓರೆಯಾದ ಮತ್ತು ಸ್ವಲ್ಪ ಮುಂದುವರಿದಿರುವ ಬುಡ, ಚಪ್ಪಟೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ಅಥವಾ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ ; ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ ; ಮೇಲ್ಭುಜ ಇಳಿಜಾರಿನಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ಮಧ್ಯಮ ದಪ್ಪದ ಸಿಪ್ಪೆ, ಸೇಫ್ರನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಸ್ವಲ್ಪ ಆಳವಾಗಿರುತ್ತವೆ ; ತಿರುಳಿನಲ್ಲಿ ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ; ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸ್ವಲ್ಪ ಕವಲೊಡೆದಿರುವ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಅನೇಕ ಸಾರಿ ನಿಧಾನಕಾಲಿಕ, ಅಧಿಕ ಫಸಲು ; ಕೆಲವು ಸಾರಿ ವರ್ಷಕ್ಕೆ ಎರಡು ಫಸಲು, ಕಡಮೆಯಿಂದ ಸಾಧಾರಣ ಪರಿಮಾಣದ ಅಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಬಹಳ ಉತ್ತಮವಾದ ಶೇಖರಣೆ ಗುಣ.

ನಿಸಾರ್ ಪಸಂದ್

ಈ ತಳಿಯನ್ನು ಉತ್ತರ ಪ್ರದೇಶದ ಮಾಲಿಹಾಬಾದಿನಲ್ಲಿ ಅಭ್ಯಾಸಕ್ಕೆ ಆರಿಸಿಕೊಳ್ಳಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದು ಬಂದಿಲ್ಲ. ಇದರ ಹಣ್ಣು ಉತ್ತಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಅಧಿಕ ಬೇಸಾಯಕ್ಕೆ ತರಬಹುದು. ಈ ಹಣ್ಣು ಅತ್ಯುತ್ತಮವಾದ ಶೇಖರಣೆ ಗುಣದಿಂದ ಕೂಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು, ಹರಡುತ್ತದೆ, ತುಂಬ ಉತ್ಪನ್ನಕಾರಿ ; ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಖಚಿತವಿಲ್ಲದ್ದರಿಂದ ಹಿಡಿದು ಪ್ರಮುಖವಾದ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಇವು ಅನಂತರ ಆಲಿವ್ ಲೇಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಆಯಿಲ್ ಗ್ರೀನ್ ಬಣ್ಣ, ಸಾಧಾರಣವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಓರೆಯಾಕಾರದಿಂದ ಓರೆ ಮೊಟ್ಟೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಸ್ವಲ್ಪ ಅಥವಾ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದಿಂದ ದಪ್ಪ ಸಿಪ್ಪೆ, ಕಾಪುಸ್ಕೈನ್ ಯೆಲ್ಲೊ ಬಣ್ಣ, ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರ ಇರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ತಿಳಿ ಕ್ಯಾಡ್‌ಮಿಯಮ್ ಬಣ್ಣ , ಹಿತಕರ ವಾಸನೆ ; ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸ್ವಲ್ಪ ಕವಲೊಡೆದ ನಾಳಗಳು, ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಅಧಿಕ ಇಳುವರಿ ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಹೆಚ್ಚು ಉತ್ತಮ ಸುಲಿಯುವ ಗುಣ.

ಓಳೂರ್

ಇದು ಕೇರಳ ರಾಜ್ಯದ ಮಲಬಾರ್ ಜಿಲ್ಲೆಯ ಜನಪ್ರಿಯ ಬಹು ಭ್ರೂಣ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಹೆಚ್ಚು ಉತ್ತಮ ಗುಣದಿಂದ ಕೂಡಿಲ್ಲದಿದ್ದರೂ, ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಶೀಘ್ರವಾಗಿ ಫಸಲು ಕೊಡುವುದರಿಂದ ಜನಪ್ರಿಯವಾಗಿದೆ. ಈ ಕಾರಣದಿಂದ ಹಣ್ಣನ್ನು ಉತ್ತರ ಭಾರತದ ಮಾರುಕಟ್ಟೆಗಳಿಗೆ ರವಾನಿಸುತ್ತಾರೆ. ಹಣ್ಣಿನಲ್ಲಿ ದಪ್ಪವಾದ ಸಿಪ್ಪೆ ಇರುವುದರಿಂದ ಉತ್ತಮ ಶೇಖರಣೆ ಗುಣ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ, ನೇರವಾಗಿ ಬೆಳೆಯುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಮೊಟ್ಟೆಯಾಕಾರದ ಮೇಲ್ಭಾಗ ; ಕುಳ್ಳಿನಿಂದ ಮಧ್ಯಮ ಎತ್ತರದ ಬುಡ ; ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತದೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡವು, ಶಂಕಾಕಾರ, ಅಂಬರ್ ಬ್ರೌನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು, ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಗುಂಡಾದ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಅದೇ ಮಟ್ಟದಲ್ಲಿರುತ್ತದೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ವಿಶಾಲ ಬಿಂದುವಿನಲ್ಲಿರುವ ತುದಿ ; ಸ್ವಲ್ಪ ಹೊಕ್ಕಳು ; ದಪ್ಪ ಸಿಪ್ಪೆ, ಕಾಪುಸೈನ್ ಯೆಲ್ಲೊ ಬಣ್ಣ ; ದೊಡ್ಡ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಮೆದುವಾದ ತಿರುಳು, ಸಾಧಾರಣ ಪರಿಮಾಣದ ನಾರಿನಿಂದ ಕೂಡಿರುತ್ತದೆ; ಮಧ್ಯಮ ಉದ್ದದ ನಾರು, ಮೃದುವಾಗಿರುತ್ತದೆ, ಬಣ್ಣ ಕಾಪುಸೈನ್ ಯೆಲ್ಲೊ ; ನಸು ಟರ್ಪೆಂಟೈನ್ ಗಂಧ ಸೂಚಕ ಸುಗಂಧ ವಾಸನೆ; ಮಧ್ಯಮ ಸಿಹಿಯಿಂದ ಸಪ್ಪೆ ರುಚಿ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ, ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳು ದರ್ಜೆ ; ಶೀಘ್ರಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ.

ಪಡಿರಿ

ಇದು ತಮಿಳುನಾಡಿನ ದಕ್ಷಿಣ ಜಿಲ್ಲೆಗಳ ಹೆಸರುವಾಸಿ ತಳಿ. ಇದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಮಾಯವರಂನಲ್ಲಿ ಒಬ್ಬ ಕ್ರೈಸ್ತ ಪಾದ್ರಿ ನಟ್ಟ ಮರದಿಂದ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ.

ಇದರ ಹಣ್ಣು ಆಕರ್ಷಕ, ಸಿಪ್ಪೆಯ ಆರೆಂಜ್ ಯೆಲ್ಲೊ ಬಣ್ಣದ ಹಿನ್ನಲೆಯಲ್ಲಿ ಭುಜಗಳ ಮೇಲೆ ಹೊಳಪಾದ ಕೆಂಪು ಕಾಂತಿಯಿರುತ್ತದೆ. ಇದರ ಕಾಯಿಗಳು ಹಣ್ಣಾದ ಮೇಲೆ ಹೆಚ್ಚು ಅಹ್ಲಾದಕರ ಗಂಧದಿಂದ ಕೂಡಿರುವುದರಿಂದ ಜನಪ್ರಿಯತೆಗಳಿಸಿದೆ. ಇತ್ತೀಚೆಗೆ ತಮಿಳುನಾಡಿನ ಅನೇಕ ಜಿಲ್ಲೆಗಳಲ್ಲಿ ಜನಪ್ರಿಯತೆಗಳಿಸುತ್ತಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ ; ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲಿಬೋರ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಅನಂತರ ಇಸಜೆಲ್ಲಾ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಸ್ಕಾರ್ಲೆಟ್ ರೆಡ್ ಬಣ್ಣ, ನಿಬಿಡವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ : ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು ; ಕಡಮೆ ಆಳದಿಂದ ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಭುಜಗಳ ಮೇಲೆ ಕೋರಲ್ ರೆಡ್ ಕಾಂತಿಯುತ ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಸಣ್ಣ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಸಿಪ್ಪೆಯಲ್ಲಿ ಸ್ವಲ್ಪ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ತಿಳಿ ಕ್ಯಾಡ್‌ಮಿಯಮ್ ಬಣ್ಣ ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಅತ್ಯುತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮದಿಂದ ಹೆಚ್ಚು ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾಗಿ ತುತ್ತಾಗುತ್ತವೆ ; ಉತ್ತಮವಾದ ಶೇಖರಣೆ ಗುಣ.

ಪೈರೋಷಾ

ಇದು ಬೊಂಬಾಯಿ ರಾಜ್ಯದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದನ್ನು ಪೂನಾದ ಹತ್ತಿರದ ಕಿರ್ಕಿ ಸರ್ಕಾರಿ ಹಣ್ಣು ಸಂಶೋಧನಾ ಕೇಂದ್ರದಲ್ಲಿ ಅಭ್ಯಾಸಕ್ಕಾಗಿ ಆರಿಸಿಕೊಂಡಿದೆ. ಇದರಲ್ಲಿ ಹೆಚ್ಚು ಬೇಸಾಯಕ್ಕೆ ಶರಬೇಕಾದ ಗುಣಗಳಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ · ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ ; ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚಿನಿಂದ ಅಲೆ ಅಂಚು ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳರಚನೆ ;

ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಿನ್ನಮಾನ್ ಬ್ರೌನ್, ಅನಂತರ ಇವು ಬಫ್ಡ್ ಸಿಟ್ರಿನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಎಂಪೈರ್ ಯೆಲ್ಲೊ ಬಣ್ಣ, ಸಾಧಾರಣ ಮೃದು ತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ; ಗುಂಡಿನಿಂದ ಓರೆಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಚಿಕ್ಕದು, ಕೆಳಭುಜ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು, ನಿರ್ದಿಷ್ಟವಾಗಿರುತ್ತದೆ ; ಕೊಕ್ಕಳು ಸ್ವಲ್ಪ ಅಥವಾ ಇರುವುದಿಲ್ಲ ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ದೊಡ್ಡ ಗಾತ್ರದ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲೆಮನ್ ಕ್ರೋಮ್ ಬಣ್ಣ ; ಸ್ವಲ್ಪ ಹಿತಕರವಾದ ವಾಸನೆ ; ಸಾಧಾರಣ ಸಿಹಿಯಿಂದ ಸಪ್ಪೆ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ವಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಪೈರಿ

ಇದು ಬೊಂಬಾಯಿಯ ಸ್ಥಳೀಯ ವಾಣಿಜ್ಯ ತಳಿ. ಇದನ್ನು ಲ್ಯಾಟಿನ್ ಅಮೇರಿಕಾಕ್ಕೆ ಒಯ್ಯಲಾಗಿದ್ದು, ಅಲ್ಲಿ ಉತ್ತಮ ಫಲಿತಾಂಶವನ್ನು ಕೊಟ್ಟಿದೆ. ಇದು ಪಶ್ಚಿಮ ಭಾರತದ ತೀರ ಪ್ರದೇಶದ ಆರ್ದ್ರ ವಾಯುಗುಣಕ್ಕೆ ವಿಶೇಷವಾಗಿ ಹೊಂದಿ

ಕೊಂಡಿರುವಂತೆ ಕಂಡುಬರುತ್ತದೆ. ಇವು ತಮಿಳುನಾಡು, ಬೊಂಬಾಯಿ, ಮೈಸೂರು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ತುಂಬ ಜನಪ್ರಿಯವಾಗಿದೆ. ಇದರ ಸಿಪ್ಪೆಯು ಆರೆಂಜ್ ಯೆಲ್ಲೊ ಬಣ್ಣದ ಹಿನ್ನೆಲೆಯಲ್ಲಿ ಭುಜಗಳ ಮೇಲೆ ಆಳವಾದ ಕ್ರಿಮ್‌ಸನ್ ರೆಡ್ ಕಾಂತಿಯಿರುವ ಕಾರಣ ಬಹಳ ಆಕರ್ಷಕವಾಗಿ ಕಾಣುತ್ತದೆ. ಇದು ಆಲ್ಫೊನ್ಸೊ ತಳಿಯಷ್ಟು ಉತ್ತಮ ಶೇಖರಣೆ ಗುಣದಿಂದ ಕೂಡಿಲ್ಲದಿರುವುದರಿಂದ ಅದರಷ್ಟು ಜನಾನುರಾಗಿಯಾಗಿಲ್ಲ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಮಾವು ಬೆಳೆಯುವ ವಿವಿಧ ಪ್ರಾಂತದಲ್ಲಿ ಇದಕ್ಕೆ ಹಲವು ಹೆಸರುಗಳಿವೆ. ತಮಿಳುನಾಡಿನ ದಕ್ಷಿಣ ಜಿಲ್ಲೆಗಳಲ್ಲಿ ಇದನ್ನು ಗ್ರೇಪ್ ಎಂದೂ ಮಧ್ಯ ತಮಿಳುನಾಡಿನ ಜಿಲ್ಲೆಗಳಲ್ಲಿ ನಾಡು ಸಾಲೈ ಅಥವಾ ನಾಟ ಸಾಲೈ ಎಂದೂ ಮೈಸೂರು ರಾಜ್ಯದಲ್ಲಿ ರಸಪುರಿ ಎಂತಲೂ ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಗೊಹ ಬಂದರ್ ಎನ್ನುವರು. ಬಹುಶಃ ಇದು ಗೋವ ಬಂದರ್ ಎಂಬ ಪದದ ಅಪಭ್ರಂಶ ರೂಪ ; ಪ್ರಾಯಶಃ ಇದು ಗೋವಾದ ಮೂಲವಾಸಿಯಾದ್ದರಿಂದ ಈ ಹೆಸರು ಬಂದಿದೆ. ತಮಿಳುನಾಡಿನ ಸಿರ್‌ಕಾರ್ ಜಿಲ್ಲೆಗಳಲ್ಲಿ ಇದನ್ನು ಯರ್ರಗೋವ ಎಂದು ಕರೆಯುತ್ತಾರೆ. ಆಂಧ್ರಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಇದಕ್ಕೆ ಪೀಟರ್ ಪಸಂದ್ ಎಂಬ ಹೆಸರು ಬಳಕೆಯಲ್ಲಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಪ್ರತಿ ವರ್ಷ ಫಲದಿಂದ ಹಿಡಿದು ಪರ್ಯಾಯ ಫಸಲು ; ಗುಮ್ಮಟಾಕಾರದ ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪದಿಂದ ದೃಢ ವಾಗಿ ಮಡಚಿರುತ್ತವೆ, ಸುಕ್ಕಾಗಿರುತ್ತವೆ ಮತ್ತು ತಿರುಚಿರುತ್ತವೆ ; ನಯ ಅಂಚು ಗಳು ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮ್ಯಾಗ್ನೊನೆಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗೋಪುರಾಕಾರ, ಅಬ್‌ಸಿಂನ್ತೆ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯ ಕ್ಕಿಂತ ಉದ್ದ, ಅದಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿ ಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪದಿಂದ ಓರೆ

ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಸ್ವಲ್ಪ ಎತ್ತರವಾಗಿ ಮುಗಿಯುತ್ತದೆ ; ವಿಶಾಲ ನೊಲಿತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದಿಂದ ದಪ್ಪ ಸಿಪ್ಪೆ, ಚರ್ಮದಂತಿರುತ್ತದೆ, ಏಪ್ರಿಕಾಟ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಮೆದುವಾದ ವಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಉತ್ತಮ ವಾಸನೆ ; ಬಹಳ ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ ದಲ್ಲಿ ಕುಳ್ಳಾದ, ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು ಬಹಳ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಕೀಳು ಶೇಖರಣೆ ಗುಣ.

ಪನಕಲು

ಇದು ಆಂಧ್ರಪ್ರದೇಶದ ವಿಶಾಖಪಟ್ಟಣದ ಸ್ಥಳೀಯ ತಳಿ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ರಸಭರಿತ ಮಾವಿನ ಹಣ್ಣನ್ನು ಇಚ್ಛಿಸುವವರು ಇದನ್ನು ಬಹಳ ಪ್ರೀತಿಸುತ್ತಾರೆ. ಈ ತಳಿ ಶೀಘ್ರಕಾಲಿಕವಾಗಿ ಫಸಲು ಕೊಡುವುದರಿಂದ ಮಾರುಕಟ್ಟೆಯಲ್ಲಿ ಇದಕ್ಕೆ ಲಾಭ ಸಿಕ್ಕುತ್ತದೆ. ಈ ಕಾರಣದಿಂದಾಗಿ ಇದು ನಿಧಾನವಾಗಿ ಜನಾನುರಾಗಿಯಾಗುತ್ತದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮಿನರಲ್ ಗ್ರೀನ್,

ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಗ್ರೀನ್, ಇವು ಅನಂತರ ಓಲ್ಡ್ ಗೋಲ್ಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ವಿರಿಡೈನ್ ಗ್ರೀನ್ ಬಣ್ಣ, ಒತ್ತಾದ ಮೃದುತುಪ್ಪಳು; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಸಮ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಆಳವಾದ ಕ್ರೋಮ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ ; ಗಟ್ಟಿಯಾದ ತಿರುಳು, ಕಾಪುರ್ಸೈನ್ ಯೆಲ್ಲೊ ಬಣ್ಣ ; ಸಾಧಾರಣ ನಾರಿನಿಂದ ಕೂಡಿರುತ್ತದೆ, ಉದ್ದವಾದ, ಮೃದುವಾದ ನಾರು ; ಆಹ್ಲಾದಕರ ವಾಸನೆ, ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಉದ್ದವಾದ ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು, ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ, ಬಹಳ ಶೀಘ್ರಕಾಲಿಕ, ಹೆಚ್ಚು ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಪಂಚದರ ಕಳಸ

ಈ ತಳಿ ಆಂಧ್ರಪ್ರದೇಶದ, ಪೂರ್ವಗೋದಾವರಿ ಜಿಲ್ಲೆಯ ಸ್ಥಳೀಯ ತಳಿ. ತೆಲುಗಿನಲ್ಲಿ ಪಂಚದರ ಎಂದರೆ ಸಕ್ಕರೆ, ಕಳಸ ಎಂದರೆ ಪಾತ್ರೆ ಎಂದು ಅರ್ಥ. ಈ ತಳಿಯ ಹಣ್ಣು ಬಹಳ ಸಿಹಿಯಾಗಿರುವುದರಿಂದ ಇದಕ್ಕೆ ಮೇಲ್ಕಂಡ ಹೆಸರು ಬಂದಿದೆ. ಇದು ರಸಭರಿತ ಹಣ್ಣು, ಇತ್ತೀಚೆಗೆ ತಮಿಳುನಾಡಿನ ಬಹಳ ಜಿಲ್ಲೆಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕುಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ರೈನೆಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲೆಬೋರ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಸಕ್ಯಾರ್ಡೊಸ್ ಅಂಬರ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆಯಿಂದ ಗುಂಡಾಗಿರುವ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಅದೇ ಮಟ್ಟದಲ್ಲಿರುತ್ತದೆ, ಗುಂಡಾಗಿರುವ ಕೆಳಭುಜ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು ; ಸ್ವಲ್ಪ ಹೊಕ್ಕಳು ಅಥವಾ ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ಲೈಟ್‌ಕ್ಯಾಡ್ಮಿಯಮ್ ಬಣ್ಣ, ನಾರಿನಿಂದ ಕೂಡಿರುತ್ತದೆ ; ಮಧ್ಯಮ ಉದ್ದದ ನಾರು, ಮೃದುವಾಗಿರುತ್ತದೆ ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಬಹಳ ಹೆಚ್ಚು, ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಹೆಚ್ಚು ಇಳುವರಿ . ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ವಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಪಂಚವರ್ಣಮ್

ಈ ತಳಿಯನ್ನು ಆಂಧ್ರಪ್ರದೇಶದ ಕೊಡೂರಿನ ಸರ್ಕಾರಿ ಹಣ್ಣು ಸಂಶೋಧನಾ ಕೇಂದ್ರದ ಮಾವು ಸಂಗ್ರಹಣೆ ತಾಕಿನಲ್ಲಿ ಅಭ್ಯಾಸ ಮಾಡಲಾಯಿತು. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದು ಆಂಧ್ರ

ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ. ಇದರ ಹಣ್ಣು ಮಧ್ಯಮ ಗುಣಗಳಿಂದ ಕೂಡಿದೆ.

ಮರ : ಗಾತ್ರದಲ್ಲಿ ಮಧ್ಯಮ, ಗುಂಡಾದ ಮೇಲ್ಭಾಗ, ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಜೋಲು ಬಿದ್ದಿರುತ್ತವೆ, ಸ್ವಲ್ಪ ಹಿಂಬಾಗಿರುತ್ತವೆ ಮತ್ತು ಮಡಚಿರುತ್ತವೆ, ಸ್ವಲ್ಪ ಲಂಬಾಗ್ರ ತುದಿ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಡೈ ಅಮ್ಬೈನ್ ಬ್ರೌನ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಡೈ ಅಮ್ಬೈನ್ ಬ್ರೌನ್ ಬಣ್ಣ, ಒತ್ತಾದ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಗುಂಡಾಗಿರುತ್ತವೆ ; ನಿರ್ದಿಷ್ಟ ಕೊಕ್ಕು ; ಮಧ್ಯಮ ದಪ್ಪದ ಸಿಪ್ಪೆ, ಟೂ-ಮಿಂಗ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಲೈಟ್ ಕ್ಯಾಡ್‌ಮಿಯಮ್ ಬಣ್ಣ ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ, ಮೃದುವಾದ ನಾರು ಇರುತ್ತದೆ ; ಸ್ವಲ್ಪ ಕವಲೊಡೆದಿರುವ ನಾಳಗಳು, ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ, ಮಧ್ಯದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಸುಲಿಯುವ ಗುಣ.

ಪಂಜಾ ಪಸಂದ್

ಈ ತಳಿಯು, ಪಶ್ಚಿಮ ಬಂಗಾಳದ- ಮುರ್ಷಿದಾಬಾದಿನ ರಾಯಿಸ್ ಮಿರ್ಜಾ ಬಾಗನ್ ತೋಟದಲ್ಲಿ ಮಾಡಿದ ಕಸಿಸಸ್ಯಗಳಿಂದ ಹರಡಿದೆ ಎಂದು ತಿಳಿದುಬಂದಿದೆ.

ಇದರ ಇತಿಹಾಸದ ಬಗ್ಗೆ ಇನ್ನೂ ಹೆಚ್ಚಿನ ವಿಷಯ ತಿಳಿದುಬಂದಿಲ್ಲ. ಈ ತಳಿ ವಾಣಿಜ್ಯ ಬೇಸಾಯಕ್ಕೆ ಸೂಕ್ತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಸುಕ್ಕಾಗಿರುತ್ತವೆ, ಮಡಿಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಗ್ರೇಪ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಗ್ರೇಪ್ ಗ್ರೀನ್ ಇದ್ದು ಮುಂದೆ ಲೂಮಿಯರ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೂಮಿಯರ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡದೀರ್ಘಚತುರಸ್ರ ; ಸ್ವಲ್ಪ ಚಪ್ಪಟೆಯಿಂದ ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಗುಂಡು, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ತೆಳುವಾದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೊ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದುವಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಅಲ್ಪ ಪರಿಮಾಣದ ಟರ್‌ಪೆಂಟೈನ್ ಗಂಧಯುತ ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ನಿಬಿಡವಾದ, ಕುಳ್ಳಾದ, ಒರಟಾದ ನಾರಿರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಸಮಾನಾಂತರದಿಂದ ಕವಲೊಡೆದಿರುವ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ, ಅಧಿಕ ಫಸಲು ;

ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಪಾನ್ ಸೆರಾ

ಈ ತಳಿಯು ಹಣ್ಣು ಬಹುವೇಳೆ ಐದು ಸೇರು ತೂಕವಿರುವುದರಿಂದ ಇದಕ್ಕೆ ಮೇಲ್ಕಂಡ ಹೆಸರು ಬಂದಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯು ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ ; ಅಂಡ ಭರ್ಜಿಯಾಕಾರ, ಸುಕ್ಕು ಪ್ರವೃತ್ತಿಯ ಎಲೆಗಳೇ ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ : ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿನಿಮಾನ್ ಬ್ರೌನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರಿಂಥಿಯಾನ್ ರೆಡ್ ಬಣ್ಣ ; ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡ ದೀರ್ಘಚತುರಸ್ರ ; ಗುಂಡಾದ ತುತ್ತಿ ಸ್ವಲ್ಪ ತುಟಿಯಿರುವ ಅಥವಾ ಮುಂದುವರಿದಿರುವ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಸ್ವಲ್ಪದಿಂದ ಕಡಮೆ ಆಳದ ಹೊಕ್ಕಳು ; ಗುಂಡಿನಿಂದ ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗದ ಬಣ್ಣ ಆಳವಾದ ಕ್ರೈಸೊಲೈಟ್

ಗ್ರೀನ್ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಯೆಲ್ಲೊ ಒಕ್ರೆ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ ಕುಳ್ಳಾದ, ಮೃದುವಾದ ನಾರಿರುತ್ತವೆ ; ಸಮಾನಾಂತರ ನಾಳಗಳು ಸ್ವಲ್ಪದರಿಂದ ಪ್ರಧಾನವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಪೆದ್ದ ಕಾಲೆಪಡು

ಇದು ಆಂಧ್ರಪ್ರದೇಶದ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದು ಅತ್ಯುತ್ತಮ ಗುಣಮಟ್ಟದ್ದಾಗಿದ್ದು ಹೆಚ್ಚಿನ ಇಳುವರಿ ಕೊಡುತ್ತದೆ. ಇದು ಕುಪ್ಪಳಿಸುವ ಕೀಟಗಳಿಗೆ ಮತ್ತು ಸೂಟೀ ಮೋಲ್ಡ್ ರೋಗಕ್ಕೆ ತುತ್ತಾಗುವುದರಿಂದ ಜನಪ್ರಿಯವಾಗಿಲ್ಲ

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡು ದಿಂಡಿನ ಮೇಲ್ಕೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು, ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚಿನಿಂದ ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್. ಇವು ಮುಂದೆ ಪ್ರೆಟ್ಸ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ವಿಶಾಲ ಗೋಪುರಾಕಾರ, ಕೋರಲ್ ಪಿಂಕ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ವಿಶಾಲ ಬಿಂದುವಿನಿಂದ ಕುತ್ತಿಗೆ ಇರುವ ಬುಡ ; ಚಪ್ಪಟೆಕವಾಗಿ ಸೇರಿದ ಬುಡ ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಿನಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಗೋಲ್ಡನ್ ಗ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ಕ್ಯಾಡ್ಮಿಯಮ್ ಯೆಲ್ಲೂ ಬಣ್ಣ ; ಆಹ್ಲಾದಕರ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದಿಂದ ಅಧಿಕ ಫಸಲು ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ.

ಪೆದ್ದ ನೀಲಂ

ಇದು ಆಂಧ್ರಪ್ರದೇಶದ ಕೆಲವು ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಕೊಡೂರು ವಾಸಿಯಾದ ದಿವಂಗತ ಶ್ರೀ ಪಿ. ಡಿ. ಚಂಗಲ ರೆಡ್ಡಿಯವರ ತೋಟದಲ್ಲಿ ಇದ್ದ ಈ ತಳಿಯ ಮಾವಿನ ಮರದಿಂದ ಕೆಲವು ಕಸಿ ಸಸಿಗಳನ್ನು ಕೊಡೂರಿನ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ನಾಟಿ ಮಾಡಲಾಗಿದ್ದು ಈಗ ಈ ಕೇಂದ್ರವು ಈ ತಳಿಯ ಮುಖ್ಯ ವಿತರಣೆ ಕೇಂದ್ರವಾಗಿದೆ. ಇದನ್ನು ಹೆಚ್ಚು ಬೇಸಾಯಕ್ಕೆ ತಂದು ಜನಪ್ರಿಯಗೊಳಿಸಬೇಕಾದ ಯಾವ ಉತ್ತಮ ಗುಣಗಳೂ ಈ ತಳಿಯಲ್ಲಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಎಕ್ರೂ ಆಲಿವ್ ಬಣ್ಣ, ಕಡಮೆ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೂತ್ರ ಪಿಂಡಾಕಾರ ; ಗುಂಡಾದ ಬುಡ ; ಓರೆಯಾಗಿ ಸೇರಿರುವ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತವೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಆಳವಾದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಆರೆಂಜ್ ಪೀಲ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಸ್ವಲ್ಪ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೋ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ, ಮೃದುವಾದ ನಾರಿರುತ್ತದೆ, ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ, ಮಧ್ಯಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಗುಣ.

ಪೆದ್ದರಸಂ

ಆಂಧ್ರಪ್ರದೇಶದ, ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳಲ್ಲಿ ಈ ತಳಿಯ ಅಧಿಕ ಬೇಸಾಯವಿದೆ. ಈ ಪ್ರದೇಶದ ಮಾವಿನ ಹಣ್ಣು ಪ್ರೇಮಿಗಳು ಈ ತಳಿಗೆ ಬಹಳ ಮಾನ್ಯತೆಯನ್ನು ನೀಡುತ್ತಾರೆ. ಈ ತಳಿಯ ಹಣ್ಣಿನಲ್ಲಿ ಹೆಚ್ಚು ನಾರಿನ ಅಂಶವಿರುವುದರಿಂದ ಇತರ ಜಿಲ್ಲೆಗಳಲ್ಲಿ ಇದು ಜನಪ್ರಿಯತೆಯನ್ನು ಗಳಿಸಿಲ್ಲ. ರಸಭರಿತ

ಮಾವಿನ ಹಣ್ಣನ್ನು ಇಚ್ಛಿಸುವವರು ಇದರ ಬೇಸಾಯ ಮಾಡಬಹುದು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರದಿಂದ ಹರಡಿರುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಿನಿಂದ ಕೆಳಸಾಕಾರದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನೇರದಿಂದ ಹರಡಿರುತ್ತವೆ, ನಡುದಿಂಡಿನ ಮೇಲೆ ದೃಢವಾಗಿ ಹಿಂಬಾಗಿರುತ್ತವೆ ಮತ್ತು ಮಡಿಚಿರುತ್ತವೆ ; ಹೊಸದಾಗಿ ಹೊರ ಬರುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಪ್ರೌಟ್ಸ್ ಬ್ರೌನ್, ಇವು ಅನಂತರ ಎಕ್ರೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಡ್ರೆಸ್‌ಡೆನ್ ಬ್ರೌನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡಿನಿಂದ ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಪ್ರಿಮೂಲೈನ್ ಯೆಲ್ಲೋ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೃದುವಾದ ತಿರುಳು, ಕಾಪುಸೈನ್ ಯೆಲ್ಲೋ ಬಣ್ಣ, ನಿಬಿಡವಾದ ನಾರು ; ಹೆಚ್ಚು ಪರಿಮಾಣದ ನಾರಿನಾಂಶ, ಮಧ್ಯಮದಿಂದ ಉದ್ದ, ಒರಟಾಗಿರುತ್ತದೆ ; ಹಿತಕರವಾದ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದಿಂದ ಉದ್ದದ ಒರಟಾದ ನಾರಿರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ಪ್ರತಿರೋಧಕತೆ ಉತ್ತಮ ಶೇಖರಣೆ ಗುಣ.

ಪೊಟಿ

ಪೂನಾದ ಕಿರ್ಕಿಯ ಹಣ್ಣು ಸಂಶೋಧನಾ ಕೇಂದ್ರದಿಂದ ಈ ತಳಿಯನ್ನು ಅಭ್ಯಾಸಕ್ಕಾಗಿ ಆರಿಸಿಕೊಂಡಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು, ಹರಡುತ್ತದೆ, ಕಡಮೆ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ಯಾಗಿರುತ್ತವೆ ; ಅಲೆಯಿಂದ ತಿರುಚಿರುವ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಫಾರೆಸ್ಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಮುಂದೆ ಎಕ್ರೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಗೋಪುರಾಕಾರ, ಟಾಸಿ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾ ನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡು ಓರೆಯಾಕಾರ, ಅಂಡಾಕಾರ ; ಬುಡ ಓರೆ ಚಪ್ಪಟೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ ; ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಪ್ರಮುಖ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ದಪ್ಪ ಸಿಪ್ಪೆ ; ಒರಟು ಮೇಲ್ಭಾಗದ ಬಣ್ಣ ಲೆಟ್ಯೂಸ್ ಗ್ರೀನ್ ; ಸಣ್ಣ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬರುತ್ತವೆ ; ಗಟ್ಟಿಯಾದ ತಿರುಳು, ನಾರಿರುವುದಿಲ್ಲ, ಎಂಪೈರ್ ಯೆಲೂ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಾದ ರುಚಿ : ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ ಮೃದುವಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು, ಕವಲೊಡೆದ ನಾಳ ಸ್ವಲ್ಪ ತಗ್ಗಾಗಿರುತ್ತದೆ.

ಹಣ್ಣಿನ ದರ್ಜೆ : ಮಧ್ಯಮದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಫೂಲಿಹೊರಾ

ಈ ತಳಿ ಆಂಧ್ರಪ್ರದೇಶದಲ್ಲಿ ಉದ್ಭವಿಸಿದೆ. ಇದರ ಇತಿಹಾಸ ತಿಳಿದುಬಂದಿಲ್ಲ. ಸಿಪ್ಪೆಯ ಮೇಲಿನ ಆರೆಂಜ್ ಯೆಲ್ಲೋ ಬಣ್ಣದ ಹಿನ್ನೆಲೆಯಲ್ಲಿ ಭುಜಗಳ ಮೇಲೆ ಹೊಳಪಾದ ಕೆಂಪು ಬಣ್ಣವಿರುವುದರಿಂದ, ಹಣ್ಣು ಬಹಳ ಆಕರ್ಷಕವಾಗಿರುತ್ತದೆ. ತಮಿಳು ನಾಡಿನ ತಿನ್ನವೆಲ್ಲಿ ಜಿಲ್ಲೆಯಲ್ಲಿ ಇದನ್ನು ಕಲರ್ ಎಂದು ಕರೆಯುತ್ತಾರೆ. ಮಾವಿನ ಹಣ್ಣಿನ ಕಾಲದಲ್ಲಿ ಇದು ಶೀಘ್ರವಾಗಿ ಫಸಲು ಕೊಡುವುದರಿಂದ ಮಾರು ಕಟ್ಟೆಯಲ್ಲಿ ಇದಕ್ಕೆ ಹೆಚ್ಚು ಬೆಲೆ ದೊರೆಯುತ್ತದೆ. ಇದು ವಾಣಿಜ್ಯ ಬೇಸಾಯಕ್ಕೆ ಯೋಗ್ಯ ತಳಿ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ, ದೀರ್ಘವೃತ್ತಾಕಾರದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು, ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಅರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್, ಇವು ಅನಂತರ ಮಿನರಲ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬಣ್ಣ ಸ್ಪೆಕ್ಟ್ರಮ್ ರೆಡ್, ನಿಬಿಡವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಉದ್ದ, ಅದಕ್ಕೆ ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರದಿಂದ ಅಂಡ ದೀರ್ಘ ಚತುರಸ್ರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಕೆಳಭುಜ ಮೇಲ್ಭುಜಕ್ಕೆ ಸಮ, ಅದಕ್ಕಿಂತ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಕ್ಯಾಡ್‌ಮಿಯಮ್ ಯೆಲ್ಲೋ ಬಣ್ಣ ಮತ್ತು ಭುಜಗಳ ಮೇಲೆ ಕೈಸರ್ ಬ್ರೌನ್ ಕಾಂತಿ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ಪ್ರಿಮೂಲೈನ್ ಯೆಲ್ಲೋ ಬಣ್ಣ ; ನಾರು ಇರುವುದಿಲ್ಲ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ, ಮಧ್ಯಮ ಪರಿಮಾಣದಿಂದ ಹೆಚ್ಚು ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಪೂತಿ

ಪೂನಾದ, ಕಿರ್ಕಿ ಸರ್ಕಾರಿ ಹಣ್ಣಿನ ಪ್ರಯೋಗ ಕೇಂದ್ರದಲ್ಲಿ ಈ ತಳಿಯನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿತ್ತು. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದು ಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವ ಕಾರಣ, ಇದನ್ನು ಹೆಚ್ಚಿನ ಬೇಸಾಯಕ್ಕೆ ತರಬಹುದು.

ಮರ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಕಡಮೆ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ದಪ್ಪದಿಂದ ದಪ್ಪವಾಗಿರುವ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ;

ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಕ್ಯಾರ್ ಡೊಸ್ ಅಂಬರ್, ಇವು ಅನಂತರ ಬಫ್ಫಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಅಬ್‌ಸಿನ್ತ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ, ಬಂಜೆಕೇಸರಗಳು, ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗುಂಡಿನಿಂದ ಗುಂಡು ಓರೆಯಾಕಾರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕಡಮೆ ಆಳದಿಂದ ಆಳವಾದ ಕುಳಿ ; ಸಮ ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಕೆಲವುಸಾರಿ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ವಿಶಾಲ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ಅಥವಾ ಇರುವುದಿಲ್ಲ ; ದಪ್ಪವಾದ ಸಿಪ್ಪೆ, ಒರಟಿನಿಂದ ಸಿಪ್ಪೆ ಗಂತಿಯಾದ ಮೇಲ್ಭಾಗದ ಬಣ್ಣ ಎಕ್ರೂ ಆಲಿವ್ ಯೆಲ್ಲೊ ; ಸಾಧಾರಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ, ತೆಳುವಾದ, ಕುಳ್ಳಾದ, ಮೃದುವಾದ ನಾರಿರುತ್ತದೆ ; ಕಪಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ ; ಕೀಳು ಸುಲಿಯುವ ಗುಣ.

ರಾಯಲ್ ಭೋಗ್

ಇದು ಬೊಂಬಾಯಿಯ ರತ್ನಗಿರಿಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ನೇರವಾಗಿ ಬೆಳೆಯುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗೋಂಡಿನಿಂದ ಕಳಸಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ, ನಯ ಅಲೆಯ ಅಂಚುಗಳು, ಸ್ವಲ್ಪ ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರ ತುದಿ ; ಮೊಂಡಾದ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಮುಂದೆ ಎಕ್ರೂ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಗೋಪುರಾಕಾರ, ಎಕ್ರೂ ಆಲಿವ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ : ಸ್ವಲ್ಪದಿಂದ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ ಮತ್ತು ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗ ಕ್ಯಾಡ್ಮಿಯಮ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಅಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮೃದುವಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು ಸ್ವಲ್ಪತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಕೀಳು ದರ್ಜೆ ; ಶೀಘ್ರಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ರಾಜಪುರಿ

ಈ ತಳಿಯು ಪ್ರತಿವರ್ಷವೂ ಅಧಿಕ ಫಸಲು ಕೊಡುವುದರಿಂದ, ಇದು ಗುಜರಾತ್ ರಾಜ್ಯದಲ್ಲಿ ವಾಣಿಜ್ಯ ಬೆಳೆಯಾಗಿ ಗಣನೀಯ ಪ್ರಾಮುಖ್ಯತೆ ಪಡೆದಿದೆ. ಇದು ಇತರ ಮಾವು ಬೆಳೆಯುವ ರಾಜ್ಯಗಳಲ್ಲಿ ಬೇಸಾಯಕ್ಕೆ ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಹಿಡಿದು ಸಾಧಾರಣ ಕಸುವಿನ ಬೆಳವಣಿಗೆ, ಹರಡುತ್ತದೆ ; ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದಿಂದ ದಪ್ಪವಾದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆಯಾಗಿರುತ್ತವೆ, ಕೆಲವು ಸಾರಿ ಸುಕ್ಕಾದ ಪ್ರವೃತ್ತಿ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಗುಂಡಾದ ಬುಡ ; ಹೊಸದಾಗಿ ಹೊರ ಬರುತ್ತಿರುವ ಎಳೆ ಎಲೆಗಳ ಬಣ್ಣ ಅಬ್‌ಸಿಂತ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕ್ರೈಸೊಲೈಟ್ ಗ್ರೀನ್, ಇವು ಆಲಿವ್ ಒಕ್ರೆ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಗೋಪುರಾಕಾರ, ಸ್ಕಾರ್ಲೆಟ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ಅಂಡಾಕಾರದಿಂದ ಅಂಡ ದೀರ್ಘಚತುರಸ್ರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು, ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ವಿಶಾಲವಾದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ನಯದಿಂದ ಒರಟು ಮೇಲ್ಭಾಗದ ಬಣ್ಣ ಆಳವಾದ ಕ್ರೋಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು ; ನಾರು ಇರುವುದಿಲ್ಲ. ಸಿನಾರ್ಡ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಮಧ್ಯಮ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಪೆಟ್ಟಿಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ ಮೃದುವಾದ ನಾರು ಇರುತ್ತದೆ ; ಸಮಾನಾಂತರ ನಾಳಗಳು ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ರಾಜುಮಾನು

ಈ ತಳಿಯು, ಆಂಧ್ರಪ್ರದೇಶದ ವಿಶಾಖ ಪಟ್ಟಣ ಜಿಲ್ಲೆಯ ಅಲಮಂಡಾ ಎಂಬ ಗ್ರಾಮದಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ. ಈ ತಳಿ ಶೀಘ್ರಕಾಲಿಕವಾಗಿ ಫಸಲು ಕೊಡುತ್ತದೆ. ಈ ಹಣ್ಣುಗಳನ್ನು ದೂರದ, ಉತ್ತರ ಭಾರತದ ಮಾರುಕಟ್ಟೆಗಳಿಗೆ ರವಾನಿಸುವುದರಿಂದ ಇದಕ್ಕೆ ಹೆಚ್ಚು ಲಾಭ ದೊರೆಯುತ್ತದೆ. ಕಾಯಿಗಳು ಪೂರ್ಣ ಬಲಿಯುವುದಕ್ಕೆ ಸ್ವಲ್ಪ ಮೊದಲು ಕೊಯ್ಲು ಮಾಡುವುದರಿಂದ ಇವು ಹಣ್ಣಾದ ಮೇಲೆ ಹಿಪ್ಪೆ ಹಸು ಹಳದಿ ಬಣ್ಣಕ್ಕೆ ತಿರುಗುತ್ತದೆ ಈ ಕಾರಣದಿಂದ ಇದನ್ನು ಉತ್ತರ ಭಾರತದಲ್ಲಿ ಸಫೇದ ಎಂದು ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಮಾವಿನ ಹಣ್ಣಿನ ಕಾಲದಲ್ಲಿ ಈ ತಳಿಯು ಶೀಘ್ರವಾಗಿ ಫಸಲು ಕೊಡುವುದರಿಂದ ಇತ್ತೀಚಿಗೆ ಗಣನೀಯ ವಾಣಿಜ್ಯ ಪ್ರಾಮುಖ್ಯತೆಯನ್ನುಗಳಿಸಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆಯುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಿಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗ್ನೊನೆಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಸಕ್ಯಾರ್‌ಡೋಸ್ ಅಂಬರ್ ಬಣ್ಣ, ಒತ್ತಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ

ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿರುವ ತೊಟ್ಟು ; ಸ್ವಲ್ಪ ಕುಳಿ ಅಥವಾ ಇರುವುದಿಲ್ಲ. ಕೆಳಭುಜ ಮೇಲ್ಭುಜಕ್ಕೆ ಸಮ ಮತ್ತು ಎತ್ತರ, ಕೆಳಭುಜ ಸ್ವಲ್ಪ ಎತ್ತರವಾಗಿದ್ದು ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಪ್ರಧಾನ ಕೊಕ್ಕು ; ಹೊಕ್ಕಳು ಸ್ವಲ್ಪ ಅಥವಾ ಇರುವುದಿಲ್ಲ ; ಗುಂಡಿನಿಂದ ವಿಶಾಲ ಬಿಂದುವಿನಲ್ಲಿರುವ ತುದಿ ; ತೆಳು ಸಿಪ್ಪೆ ; ತೆಳು ಪೊದೆಯಂತಿರುತ್ತದೆ ; ಪೊರ್‌ಸಿಥಿಯಾ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸಾಧಾರಣ ಪರಿಮಾಣದ ನಾರು ; ಮಧ್ಯಮ ಉದ್ದದ, ಮೃದುವಾದ ನಾರು ; ಆಹ್ಲಾದಕರ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದಿಂದ ಅತಿ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಮಧ್ಯಮ ಉದ್ದದ, ಮೃದುವಾದ ನಾರು ; ಕವಲೊಡೆದ ನಾಳಗಳು ಬಹಳ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದಿಂದ ಮಧ್ಯಮ ದರ್ಜೆ ; ಶೀಘ್ರಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಕೆಳಶೇಖರಣೆ ಗುಣ.

ರಾಮ್ ಕೆಲಾ

ಇದು ಪಂಜಾಬ್ ರಾಜ್ಯದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಜನಪ್ರಿಯಗೊಳಿಸಬೇಕಾದ ಅವಶ್ಯಕತೆ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪದಿಂದ ದೃಢವಾಗಿ ಮಡಚಿ

ತ್ತವೆ ; ಅಲೆಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಗ್ರೇಪ್‌ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಟ್ರೈನ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪೊಂಪೆಯಿಯನ್ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ದೊಡ್ಡವು, ಅಂಡಾಶಯಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಗುಂಡು ಓರೆಯಾಕಾರ, ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು, ಸ್ವಲ್ಪ ಕುಳಿ ; ಅಸಮ ಭುಜಗಳು, ಕೆಳಭುಜ, ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಸಾಧಾರಣದಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಿಂದ ಸ್ವಲ್ಪ ಕೊಕ್ಕು, ನಿರ್ದಿಷ್ಟವಾಗಿರುತ್ತದೆ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ ; ನಯವಾದ ಮೇಲ್ಭಾಗದ ಬಣ್ಣ ಪಾಮ್‌ಲೀಫ್ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ಸಣ್ಣದು ; ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದುವಾದ ನಾರು, ಕೆಳ ಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ನಿಧಾನಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ರಾಣೀ ಪಸಂದ್

ಈ ತಳಿಯ ಹೆಸರು ಮುರ್ಷಿದಾಬಾದಿನ ಬೇಗಮ್‌ಳ ಜ್ಞಾಪಕಾರ್ಥವಾಗಿ

ಬಂದಿದೆ. ಇವರ ಬೇಸಾಯ ಪಶ್ಚಿಮ ಬಂಗಾಳದ ಮುರ್ಷಿದಾಬಾದಿನ ಜಿಲ್ಲೆಯ ಅಧಿಕವಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿ ಈ ತಳಿಯ ಮೊದಲ ಕೆಲವು ಕಸಿಸಸಿಗಳನ್ನು ರಾಯಿಸ್ ಮಿರ್ಜಾ ಬಾಗನ್‌ನಲ್ಲಿ ನಾ ಮಾಡಲಾಗಿದ್ದು, ಇದು ಈ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತ ಬುಡ ; ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂ ಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡಿನಿಂದ ಮೊಂ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಕ್ರೈಸೊಲೈ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕೊಸೆ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೆಟ್ಯೂ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿ

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು : ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಕೆಳಭುಜ ಸಾಧಾರಣ ಡೊಂಕಿನಲ್ಲಿ ಮ ಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ ಯೆಲ್ಲೊ ; ಸಣ್ಣ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತ ಗಟ್ಟಿಯಾದ ತಿರುಳು, ನಾರು ಇರುವುದಿಲ್ಲ, ಕಾಪುಸೈನ್ ಯೆಲ್ಲೊ ಬಣ್ಣ ; ಸ್ವ ಹಿತಕರ ವಾಸನೆ; ಹುಳಿಯಿಂದ ಸಿಹಿಯಾದ ರುಚಿ; ಸಾಧಾರಣ ಪರಿಮಾಣದಿಂದ ಹೆಚ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ ; ಇದರ ಮೇಲೆ ಎಲ್ಲಾ ಭಾಗದ ನಿಬಿಡವಾಗಿ, ಕುಳ್ಳಾದ, ಮೃದುವಾದ ನಾರು, ಕೆಳ ಅಂಚಿನಲ್ಲಿ ಮಧ್ಯಮ ಉದ್ದ ನಾರು ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಕೀಳು ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ರಸ್‌ಪೂನಿಯ

ಇದು ಉತ್ತರ ಪ್ರದೇಶದ ಸ್ಥಳೀಯ ತಳಿ. 'ರಸ್' ಎಂದರೆ ರಸ, ಪೂನಿಯಾ ಎಂದರೆ ಕದಿರು. ಈ ತಳಿಯ ಹಣ್ಣು ರಸಭರಿತವಾಗಿ ಕದಿರಿನ ಆಕಾರದಲ್ಲಿರುವುದರಿಂದ ಇದಕ್ಕೆ ರಸ್‌ಪೂನಿಯ ಎಂಬ ಹೆಸರು ಬಂದಿದೆ. ಇದರ ಪೂರ್ಣ ಇತಿಹಾಸ ತಿಳಿದು ಬಂದಿಲ್ಲ. ಇದು ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿದೆ. ಈ ತಳಿಯ ಕೇವಲ ಒಂದೇ ಕೊರತೆ ಎಂದರೆ ಇದರ ಹಣ್ಣುಗಳು ಗಾತ್ರದಲ್ಲಿ ಬಹಳ ಸಣ್ಣದಾಗಿರುವಿಕೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ, ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ ; ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯದಿಂದ ಅಲೆ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಕಾಷೂ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಓರೆಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಮೇಲ್ಭುಜ ಇಳಿಜಾರು ; ಬಿಂದುವಿನಿಂದ ನಿರ್ದಿಷ್ಟವಾಗಿ

ರುವ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮದಿಂದ ದಪ್ಪವಾದ ಸಿಪ್ಪೆ, ನಯದಿಂದ ಒರಟಾಗಿರುವ ಮೇಲ್ಭಾಗ, ಭುಜಗಳ ಮೇಲೆ ಕೋರಲ್ ಪಿಂಕ್ ಕಾಂತಿಯುಳ್ಳ ಕಾಪುಸ್ಸೈನ್ ಯೆಲ್ಲೋ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ಅಲ್ಪ ಪರಿಮಾಣದ ನಾರು, ಕಾಪುಸ್ಸೈ ಯೆಲ್ಲೋ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸ್ರ ; ಇವರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದುವಾದ ನಾರು ಇರುತ್ತದೆ, ಕವಲೊಡೆದ ನಾಳಗಳು, ಬಹಳ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ಮತ್ತು ಗಾಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ರಾತೌಲ್

ಈ ತಳಿಯನ್ನು ಅನ್ವರ್ ರಾತೌಲ್ ಎಂದು ಸಹ ಕರೆಯುತ್ತಾರೆ. ಇದು ಉತ್ತರ ಪ್ರದೇಶದ ರಾತೌಲ್ ಪಟ್ಟಣದ ಷೊಹ್ರ-ಎ-ಅಫಾಕ್ ತೋಟದಲ್ಲಿ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ. ಮೇಲ್ಕಂಡ ತೋಟವು ಈಗ ಈ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಸಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ಸಾಧಾರಣ ಪ್ರಮುಖ ನಾಳರಚನೆ ; ಲಂಬಾಗ್ರದಿಂದ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಇವು ಅನಂತರ ಬಫ್ಟಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಶಂಕಾಕಾರ, ಕೊರಿಂಥಿಯಾನ್

ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳ ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ, ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ ಮತ್ತು ಗುಂಡಾಗಿರುತ್ತವೆ, ಕೊಕ್ಕು ಇರುವುದಿಲ್ಲ ಅಥವಾ ಸ್ವಲ್ಪ ಪ್ರಮುಖ ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ, ಗಟ್ಟಿ ತಿರುಳು, ನಾರು ಇರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಉತ್ತಮ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಮಧ್ಯಮ ಉದ್ದವಾದ ಮತ್ತು ಮೃದುವಾದ ನಾರು ಇರುತ್ತವೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪೆಸುಪ ಕೀಟಗಳಿಗೆ ಸಾಧಾರಣ ಸಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ.

ರೆಡ್ಡಿ ಪಸಂದ್

ಈ ತಳಿಯ ಹಣ್ಣನ್ನು ಕೆಲವು ಮಾವು ಬೇಸಾಯಗಾರರು ಸಫೇದಾ ಎಂದು ಕರೆಯುತ್ತಾರೆ. ಇದಕ್ಕೆ ಕಾರಣವೆಂದರೆ ಸಿಪ್ಪೆಯ ಮೇಲೆ ಗ್ರೀನಿಷ್ ಯೆಲ್ಲೊ ವೈಟ್ ಬಣ್ಣ. ಆಂಧ್ರಪ್ರದೇಶದ, ಕಡಪ ಜಿಲ್ಲೆಯ ಕೊಡೂರಿನ ದಿವಂಗತ ಶ್ರೀ ಪಿ. ಪಿ. ಚೆಂಗಲ್ ರೆಡ್ಡಿಯವರ ತೋಟದಿಂದ ಈ ತಳಿಯನ್ನು ಅಲ್ಲಿನ ಸರ್ಕಾರಿ ಹಣ್ಣಿನ ಸಂಶೋಧನ ಕೇಂದ್ರದ ಅಧಿಕಾರಿಗಳು ವೃದ್ಧಿಮಾಡಿ, ಸಂಶೋಧನಾ ಕೇಂದ್ರದಲ್ಲಿ ನಾಟಿಮಾಡಿದ್ದಾರೆ. ಈ ಸಂಶೋಧನಾ ಕೇಂದ್ರವು ಈ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ. ಈ ತಳಿಯು ಹೆಚ್ಚಿನ ಬೇಸಾಯಕ್ಕೆ ತರಬಹುದಾದ ಯಾವ ಉತ್ತಮ ಗುಣದಿಂದಲೂ ಕೂಡಿಲ್ಲ.

[illegible] ಮಧ್ಯಮ. ಸಾಧಾರಣ ಕಸುವಿನಿಂದ ಬೆಳೆದು

ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಅನಿಶ್ಚಿತ ಫಸಲು ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳು ಕೊಸೆಗ್ರೀನ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಯಿಲ್ ಗ್ರೀನ್, ಇವು ಅನಂತರ ಲಿವರ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ರೋಸ್‌ರೆಡ್ ಬಣ್ಣ, ಕಡಮೆ ವೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಸಮಾನಾಂತರವಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರ, ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮಭುಜಗಳು, ಒಂದೇ ಮಟ್ಟದಲ್ಲಿರುತ್ತವೆ ಮತ್ತು ಗುಂಡಾಗಿರುತ್ತವೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖವಾಗಿರುವ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚೈನಿಸ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರು ಇರುವುದಿಲ್ಲ, ಬ್ಯಾರಿಟ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ವೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳು ದರ್ಜೆ, ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸುಮಾರಾಗಿ ಬಲಿಯಾಗುತ್ತದೆ ; ಮಧ್ಯಮ ಶೇಖರಣೆ ಗುಣ.

ರೆಹಮತ್ ಖಾಸ್

ಈ ತಳಿಯು ಉತ್ತರ ಪ್ರದೇಶದ ರಾತೌಲ್ ಪಟ್ಟಣದ ಷೊರಾ–ಎ–ಅಷಕ್ ಎಂಬ ತೋಟದಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ವರದಿಯಾಗಿದೆ, ಅಲ್ಲಿಂದ ಇದು ಆ ರಾಜ್ಯದ ಇತರ ಭಾಗಗಳಿಗೆ ಹರಡಿದೆ. 'ರೆಹಮತ್' ಎಂಬುದು ಈ ತಳಿಯು ಉದ್ಭವಿಸಿದ ತೋಟದ ಮಾಲೀಕನ ಹೆಸರನ್ನು ಸೂಚಿಸುತ್ತದೆ ಮತ್ತು ಖಾಸ್ ಎಂದರೆ ವಿಶೇಷ ಎಂಬ ಅರ್ಥವನ್ನು ಕೊಡುತ್ತದೆ ; ಈ ತಳಿಯ ಹಣ್ಣು ವಿಶೇಷ ಗುಣಗಳಿಂದ ಕೂಡಿರುವುದರಿಂದ ಮೇಲ್ಕಂಡ ಹೆಸರು ಬಂದಿದೆ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆಸು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಪ್ರುಸಿಯನ್ ರೆಡ್, ಬಲಿಯುತ್ತಿರುವ ಎಲೆಗಳು ಪೋರಿಸ್ ರೆಡ್ ಬಣ್ಣವಿದ್ದು ಅನಂತರ ಪ್ರುಸಿಯನ್ ರೆಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಹೆಲ್ಲೆಬೊರ್ ರೆಡ್ ಬಣ್ಣ, ಸಾಧಾರಣ ದ್ವಿಲಿಂಗ ಹೂವುಗಳು, ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಗುಂಡಾಗುತ್ತದೆ ; ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಹೊಕ್ಕುಳು ಇರುವುದಿಲ್ಲ ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ಮಧ್ಯಮದಿಂದ ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಡೀಪ್ ಕ್ರೋಮ್ ; ದೊಡ್ಡ ಗಾತ್ರದ ಚುಕ್ಕೆಗಳ, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ, ತಿರುಳು, ನಾರು ಇರುವುದಿಲ್ಲ, ಪ್ರಿಮೂಲೈನ್

ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ಚಿಕ್ಕದು, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ರೂಸ್

ಈ ತಳಿಯನ್ನು ಅಭ್ಯಾಸ ಮಾಡಲು, ಪೂನಾದ ಗಣೇಶಕಿಂಡ್ ಸರ್ಕಾರಿ ಪ್ರಯೋಗ ಕೇಂದ್ರದಲ್ಲಿ ಆರಿಸಿಕೊಳ್ಳಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದು ಕೀಳುದರ್ಜೆಯಾದ್ದರಿಂದ ಇದನ್ನು ಅಧಿಕ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು, ನೇರದಿಂದ ಹರಡುತ್ತದೆ, ಕಡಮೆ ಉತ್ಪನ್ನಕಾರಿ, ಅನಿಶ್ಚಿತ ಫಲ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯದಿಂದ ಅಲೆ ಪ್ರವೃತ್ತಿಯ ಮತ್ತು ತಿರುಚಿರುವ ಅಂಚುಗಳು ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗೊನೆಟ್‌ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ ; ಬಣ್ಣ ಫ್ಯಾನ್ಸಿ ಪರ್ಪಲ್, ಕಡಮೆ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರ, ಚಪ್ಪಟೆ ಬುಡ ; ಚಚ್ಚೌ

ಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುತ್ತವೆ, ವಿಶಾಲ ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ ; ನಯವಾದ ಮೇಲ್ಭಾಗದ ಬಣ್ಣ ಕಲ್ಲಾ ಗ್ರೀನ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಪ್ಪೆಯಿಂದ ಸಾಧಾರಣ ಸಿಹಿ ರುಚಿ ; ಕಡಮೆ ಪರಿಮಾಣದ ರಸ.

ಓಟೆ : *ಗಾತ್ರದಲ್ಲಿ ಚಿಕ್ಕದು, ಗುಂಡು ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ, ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.*

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳುದರ್ಜೆ ; ಮಧ್ಯಕಾಲಿಕ ಫಸಲು; ಎಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಸಂಗ್ರಹಣೆ ಮತ್ತು ಸುಲಿಯುವ ಗುಣ.

ರುಮಾನಿ

ಇದು ತಮಿಳುನಾಡಿನ ಪೂರ್ವತೀರದ ದಕ್ಷಿಣ ಜಿಲ್ಲೆಗಳ ವಾಣಿಜ್ಯ ತಳಿ. ಇತ್ತೀಚೆಗೆ ಇದು ಪಕ್ಕದ ಜಿಲ್ಲೆಗಳಿಗೂ ಹರಡಿದೆ.

ಸೇಬು ಹಣ್ಣಿನಾಕಾರವಿದ್ದು, ಹೊಳಪು ಯೆಲ್ಲೊ ಗ್ರೌಂಡ್ ಬಣ್ಣದ ಸಿಪ್ಪೆಯ ಮೇಲೆಯಲ್ಲಿ ಭುಜಗಳ ಮೇಲೆ ಹೊಳಪು ಕೆಂಬಣ್ಣವಿರುವುದರಿಂದ ಬಹಳ ಆಕರ್ಷಕವಾಗಿ ಕಾಣುತ್ತದೆ. ಇದು ತಮಿಳುನಾಡಿನ ಚಂಗಲ್‌ಪೇಟೆ ಮತ್ತು ಆರ್ಕಾಟ್ ಜಿಲ್ಲೆಗಳಲ್ಲಿ ಅತ್ಯಧಿಕವಾಗಿ ಮಾರಾಟವಾಗುತ್ತಿರುವ ಬೆಳೆಯಾಗಿದೆ. ಇದು ಉತ್ತಮ ಗುಣಗಳಿಂದ ಕೂಡಿರುವ ವಾಣಿಜ್ಯ ಮಾವಿನ ತಳಿ ; ಇದನ್ನು ದೇಶದ ಇತರ ಒಣ ಪ್ರದೇಶಗಳಲ್ಲಿ ಬೆಳೆಯಲು ಯೋಗ್ಯವಾಗಿದೆ. ಹಣ್ಣಿನ ದರ್ಜೆ ಮತ್ತು ಬಣ್ಣವನ್ನು ಸರಿಯಾಗಿ ಕಾಪಾಡಲು ಕಾಯಿಗಳನ್ನು ಸರಿಯಾಗಿ ಬಲಿತನಂತರ ಕೊಯ್ಯಬೇಕು. ಬಲಿಯುವುದಕ್ಕೆ ಸ್ವಲ್ಪ ಮುಂಚೆ ಕಾಯಿಗಳನ್ನು ಕೊಯ್ದರೆ ಹಣ್ಣು ಹುಳಿಯಾಗುತ್ತದೆ. ಕಾಯಿಗಳು ಬಲಿಯುವುದಕ್ಕೆ ಮುಂಚೆ ಕೊಯ್ದರೆ ಹಣ್ಣಾದ ಮೇಲೆ ತಿರುಳಿನಲ್ಲಿ ತಿಳಿ ಹಸುರು ಬಣ್ಣ ಕಾಣಿಸಿಕೊಳ್ಳುತ್ತದೆ. ಈ ತಳಿಯ ಹಣ್ಣು ದೂರದ ಮಾರುಕಟ್ಟೆಗಳಿಗೆ ಸಾಗಿಸಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡು

ತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚ ಬುಡ ; ಹೊಸದಾಗಿ ಹೊರ ಬರುತ್ತಿರುವ ಎಳೆಯ ಎಲೆಗಳ ಬಣ್ಣ ಹೆಲ್ಲೆಬೊರ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಜೆಲ್ಲಾ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಇಂಡಿಯನ್ ಲೇಕ್ ಬಣ್ಣ, ಕಡಮೆ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಸಮಾನಾಂತರವಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡಾಕಾರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುತ್ತವೆ ; ಕೊಕ್ಕು ಇರುವುದಿಲ್ಲ ; ಕಡಮೆ ಆಳದ ಹೊಕ್ಕಳು ; ವಿಶಾಲವಾದ ಗುಂಡು ತುದಿ ; ದಪ್ಪ ಸಿಪ್ಪೆ, ಪ್ರಿಮೂಲೈನ್ ಯೆಲ್ಲೊ ಬಣ್ಣ, ಭುಜಗಳ ಮೇಲೆ ಸ್ಪೆಕ್ಟ್ರಮ್ ರೆಡ್‌ಕಾಂತಿ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮಾಂಸದಂತಿರುವ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗುಂಡು ಮೊಟ್ಟೆಯಾಕಾರ, ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ ಕುಳ್ಳಾದ ಮೃದುವಾದ ನಾರಿರುತ್ತದೆ ; ಸ್ವಲ್ಪ ಉಬ್ಬಿ, ಕವಲೊಡೆದ ನಾಳಗಳು.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕದಿಂದ ನಿಧಾನ ಕಾಲಿಕ, ಅಧಿಕ ಇಳುವರಿ, ಕೆಲವುಸಾರಿ ಅಕಾಲದಲ್ಲಿ ವಿರಳ ಫಸಲು ; ಉತ್ತಮ ಶೇಖರಣೆ ಗುಣ.

ಸಪೂರ್ ಪಸಂದ್

ಇದು ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಪ್ರದೇಶದ ಸ್ಥಳೀಯ ತಳಿ.

ಇದನ್ನು ಸಫ್ದಾರ್ ಪಸಂದ್ ಜೇರಾ ಎಂದು ಕರೆಯುತ್ತಾರೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ಖಚಿತವಾಗಿ ತಿಳಿದುಬಂದಿಲ್ಲ. ಮುರ್ಷಿದಾಬಾದಿನ ರಾಯಿಸ್ ಮಿರ್ಜಾ ಬಾಗಾನ್ ತೋಟದಲ್ಲಿ ಈ ತಳಿಯ ಮೊದಲ ಕೆಲವು ಕಸಿಸಸಿಗಳನ್ನು ನಾಟಿ ಮಾಡಿದೆ ಎಂದು ತಿಳಿದುಬಂದಿದೆ. ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಮತ್ತು ನಾಡಿಯ ಜಿಲ್ಲೆಗಳಲ್ಲಿ ಈ ತಳಿಯು ಅಧಿಕ ಬೇಸಾಯದಲ್ಲಿದೆ ಮತ್ತು ಬಂಗಾಳ, ಬಿಹಾರ್ ಮತ್ತು ಉತ್ತರ ಪ್ರದೇಶದಲ್ಲೂ ಸ್ವಲ್ಪಮಟ್ಟಿಗೆ ಬೇಸಾಯದಲ್ಲಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ನಿಧಾನವಾಗಿ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದಿಂದ ಸಣ್ಣ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ, ನಯ ಅಂಚುಗಳು ; ಸಾಧಾರಣ ಪ್ರಮುಖದಿಂದ ಖಚಿತವಿಲ್ಲದ ನಾಳರಚನೆ; ಸ್ವಲ್ಪ ಲಂಬಾಗ್ರತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬಿಳಿಪು ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ರೋಸ್‌ಡೋರೆ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸಮ ಭುಜಗಳು, ಒಂದೇ ಸಮವಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು, ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕಾಪುಸ್ಕೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ; ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದುವಾದ ನಾರಿರುತ್ತದೆ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಶೀಘ್ರಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಗಾಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸಫೇದಾ ಕಲ್ಕತ್ತಾ

ಇದು ಉತ್ತರ ಪ್ರದೇಶದ ಮಾಲಿಹಬಾದ್ ತೆಹಸಿಲಿನಲ್ಲಿ ಅಧಿಕ ಬೇಸಾಯದಲ್ಲಿದೆ, ಇಲ್ಲಿಂದ ಇದು ಗಂಗಾನದಿಯ ಮೈದಾನಕ್ಕೆ ಹರಡಿದೆ. ಇದು ಪಶ್ಚಿಮ ಬಂಗಾಳದ ಮುರ್ಷಿದಾಬಾದಿನಲ್ಲಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ. ಈ ತಳಿಯ ಹಣ್ಣು ರುಚಿ ಮತ್ತು ವಾಸನೆಯಲ್ಲಿ ಲಕ್ನೋ ಸಫೇದಾ ತಳಿಯ ಹಣ್ಣುಗಳನ್ನು ಹೋಲುತ್ತದೆ, ಆದರೆ ಈ ಹಣ್ಣುಗಳು ಮಾತ್ರ ಲಕ್ನೋ ಸಫೇದಾ ತಳಿ ಹಣ್ಣುಗಳಿಗಿಂತ ಹೆಚ್ಚು ದೊಡ್ಡವು. ಇದು ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿರುವುದರಿಂದ ಇದನ್ನು ದೇಶದ ಉತ್ತಮ ವಾಣಿಜ್ಯ ತಳಿಗಳ ಗುಂಪಿಗೆ ಸೇರಿಸಬಹುದು.

ಮರ : ಗಾತ್ರದಲ್ಲಿ ಮಧ್ಯಮ, ಕಸಿವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ;ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ; ಅಲೆಅಂಚುಗಳು, ತಿರುಚಿರುವ ಪ್ರವೃತ್ತಿಯವು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗ್ನೊನೆಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಡೀಪ್ ಕ್ರೋಮ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಸಾಧಾರಣವಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡ ದೀರ್ಘಚತುರಸ್ರ ; ಓರೆಗುಂಡಿನಿಂದ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ಅಥವಾ ಇರುವುದಿಲ್ಲ ; ಅಸಮವಾದ ಭುಜಗಳು, ಕೆಳಭುಜ ಮೇಲ್ಭುಜಕಿಂತ ಅಗಲ ಮತ್ತು ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ

ಡ್ರೊಂಕಿನಲ್ಲಿ ಮುಗಿಯುತ್ತದೆ ; ಪ್ರಮುಖ ಕೊಕ್ಕು ; ಸ್ವಲ್ಪದಿಂದ ಕಡಮೆ ಆಳದ ಹೊಕ್ಕಳು ; ಗುಂಡು ತುದಿ ; ಮಧ್ಯಮದಿಂದ ದಪ್ಪ ಸಿಪ್ಪೆ, ನಯದಿಂದ ಒರಟಾಗಿರುದ ಮೇಲ್ಭಾಗದ ಬಣ್ಣ ಸೆರ್‌ಟೊಸಾ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ, ಗಟ್ಟಿ ತಿರುಳು, ನಾರಿರುವುದಿಲ್ಲ, ಮ್ಯಾರ್ಟಿಯಸ್ ಯಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಕಡಮೆಯಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ಮಧ್ಯದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಸಫೇದಾ ಲಕ್ನೋ

ಈ ತಳಿಯು, ಲಕ್ನೋ ಬಾದಶಹನ ತೋಟದಲ್ಲಿ ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆ. ಆದ್ದರಿಂದ ಇದನ್ನು ಮೊದಲು ಬಾದಶಹ ಪಸಂದ್ ಎಂದು ಕರೆಯುತ್ತಿದ್ದರು. ಲಕ್ನೋ ನವಾಬನು, ಈ ತಳಿಯ ಕೆಲವು ಕಸಿಸಸಿಗಳನ್ನು ಗಾಜಿಯುದ್ದೀನ್ ಹೈದರ್ ಸೇನಾನಿಯಾದ ಫಕೀರ್ ಮಹಮದ್ ಖಾನನಿಗೆ ಕೊಟ್ಟನು. ಈತ ಈ ಸಸಿಗಳನ್ನು ಮಾಲಿಹಬಾದ್‌ನ ತೋಟಕ್ಕೆ ಬಳುವಳಿಯಾಗಿ ಕೊಟ್ಟ, ಅಲ್ಲಿಂದ ಈ ತಳಿಯು ಉತ್ತರ ಪ್ರದೇಶದ ಇತರ ಭಾಗಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳ ಬುಡ ; ಸಣ್ಣದಿಂದ ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ. ಅಂಡ ಭರ್ಜಿಯಾಕಾರ ; ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸ್ತದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಫಾರೆಸ್ಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡವು, ಗೋಪುರಾಕಾರ, ವಿರಿಡೈನ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಚಿಕ್ಕವು ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ ; ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಸಿಪ್ಪೆ ಕಾಪುರೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಾದ ತಿರುಳು ; ಹೆಚ್ಚು ನಾರಿನ ಅಂಶದಿಂದ ಕೂಡಿರುತ್ತದೆ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾದ, ಮಧ್ಯಮ ಉದ್ದದ ಮೃದುವಾದ ನಾರಿರುತ್ತದೆ ; ಸಮಾನಾಂತರ ನಾಳಗಳು, ಬಹಳ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ, ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಸಫೇದಾ ಮಾಲಿಹಾಬಾದ್

ಈ ತಳಿಯು, ಉತ್ತರ ಪ್ರದೇಶದ ಲಕ್ನೋ ಜಿಲ್ಲೆಯ ಮಾಲಿಹಾಬಾದಿನ ನವಾಬನಾದ ಫಕೀರ್ ಮಹಮದ್ ಖಾನನ ಪ್ರಯತ್ನದಿಂದ ಉದ್ಭವಿಸಿದೆ ಎಂದು ಹೇಳಲಾಗಿದೆ. 'ಕೆವಾಲ್ ಹರ್' ಎಂಬ ಸ್ಥಳದಲ್ಲಿ ಪಹರೆ ಮಾಡುತ್ತಿದ್ದ ಒಬ್ಬ ಪೋಲೀಸನು ಒಂದು ಉತ್ತಮ ಮಾವಿನ ಸಸಿಯನ್ನು ಬೆಳೆಸಿದ್ದನು. ಇದರ ಉತ್ತಮ ಗುಣಗಳನ್ನು ಗಮನಿಸಿದ ನವಾಬನು ಆಕರ್ಷಿತನಾದನು. ಪೋಲೀಸನು ನವಾಬನಿಗೆ ಗೌರವಾರ್ಥವಾಗಿ ಈ ತಳಿಯ ಕೆಲವು ಮಾವಿನ ಹಣ್ಣುಗಳನ್ನು ಕೊಟ್ಟನು, ಇವುಗಳ ಗುಣಮಟ್ಟವನ್ನು ಕಂಡ ನವಾಬನು, ಅದೇ ಪೋಲೀಸನಿಂದ ಇನ್ನೂ ಕೆಲವು ಕಸಿಗಳನ್ನು ಪಡೆದನು. ಹಲವು ಪ್ರಯತ್ನಗಳಿಂದ ಒಂದು ಸಸಿಯನ್ನು ಉಳಿಸಿಕೊಳ್ಳುವುದರಲ್ಲಿ ಸಫಲನಾದನು. ಇದನು ನವಾಬನು ಚಮತ್ಕಾ

ಎಂಬ ಮನೆಯ ತೋಟದಲ್ಲಿ ನಾಟಿಮಾಡಿದನು. ಈ ಸಸ್ಯದಿಂದ ಕೆಲವು ಕಸಿಸಸ್ಯಗಳನ್ನು ತಯಾರುಮಾಡಿ ಅವುಗಳನ್ನು ಮಾಲಿಹಬಾದಿನ ಬಾರಾಬಾಗ್ ಎಂಬ ತೋಟದಲ್ಲಿ ನಾಟಿಮಾಡಿದ. ಅಲ್ಲಿಂದ ಈ ತಳಿಯು ಉತ್ತರ ಪ್ರದೇಶದ ಇತರ ಭಾಗಗಳಿಗೆ ಮತ್ತು ಭಾರತದ ಇತರ ಭಾಗಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ - ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪವಾಗಿರುವ ರೆಂಬೆಗಳು.

ಎಲೆಗಳು ; ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಚಪ್ಪಟೆ ; ಅಲೆಯ ಅಂಚುಗಳು, ತಿರುಚಿರುವ ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಯೆಲ್ಲೊಯಿಷ್ ಸಿಟ್ರೈನ್, ಇವು ಅನಂತರ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ರೋಸ್‌ಡೊರೆ ಬಣ್ಣ, ಕಡಮೆ ಪ್ರಮಾಣದ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆಯಾದ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು, ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ್ ; ಮಧ್ಯಮದಿಂದ ದೊಡ್ಡ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಆಹ್ಲಾದಕರ ವಾಸನೆ ; ಸಿಹಿಯಿಂದ ಬಹಳ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ನಿಬಿಡವಾದ, ಕುಳ್ಳಾದ ಮೃದುವಾದ ನಾರು ; ಕವಲೊಡೆದ ನಾಳಗಳು, ಸ್ವಲ್ಪ

ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ಶೀಘ್ರಕಾಲಿಕದಿಂದ ನಿಧಾನ ಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಗಾಳಿಗೆ ಬಹಳ ಹೆಚ್ಚು ನಿರೋಧಕತೆ ; ಉತ್ತಮವಾದ ಶೇಖರಣೆ ಮತ್ತು ಸುಲಿಯುವ ಗುಣ.

ಸಫೇದಾ ಶೆರ್‌ಬತಿ

ಈ ತಳಿಯನ್ನು ಬಿಹಾರ ರಾಜ್ಯದಲ್ಲಿರುವ ಸಾಬೂರ್ ಸರ್ಕಾರಿ ಹಣ್ಣಿನ ಪ್ರಯೋಗ ಕೇಂದ್ರದಲ್ಲಿ ಅಭ್ಯಾಸ ಮಾಡಲಾಯಿತು. ಇದರ ಇತಿಹಾಸದ ಬಗ್ಗೆ ಹೆಚ್ಚು ಪರಿಚಯವಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು; ಕಸುವಿನಿಂದ ಬೆಳೆದು, ಹರಡುತ್ತದೆ, ಮಧ್ಯವ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಮ್ಮಟಾಕಾರದ ಮೇಲ್ಭಾಗ, ಕುಳ್ಳು ಬುಡ ;ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ; ಅಂಡಭರ್ಜಿಯಾಕಾರ, ಸ್ವಲ್ಪ ಮಡಿಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚ ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಚರ್ಕ್ಲೈಟ್ ರೆಡ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಓಲ್ಡ್ ಗೋಲ್ಡ್ ಗ್ರೀನ್, ಮುಂದೆ ಇವು ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೆಟ್ಯೂಸ್ ಗ್ರೀನ್ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ದೊಡ್ಡವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿ ರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡು ಓರೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ವಿಶಾಲ ಗುಂಡು, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಅನಿರ್ದಿಷ್ಟ ಬಿಂದುವಿ ನಲ್ಲಿರುತ್ತದೆ; ಹೊಕ್ಕಳು ಇರುವುದಿಲ್ಲ ; ವಿಶಾಲ ಗುಂಡಾಕಾರದ ತುದಿ ; ತೆಳುವಿನಿಂದ

ಮಧ್ಯಮ ದಪ್ಪ ಸಿಪ್ಪೆ, ನಯವಾದ ಮೇಲ್ಭಾಗ, ಎಂಪೈರ್‌ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಅಂಡ ಭರ್ಜಿಯಾಕಾರ, ನಾರಿನಿಂದ ಕೂಡಿರುತ್ತದೆ, ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ ನಾರು, ಸಾಧಾರಣ ಮೃದುವಾಗಿರುತ್ತದೆ ಮತ್ತು ಕೆಳಅಂಚಿನಲ್ಲಿ ಉದ್ದವಾದ ನಾರು ; ಕವಲೊಡೆದ ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕಪ್ಪುಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸಫೇದ್ ಮಲ್‌ಗೋವ

ಇದು ಹೈದ್ರಾಬಾದಿನ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿ ುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಹೆಚ್ಚಿನ ಬೇಸಾಯಕ್ಕೆ ತರಲು ಸೂಕ್ತವಾಗಿದೆ.

ಮರ : ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ದೃಢವಾಗಿ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪದಿಂದ ದೃಢವಾಗಿ ಮಡಚಿರುತ್ತವೆ ; ನಯ ಅಂಚುಗಳು, ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳ ರಚನೆ ; ಲಂಬಾಗ್ರತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಪಿನಾರ್ಡ್ ಯೆಲ್ಲೊ ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಓರೆಷಿಯಸ್ ಯೆಲ್ಲೊ ; ಇವು ಆನಂತರ ಪಿನಾರ್ಡ್ ಯೆಲ್ಲೊ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಎಕ್ರೂ ಆಲಿವ್ ಬಣ್ಣ ; ತೆಳುವಾದ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ, ಮತ್ತು ಉದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕೊಕ್ಕಳು ;

ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಪ್ರಮುಖದಿಂದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಾದ ರುಚಿ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ ಕುಳ್ಳಾದ, ಮೃದುವಾದ ನಾರು ಇರುತ್ತದೆ ; ಕವಲೊಡೆದ ನಾಳಗಳು, ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸಕ್ಕರ್ ಚೈನಾ

ಇದು ಬಿಹಾರ್ ರಾಜ್ಯದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಮಾವು ಬೆಳೆಯುವ ಪ್ರದೇಶಗಳಲ್ಲಿ ಬೇಸಾಯ ಮಾಡಬಹುದು.

ಮರ : ಗಾತ್ರದಲ್ಲಿ ಸಣ್ಣದು, ಸಾಧಾರಣ ಕಸುವಿನಿಂದ ನಿಧಾನವಾಗಿ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಸಣ್ಣ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಸ್ವಲ್ಪ ಮಡಚಿರುತ್ತವೆ ; ನಯವಾದ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಡೀಪ್ ಕ್ರೈಸೋಲೈಟ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಇವು ಮುಂದೆ ಯೆಲ್ಲೊ

ಯಿಷ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಟಾನಿ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಓರೆ ಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಓರೆ ಮೊಟ್ಟೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಗುಂಡಾ ಗಿರುತ್ತದೆ, ಮೇಲ್ಭುಜ ಉದ್ದವಾದ ಕೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಕೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ವಿಶಾಲವಾದ ಬಿಂದುವಿನಿಂದ ಗುಂಡು ತುದಿ ; ಮಧ್ಯಮ ಗಾತ್ರದ ಸಿಪ್ಪೆ, ನಯವಾದ ಮೇಲ್ಭಾಗ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗ ದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾಗಿ, ಕುಳ್ಳಾದ ಮೃದುವಾದ ನಾರು ; ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು ಸ್ವಲ್ಪದಿಂದ ಹೆಚ್ಚು ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸಕ್ಕರ್ ಗುಟ್ಲಿ

ಇದು ಆಂಧ್ರಪ್ರದೇಶದ ತಳಿ. ಕೆಲವುಸಾರಿ ಈ ತಳಿಯನ್ನು ಸಕ್ಕರ್ ಪಾರಾ ಎಂದೂ ಕರೆಯುತ್ತಾರೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದನ್ನು ಕೊಡೂರಿನ ಸರ್ಕಾರಿ ಹಣ್ಣಿನ ಸಂಶೋಧನಾ ಕೇಂದ್ರ ದವರು ದಿವಂಗತ ಶ್ರೀ ಪಿ. ವಿ. ಚಂಗಲ್‌ರೆಡ್ಡಿಯವರ ತೋಟದಿಂದ ವೃದ್ಧಿಮಾಡಿದ್ದಾರೆ. ಇತ್ತೀಚೆಗೆ, ಈ ಸಂಶೋಧನಾ ಕೇಂದ್ರವು ಮೇಲ್ಕಂಡ ತಳಿಯ ಮುಖ್ಯ ವಿತರಣ ಕೇಂದ್ರವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡು ಬುಡ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬ್ರೌನಿಷ್ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಮುಂದೆ ಬಫ್ಫಿ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಜಾಸ್‌ಪರ್ ರೆಡ್ ಬಣ್ಣ, ಒತ್ತಾದ ವೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು; ಕುಳಿ ಇರುವುದಿಲ್ಲ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಗುಂಡಾಗಿರುತ್ತವೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖ ಕೊಕ್ಕು ; ಸ್ವಲ್ಪ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ, ಕ್ಯಾಡ್‌ಮಿಯಮ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದು ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್ ಯಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ, ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮತ್ತು ವೃದುವಾದ ನಾರಿರುತ್ತದೆ, ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಸಾಲೆಭಾಯ್ ಅಮಿದಿ

ಈ ತಳಿಯನ್ನು ಬರೋಡ ಹತ್ತಿರದ ಶ್ರೀ ಎಸ್. ಎಸ್. ಭಟ್ಟರ ತೋಟದಲ್ಲಿ ಅಭ್ಯಾಸ ಮಾಡಲಾಯಿತು. ಈ ಅಧಿಕ ಇಳುವರಿ ಕೊಡುವ ತಳಿ ಗುಜರಾತ್ ರಾಜ್ಯದ ಸ್ಥಳೀಯ ಬೇಸಾಯಕ್ಕೆ ಸೀಮಿತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡಿರುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಮೊಟ್ಟೆಯಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು, ಕೆಲವು ಸಾರಿ ಅಲೆ ಪ್ರವೃತ್ತಿಯವು ; ಸಾಧಾರಣ ಪ್ರಮುಖ ನಾಳರಚನೆ; ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಬಿಸ್ಟರ್ ಗ್ರೀನ್, ಇವು ಅನಂತರ ಪಾಮ್ ಲೀಫ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ರೋಸ್‌ಪೆಟೆಲ್ ರೆಡ್ ಬಣ್ಣ ; ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ; ಸಮಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ, ಮೊಲೆತೊಟ್ಟಿನಾಕಾರ ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ ಲೈಟ್ ಕ್ರೋಮ್ ಬಣ್ಣ, ಭುಜಗಳ ಮೇಲೆ ಆರೆಂಜ್ ಪೀಲ್ ಬಣ್ಣದ ಕಾಂತಿ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕೆಳ ಅಂಚಿನಲ್ಲಿ ತೆಳುವಾದ ನಾರು, ಗೋಲ್ಡನ್ ಯೆಲ್ಲೋ ಬಣ್ಣ ; ಆಹ್ಲಾದಕರ ವಾಸನೆ ; ಸಿಹಿ ರುಚಿ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ; ನಾರಿನಿಂದ ಕೂಡಿರುತ್ತದೆ, ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮದಿಂದ ತೆಳುವಾದ ನಾರು, ಕೆಳ ಅಂಚಿನಲ್ಲಿ ಉದ್ದವಾದ ನಾರು ; ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು, ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸೇಲಂ ಬೆಂಗಳೂರಾ

ಇದು ತಮಿಳುನಾಡಿನ ಸೇಲಂ ಜಿಲ್ಲೆಯ ವಾಣಿಜ್ಯ ತಳಿ. ಇದಕ್ಕೆ ಇರುಳಪ್ಪನ್ ಬೆಂಗಳೂರಾ ಎಂದು ಇನ್ನೊಂದು ಹೆಸರಿದೆ. ಸೇಲಂ ಹತ್ತಿರದ ಈ ತಾಯಿ ಮರ ಒಂದು ತೋಟದಲ್ಲಿ ಇದೆ, ಅಲ್ಲಿ ಈ ತಳಿಯ ಅಭ್ಯಾಸ ಮಾಡಲಾಯಿತು.

ಮರ : ಗಾತ್ರದಲ್ಲಿ ಮಧ್ಯಮ, ಗುಂಡಾದ ಮೇಲ್ಭಾಗ, ಮಧ್ಯಮ ದಪ್ಪದ ರೆಂಬೆಗಳು.

ಎಲೆಗಳು : ಜೋತು ಬಿದ್ದಿರುತ್ತವೆ, ಸ್ವಲ್ಪ ಲಂಬಾಗ್ರ ತುದಿ, ಸ್ವಲ್ಪ ಹಿಂಬಾಗಿರುತ್ತವೆ ಮತ್ತು ಮಡಚಿರುತ್ತವೆ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮಿಗ್ನೊನೆಟ್ ಗ್ರೀನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ, ಇವು ಅನಂತರ ಪೈರೈಟ್ ಯೆಲ್ಲೊ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡದು, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಕಡಮೆ ಆಳದ ಕುಳಿ; ಸಮ ಭುಜಗಳು, ಒಂದೇ ಮಟ್ಟದಲ್ಲಿದ್ದು ಗುಂಡಾಗಿರುತ್ತವೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ವಿಶಾಲ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ನಯವಾದ ಮೇಲ್ಭಾಗ, ಟಾವಿಂಗ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ ;

ಗಟ್ಟಿ ತಿರುಳು, ನಾರಿರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಆಹ್ಲಾದಕರ ವಾಸನೆ; ಬಹಳ ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗ ದಲ್ಲಿ ಕುಳ್ಳಾದ, ಮೃದುವಾದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿ ರುತ್ತವೆ.

ಹಣ್ಣಿನ ದರ್ಜೆ : ಬಹಳ ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಸಮಾರ್ ಬೆಹಿಷ್ತ್ ಆಲಿಬಾಗ್

ಈ ತಳಿಯ ಹೆಸರು ಮೂರು ಪದಗಳ ಸಂಯೋಗದಿಂದಾಗಿದೆ. ಸಮಾರ್ ಎಂದರೆ ಹಣ್ಣು, ಬೆಹಿಷ್ತ್ ಎಂದರೆ ಸ್ವರ್ಗ ಮತ್ತು ಆಲಿಬಾಗ್ ಎಂಬುದು ಉತ್ತರ ಪ್ರದೇಶದ ಮೊರಾದಬಾದ್ ಜಿಲ್ಲೆಯ ಅಮ್ರೋಹ ಹಳ್ಳಿಯ ಅಲಮುಹಮದ್ ಖಾನ್ ಎಂಬ ಹೆಸರನ್ನು ಸೂಚಿಸುತ್ತದೆ. ಇತ್ತೀಚೆಗೆ ಈ ತಳಿಯು ಗಂಗಾನದಿಯ ಬಯಲಿನ ಬಹು ಸ್ಥಳಗಳಿಗೆ ಹರಡಿದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ, ನಯ ಅಂಚುಗಳು, ಕೆಲವು ಸಾರಿ ತಿರುಚಿರುವ ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳ ರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿ ರುವ ಎಳೆಯ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಬಫ್ಫ ಸಿಟ್ರೈನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಕಾಷೂ ರೆಡ್ ಬಣ್ಣ, ಸಾಧಾರಣ ಮೃದು ತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಓರೆಯಾಗಿರುತ್ತವೆ, ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಓರೆಗುಂಡು ಮತ್ತು ತುಟಿಯಂತಿರುವ ಅಥವಾ ಮುಂದುವರಿದಿರುವ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜ ಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಮತ್ತು ಅಗಲ, ಮೇಲ್ಭುಜ ಇಳಿಜಾರಿನಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ತೆಳು ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಚೈನಿಸ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ಹೆಚ್ಚು ನಾರಿನ ಅಂಶ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಸ್ವಲ್ಪ ಮೂತ್ರ ಪಿಂಡಾ ಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಮಧ್ಯಮ ಉದ್ದದ ಮತ್ತು ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ, ಹೆಚ್ಚು ಫಸಲು ; ಗಾಳಿ ಮತ್ತು, ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಸಮಾರ್ ಬೆಹಿಷ್ತ್ ಚೌಸಾ

ಲಕ್ನೋ ಜಿಲ್ಲೆಯ ಮಲಿಹಾಬಾದ್ ತೆಹಸಿಲಿನ ಸಂಡಿಲ್ಲಾದಲ್ಲಿ ಒಬ್ಬ ತಾಲ್ಲೂಕ್‌ದಾರ ಮಾಲಿಹಬಾದಿನಲ್ಲಿ ಉತ್ತಮ ಆಕಸ್ಮಿಕಸಸಿ ಮಾವಿನ ಓಟೆಗಳನ್ನು ಸಂಗ್ರಹಿಸಿ ಚೌಸಾ ಎಂಬ ಗ್ರಾಮದಲ್ಲಿ ನಾಟಿ ಮಾಡಿದ. ಇವುಗಳಲ್ಲಿ ಒಂದು ಸಸಿಯು ಉತ್ತಮ ಆಕಸ್ಮಿಕ ಸಸಿಯನ್ನು ಕೊಟ್ಟಿತೆಂದು ವರದಿಯಾಗಿದೆ. ಅದೇ ಮೇಲ್ಕಂಡ ತಳಿ. ಈ ತಳಿಯ ಹೆಸರು ಮೂರು ಪದಗಳ ಸಂಯೋಗ. ಸಮಾರ್ ಎಂದರೆ ಹಣ್ಣು ; ಬೆಹಿಷ್ತ್ ಎಂದರೆ ಸ್ವರ್ಗ ; ಚೌಸಾ ಎಂಬುದು ಈ ತಳಿ ಉದ್ಭವಿಸಿದ ಹಳ್ಳಿಯನ್ನು ಸೂಚಿಸು ತ್ತದೆ. ಇದಕ್ಕೆ 'ಕಜ್ರಿ' ಎಂಬ ಇನ್ನೊಂದು ಹೆಸರು ಸಹ ಬಳಕೆಯಲ್ಲಿ ಇದೆ. ಮಹಮದ್ ಯುಸುಫ್ ಖಾನನ, ಸಂಡಿಲಾದ ತಾಲ್ಲೂಕ್‌ದಾರ ಮಲಿಹಾಬಾದಿನಲ್ಲಿ ಗುಚ್ಛವಾಗಿ ಕೆಲವು ಮಾವಿನ ಸಸಿಗಳನ್ನು ನಾಟಿಮಾಡಿದನು. ಈ ತೋಟವನ್ನು

10 ವರ್ಷಗಳ ನಂತರ ಬೇರೆಯ ಮಾಲೀಕನಿಗೆ ವರ್ಗಾಯಿಸಲಾಯಿತು. ಹೊಸ ಮಾಲೀಕನನ್ನು ಖರ್ಜಿ ಎಂಬ ಮಾವಿನ ತಳಿಯು ಆಕರ್ಷಿಸಿತು, ಇದು ಫಜ್ರಿ ಮಾವಿನ ತಳಿಯ ಮೂಲದ್ದಾಗಿತ್ತು. ಈ ವಾಣಿಜ್ಯ ತಳಿಯ ಎಲೆಗಳು ಫಜ್ರಿ ಮಾವಿನ ತಳಿಯನ್ನು ಹೋಲುತ್ತವೆ, ಆದರೆ ಇದರ ಹಣ್ಣಿನ ಗುಣವು ಫಜ್ರಿ ತಳಿಯ ಮಾವಿಗಿಂತ ಬಹಳ ಭಿನ್ನವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪರ್ಯಾಯ ಫಲ ಪ್ರವೃತ್ತಿ ; ಗುಂಡಾದ ಮೇಲ್ಭಾಗ ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ನಡುದಿಂಡಿನ ಮೇಲ್ಕೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು, ಕೆಲವು ಸಾರಿ ಅಲೆಯ ಮತ್ತು ಸ್ವಲ್ಪ ತಿರುಚಿರುವ ಪ್ರವೃತ್ತಿ ; ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಸಕ್ಕಾರ್ ಡೊಸ್ ಅಂಬರ್, ಇವು ಅನಂತರ ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ನೊರಸ್‌ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರದಿಂದ ಅಂಡ ಓರೆಯಾಕಾರ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗಿರುತ್ತದೆ ; ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟವಾದ ಪ್ರಮುಖ ಕೊಕ್ಕು, ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಜಾಸ್‌ಮೈನ್ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಅಂಬರ್ ಯೆಲ್ಲೊ ಬಣ್ಣ ; ಗಾಢ ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ; ಇದರ

ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ ಮೃದುವಾದ ನಾರು ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯದಿಂದ ನಿಧಾನಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸಮಾರ್‌ಬೆಹಿಸ್ತ್ ರಾಂಪುರ್

ಈ ತಳಿಯ ಹೆಸರಿನ ವಿವರಣೆ ಹೀಗೆ. ಸಮಾರ್ ಬೆಹಿಸ್ತ್ ಎಂದರೆ ಸ್ವರ್ಗದ ಹಣ್ಣು', ರಾಂಪುರ್ ಎನ್ನುವುದು ಉತ್ತರ ಪ್ರದೇಶದ ಮೊದಲಿನ ಒಂದು ರಾಜ್ಯ. ಉತ್ತರ ಪ್ರದೇಶದ, ಮುಜಾಫರ್ ನಗರದ ಹತ್ತಿರವಿರುವ ಕರ್ನಾ ಎಂಬ ಹಳ್ಳಿಯಲ್ಲಿ ಇದು ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆಯೆಂದು ಭಾವಿಸಲಾಗಿದೆ. ರಾಂಪುರದ ನವಾಬನ ತಾತನಾದ ಕಲ್ಬೆ ಅಲಿ ಎಂಬುವನು ಹೆಚ್ಚಿನ ಬೆಲೆಗೆ ಇದರ ಕಸಿಯನ್ನು ಕೊಂಡು ಅದಕ್ಕೆ ಮೇಲ್ಕಂಡ ಹೆಸರು ಕೊಟ್ಟಿದ್ದಾನೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವು, ನೇರದಿಂದ ಹರಡಿ ಬೆಳೆಯುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಿನಿಂದ ಕಳಸಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳು ಬಫ್ಫಿ ಸಿಟ್ರೈನ್ ಬಣ್ಣ, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಅನಂತರ ಮೆಡಲ್ ಬ್ರಾಂಜ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣ, ಶಂಕಾಕಾರ, ಕೊಸಿಗ್ರೀನ್ ಬಣ್ಣ, ಸಾಧಾರಣವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಕುಳಿ ; ಸಮ

ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ ; ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖ ಕೊಕ್ಕು; ಸ್ವಲ್ಪ ಕುಳಿ ಅಥವಾ ಇರುವುದಿಲ್ಲ ; ಗುಂಡು ತುದಿ ; ತೆಳುವಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ವ್ಯಾಕ್ಸ್‌ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದುವಾದ ತಿರುಳು, ತೆಳುವಾದ ನಾರು, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಬಹಳ ಸಿಹಿ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ, ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದುವಾದ ನಾರು ಇರುತ್ತದೆ ; ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು; ಸಮಾನಾಂತರ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಬಹಳ ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಸಂಗ್ತ್ರ

ಇದು ಉತ್ತರ ಪ್ರದೇಶದ ಹರ್‌ದೊಯಿಯಲ್ಲಿನ ಇನಾಯತುಲ್ಲಾಖಾನನ ತೋಟದಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ಹೇಳಲಾಗಿದೆ. ಅಲ್ಲಿಂದ ಈ ತಳಿಯು ಉತ್ತರ ಪ್ರದೇಶದ ಇತರ ಭಾಗಗಳಿಗೆ ಹರಡಿದೆ. ಇದು ಲಘು ಕಿತ್ತಳೆ ವಾಸನೆಯಿಂದ ಕೂಡಿರುವ ಕಾರಣ ಇದಕ್ಕೆ ಸಂಗ್ತ್ರ (ಆರೆಂಜ್) ಎಂಬ ಹೆಸರು ಬಂದಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾಗಿರುವ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಹಿಂದಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪಮಡಚಿರುತ್ತವೆ ; ನೆಯ ಅಂಚು ಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಹೊಸದಾಗಿ

ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಇಸಬೆಲ್ಲಾ ; ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಯೆಲ್ಲೊ ಸಿಟ್ರೈನ್, ಇವು ಅನಂತರ ಎಕ್ರ್ಯಾಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಸಿಟ್ರಾನ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಅಂಡಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು; ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪ ಕೊಕ್ಕಳು ಅಥವಾ ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗ ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಎಂಪೈರ್ ಯೆಲ್ಲೊ ಬಣ್ಣ ; ಹಿತಕರ ವಾಸನೆ; ಸಿಹಿ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ ಮತ್ತು ಮೃದುವಾದ ನಾರು ; ಸಮಾನಾಂತರ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸರ್ದಾರ್

ಈ ತಳಿಯನ್ನು ಬರೋಡ ಹತ್ತಿರದ ಶ್ರೀ ಬಾರ್ಜೋರ್ಜಿ ಹೊರ್ಮಾಸ್‌ಜಿ ಯವರ ತೋಟದಲ್ಲಿ ಅಧ್ಯಯನ ಮಾಡಲಾಯಿತು. ಇದು ಹಿಂದಿನ ಬರೋಡ ರಾಜ್ಯಕ್ಕೆ ಮಾತ್ರ ಸೀಮಿತವಾಗಿದೆ. ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿಲ್ಲ. ಈ ತಳಿಯು ಉತ್ತಮ ದರ್ಜೆಯ ಹೆಚ್ಚು ಫಸಲನ್ನು ಕೊಡುವುದರಿಂದ ಇದನ್ನು ಜನಪ್ರಿಯಗೊಳಿಸಬಹುದು. ಇದರ ಇತಿಹಾಸ ತಿಳಿದುಬಂದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಪರಿಮಾಣದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದಿಂದ ದಪ್ಪ.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ದೃಢವಾಗಿ ಮಡಚಿರುತ್ತವೆ; ನಯವಾದ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಕೋರ್ಜ್‌ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರಿಂಥಿಯಾನ್ ರೆಡ್ ಬಣ್ಣ ; ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆಯಿಂದ ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ಅಥವಾ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ ; ಕೆಳಭುಜಗಳು ಗುಂಡಾಗಿರುತ್ತವೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಪ್ರಮುಖದಿಂದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪ ಸಿಪ್ಪೆ, ಕೆಲವು ಸಾರಿ ಸಿಪ್ಪೆಗಂತಿ ಪ್ರವೃತ್ತಿ, ಗೋಲ್ಡನ್ ಗ್ಲೊ ಬಣ್ಣ ; ಮಧ್ಯಮದಿಂದ ದೊಡ್ಡ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೃದು ತಿರುಳು, ನಾರಿರುವುದಿಲ್ಲ, ಅಥವಾ ಓಟೆಯ ಮೇಲೆ ತೆಳುವಾಗಿರುತ್ತದೆ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಿಂದ ಮಧ್ಯಮ ಸಿಹಿ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಮಧ್ಯಮ ಗಾತ್ರ, ಅಂಡದೀರ್ಘಚತುರಸ್ರ ; ಸಾಧಾರಣ ಪರಿಮಾಣದ ನಾರು ; ಇದರ ಮೇಲೆ ಎಲ್ಲಾ ಭಾಗದಲ್ಲಿ ಸಾಧಾರಣ ಪರಿಮಾಣದ, ಮೃದುವಿನಿಂದ ಸಾಧಾರಣ ಮೃದುವಾದ ಕುಳ್ಳಾದ ನಾರು, ಕೆಳಭಾಗದಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ಸಮಾನಾಂತರ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ: ಉತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ ಫಸಲು ;

ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸಾನ್‌ಫಿಯ

ಸಾನ್‌ಫ್ ಎಂದರೆ ಸೋಪು ಬೀಜ. ಈ ತಳಿಯ ಹಣ್ಣು ಸೋಪುಬೀಜದ ವಾಸನೆಯಿಂದ ಕೂಡಿರುವುದರಿಂದ ಇದಕ್ಕೆ ಸಾನ್‌ಫಿಯ ಎಂದು ಹೆಸರು ಬಂದಿದೆ. ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈಗ ಇದರ ಬೇಸಾಯ ಉತ್ತರ ಪ್ರದೇಶಕ್ಕೆ ಸೀಮಿತವಾಗಿದೆ. ಈ ತಳಿಯ ಹಣ್ಣು ಮಧ್ಯಮ ಗುಣ ದಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರಬೇಕಾದ ಅವಶ್ಯಕತೆ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದ ಬುಡ, ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು, ಕೆಲವು ಸಾರಿ ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಆಲಿವ್, ಇವು ಅನಂತರ ಆಲಿವ್ ಲೇಕ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್ ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ಮೂತ್ರಪಿಂಡಾಕಾರ ; ಕುತ್ತಿಗೆಯಿಂದ ಮೊನಚು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ತಟಕ್ಕನೆ ಇಳಿಬಿದ್ದಿರುತ್ತದೆ ; ಸ್ವಲ್ಪ ಪ್ರಮುಖ ನಾಳರಚನೆ, ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಒರಟು ಮತ್ತು ಕೆಲವು ಸಾರಿ ಸಿಪ್ಪೆಗಂಟೆ ಪ್ರವೃತ್ತಿ, ಡೀಪ್

ಕ್ರೋಮ್ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬರುತ್ತವೆ ; ಮೆದುವಾದ ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತವೆ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಇದರಲ್ಲಿ ನಸು ಟರ್ಪೆಂಟೈನ್ ಗಂಧಯುತ ಸ್ವಲ್ಪ ಹಿತಕರ ವಾಸನೆ ; ಸಾಧಾರಣದಿಂದ ಸಿಹಿರುಚಿ ; ಹೆಚ್ಚು ಪರಿಮಾಣದಿಂದ ಅತಿ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ ಕುಳ್ಳಾದ ಮೃದುವಾದ ನಾರು ; ಸಮಾನಾಂತರ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮದರ್ಜೆ ; ಮಧ್ಯಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ, ಗಾಳಿಗೆ ಹೆಚ್ಚು ನಿರೋಧಕತೆ ; ಕೆಳದರ್ಜೆಯ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸೆಹ್‌ರೊಲಿ

ಇದು ಹೆಸರುವಾಸಿಯಾದ ಓಟೆಯಿಂದಾದ ತಳಿ. ಈಗ ಇದನ್ನು ಕಸಿ ವಿಧಾನದಿಂದ ವೃದ್ಧಿ ಮಾಡುತ್ತಾರೆ. ಇದು ದೆಹಲಿಯ ಹತ್ತಿರದ ಸೆಹರೊಲಿ ಎಂಬ ಗ್ರಾಮದಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ. ಈ ತಳಿ ಗುಣಗಳಲ್ಲಿ ಹೆಚ್ಚಾಗಿ ಬಾಂಗೆ ಗ್ರೀನ್ ಅಥವಾ ಮಾಲ್ಡಾ ತಳಿಯನ್ನು ಹೋಲುತ್ತದೆ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಕಸುವಿನಿಂದ ಬೆಳೆದು ಹರಡುತ್ತವೆ, ಮಧ್ಯಮ ಉತ್ಪನ್ನಕಾರಿ, ಅನಿಶ್ಚಿತ ಫಸಲು ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಚಪ್ಪಟೆ ಮತ್ತು ಮಡಚಿರುವ ಪ್ರವೃತ್ತಿ ; ಅಲೆಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಮಿಗ್ನೊನೆಟ್‌ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಪ್ಯಾನ್ಸಿಪರ್ಪಲ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಸಾಧಾರಣ

ವಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಗುಂಡು ಬುಡ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಮಾಸ್ ಗ್ರೀನ್; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಗಟ್ಟಿ ತಿರುಳು, ಮೃದು, ನಾರುರಹಿತ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳನಿಂದ ಮಧ್ಯಮ ಉದ್ದದ, ಮೃದುವಾದ ನಾರಿರುತ್ತವೆ ; ಕವಲೊಡೆದ ನಾಳಗಳು ಸ್ವಲ್ಪದಿಂದ ಹೆಚ್ಚು ಆಳವಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಗಾಳಿಗೆ ಹೆಚ್ಚು ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಸೆಪಿಯಾ ಷಾ ಪಸಂದ್

ದೊಡ್ಡ ಗಾತ್ರದ ಚಪ್ಪಟೆಯಾಕಾರದ ಹಣ್ಣು ಬಿಡುವುದರಿಂದ ಈ ತಳಿಗೆ ಮೇಲ್ಕಂಡ ಹೆಸರು ಬಂದಿದೆ. ಸೆಪಿಯ ಎಂದರೆ ಸಮುದ್ರದಲ್ಲಿರುವ ಕಪ್ಪೆಚಿಪ್ಪು, ಷಾಪಸಂದ್ ಎಂದರೆ ರಾಜನ ಅಚ್ಚು ಮೆಚ್ಚಿನ ಎಂದು ಅರ್ಥ. ಇದರ ಮೂಲ ಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ

ಹೊರಬರುತ್ತಿರುವ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಬಲಿಯುತ್ತಿರುವ ಎಲೆಗಳ ಬಣ್ಣ ಬ್ರಿಕ್‌ರೆಡ್, ಇವು ಅನಂತರ ಲೈಟ್ ಬ್ರೌನಿಷ್ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ರಸಿಯನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ; ಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಕಡಮೆ ಆಳದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಫಾರೆಸ್ಟ್ ಗ್ರೀನ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತದೆ, ವ್ಯಾಕ್ಸ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾದ, ಕುಳ್ಳಾದ, ಮೃದು ನಾರು ಇರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ ಫಸಲು, ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಷಾದ್‌ವಾಲಾ

ಇದು ಪಶ್ಚಿಮ ಬಂಗಾಳದ ಮುರ್ಷಿದಾಬಾದಿನಲ್ಲಿ ಉದ್ಭವಿಸಿದೆ. ಇದರ ಇತಿಹಾಸ ಪೂರ್ಣವಾಗಿ ತಿಳಿದಿಲ್ಲ. ಮುರ್ಷಿದಾಬಾದಿನಲ್ಲಿ ರಾಯಿಸ್ ಮಿರ್ಜಾ ಬಾಗನ್ ತೋಟದಲ್ಲಿ ಮೊದಲು ನಾಟಿಮಾಡಿದ ಈ ತಳಿಯ ಕಸಿ ಸಸ್ಯಗಳಿಂದ ಹರಡಿದೆ ಎಂದು ತಿಳಿದು ಬಂದಿದೆ. ಮುರ್ಷಿದಾಬಾದ್ ಮತ್ತು ನಾದಿಯಾ ಜಿಲ್ಲೆಗಳಲ್ಲಿ ಈ ತಳಿಯು ವಿಸ್ತಾರವಾಗಿ ಮತ್ತು ಹೂಗ್ಲಿ ಮತ್ತು 24 ಪರ್ಗಣಾ ಜಿಲ್ಲೆಗಳಲ್ಲಿ ಸ್ವಲ್ಪಮಟ್ಟಿಗೆ ಹರಡಿದೆ.

ಪಶ್ಚಿಮ ಬಂಗಾಳದ ಕೆಲವು ಭಾಗಗಳಲ್ಲಿ ಇದನ್ನು ಪದುಲ್ಲಾ ಎಂದು ಕರೆಯುತ್ತಾರೆ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವುದರಿಂದ ಮನೆಯ ತೋಟಗಳಲ್ಲಿ ನಾಟಿಮಾಡಲು ಯೋಗ್ಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು, ಕೆಲವುಸಾರಿ ಅಲೆ ಮತ್ತು ತಿರುಚಿರುವ ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳರಚನೆ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಮಿಕಾಡೊ, ಇವು ಅನಂತರ ಆರೆಂಜ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೆಟ್ಯೂಸ್ ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕಡಮೆ ಆಳದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ್ ; ಹಿತಕರವಾಸನೆ; ಸಣ್ಣ ಗಾತ್ರದ ಚುಕ್ಕೆಗಳು ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕ್ಯಾಡ್‌ಮಿಯಮ್ ಯಲ್ಲೊ ಬಣ್ಣ; ಹಿತಕರ ವಾಸನೆ ; ಬಹಳ ಸಿಹಿ ರುಚಿ ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದು ನಾರಿರುತ್ತದೆ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ, ಮಧ್ಯಕಾಲಿಕ, ಮಧ್ಯಮ ಪರಿಮಾಣದ

ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಷಾ ಪಸಂದ್

ಈ ತಳಿಯು ಪಶ್ಚಿಮ ಬಂಗಾಳದ ಮುರ್ಷಿದಾಬಾದಿನಲ್ಲಿ ಉದ್ಭವಿಸಿದೆ. ಇದರ ಮೂಲಸ್ಥಾನದ ಇತಿಹಾಸ ಪೂರ್ಣವಾಗಿ ತಿಳಿದಿಲ್ಲ. ರೈಸ್‌ಮಿಜರ್ಾ ಬಾಗನ್ ಹಣ್ಣಿನ ತೋಟದಲ್ಲಿ ನಾಟಿಮಾಡಿದ ಕಸಿ ಸಸ್ಯಗಳಿಂದ ಇದು ಹರಡಿದೆ ಇದರ ಬೇಸಾಯ ಮುರ್ಷಿದಾಬಾದ್ ಮತ್ತು ನಾದಿಯ ಜಿಲ್ಲೆಗಳಲ್ಲಿ ಅಧಿಕವಾಗಿಯೂ ಮತ್ತು ಸ್ವಲ್ಪ ಮಟ್ಟಿಗೆ ಹೂಗ್ಲಿ ಜಿಲ್ಲೆಯಲ್ಲೂ ಇದೆ. ವಾಣಿಜ್ಯಮಟ್ಟದ ಬೇಸಾಯಕ್ಕೆ ಇದು ಯೋಗ್ಯ ತಳಿಯಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ನೇರವಾಗಿ ಬೆಳೆಯುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಕಳಸಾಕಾರದಿಂದ ಗುಂಡಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣದಿಂದ ಸಾಧಾರಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಅನಿಶ್ಚಿತ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಮಾರ್ಷಿಯಸ್ ಯೆಲ್ಲೊ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಗ್ರೇಪ್‌ಗ್ರೀನ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ, ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಗುಂಡು ಬುಡ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಕಡಮೆ ಆಳದ ಹೊಕ್ಕಳು ; ಗುಂಡಿನಿಂದ ವಿಶಾಲವಾದ ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ ; ನಯವಾದ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ್ ಯೆಲ್ಲೊ ; ಸಣ್ಣ ಗಾತ್ರದ [illegible] ಮೇಲ್ಭಾಗದಿಂದ ಹೊರಬಂದಿರುತ್ತವೆ ;

ಗಟ್ಟಿ, ತಿರುಳು, ನಾರಿರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೋ ಬಣ್ಣ; ತುಸು ಟರ್‌ಪೆಂಟೈನ್ ಗಂಧಯುತ ಹಿತಕರ ವಾಸನೆ; ಸಿಹಿ ರುಚಿ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ ಕುಳ್ಳಾದ ಮೃದುನಾರು, ಕೆಳಭಾಗದಲ್ಲಿ ಮಧ್ಯಮ ನಾರು; ಕವಲೊಡೆದಿರುವ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ; ಶೀಘ್ರಕಾಲಿಕ, ಅಧಿಕ ಫಸಲು; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ; ಉತ್ತಮವಾದ ಶೇಖರಣೆ ಗುಣ; ಮಧ್ಯಮ ಸುಲಿಯುವ ಗುಣ.

ಶಾಮ್‌ಸುಲ್-ಅಸಮಾರ್

ಇದು ಉತ್ತರ ಪ್ರದೇಶದ, ಮಾಲಿಹಬಾದಿನ ತಹಸಿಲ್ ಕಛೇರಿಯ ಲೋಢ್ ಪುರಿಯಾ ಎಂಬಲ್ಲಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ. ಅಲ್ಲಿಂದ ಇದು ಉತ್ತರಪ್ರದೇಶದ ಇತರ ಭಾಗಗಳಿಗೆ ಹರಡಿದೆ. ಶಾಮ್‌ಸುಲ್ ಅಸ್‌ಮಾರ್ ಎಂದರೆ, 'ಹಣ್ಣುಗಳಲ್ಲಿ ಸೂರ್ಯ' ಎಂದರ್ಥ. ಕೆಲವು ಮಾವಿನ ಬೇಸಾಯಗಾರರು ಈ ತಳಿಯನ್ನು ಬಂಗಾಲವಾಲಾ ಎಂದೂ ಕರೆಯುತ್ತಾರೆ. ಈ ಹೆಸರು ಮಾಲಿಹ ಬಾದನ್ನು ಸೂಚಿಸುತ್ತದೆ. ಹಿಂದಿನ ಕಾಲದಲ್ಲಿ ಈ ತಳಿಯ ಮಾವಿನ ಕಸಿಸಸಿಗಳಿಗೆ ಅಧಿಕ ಲಾಭ ದೊರೆಯುತ್ತಿತ್ತೆಂದು ವರದಿಯಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪರ್ಯಾಯ ಫಲ ಪ್ರವೃತ್ತಿ; ಗುಂಡಾದ ಮೇಲ್ಭಾಗ; ಮಧ್ಯಮ ಗಾತ್ರದ ಬುಡ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ; ಅಲೆ ಮತ್ತು ತಿರುಚಿದ ಅಂಚಿನ ಪ್ರವೃತ್ತಿ; ಸಾಧಾರಣ ಪ್ರಮುಖ ನಾಳರಚನೆ; ಸ್ವಲ್ಪ ಲಂಬಾಗ್ರ ತುದಿ; ಮೊನಚು ಬುಡ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಅಂಬರ್ ಬ್ರೌನ್, ಇವು ಮುಂದೆ ಎಲ್ಮ್‌ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬ್ರಿಕ್‌ರೆಡ್ ಬಣ್ಣ,

ತೆಳುವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರದ ತೊಟ್ಟು ; ಕಡಮೆ ಆಳದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತವೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ಬಿಂದುವಿನಲ್ಲಿರುವುದರಿಂದ ಹಿಡಿದು ಇಲ್ಲದಿರುತ್ತದೆ ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ತೆಳು ಸಿಪ್ಪೆ, ನಯ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತದೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಕಡಮೆ ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದು ನಾರಿರುತ್ತದೆ ; ಕವಲೊಡೆದಿರುವ ನಾಳಗಳು, ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಶೇಂದ್ರಿಯ

ಇದು ಬೊಂಬಾಯಿಯ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದರ ಹಣ್ಣು ಮಧ್ಯಮ ದರ್ಜೆಯದಾದರೂ ಹೆಚ್ಚು ಫಸಲು ಕೊಡುವ ಸಾಮರ್ಥ್ಯದ ಕಾರಣದಿಂದ ಜನಪ್ರಿಯವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ, ನಯ ಅಂಚುಗಳು : ಕೆಲವುಸಾರಿ ಅಲೆ ಮತ್ತು ತಿರುಚಿದ ಪ್ರ.ಮ.ತ್ತಿ. ; ಸಾಧಾರಣ ಪ್ರಮುಖ

ನಾಳರಚನೆ, ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಕ್ರೈಸೊಲೈಟ್ ಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಎಕ್ರ್ಯಾಗ್ರೀನ್, ಇವು ಅನಂತರ ಕೊರ್ಜ್‌ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಟಾನಿ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಡೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಗುಂಡು ಓರೆಯಾಕಾರದಿಂದ ಅಂಡ ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಗುಂಡಾಗುತ್ತದೆ, ಮೇಲ್ಭುಜ ಗುಂಡಾಕಾರದಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಕೊಕ್ಕಳು ಇರುವುದಿಲ್ಲ ; ಓರೆ ಚಪ್ಪಟೆ ತುದಿ ; ಮಧ್ಯಮ ಗಾತ್ರದ ಸಿಪ್ಪೆ ; ನಯವಾದ ಮೇಲ್ಭಾಗದ ಬಣ್ಣ ಲೆಟ್ಯೂಸ್‌ಗ್ರೀನ್, ಭುಜಗಳ ಮೇಲೆ ಲೈಟ್ ಕೋರಲ್ ರೆಡ್ ಕಾಂತಿ ; ಸಣ್ಣ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ. ಕಡಮೆಯಿಂದ ಸಾಧಾರಣ ಹೆಚ್ಚು ಪ್ರಮಾಣದ ರಸ

ಓಟೆ : ಗಾತ್ರದಲ್ಲಿ ಮಧ್ಯಮದಿಂದ ಸಣ್ಣದು, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಒತ್ತಾದ, ಕುಳ್ಳಾದ, ಮೃದು ನಾರಿರುತ್ತದೆ, ಕೆಳಅಂಚಿನಲ್ಲಿ ಸಾಧಾರಣ ಪರಿಮಾಣದ ನಾರು ; ಕವಲೊಡೆದ ನಾಳಗಳು, ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸಿಂಧೂರ

ಆಳವಾದ ಕೆಂಪು (ಸಿಂಧೂರ) ಬಣ್ಣವಿರುವುದರಿಂದ ಇದು ಬಹಳ ಆಕರ್ಷಕವಾಗಿರುತ್ತದೆ. ಸೇಲಂ ಹತ್ತಿರವಿರುವ ಒಂದು ಖಾಸಗಿ ತೋಟದಲ್ಲಿ ಈ ಮರವನ್ನು

ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಇದು ಸ್ಥಳೀಯವಾಗಿ ಜನಪ್ರಿಯತೆಯನ್ನು ಗಳಿಸಿದ್ದು ಹೆಚ್ಚು ಲಾಭ ಕೊಡುವ ತಳಿಯಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ.

ಮರ : ಗಾತ್ರದಲ್ಲಿ ದೊಡ್ಡದು ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಜೋತುಬಿದ್ದಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ. ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಕೊಸೆಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಮಿಗ್ನೊನೆಟ್ ಗ್ರೀನ್. ಇವು ಮುಂದೆ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಮಾರೀಷಿಯಸ್ ಯೆಲ್ಲೊ ಬಣ್ಣ, ನಿಬಿಡವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಕುಳ್ಳು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು : ಸ್ವಲ್ಪ ಕುಳಿ ; ಕೆಳಭುಜ ಮೇಲ್ಭುಜಕ್ಕಿಂತ ಸಮ ಮತ್ತು ಸಮಾನಾಂತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ಗಾತ್ರದ ಸಿಪ್ಪೆ, ಡೀಪ್ ಕ್ರೋಮ್ ಬಣ್ಣ, ಮಧ್ಯಮ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕಾಪುಸ್ಸೈನ್ ಆರೆಂಜ್ ಬಣ್ಣ ; ಆಹ್ಲಾದಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳಿಬಿದ್ದ, ಮೃದು ನಾರಿರುತ್ತದೆ; ಸ್ವಲ್ಪ ಕವಲೊಡೆದ ನಾಳಗಳು ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣವಾದ ನಿರೋಧಕತೆ ; ಉತ್ತಮ ಶೇಖರಣೆ ಗುಣ.

ಸೋಬಿವಾಲಿ ಟಿಂಗ್

ಈ ತಳಿ ಪಶ್ಚಿಮ ಪಂಜಾಬಿನ ಮುಜಾಫರ್‌ಗಢದಿಂದ ಹರಡಿದೆ ಎಂದು ಹೇಳಲಾಗಿದೆ. ಇದು ಸೋಬಾಖಾನ್ ಎಂಬುವರ ತೋಟದಲ್ಲಿ ಉತ್ತಮ ಆಕಸ್ಮಿಕ ಸಸಿ

ಯಾಗಿ ಉದ್ಭವಿಸಿದೆ. ಈತ ಒಂದು ಮಾವಿನ ಮರದ ರೆಂಬೆಯಲ್ಲಿ ಇತರ ರೆಂಬೆಗಳಲ್ಲಿ ಬಿಟ್ಟ ಹಣ್ಣುಗಳಿಗಿಂತ ದಪ್ಪವಾದ ಮತ್ತು ಉತ್ತಮ ದರ್ಜೆ ಫಲ ಬಿಟ್ಟಿರುವುದನ್ನು ಗಮನಿಸಿದ. ಈ ರೆಂಬೆಯಿಂದ ಕೆಲವು ಕಸಿಸಸಿಗಳನ್ನು ತಯಾರುಮಾಡಿ ತೋಟದಲ್ಲಿ ನಾಟಿಮಾಡಿದ. ಈ ಮರಗಳು ಮೇಲ್ಕಂಡ ತಳಿಗಳ ಮುಖ್ಯ ಮೂಲವಾಗಿವೆ. ಸೋಬೆವಾಲಟೆಂಗ್ ಎಂದರೆ ಸೋಬಾಖಾನನ ತೋಟದ ಮಾವಿನ ಮರದ ರೆಂಬೆ ಎಂದು ಅರ್ಥ. ಈ ತಳಿಯ ಹಣ್ಣುಗಳು ಗಾತ್ರದಲ್ಲಿ ಬಹಳ ಸಣ್ಣವಾಗಿರುವುದರಿಂದ ಹಣ್ಣಿನ ದರ್ಜೆ ಉತ್ತಮವಾಗಿದ್ದು ಅಧಿಕ ಫಸಲು ಕೊಟ್ಟರೂ ಅಷ್ಟೇನೂ ಜನಪ್ರಿಯವಾಗಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಮತ್ತು ತಿರುಚಿದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಲೆಗಳ ಬಣ್ಣ ಡ್ರೆಸ್‌ಡೆನ್ ಬ್ರೌನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ರೈರೈಟ್ ಯೆಲ್ಲೊ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಸಣ್ಣ, ಅಂಡ ಸ್ವಲ್ಪ ಮೂತ್ರಪಿಂಡಾಕಾರ ; ಗುಂಡಾಕಾರದ ಬುಡ ಮತ್ತು ಸ್ವಲ್ಪ ಮುಂದುವರಿದಿರುತ್ತದೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಇಳಿಜಾರಿನಿಂದ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಸ್ವಲ್ಪ ಕೊಕ್ಕು, ಆದರೆ ನಿರ್ದಿಷ್ಟವಾಗಿರುತ್ತದೆ ; ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮದಿಂದ ದಪ್ಪ ಸಿಪ್ಪೆ, ಗೋಲ್ಡನ್ ಗ್ಲೋ ಬಣ್ಣ ; ಸಣ್ಣ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೃದು ತಿರುಳು, ಹೆಚ್ಚು ನಾರಿನಿಂದ ಕೂಡಿರುತ್ತದೆ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಹಿತಕರ ವಾಸನೆ, ಸಿಹಿ ರುಚಿ, ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣ, ದೀರ್ಘ ಚತುರಸ್ರ ಮೂತ್ರಪಿಂಡಾಕಾರ ; ಅದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ, ಮೃದುವಾದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಿನಿಂದ ಹೆಚ್ಚು ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ನಿಧಾನಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಸುಖ್ ತಾರಾ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈಗ ಇದರ ವ್ಯಾಪ್ತಿ ಉತ್ತರ ಪ್ರದೇಶಕ್ಕೆ ಸೀಮಿತವಾಗಿದೆ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವ ಕಾರಣ ಇದನ್ನು ಜನಪ್ರಿಯಗೊಳಿಸುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ : ವೃತ್ತಾಕಾರದಿಂದ ಗೋಳಾಕಾರದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಡೈಜಮೆನ್ ಬ್ರೌನ್, ಇವು ಮುಂದೆ ತಿಳಿ ಸೀಲ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಹೂಗೊಂಚಲು : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕಾರ್ಮೈನ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘ ಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪದಿಂದ ಕಡಮೆ ಆಳದ ಕುಳಿ ; ಅಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ

ಗುಂಡಾಗಿರುತ್ತದೆ, ಮೇಲ್ಭಾಗ ಉದ್ದವಾದ ತೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ; ಕಡಮೆ ಆಳದಿಂದ ಆಳವಾಗಿರುವ ಹೊಕ್ಕಳು ; ಗುಂಡು ತುದಿ ; ಮಧ್ಯಮದಿಂದ ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ: ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಎಂಪೈರ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿಯಿಂದ ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಸ್ವಲ್ಪ ಮಾತ್ರ ಪಿಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ ಕುಳ್ಳದ, ಮೃದು ನಾರು ಇರುತ್ತದೆ ; ಸಮಾನಾಂತರ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಒಳ್ಳೆಯ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸುಕುಲ್

ಇದು ಬಿಹಾರದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದು ಅಧಿಕ ಫಸಲು ಕೊಟ್ಟು ಹೆಚ್ಚು ಜನಪ್ರಿಯತೆಯನ್ನು ಗಳಿಸಿದ್ದರೂ, ಹಣ್ಣು ಮಾತ್ರ ಮಧ್ಯಮ ದರ್ಜೆಯದು.

ಮರ : ಗಾತ್ರದಲ್ಲಿ ದೊಡ್ಡದು, ಕಸುಪಿನಿಂದ ಸಾಧಾರಣ ಕಸುವಿನಲ್ಲಿ ಬೆಳೆದು ಹರಡುತ್ತದೆ, ಬಹಳ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾಕಾರದ ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಉಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ಅಲೆ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಉಂಬಾಗ್ರ ತುದಿ ; ಗುಂಡು ಬುಡ ; ಹೊರಬರುತ್ತಿರುವ ಎಲೆಗಳ ಬಣ್ಣ ಸಕ್ಕಾರ್ ರೋಸ್ ಅಂಬರ್, ಬಲಿಯುತ್ತಿರುವ ಎಲೆಗಳ ಬಣ್ಣ ಆರೆಂಜ್ ಸಿಟ್ರೈನ್, ಇವು ಅನಂತರ ಎಕ್ರೂ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಆಲಿವ್ ಒಕ್ರೆ ಬಣ್ಣ, ನಿಬಿಡವಾದ ಮೃದುತುಪ್ಪುಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಮತ್ತು ಅದಕ್ಕೆ ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಓರೆಯಾಕಾರ ; ಓರೆ ಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಇಲ್ಲವೇ ಅಪರೂಪವಾಗಿ ಸ್ವಲ್ಪ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ ಮತ್ತು ಎತ್ತರ, ಕೆಳಭುಜ ಗುಂಡಾಗಿ ಅನಂತರ ಎತ್ತರವಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ದಪ್ಪದ ಸಿಪ್ಪೆ, ಮೇಲ್ಭಾಗ ಪ್ರಿಮೂಲೈನ್ ಯೆಲ್ಲೊ ಬಣ್ಣ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಲೈಟ್ ಲಿಮನ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಮಧ್ಯಮ ಸಿಹಿಯಿಂದ ಸ್ವಲ್ಪ ಹುಳಿ ರುಚಿ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ ಮೃದುನಾರು, ಕೆಳಅಂಚಿನಲ್ಲಿ ಮಧ್ಯಮ ನಾರು ; ಕವಲೊಡೆದ ನಾಳಗಳು ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ನಿಧಾನಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸುಂದರ್ ಪ್ರಸಾದ್

ಈ ತಳಿಯು ಬಿಹಾರ್ ರಾಜ್ಯದಲ್ಲಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣದಿಂದ ಕೂಡಿರುವ ಕಾರಣ, ಇದರ ಬಗ್ಗೆ ವಿಶೇಷ ಗಮನ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ

ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡವು, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಎಕ್ರೂ ಆಲಿವ್, ಇವು ಮುಂದೆ ಇಸಬೆಲ್ಲಾ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಬ್ರಿಕ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪುಳು; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಸಮ ಭುಜಗಳು, ಮೇಲ್ಭುಜ ಕೆಳಭುಜಕ್ಕಿಂತ ಸ್ವಲ್ಪ ಎತ್ತರ, ಕೆಳಭುಜ ಸಾಧಾರಣವಾದ ಜೋಂಕಿನಲ್ಲಿ ಮುಗಿಯುತ್ತದೆ; ನಿರ್ದಿಷ್ಟ ಕೊಕ್ಕು ; ಕೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಸ್ವಲ್ಪ ಒರಟು, ಡೀಪ್ ಕ್ರೋಮ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ; ಗಟ್ಟಿಯಿಂದ ಮೃದು ತಿರುಳು, ನಾರಿರುವುದಿಲ್ಲ, ಪ್ರಿಮುಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಮಧ್ಯಮದಿಂದ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದು ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಿನಿಂದ ಬಹಳ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮದಿಂದ ಶೀಘ್ರಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸುಂದರ್ ಷಾ ಹೈದ್ರಾಬಾದ್

ಈ ತಳಿಯನ್ನು ಹೈದ್ರಾಬಾದ್ ರಾಜ್ಯದಿಂದ ಅಧ್ಯಯನಕ್ಕಾಗಿ ಆರಿಸಿಕೊಂಡಿದೆ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಸಣ್ಣ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಕಡಮೆಯಿಂದ ಮಧ್ಯಮ ಉತ್ಪನ್ನಕಾರಿ ; ಪ್ರತಿವರ್ಷದಿಂದ ಅನಿಶ್ಚಿತ ಫಸಲು ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು, ಕೆಲವು ಸಾರಿ ಅಲೆ ಮತ್ತು ತಿರುಚಿರುವ ಪ್ರವೃತ್ತಿ ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರ ಬರುತ್ತಿರುವ ಎಲೆಗಳ ಬಣ್ಣ ಪಿನಾರ್ಡ್ ಯೆಲ್ಲೊ, ಬಲಿಯುತ್ತಿರುವ ಎಲೆಗಳ ಬಣ್ಣ ಲೈಮ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೊರ್ಜ್ ಗ್ರೀನ್ ಬಣ್ಣ, ಕಡಮೆ ಮೃದುಕೂದಲುಗಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ದೀರ್ಘಚತುರಸ್ರದಿಂದ ದೀರ್ಘಚತುರಸ್ರ ಓರೆಯಾಕಾರ ; ಓರೆಗುಂಡು ಬುಡ ; ಚಪ್ಪಟೆಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಿಂದ ನಿರ್ದಿಷ್ಟವಾಗಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡಾದ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರ ದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿ ತಿರುಳು, ನಾರು ಇರುವುದಿಲ್ಲ, ಏಪ್ರಿಕಾಟ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಮಧ್ಯಮ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದು ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ವಿರೋಧಕತೆ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಸುಂದರ್ ಷಾ ಕುಮ್‌ಟಾ

ಈ ತಳಿಯ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದು ಬಂದಿಲ್ಲ. ಮೈಸೂರು ರಾಜ್ಯದ ಉತ್ತರಕನ್ನಡ ಜಿಲ್ಲೆಯ ಕುಮಟಾದಲ್ಲಿರುವ ಸರ್ಕಾರಿ ಹಣ್ಣಿನ ತೋಟದಲ್ಲಿರುವ ಕಸಿಮರಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಯಿತು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪರ್ಯಾಯ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚುಗಳು ; ಖಚಿತವಿಲ್ಲದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಲ್ಫೈನ್ ಯೆಲ್ಲೊ, ಬಲಿಯುತ್ತಿರುವ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್, ಇವು ಮುಂದೆ ಕೊಸೆಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಎಕ್ರೂ ಆಲಿವ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ; ಗುಂಡು ಬುಡ, ಮುಂದುವರಿದಿರುತ್ತದೆ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ; ಸ್ವಲ್ಪ ಹೊಕ್ಕಳು; ಗುಂಡಿನಿಂದ ವಿಶಾಲವಾದ

ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಗೋಲ್ಡನ್ ಗ್ಲೋ ; ದೊಡ್ಡಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಮೆದು ತಿರುಳು, ನಾರಿರುವುದಿಲ್ಲ, ಎಂಪೈರ್ ಯೆಲ್ಲೊ ಬಣ್ಣ ; ಹಿತಕರದಿಂದ ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಪರಿ ಮಾಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ, ಇದರ ಮೇಲೆ ಕೆಳುವಾಗಿ, ಕುಳ್ಳಾದ ಮೃದುನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಕೀಳಿನಿಂದ ಮಧ್ಯಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ಸುರ್ಖ ಬರ್ಮ

ಇದು ಬಿಹಾರ್ ರಾಜ್ಯದ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಕೆಲವು ಮಾವಿನ ಬೇಸಾಯಗಾರರು ಮತ್ತು ನರ್ಸರಿ ಮಾಲೀಕರು ಇದನ್ನು ಪ್ರೈಡ್ ಆಫ್ ರಷ್ಯ ಎಂದು ಕರೆಯುತ್ತಾರೆ. ಈ ಹೆಸರಿಗೆ ಕಾರಣ ಹಣ್ಣು ಮತ್ತು ಭುಜಗಳ ಮೇಲೆ ಪರ್ಪಲ್ ರೆಡ್ ಬಣ್ಣವಿರುವುದು.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮದಿಂದ ದಪ್ಪ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯದಿಂದ ತಿರುಚಿರುವ ಪ್ರವೃತ್ತಿಯ ಅಂಚುಗಳು ; ಸಾಧಾರಣ ಪ್ರಮುಖವಾದ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಆಲಿವ್ ಲೇಕ್ ; ಬಲಿಯುತ್ತಿರುವ ಎಲೆಗಳ ಬಣ್ಣ ಸಿಟ್ರೈನ್, ಇವು ಮುಂದೆ ಎಕ್ಸ್ ಆಲಿವ್ ಬಣ್ಣಕ್ಕೆ ತಿರುಗುತ್ತವೆ.

ಹೂಗೊಂಚಲು : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಅಕ್ಷಾಕ್ಷೋ ರೆ

ಬಣ್ಣ, ನಿಬಿಡವಾದ ಮೃದುತುಪ್ಪಳ ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡಾಕಾರ ; ಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಹೊಕ್ಕಳು ಇರುವುದಿಲ್ಲ ಅಥವಾ ಸ್ವಲ್ಪ ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟು ಪ್ರವೃತ್ತಿಯ ಮೇಲ್ಭಾಗದ ಬಣ್ಣ ಕ್ಯಾಡ್ಮಿಯಂ ಯೆಲ್ಲೋ ಮತ್ತು ಭುಜಗಳ ಮೇಲೆ ಮತ್ತು ಹಣ್ಣಿನ ಬಹುಭಾಗದಲ್ಲಿ ಎಟ್ರೂಸ್ಕ್ಯಾನ್ ರೆಡ್ ಬಣ್ಣ ; ಮಧ್ಯಮ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಆಳವಾಗಿರುತ್ತವೆ ; ಗಟ್ಟಿ ತಿರುಳು ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ; ಕುಳ್ಳಾದ, ಮೃದು ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು; ಸಮಾನಾಂತರವಾದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಶೀಘ್ರಕಾಲಿಕ, ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸುರ್ಖಾ ಪಂಡಿತ್ ವಾಲಾ

ಇದು ಪಂಜಾಬ್ ರಾಜ್ಯದ ಉತ್ತಮ ಆಕಸ್ಮಿಕ ತಳಿ. ಅಲ್ಲಿ ಇದು ಸಿಂಧೂರಿಯ ಎಂದು ಹೆಸರುವಾಸಿಯಾಗಿದೆ. ಈ ತಳಿಯ ಬೇಸಾಯ ಈಗ ಪಂಜಾಬ್ ರಾಜ್ಯದ ಪಾಣಿಪತ್ ತೆಹಸಿಲಿಗೆ ಸೀಮಿತವಾಗಿದೆ. ಈ ತಳಿಯ ಹೆಸರು ಹಣ್ಣಿನ ಬಣ್ಣದಿಂದ ಬಂದಿದೆ. ಇದರ ಹಣ್ಣು ಶ್ರೇಷ್ಠಗುಣಗಳಿಂದ ಕೂಡಿರುವ ಕಾರಣದಿಂದ ಇದರ ಬೇಸಾಯವನ್ನು ಅಧಿಕಗೊಳಿಸಬಹುದು.

ಮರ : ಗಾತ್ರದಲ್ಲಿ ಮಧ್ಯಮ, ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ

ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ, ಸುಕ್ಕಾಗಿರುವ ಪ್ರವೃತ್ತಿ ; ಅಲೆ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಬಫ್ಫಿ ಸಿಟ್ರೈನ್, ಬಲಿಯುತ್ತಿರುವ ಎಲೆಗಳ ಬಣ್ಣ ಕೊಸೆಗ್ರೀನ್, ಅನಂತರ ಆಳವಾದ ಕ್ರೈಸೊ ಲೈಟ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಪ್ರಸಿಯನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಗುಂಡು ಓರೆಯಾಕಾರ ; ಓರೆ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟ ಕೊಕ್ಕು ; ಹೊಕ್ಕಳು ಇರುವುದಿಲ್ಲ ; ಗುಂಡು ತುದಿ ; ಮಧ್ಯಮ ಗಾತ್ರದ ಸಿಪ್ಪೆ, ನಯದಿಂದ ಒರಟು ಪ್ರವೃತ್ತಿಯ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ, ಅಲ್ಲಲ್ಲಿ ಕೊರಿಂಥಿಯಾನ್ ರೆಡ್ ಬಣ್ಣದ ಮಚ್ಚೆಗಳು ; ಸಣ್ಣ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ನಾರಿರುವುದಿಲ್ಲ, ಕ್ಯಾಡ್ಮಿಯಮ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿ ರುಚಿ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ ಮೃದು ನಾರು, ಕೆಳ ಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಗಾತ್ರದಲ್ಲಿ ಮಧ್ಯಮ, ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಸುವರ್ಣ ರೇಖಾ

ಇದು ಆಂಧ್ರಪ್ರದೇಶದ, ವಿಶಾಖಪಟ್ಟಣದ ವಾಣಿಜ್ಯ ತಳಿ. ಈ ತಳಿ ವಿಶಾಖಪಟ್ಟಣದ ಅಲಮಂಡಾ ಮುಖ್ಯ ರಸ್ತೆಯಲಿರುವ ವಿಜಯನಗರಂನಲ್ಲಿ ಉತ್ತಮ ಆಕಸ್ಮಿಕ ತಳಿಯಾಗಿ ಉದ್ಭವಿಸಿದೆ.

ಸುವರ್ಣ ರೇಖಾ ತಳಿಯು ಇತ್ತೀಚೆಗೆ ಉದ್ಭವಿಸಿದ್ದು ಪಕ್ಕದ ಜಿಲ್ಲೆಗಳಲ್ಲಿ ಹರಡುತ್ತಿದೆ. ಇದು ಶೀಘ್ರಕಾಲಿಕವಾಗಿ ಫಸಲು ಬಿಡುವುದಲ್ಲದೆ ಹಣ್ಣೂ ಸಹ ದಪ್ಪವಾದ ಸಿಪ್ಪೆಯಿಂದಾಗಿ ಉತ್ತಮ ಶೇಖರಣೆ ಗುಣದಿಂದ ಕೂಡಿದೆ, ಇದರಿಂದ ಹಣ್ಣನ್ನು ಸುಂದ್ರಿ ಎಂಬ ಹೆಸರಿನಿಂದ ಉತ್ತರ ಭಾರತದ ಮಾರುಕಟ್ಟೆಗಳಿಗೆ ರವಾನಿಸುತ್ತಾರೆ. ಹಣ್ಣಿನ ಸಿಪ್ಪೆಯ ಆರೆಂಜ್‌ಯೆಲ್ಲೋ ಬಣ್ಣದ ಹಿನ್ನೆಲೆಯಲ್ಲಿ ಭುಜಗಳ ಮೇಲೆ ಡೀಪ್ ರೆಡ್ ಬಣ್ಣವಿರುವುದರಿಂದ ಹಣ್ಣು ಬಹಳ ಆಕರ್ಷಕವಾಗಿ ಕಾಣುತ್ತದೆ. ಈ ತಳಿಗೆ ಚಿನ್ನ ಸುವರ್ಣ ರೇಖಾ ಎಂಬ ಇನ್ನೊಂದು ಹೆಸರು ಸಹ ಬಳಕೆಯಲ್ಲಿದೆ. ಒರಿಸಾ ರಾಜ್ಯದಲ್ಲಿ ಇದನ್ನು ಲಾಟ್ ಸುಂದರಿ ಎಂಬ ಹೆಸರಿನಿಂದ ಕರೆಯುತ್ತಾರೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆವ ಹರಡುತ್ತದೆ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಿಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಳೆಯ ಎಲೆಗಳ ಬಣ್ಣ ಮೆಡಲ್ ಬ್ರಾಂಜ್; ಇವು ಡ್ರೆಸ್‌ಡೆನ್ ಬ್ರೌನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಕೊರಿಂಥಿಯಾನ್ ರೆಡ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಅಂಡ ದೀರ್ಘಚತುರಸ್ರ ; ಸ್ವಲ್ಪ ಚಪ್ಪಟೆ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಸಮಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಸ್ವಲ್ಪ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ಲೈಟ್ ಕ್ಯಾಡ್‌ಮಿಯಮ್ ಬಣ್ಣ, ಭುಜಗಳ ಮೇಲೆ ಜಾಸಪರ್ ರೆಡ್ ಕಾಂತಿ ; ಸಣ್ಣ ಗಾತ್ರದ ಚುಕ್ಕೆಗಳು, ಹತ್ತಿರದಲ್ಲಿರುತ್ತವೆ ; ಮೆದುವಾದ ತಿರುಳು, ನಾರಿರುವುದಿಲ್ಲ, ಪ್ರಿಮೂಲೈನ್‌ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ಮೊಟ್ಟೆಯಾಕಾರ, ಇದರ ಮೇಲೆ ಎಲ್ಲಾ ಭಾಗ

ದಲ್ಲಿ ಕುಳ್ಳಾದ ವೃಂದು, ನಾರಿರುತ್ತದೆ ; ಸಮಾನಾಂತರದಿಂದ ಕವಲೊಡೆದ ನಾಳ ಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಉತ್ತಮ ದರ್ಜೆ ; ಶೀಘ್ರಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ವಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ಸ್ವರಪಡು

ಇದು ಆಂಧ್ರಪ್ರದೇಶದಲ್ಲಿ ಬೇಸಾಯದಲ್ಲಿರುವ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಪರಿಚಯವಿಲ್ಲ. ಈ ತಳಿಯ ಹಣ್ಣು ಮಧ್ಯಮ ದರ್ಜೆಯದು. ಇದರ ಅಧಿಕ ಫಸಲು ಕೊಡುವ ಗುಣದಿಂದಾಗಿ ಈ ತಳಿಯನ್ನು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳಲ್ಲಿ ವಾಣಿಜ್ಯ ತಳಿಯಾಗಿ ಬೇಸಾಯಮಾಡುತ್ತಾರೆ.

ಮರ : ಗಾತ್ರದಲ್ಲಿ ದೊಡ್ಡದು, ಸಾಧಾರಣ ಕಸುವಿನಿಂದ ಬೆಳೆದು ಹರಡು ತ್ತದೆ, ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ. ಅಂಡ ಭರ್ಜಿಯಾಕಾರ, ಚಪ್ಪಟೆ, ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚುತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಸಿಟ್ರೈನ್, ಬಲಿಯುತ್ತಿರುವ ಎಲೆಗಳ ಬಣ್ಣ ಎಮರಾಲ್ಡ್ ಗ್ರೀನ್, ಅನಂತರ ಬ್ರಿಕ್ ರೆಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಬ್ರೌಟ್ಸ್ ಬ್ರೌನ್ ಬಣ್ಣ, ಸಾಧಾರಣ ವೃಂತುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಸಮಾನಾಂತರವಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿ ವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಅಂಡ ವೃತ್ತಾಕಾರ ; ವಿಶಾಲವಾದ ಬಿಂದುವಿನಿಂದ ಇಳಿಜಾರಾಗುವ ಬುಡ ; ಚಪ್ಪಟೆ ಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಸಮಭುಜಗಳು, ಒಂದೇ ಮಟ್ಟದಲ್ಲಿರು ತ್ತವೆ ; ಕೆಳಭುಜ ಇಳಿಜಾರಿನಿಂದ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಇಳಿಜಾರಿನಿಂದ ತಟಕ್ಕನೆ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ;

ವಿಶಾಲ ಬಿಂದುವಿನಲ್ಲಿರುವ ತುದಿ ; ಸ್ವಲ್ಪ ಹೊಕ್ಕಳು ಅಥವಾ ಇರುವುದಿಲ್ಲ ; ಮಧ್ಯಮ ದಪ್ಪದ ಸಿಪ್ಪೆ, ಚರ್ಮದಂತಿರುತ್ತದೆ, ಪ್ರಿಮೂಲೈನ್‌ಯೆಲ್ಲೋ ಬಣ್ಣ ; ಮಧ್ಯಮ ದಪ್ಪದ ಚುಕ್ಕೆಗಳು, ಹತ್ತಿರವಾಗಿರುತ್ತವೆ ; ಮೇಲ್ಭಾಗದಿಂದ ಹೊರ ಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ತಿಳಿ ಕ್ಯಾಡ್‌ಮಿಯಮ್ ಬಣ್ಣ ; ಸುಗಂಧಯುತ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇವರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ, ಮೃದುವಾದ ನಾರಿರುತ್ತದೆ ; ತುಸು ಕವಲೊಡೆದ ನಾಳಗಳು, ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ, ಮಧ್ಯಮದಿಂದ ನಿಧಾನಕಾಲಿಕ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮದಿಂದ ಉತ್ತಮ ಶೇಖರಣೆ ಗುಣ.

ಕೃಮೂರಿಯಾ

ಇದು ಬಿಹಾರ್ ರಾಜ್ಯದ ಅತ್ಯುತ್ತಮ ಇಳುವರಿ ಕೊಡುವ ತಳಿಗಳಲ್ಲಿ ಒಂದು. ಇದರ ಹೆಚ್ಚು ಫಸಲು ಕೊಡುವ ಗುಣದಿಂದ, ಇದನ್ನು ಇತರ ಮಾವು ಬೇಸಾಯ ಮಾಡುವ ಪ್ರದೇಶಗಳಿಗೆ ಒಯ್ಯಲು ಯೋಗ್ಯವಾಗಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದು ಬಂದಿಲ್ಲ. ಈ ತಳಿಯ ಹಣ್ಣು ಅತ್ಯುತ್ತಮ ಗುಣ ಗಳಿಂದ ಕೂಡಿರುವ ಕಾರಣ ಇದು ಉತ್ತರ ಪ್ರದೇಶದ ಕೆಲವು ಭಾಗಗಳಿಗೆ ವ್ಯಾಪಿಸಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ. ಮಧ್ಯಮ ಉತ್ಪನ್ನಕಾರಿಯಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮದಿಂದ ದಪ್ಪ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ. ಅಂಡವೃತ್ತ ಭರ್ಜಿಯಾಕಾರ, ಚಪ್ಪಟೆ ; ಅಲೆ ಅಂಚು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಇಸಬೆಲ್ಲಾ, ಬಲಿಯುತ್ತಿರುವ ಎಲೆ ಗಳ ಬಣ್ಣ ಎಕ್ರುಗ್ರೀನ್, ಇವು ಮುಂದೆ ಆಲಿವ್ ಯೆಲ್ಲೋ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಕೊರ್ಟ್ ಗ್ರೀನ್, ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಓರೆ ಪೊಟ್ಟೆಯಾಕಾರದಿಂದ ದೀರ್ಘ ಚತುರಸ್ರ ಓರೆಯಾಕಾರ ; ಓರೆಚಪ್ಪಟೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಸ್ವಲ್ಪ ತಳಿ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಮೊಲೆತೊಟ್ಟಿನಾಕಾರದ ಕೊಕ್ಕು ; ಸ್ವಲ್ಪದಿಂದ ಕಡಮೆ ಆಳದ ಹೊಕ್ಕಳು ; ಗುಂಡಿನಿಂದ ವಿಶಾಲ ಬಿಂದುವಿನಲ್ಲಿರುವ ತುದಿ ; ದಪ್ಪ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಪ್ರಿಮೂಲೈನ್ ಯೆಲ್ಲೊ : ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೃದು ತಿರುಳು, ನಾರಿರುವುದಿಲ್ಲ, ಕಾಪುಸೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಸ್ವಲ್ಪ ಮೂತ್ರ ಪಿಂಡಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ ಮತ್ತು ಮೃದುವಾದ ನಾರಿರುತ್ತದೆ ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಅತ್ಯುತ್ತಮವಾದ ದರ್ಜೆ ; ನಿಧಾನಕಾಲಿಕ, ಮಧ್ಯಮದಿಂದ ಅಧಿಕ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ತೆನ್ನೇರು

ಇದು ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದರ ಗಾತ್ರ ದೊಡ್ಡದಿದ್ದು ಉತ್ತಮ ಪ್ರದರ್ಶನೀಯ ಗುಣವನ್ನು ಹೊಂದಿದೆ. ಉಳಿದಂತೆ ಇದರಲ್ಲಿ ಹೆಚ್ಚು ಬೇಸಾಯಕ್ಕೆ ತರಬಹುದಾದ ಇನ್ನಾವ ಉತ್ತಮ ಗುಣವೂ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಕಡಮೆ ಉತ್ಪನ್ನಕಾರಿ ; ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ; ತುಳ್ಳಿನಿಂದ ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂದಾಗಿರುತ್ತವೆ. ಅಂಡ ಭರ್ಜಿಯಾಕಾರ, ಸ್ವಲ್ಪ ಮಡಿಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಹೆಲ್ಲೆಬೊರ್ ಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಅಕಾಷೂ ರೆಡ್, ಅನಂತರ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಮಾರ್ಷಿಯಸ್ ಯೆಲ್ಲೊ ಬಣ್ಣ, ಸಾಧಾರಣ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರದಿಂದ ಅಂಡದೀರ್ಘ ಚತುರಸ್ರ, ಸ್ವಲ್ಪ ಮೂತ್ರಪಿಂಡಾಕಾರ ; ವೃತ್ತಾಕಾರದಿಂದ ಸ್ವಲ್ಪ ಚಪ್ಪಟೆ ಬುಡ; ಚಚ್ಚೌಕವಾಗಿ ಸೇರಿದ ತೊಟ್ಟು ; ಸ್ವಲ್ಪ ಕುಳಿ ; ಸಮಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ತೆಳು ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಸನ್‌ರೇ ; ಸಣ್ಣ ಗಾತ್ರದ ಚುಕ್ಕೆಗಳು, ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೆದು ತಿರುಳು, ನಾರಿರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ದೊಡ್ಡದು, ದೀರ್ಘಚತುರಸ್ರ ; ಹೆಚ್ಚು ನಾರಿನ ಅಂಶದಿಂದ ಕೂಡಿರುತ್ತದೆ ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ, ಮೃದುನಾರಿರುತ್ತದೆ ; ಕವಲೊಡೆದ ನಾಳಗಳು ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೆಳದರ್ಜೆ ; ಮಧ್ಯಕಾಲಿಕ, ಶೀಘ್ರ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಕೋತಾಪುರಿ ಕುಮಟಾ

ಈ ತಳಿಯನ್ನು ಬೊಂಬಾಯಿ ರಾಜ್ಯದಲ್ಲಿರುವ ಕುಮಟಾದ ಸರ್ಕಾರಿ

ಪ್ರಯೋಗ ಕೇಂದ್ರದಲ್ಲಿ ಅಧ್ಯಯನ ಮಾಡಲಾಯಿತು. ತಮಿಳುನಾಡಿನಲ್ಲಿ ಬೇಸಾಯದಲ್ಲಿರುವ ತಳಿಯು ಇದಕ್ಕಿಂತ ಭಿನ್ನವಾದದ್ದು. ಆದರೆ ಕೇರಳದ ಒಳ್ಳೂಕಾರದಲ್ಲಿರುವ ಗವರ್ನಮೆಂಟ್ ಸೆಂಟ್ರಲ್ ಫಾರ್ಮ್‌ನಲ್ಲಿ ಬೇಸಾಯದಲ್ಲಿರುವ ಗೋವ ತಳಿಯನ್ನು ಬಹುವಾಗಿ ಹೋಲುತ್ತದೆ. ಅಧಿಕ ಫಸಲನ್ನು ಕೊಡುವ ಏಕೈಕ ಗುಣವನ್ನು ಬಿಟ್ಟರೆ ಇದರಲ್ಲಿ ಇನ್ನಾವ ಉತ್ತಮ ಗುಣವೂ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ನಿಧಾನವಾಗಿ ಬೆಳೆಯುವ ಗುಣ, ಹರಡಿರುವುದರಿಂದ ಜೋತುಬಿದ್ದಿರುವ ಗುಣ, ಅಧಿಕ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ವೃತ್ತಾಕಾರದಿಂದ ಗೋಳಾಕಾರದ ಮೇಲು ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣವು, ಜೋತುಬಿದ್ದಿರುತ್ತವೆ ; ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಚಪ್ಪಟೆ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಮ್ಯಾಡರ್ ಬ್ರೌನ್, ಬಲಿಯುತ್ತಿರುವ ಎಲೆಗಳ ಬಣ್ಣ ಕ್ಯಾಪುಸೈನ್ ಯೆಲ್ಲೊ, ಇವು ಅನಂತರ ಬ್ರಿಕ್ ರೆಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಸ್ಪೈನಲ್ ರೆಡ್ ಬಣ್ಣ, ಕಡಮೆ ಮೃದುತುಪ್ಪಳು ; ಶಲಾಕೆಗಳು ಕೇಸರಗಳಿಗಿಂತ ಉದ್ದ, ಅದಕ್ಕೆ ಸಮಾನಾಂತರವಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಸಮರೂಪಿ ಮೊಟ್ಟೆಯಾಕಾರ ; ಓರೆ ಚಪ್ಪಟೆ ಬುಡ, ಸ್ವಲ್ಪ ಮುಂದುವರಿದಿರುತ್ತದೆ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಭುಜಗಳು ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜಕ್ಕಿಂತ ಗಮನಾರ್ಹವಾದ ಅಗಲ, ಮೇಲ್ಭುಜ ಇಳಿಜಾರು; ಹೊರಬಾಗಿದ ಕೊಕ್ಕು ; ವಿಶಾಲ ಬಿಂದುವಿನಲ್ಲಿರುವ ತುದಿ ; ಸ್ವಲ್ಪ ಹೊಕ್ಕಳು ; ದಪ್ಪ ಸಿಪ್ಪೆ, ಒರಟು ಮೇಲ್ಭಾಗದ ಬಣ್ಣ ಗೋಲ್ಡನ್ ಯೆಲ್ಲೊ ; ಸಾಧಾರಣ ಪರಿಮಾಣದ ನಾರು, ಮಧ್ಯಮ ಉದ್ದ, ಮೃದು ; ವಾಸನೆ ಇಲ್ಲ ; ಟರ್‌ಪಿನಸ್ ರುಚಿ ; ಸಾಧಾರಣ ಪರಿಮಾಣದ ರಸ.

ಓಟೆ : ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ ಮೃದುನಾರು ; ಕವಲೊಡೆದ ನಾಳಗಳು, ಸ್ವಲ್ಪದಿಂದ ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮದಿಂದ ಕೀಳು ದರ್ಜೆ ; ಶೀಘ್ರಕಾಲಿಕ, ಅಧಿಕ ಫಸಲು, ಕುಪ್ಪಳಿಸುವ ಕೀಟಗಳಿಗೆ ಹೆಚ್ಚು ಬಲಿಯಾಗುತ್ತದೆ, ಗಾಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಗುಣ.

ಕೋಹಾಪುರಿ ರತ್ನಗಿರಿ

ಈ ತಳಿ ಬೊಂಬಾಯಿಯ ರತ್ನಗಿರಿ ಜಿಲ್ಲೆಯಲ್ಲಿ ಪರಿಮಿತ ಪರಿಮಾಣದಲ್ಲಿ ಬೇಸಾಯದಲ್ಲಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಇದನ್ನು ಹೆಚ್ಚಿನ ಬೇಸಾಯಕ್ಕೆ ತರಬೇಕಾದ ಯಾವ ಉತ್ತಮ ಗುಣವೂ ಇಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಉತ್ಪನ್ನಕಾರಿ; ಪ್ರತಿವರ್ಷ ಫಲಕಾರಿ, ಗುಂಡಾದ ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಗುಂಡು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಳೆಯ ಎಲೆಗಳ ಬಣ್ಣ ಪ್ರಷಿಯನ್ ರೆಡ್, ಅನಂತರ ಕೊರ್ಜ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪ ವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಎಕ್ರೂ ಆಲಿವ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕೆ ಸಮ ಮತ್ತು ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಅಗಲ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ವಿಶಾಲ ಮೊಲೆತೊಟ್ಟಿನಾಕಾರದ ಕೊಕ್ಕು ; ವಿಶಾಲ ವೃತ್ತಾಕಾರದಿಂದ ಚಪ್ಪಟೆಯಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಡೀಪ್ ಕ್ರೋಮ್ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣವಾದ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರ

ಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಲೈಟ್ ಕ್ಯಾಡ್ಮಿಯಮ್ ಬಣ್ಣ; ಸ್ವಲ್ಪ ಹಿತಕರ ವಾಸನೆ ; ಸಾಧಾರಣ ಸಿಹಿಯಿಂದ ಸಪ್ಪೆ ರುಚಿ, ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ದೀರ್ಘಚತುರಸ್ರ ಮೊಟ್ಟೆಯಾಕಾರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾಗಿ, ಕುಳ್ಳಾದ, ಮೃದು ನಾರು ಇರುತ್ತದೆ ; ಕವಲೊಡೆದ ನಾಳಗಳು, ಪ್ರಮುಖವಾಗಿ ಉಬ್ಬಿರುತ್ತವೆ.

ಹಣ್ಣಿನ ದರ್ಜೆ: ಉತ್ತಮದಿಂದ ಕೀಳು ದರ್ಜೆ ; ಮಧ್ಯಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ತೋತಾಪುರಿ ಸ್ಮಾಲ್ ರೆಡ್

ಈ ತಳಿಯ ಹಣ್ಣಿನ ಕೊಕ್ಕು ಗಿಳಿಯ ಮೂಗನ್ನು (ತೋತಾ) ಹೋಲುವುದರಿಂದ, ಇದಕ್ಕೆ ಮೇಲ್ಕಂಡ ಹೆಸರು ಬಂದಿದೆ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿರುವುದರಿಂದ ಇದನ್ನು ಹೆಚ್ಚಿನ ಬೇಸಾಯಕ್ಕೆ ತರುವ ಅಗತ್ಯವಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ. ಮಧ್ಯಮ ಪರಿಮಾಣದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಸಣ್ಣ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಚಪ್ಪಟೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಎಕ್ರೂ ಆಲಿವ್, ಬಲಿಯುತ್ತಿರುವ ಎಲೆಗಳ ಬಣ್ಣ ಸಕ್ಯಾರ್‌ಡೊಸ್ ಅಂಬರ್, ಅನಂತರ ಆರೆಂಜ್ ಸಿಟ್ರೈನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ರೋಸ್‌ರೆಡ್ ಬಣ್ಣ, ಸಾಧಾರಣ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸ್ರ, ಅಂಡ

ವೃತ್ತಾಕಾರ ; ತುಟಿಯಂತಿರುವ ಅಥವಾ ಮುಂದುವರಿದ ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ, ಸಮಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ, ಮೇಲ್ಭುಜ ಇಳಿಜಾರಿನಿಂದ ತಕ್ಷಣ ಮುಗಿಯುತ್ತದೆ ; ಮೊಲೆತೊಟ್ಟಿನಾಕಾರದ ಕೊಕ್ಕು ; ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ, ಒರಟಾದ ಮೇಲ್ಭಾಗದ ಬಣ್ಣ ಕಾಪುಸೈನ್ ಯೆಲ್ಲೊ, ಹಣ್ಣಿನ ಬಹು ಭಾಗದಲ್ಲಿ ಕೊರಿಂಥಿಯಾನ್ ರೆಡ್ ಬಣ್ಣ ; ಗಟ್ಟಿ ತಿರುಳು, ನಾರಿರುವುದಿಲ್ಲ, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಮಧ್ಯಮ ಸಿಹಿ ರುಚಿ ; ಕಡಮೆಯಿಂದ ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದು, ದೀರ್ಘಚತುರಸ್ರ ಸ್ವಲ್ಪ ಮೂತ್ರಪಿಂಡಾಕಾರ; ಇದರ ಮೇಲೆ ಎಲ್ಲಾ ಭಾಗದಲ್ಲಿ ತೆಳುವಾಗಿ, ಕುಳ್ಳಾದ, ಮೃದು ನಾರು ; ಸಮಾನಾಂತರವಾದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ನಿಧಾನಕಾಲಿಕ ಫಸಲು ; ಕುಪ್ಪಳಿಸುವ ಕೀಟ ಮತ್ತು ಗಾಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಗುಣ ; ಕೆಳದರ್ಜೆಯ ಸುಲಿಯುವ ಗುಣ.

ವನ್ ರಾಜ್

ಗುಜರಾತಿನ ಬರೋಡದ ಹತ್ತಿರವಿರುವ ಶ್ರೀ ಎಸ್. ಎಸ್. ಭಟ್ಟರ ತೋಟದಲ್ಲಿ ಈ ತಳಿಯನ್ನು ಅಭ್ಯಾಸ ಮಾಡಲಾಗಿದೆ. ಈ ತಳಿಯ ಹಣ್ಣು ಹೆಚ್ಚು ಬೆಲೆಗೆ ಮಾರಾಟವಾಗುತ್ತದೆ ಮತ್ತು ಇದರ ಬೇಸಾಯ ಲಾಭದಾಯಕ. ಈ ತಳಿಯ ಹಣ್ಣಿನ ಆಕರ್ಷಣೆ, ಬಣ್ಣ, ಗಾತ್ರ ಮತ್ತು ರುಚಿಗಳು ಉತ್ತಮವಾಗಿರುವುದರಿಂದ ಇದು ಮಾವಿನ ಬೇಸಾಯವಿರುವ ಇತರ ಕಡೆಗಳಲ್ಲಿ ಬೇಸಾಯ ಮಾಡಲು ಯೋಗ್ಯವಾಗಿದೆ. ಇದರ ಮೂಲಸ್ಥಾನದ ಬಗ್ಗೆ ವಿವರಗಳು ತಿಳಿದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಚಪ್ಪಟೆ ; ನಯವಾದ ಅಂಚು

ಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಲೆಟ್ಯೂಸ್ ಗ್ರೀನ್ ಇದ್ದು ಅನಂತರ ಕೊರ್ಜ್‌ಗ್ರೀನ್ ಬಣ್ಣಕ್ಕೆ ತಿರುಗುತ್ತದೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಗೋಪುರಾಕಾರ, ಲೈಟ್‌ಜಾಸ್‌ಪರ್ ಬಣ್ಣ, ತೆಳುವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಅದಕ್ಕೆ ಓರೆಯಾಗಿರುತ್ತವೆ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಅಂಡ ದೀರ್ಘಚತುರಸ್ರ; ಓರೆ ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಇಲ್ಲವೇ ಸ್ವಲ್ಪ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಸ್ವಲ್ಪ ಹೊಕ್ಕಳು; ವಿಶಾಲ ಗುಂಡು ತುದಿ; ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಡೀಪ್ ಕ್ರೋಮ್ ಮತ್ತು ಭುಜಗಳ ಮೇಲೆ ಜಾಸ್‌ಪರ್ ರೆಡ್ ಕಾಂತಿ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ, ಕೆಲವುವೇಳೆ ಸಿಪ್ಪೆಯಲ್ಲಿ ಆಳವಾಗಿರುತ್ತವೆ; ಗಟ್ಟಿಯಿಂದ ಮೆದು ತಿರುಳು, ನಾರಿರುವುದಿಲ್ಲ, ಕಾಡ್‌ಮಿಯಮ್ ಬಣ್ಣ ; ಆಹ್ಲಾದಕರದಿಂದ ಸುಗಂಧಯುತ ವಾಸನೆ ; ಸಿಹಿ ರುಚಿ ; ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು ; ದೀರ್ಘಚತುರಸ್ರ ಮೊಟ್ಟೆಯಾಕಾರ ; ತೆಳುವಾದ ನಾರು ; ಇದರ ಮೇಲೆ ಎಲ್ಲಾ ಭಾಗದಲ್ಲಿ ಮಧ್ಯಮ ಉದ್ದದ, ಮೃದು ನಾರು, ಕೆಳಅಂಚಿನಲ್ಲಿ ಉದ್ದವಾದ ನಾರು ; ಸಮಾನಾಂತರ ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ ಫಸಲು , ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಉತ್ತಮ ಶೇಖರಣೆ ಮತ್ತು ಸುಲಿಯುವ ಗುಣ.

ವೆಳ್ಳೈ ಕೊಳಂಬಾನ್

ಈ ತಳಿಯನ್ನು ಹಿಂದಿನ ಮದ್ರಾಸ್ ಸರ್ಕಾರವು ಸಿಲೋನ್‌ನಿಂದ ತರಿಸಿದೆ. ಆಂಧ್ರಪ್ರದೇಶದ ಕೊಡೂರಿನಲ್ಲಿರುವ ಸರ್ಕಾರಿ ಹಣ್ಣು ಸಂಶೋಧನಾ ಕೇಂದ್ರದಲ್ಲಿ ಅಧ್ಯಯನ ಮಾಡಲಾಗಿದೆ. ಇದು ಬಹುಭ್ರೂಣ ಪ್ರವೃತ್ತಿಯದು.

ಮರ : ಗಾತ್ರದಲ್ಲಿ ದೊಡ್ಡದು, ಕಸಿವಿನಿಂದ ಬೆಳೆದು ಹರಡುತ್ತದೆ, ಪ್ರತಿ ವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಕುಳ್ಳು ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ದೊಡ್ಡವು, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡ ಭರ್ಜಿಯಾಕಾರ, ಸ್ವಲ್ಪ ಮಡಿಚಿರುತ್ತವೆ ; ಅಲೆ ಮತ್ತು ತಿರುಚಿದ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಈವ್ ಗ್ರೀನ್, ಇವು ಅನಂತರ ಗ್ರಾಸ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ದೊಡ್ಡವು, ಶಂಕಾಕಾರ, ಪೈರಿತ್ರಮ್ ಯೆಲ್ಲೊ ಬಣ್ಣ, ತೆಳುವಾದ ಮೃದುತುಪ್ಪುಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ದೀರ್ಘಚತುರಸ್ರ ; ಮೊನಚು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಕೆಳಮಟ್ಟ, ತಟಕ್ಕನೆ ಮುಗಿಯುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ಬಿಂದುವಿನಲ್ಲಿರುವ ಕೊಕ್ಕು, ನಿರ್ದಿಷ್ಟವಾಗಿರುತ್ತದೆ ; ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲ ಗುಂಡು ತುದಿ ; ತೆಳುವಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಎಂಪೈರ್ ಯೆಲ್ಲೊ ; ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ತೆಳುವಾದ ನಾರು, ಗೋಲ್ಡನ್ ಗ್ಲೊ ಬಣ್ಣ ; ಸ್ವಲ್ಪ ಹಿತಕರವಾಸನೆ ; ಸಾಧಾರಣ ಸಿಹಿರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ, ಸಾಧಾರಣ ನಾರಿನ ಅಂಶ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ನಾರು, ಕೆಳಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಸಮಾನಾಂತರ ನಾಳಗಳು, ಕವಲೊಡೆದಿರುತ್ತವೆ, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ಮಧ್ಯಮದಿಂದ ನಿಧಾನ

ಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ; ಹೆಚ್ಚು ಉತ್ತಮ ಶೇಖರಣೆ ಗುಣ ; ಮಧ್ಯಮ ಸುಲಿಯುವ ಗುಣ.

ವಿಲ್ಲಾರ್ಡ್

ಈ ತಳಿ ಮೂಲತಃ ಸಿಲೋನ್ ದೇಶದಿಂದ ನಮ್ಮ ದೇಶಕ್ಕೆ ಬಂದಿದೆ. ಇದನ್ನು ಆಂಧ್ರಪ್ರದೇಶದ ಕೊಡೂರಿನಲ್ಲಿರುವ ಸರ್ಕಾರಿ ಹಣ್ಣಿನ ಪ್ರಯೋಗ ಕೇಂದ್ರದಲ್ಲಿ ಅಧ್ಯಯನ ಮಾಡಲಾಗಿದೆ. ಇದರ ಇತಿಹಾಸ ವಿವರಗಳು ತಿಳಿದುಬಂದಿಲ್ಲ. ಈ ತಳಿಯ ಹಣ್ಣು ಮಧ್ಯಮ ಗುಣಗಳಿಂದ ಕೂಡಿದೆ, ಹಣ್ಣಿನ ಬಣ್ಣ ಆಕರ್ಷಕವಾಗಿರುವುದರಿಂದ, ಕೆಲವರು ಇಚ್ಛಿಸುತ್ತಾರೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣ, ಜೋಲು ಬಿದ್ದಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡವೃತ್ತ ಭರ್ಜಿಯಾಕಾರ, ದೃಢವಾಗಿ ಮಡಿಚಿರುತ್ತವೆ; ನಯ ಅಂಚುಗಳು, ಕೆಲವು ಸಾರಿ ತಿರುಚಿರುತ್ತವೆ ; ಸಾಧಾರಣ ಪ್ರಮುಖ ನಾಳ ರಚನೆ ; ಮೊನಚಿನಿಂದ ಸ್ವಲ್ಪ ಲಂಬಾಗ್ರ ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಈವ್ ಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಕಡುಗೆಂಪು ಛಾಯೆಯುತ ಈವ್‌ಗ್ರೀನ್, ಮುಂದೆ ಗ್ರಾಸ್ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಸಣ್ಣದಿಂದ, ಮಧ್ಯಮ ವಿಶಾಲ ಗೋಪುರಾಕಾರ, ಚ್ಞಾಲೆಟ್‌ರೆಡ್ ಬಣ್ಣ, ತೆಳುವಾದ ಮೃದು ತುಪ್ಪಳು ; ಕೇಸರಗಳು ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಗುಂಡಾಕಾರ ; ಗುಂಡು ಬುಡ್ಡ ಚಪ್ಪಟೆಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಸಾಧಾರಣ ಡೊಂಕಿನಲ್ಲಿ ಮುಗಿಯುತ್ತದೆ ; ಕೊಕ್ಕು ಇರುವುದಿಲ್ಲ ಅಥವಾ ಬಿಂದುವಿನಲ್ಲಿರುತ್ತದೆ ; ಗುಂಡು ತುದಿ ; ತೆಳುವಿನಿಂದ ಮಧ್ಯಮ ದಪ್ಪದ ಸಿಪ್ಪೆ, ನಯವಾದ ಮೇಲ್ಭಾಗದ ಬಣ್ಣ ಸ್ಯಾಫ್ರಾನ್ ಯೆಲ್ಲೊ, ಭುಜಗಳ ಮೇಲೆ ಸ್ಕೈರೆಟ್ ರೆಡ್ ಕಾಂತಿ ;

ಮಧ್ಯಮ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಸಿಪ್ಪೆಯಲ್ಲಿ ಸಾಧಾರಣ ಆಳದಲ್ಲಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ಸಾಧಾರಣ ಪರಿಮಾಣದ ನಾರು, ಕ್ಯಾಡ್‌ಮಿಯಮ್ ಯೆಲ್ಲೊ ಬಣ್ಣ ; ಆಹ್ಲಾದಕರದಿಂದ ಸುಗಂಧಯುತ ವಾಸನೆ ; ಸಾಧಾರಣ ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಸಣ್ಣದು, ಪೊಟ್ಟೆಯಾಕಾರ ; ಸಾಧಾರಣ ನಾರು ; ಇದರ ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ, ಮೃದುವಿನಿಂದ ಮಧ್ಯಮ ಮೃದು ನಾರು, ಕೆಳ ಅಂಚಿನಲ್ಲಿ ಮಧ್ಯಮ ಉದ್ದದ ನಾರು ; ಸಮಾನಾಂತರ, ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಮಧ್ಯಮ ದರ್ಜೆ ; ಮಧ್ಯಮದಿಂದ ನಿಧಾನಕಾಲಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕತೆ ; ಸಾಧಾರಣ ಶೇಖರಣೆ ಮತ್ತು ಸುಲಿಯುವ ಗುಣ.

ಯೆರ್ರಮುಲಗೊವ

ಇದು ಆಂಧ್ರಪ್ರದೇಶದ ಕೆಲವು ಜಿಲ್ಲೆಗಳ ಸ್ಥಳೀಯ ತಳಿ. ಇದರ ಮೂಲಸ್ಥಾನ ಮತ್ತು ಹರಡಿರುವುದರ ಇತಿಹಾಸ ತಿಳಿದುಬಂದಿಲ್ಲ. ಇದನ್ನು ಕೊಡೂರಿನ ದಿವಂಗತ ಶ್ರೀ ಪಿ.ವಿ. ಚಂಗಲ್‌ರೆಡ್ಡಿಯವರ ತೋಟದಲ್ಲಿರುವ ಕಸಿಮರಗಳಿಂದ ವೃದ್ಧಿಮಾಡಿ, ಕಸಿಸಸ್ಯಗಳನ್ನು ಕೊಡೂರಿನ ಹಣ್ಣು ಸಂಶೋಧನಾ ಕೇಂದ್ರದಲ್ಲಿ ನಾಟಿಮಾಡಲಾಗಿದೆ. ಈಗ ಈ ಕೇಂದ್ರವು ಮೇಲ್ಕಂಡ ತಳಿಯ ಮುಖ್ಯ ವಿತರಣಾ ಕೇಂದ್ರವಾಗಿದೆ. ಈ ತಳಿಯ ಮರವು ಉತ್ತಮ ದರ್ಜೆಯ ಅಧಿಕ ಫಸಲನ್ನು ಕೊಟ್ಟರೂ, ಕುಪ್ಪಳಿಸುವ ಕೀಟ ಮತ್ತು ಸೂಟೀ ಮೌಲ್ಡ್ ರೋಗಕ್ಕೆ ಬಲಿಯಾಗುವುದರಿಂದ, ಇದರ ಬೇಸಾಯ ಲಾಭದಾಯಕವಾಗುವುದಿಲ್ಲ.

ಮರ : ಗಾತ್ರದಲ್ಲಿ ಮಧ್ಯಮ, ನಿಧಾನವಾಗಿ ಬೆಳೆದು ಹರಡುತ್ತದೆ, ಕಡಮೆ ಉತ್ಪನ್ನದಿಂದ ಮಧ್ಯಮ ಉತ್ಪನ್ನ, ಅನಿಶ್ಚಿತ ಫಸಲು ; ಗುಂಡಾದ ಮೇಲ್ಭಾಗ ; ಮಧ್ಯಮ ಎತ್ತರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಸಣ್ಣದಿಂದ ಮಧ್ಯಮ, ಹರಡಿರುತ್ತವೆ, ನಡು ದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ, ಅಂಡಭರ್ಜಿಯಾಕಾರ, ಸ್ವಲ್ಪ ಮಡಚಿರುತ್ತವೆ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ; ಸ್ವಲ್ಪ ಲಂಬಾಗ್ರ

ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಕ್ಯಾಡ್‌ಮಿಯಮ್ ಆರೆಂಜ್, ಬಲಿಯುತ್ತಿರುವ ಎಲೆಗಳ ಬಣ್ಣ ಕ್ಲಾರೆಟ್ ಬ್ರೌನ್, ಅನಂತರ ಒಕ್ರೆರೆಡ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಅಕಾಪೂರೆಡ್ ಬಣ್ಣ, ನಿಬಿಡವಾದ ಮೃದುತುಪ್ಪಳು ; ಕೇಸರಗಳು ಅಂಡಾಶಯಕ್ಕೆ ಸಮ, ಸಮಾನಾಂತರ ; ಬಂಜೆ ಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ದೊಡ್ಡದು, ಅಂಡವೃತ್ತಾಕಾರ, ಸ್ವಲ್ಪ ಚಪ್ಪಟೆ ಬುಡ ; ಚಿಚ್ಛಾಟಕವಾಗಿ ಸೇರಿಸ ತೊಟ್ಟು ; ಹೆಚ್ಚು ಆಳವಿಲ್ಲದ ಕುಳಿ ; ಸಮ ಭುಜಗಳು, ಒಂದೇ ಮಟ್ಟದಲ್ಲಿ, ಗುಂಡಾಗಿರುತ್ತವೆ ; ಕೊಕ್ಕು ಇರುವುದಿಲ್ಲ ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ಗುಂಡು ತುದಿ ; ಮಧ್ಯಮ ದಪ್ಪದ ಸಿಪ್ಪೆ, ನಯದಿಂದ ಒರಟು ಪ್ರವೃತ್ತಿಯ ಮೇಲ್ಭಾಗದ ಬಣ್ಣ ಕ್ಯಾಡ್‌ಮಿಯಮ್ ಯೆಲ್ಲೊ, ಭುಜಗಳ ಮೇಲೆ ಕೋರಲ್ ರೆಡ್ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಮೃದುವಾದ ತಿರುಳು, ನಾರು ಇರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಹಿತಕರ ವಾಸನೆ ; ಸಿಹಿರುಚಿ; ಸಾಧಾರಣದಿಂದ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ಮೊಟ್ಟೆಯಾಕಾರ ; ಮೇಲೆ ಎಲ್ಲಾ ಭಾಗದಲ್ಲಿ ಕುಳ್ಳಾದ ಮೃದುನಾರು ; ಕವಲೊಡೆದ ನಾಳಗಳು, ಸ್ವಲ್ಪ ಉಬ್ಬಿರುತ್ತವೆ.

ಹಣ್ಣಿನ ದರ್ಜೆ : ಉತ್ತಮ ದರ್ಜೆ ; ಮಧ್ಯಕಾಲಿಕ, ಅಲ್ಪದಿಂದ ಮಧ್ಯಮ ಪರಿಮಾಣದ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸುಲಭವಾಗಿ ಬಲಿಯಾಗುತ್ತದೆ ; ಮಧ್ಯಮ ಶೇಖರಣೆ ಮತ್ತು ಸುಲಿಯುವ ಗುಣ.

ಜಫ್ರಾನ್

ಜಫ್ರಾನ್ ಅಥವಾ ಸ್ಯಾಫ್ರನ್ ಎಂದರೆ ಕೇಸರಿ ಬಣ್ಣ ಎಂದು ಅರ್ಥ, ಈ ತಳಿಯ ಹಣ್ಣು ಕೇಸರಿ ಬಣ್ಣದ್ದಾಗಿರುವುದರಿಂದ ಜಫ್ರಾನ್‌ಎಂಬ ಹೆಸರು ಬಂದಿದೆ. ಈ ತಳಿಯ ಹಣ್ಣು ಉತ್ತಮ ಗುಣಗಳಿಂದ ಕೂಡಿರುವುದರಿಂದ ಇತರ ಮಾವು ಬೆಳೆಯುವ ಪ್ರದೇಶಗಳಲ್ಲಿ ಬೇಸಾಯ ಮಾಡುವುದಕ್ಕೆ ಯೋಗ್ಯವಾಗಿದೆ. ಈಗ ಈ ತಳಿಯ ಬೇಸಾಯ ಉತ್ತರ ಪ್ರದೇಶಕ್ಕೆ ಸೀಮಿತವಾಗಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ ; ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ಗಾತ್ರದ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ನಡುದಿಂಡಿನ ಮೇಲೆ ಸ್ವಲ್ಪ ಹಿಂಬಾಗಿರುತ್ತವೆ ; ಅಂಡಭರ್ಜಿಯಾಕಾರ, ಚಪ್ಪಟೆ, ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಮೊನಚು ತುದಿ ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಎಲೆಗಳ ಬಣ್ಣ ಕೊರ್ಜ್F ಗ್ರೀನ್, ಬಲಿಯುತ್ತಿರುವ ಎಲೆಗಳ ಬಣ್ಣ ಲೈಮ್‌ಗ್ರೀನ್, ಇವು ಅನಂತರ ಅಬ್‌ಸಿಂನ್ತೆ ಗ್ರೀನ್ ಬಣ್ಣಕ್ಕೆ ತಿರುಗುತ್ತವೆ.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮ, ಶಂಕಾಕಾರ, ಲೈಟ್ ಜಾಸ್‌ಪರ್ ಬಣ್ಣ, ಸಾಧಾರಣ ಮೃದುತುಪ್ಪುಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುತ್ತವೆ.

ಹಣ್ಣು : ಗಾತ್ರದಲ್ಲಿ ಮಧ್ಯಮ, ಮೊಟ್ಟೆಯಾಕಾರದಿಂದ ದೀರ್ಘಚತುರಸ್ರ ಮೊಟ್ಟೆಯಾಕಾರ ; ಗುಂಡು ಬುಡ ; ಚಚ್ಚೌಕವಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ. ಸಮ ಭುಜಗಳು, ಒಂದೇ ಮಟ್ಟದಲ್ಲಿರುತ್ತವೆ, ಕೆಳಭುಜ ಮೇಲ್ಭುಜಕ್ಕಿಂತ ಸ್ವಲ್ಪ ಎತ್ತರ, ಕೆಳಭುಜ ಗುಂಡಾಗಿರುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ ; ನಿರ್ದಿಷ್ಟದಿಂದ ಸ್ವಲ್ಪ ಪ್ರಮುಖ ಕೊಕ್ಕು ; ಸ್ವಲ್ಪದಿಂದ ಹೆಚ್ಚು ಆಳವಿಲ್ಲದ ಹೊಕ್ಕಳು ; ವಿಶಾಲವಾದ ಬಿಂದುವಿನಿಂದ ಗುಂಡಾಗಿರುವ ತುದಿ ; ಮಧ್ಯಮ ದಪ್ಪದ ಸಿಪ್ಪೆ ನಯದಿಂದ ಒರಟು ಮೇಲ್ಭಾಗ, ಗೋಲ್ಡನ್ ಗ್ಲೋ ಬಣ್ಣ ಮತ್ತು ಭುಜಗಳ ಮೇಲೆ ಜಾಸ್‌ಪರ್ ರೆಡ್ ಕಾಂತಿ ; ಮಧ್ಯಮ ಗಾತ್ರದ ಚುಕ್ಕೆಗಳು ಹತ್ತಿರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿ ತಿರುಳು, ನಾರಿರುವುದಿಲ್ಲ, ಪ್ರಿಮ್ಯೂಲೈನ್ ಯೆಲ್ಲೊ ಬಣ್ಣ ; ಮಧುರವಾದ ವಾಸನೆ ; ಬಹಳ ಸಿಹಿಯಾದ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ ; ಇದರ ಮೇಲೆ ಎಲ್ಲಾ ಭಾಗದಲ್ಲಿ ಹೆಚ್ಚು ನಿಬಿಡವಾದ, ಕುಳ್ಳಾದ, ಮೃದು ನಾರು ; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ.

ಹಣ್ಣಿನ ದರ್ಜೆ : ಬಹಳ ಉತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ

ಘಸಲು ; ಕುಪ್ಪಳಿಸುವ ಕೀಟಗಳಿಗೆ ಸಾಧಾರಣ ನಿರೋಧಕಶಕ್ತಿ ; ಗಾಳಿಗೆ ಹೆಚ್ಚು ನಿರೋಧ ; ಮಧ್ಯಮ ಶೇಖರಣೆ ಗುಣ ; ಉತ್ತಮ ಸುಲಿಯುವ ಗುಣ.

ಜರದಲು

ಇದು ಪಶ್ಚಿಮ ಬಂಗಾಳದ ಸ್ಥಳೀಯ ತಳಿ. ಈ ತಳಿ ಉತ್ತಮ ಆಕಸ್ಮಿಕ ಸಸಿಯಾಗಿ ಉದ್ಭವಿಸಿದೆ ಎಂದು ಭಾವಿಸಲಾಗಿದೆ. ಮುರ್ಷಿದಾಬಾದಿನ ನವಾಬ ಇದರ ಕಸಿ ಸಸ್ಯಗಳನ್ನು ಆರಿಸಿ ಬೇಸಾಯ ಮಾಡಿದ. ಕೆಲವು ಕಸಿ ಸಸಿಗಳನ್ನು ನವಾಬನು ಬಿಹಾರದ ಖಾಡರ್‌ಪುರದ ಮಹಾರಾಜನಾದ ರಹಮತ್ ಆಲಿಖಾನ್ ಬಹದ್ದೂರ್‌ನಿಗೆ ಕೊಟ್ಟನು. ಈತನ ಹಣ್ಣಿನ ತೋಟದಿಂದ ಈ ತಳಿಯು ಬಿಹಾರ ರಾಜ್ಯದ ಇತರ ಭಾಗಗಳಿಗೆ ಮತ್ತು ಪಕ್ಕದ ರಾಜ್ಯವಾದ ಉತ್ತರ ಪ್ರದೇಶಕ್ಕೆ ಹರಡಿದೆ. ಮಾವು ಬೆಳೆಯುವ ಇತರ ಪ್ರದೇಶಗಳಲ್ಲಿ ಬೇಸಾಯ ಮಾಡಲು ಈ ತಳಿ ಯೋಗ್ಯವಾಗಿದೆ. ಇದರ ಹಣ್ಣು ಅತ್ಯುತ್ತಮವಾದ ಗುಣಗಳಿಂದ ಕೂಡಿದ್ದು ಅಧಿಕ ಇಳುವರಿ ಕೊಡುವುದರಿಂದ ಇದನ್ನು ಉಭಯೋದ್ದೇಶಿತ ತಳಿಯಾಗಿ ಬೇಸಾಯ ಮಾಡಲು ಯೋಗ್ಯವಾಗಿದೆ. ಈ ತಳಿಯ ಹಣ್ಣು ಆಕಾರ ಮತ್ತು ದರ್ಜೆಯಲ್ಲಿ ಭಾರತ ವಾಯುವ್ಯ ಪ್ರದೇಶಗಳು ಮತ್ತು ಪಾಕಿಸ್ತಾನದಲ್ಲಿ ಬೆಳೆಯುವ ಜರದಲು ಎಂಬ ಹಣ್ಣನ್ನು ಹೋಲುವುದರಿಂದ ಇದಕ್ಕೆ ಮೇಲ್ಕಂಡ ಹೆಸರು ಬಂದಿದೆ.

ಮರ : ಗಾತ್ರದಲ್ಲಿ ಮಧ್ಯಮ, ಸಾಧಾರಣ ಕಸುವಿನಿಂದ ಬೆಳೆದು ಹರಡುತ್ತದೆ, ಮಧ್ಯಮ ಉತ್ಪನ್ನದಿಂದ ಉತ್ಪನ್ನಕಾರಿ, ಪ್ರತಿವರ್ಷ ಫಲಕಾರಿ ; ಗುಂಡಾದ ಮೇಲ್ಭಾಗ ; ಮಧ್ಯಮ ದಪ್ಪದಿಂದ ಸಣ್ಣ ಬುಡ ; ಮಧ್ಯಮ ಗಾತ್ರದ ರೆಂಬೆಗಳು.

ಎಲೆಗಳು : ಗಾತ್ರದಲ್ಲಿ ಮಧ್ಯಮ, ಹರಡಿರುತ್ತವೆ, ಸುಕ್ಕು ಪ್ರವೃತ್ತಿ ; ನಯ ಅಂಚುಗಳು ; ಸಾಧಾರಣ ಪ್ರಮುಖ ನಾಳರಚನೆ ; ಸ್ವಲ್ಪ ಲಂಬಾಗ್ರ ತುದಿ; ಮೊನಚು ಬುಡ ; ಹೊಸದಾಗಿ ಹೊರಬರುತ್ತಿರುವ ಮತ್ತು ಬಲಿಯುತ್ತಿರುವ ಎಲೆಗಳ ಬಣ್ಣ ಡೀಪ್ ಕ್ರೈಸೊಲೈಟ್ ಗ್ರೀನ್.

ಪುಷ್ಪವಿನ್ಯಾಸ : ಗಾತ್ರದಲ್ಲಿ ಮಧ್ಯಮದಿಂದ ದೊಡ್ಡದು, ಶಂಕಾಕಾರ, ಏಪ್ರಿಕಾಟ್ ಬಫ್ ಬಣ್ಣ, ಸಾಧಾರಣ ಮೃದುತುಪ್ಪಳು ; ಅಸಮ ಕೇಸರಗಳು, ಅಂಡಾಶಯಕ್ಕಿಂತ ಚಿಕ್ಕವು, ಅದಕ್ಕೆ ಓರೆಯಾಗಿರುತ್ತವೆ ; ಬಂಜೆಕೇಸರಗಳು ಚೆನ್ನಾಗಿ ಅಭಿವೃದ್ಧಿಯಾಗಿರುವುದಿಲ್ಲ.

ಹಣ್ಣು : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರದಿಂದ ಓರೆ ದೀರ್ಘ

ಚತುರಸ್ರ ; ಚಪ್ಪಟೆ; ಗುಂಡು ಬುಡ ; ಓರೆಯಾಗಿ ಸೇರಿದ ತೊಟ್ಟು ; ಕುಳಿ ಇರುವುದಿಲ್ಲ ಅಥವಾ ಸ್ವಲ್ಪ ; ಅಸಮ ಭುಜಗಳು, ಕೆಳಭುಜ ಮೇಲ್ಭುಜಕ್ಕಿಂತ ಎತ್ತರ ಮತ್ತು ಅಗಲ, ಕೆಳಭುಜ ಎತ್ತರವಾಗಿ ಅನಂತರ ಅಗಲವಾಗುತ್ತದೆ, ಮೇಲ್ಭುಜ ಉದ್ದವಾದ ಡೊಂಕಿನಲ್ಲಿ ಮುಗಿಯುತ್ತದೆ : ನಿರ್ದಿಷ್ಟದಿಂದ ಪ್ರಮುಖ ಕೊಕ್ಕು · ಸ್ವಲ್ಪ ಹೊಕ್ಕಳು ; ವಿಶಾಲ ಬಿಂದುವಿನಲ್ಲಿರುವ ತುದಿ ; ತೆಳುಸಿಪ್ಪೆ, ನಯದಿಂದ ಒರಟು ಪ್ರವೃತ್ತಿಯ ಮೇಲ್ಭಾಗ, ಗೋಲ್ಡನ್‌ಗ್ಲೊ ಬಣ್ಣ ; ಸಣ್ಣ ಗಾತ್ರದ ಚುಕ್ಕೆಗಳು, ಸಾಧಾರಣ ದೂರದಲ್ಲಿರುತ್ತವೆ, ಮೇಲ್ಭಾಗದಿಂದ ಹೊರಬಂದಿರುತ್ತವೆ ; ಗಟ್ಟಿಯಿಂದ ಮೆದು ತಿರುಳು, ಹೆಚ್ಚು ಪರಿಮಾಣದ ನಾರು, ಸಿಪ್ಪೆಗೆ ಸಮೀಪ, ಕಾಪುಸ್ಸೈನ್ ಯೆಲ್ಲೊ ಬಣ್ಣ ; ಹಿತಕರದಿಂದ ಆಹ್ಲಾದಕರ ವಾಸನೆ ; ಸಿಹಿ ರುಚಿ ; ಸಾಧಾರಣ ಹೆಚ್ಚು ಪರಿಮಾಣದ ರಸ.

ಓಟೆ : ಗಾತ್ರದಲ್ಲಿ ಮಧ್ಯಮ, ದೀರ್ಘಚತುರಸ್ರ, ಇದರ ಮೇಲೆ ಎಲ್ಲಾ ಭಾಗದಲ್ಲಿ ನಿಬಿಡವಾದ, ಕುಳ್ಳಾದ, ಮೃದು ನಾರು; ಕವಲೊಡೆದ ನಾಳಗಳು, ಸ್ವಲ್ಪ ತಗ್ಗಾಗಿರುತ್ತವೆ

ಹಣ್ಣಿನ ದರ್ಜೆ : ಹೆಚ್ಚು ಉತ್ತಮ ದರ್ಜೆ ; ಶೀಘ್ರದಿಂದ ಮಧ್ಯಕಾಲಿಕ ಮಧ್ಯಮದಿಂದ, ಅಧಿಕ ಫಸಲು ; ಗಾಳಿ ಮತ್ತು ಕುಪ್ಪಳಿಸುವ ಕೀಟಗಳಿಗೆ ಸಾಧಾರಣ, ನಿರೋಧಕತೆ; ಮಧ್ಯಮ ಸುಲಿಯುವ ಮತ್ತು ಶೇಖರಣೆ ಗುಣ.

ಭಾಗ - 2

ಮಾವಿನ ಬೇಸಾಯ

ಅಧ್ಯಾಯ 1

ಬೇಸಾಯ

ಭಾರತದ ಎಲ್ಲಾ ಭಾಗಗಳಲ್ಲಿ ಮಾವಿನ ಬೇಸಾಯ ಇದೆ ಮತ್ತು ನಮ್ಮ ದೇಶದಲ್ಲಿ ಬೆಳೆಯುವ ಎಲ್ಲ ವಾಣಿಜ್ಯ ಹಣ್ಣುಗಳಿಗಿಂತ ಇದು ಮುಖ್ಯವಾದದ್ದು. ಮಾವಿನ ಬೇಸಾಯವು ಹಿಮ ಬೀಳುವ ಹಿಮಾಲಯ ತಪ್ಪಲು ಪ್ರದೇಶಗಳು ಮತ್ತು ಸಮುದ್ರ ತೀರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿದೆ. ಉತ್ತರ ಪ್ರದೇಶದಲ್ಲಿ 5,38,383 ಎಕರೆಗಳಲ್ಲಿ ಮಾವಿನ ಬೇಸಾಯವಿದ್ದು, ಭಾರತದಲ್ಲಿ ಅತ್ಯಂತ ಹೆಚ್ಚು ಮಾವಿನಹಣ್ಣನ್ನು ಉತ್ಪಾದಿಸುವ ರಾಜ್ಯವಾಗಿದೆ. ಉತ್ತರ ಪ್ರದೇಶದಲ್ಲಿ ಬೇಸಾಯದಲ್ಲಿರುವ ಒಟ್ಟು ಹಣ್ಣಿನ ಬೇಸಾಯ ಪ್ರದೇಶದಲ್ಲಿ ಮಾವು ಸುಮಾರು ಶೇಕಡಾ 90ರಷ್ಟು ಪಾಲುಗೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಬಿಹಾರ ರಾಜ್ಯವು ದ್ವಿತೀಯ ಸ್ಥಾನವನ್ನು ಮತ್ತು ಪಶ್ಚಿಮ ಬಂಗಾಳವು ಮೂರನೆಯ ಸ್ಥಾನವನ್ನು ಗಳಿಸುತ್ತದೆ. ಮಾವಿನ ಬೇಸಾಯಕ್ಕೆ ಮುಖ್ಯವಾದ ಇನ್ನಿತರ ಪ್ರದೇಶಗಳೆಂದರೆ, ಆಂಧ್ರ, ಗುಜರಾತ್, ಕೊಂಕಣ, ಮಲಬಾರ್ ಮತ್ತು ತಿರುವಾಂಕೂರು, ಕೊಚ್ಚಿನ್‌ಗಳಿರುವ ಪಶ್ಚಿಮ ಸಮುದ್ರತೀರ ಪ್ರದೇಶಗಳಾಗಿವೆ.

ಈ ಕೆಳಕಂಡ ಪಟ್ಟಿಯು 1955ರಲ್ಲಿ ವಿವಿಧ ರಾಜ್ಯಗಳಲ್ಲಿರುವ ಮಾವಿನ ಬೇಸಾಯದ ಎಕರೆಗಳನ್ನು ತಿಳಿಸುತ್ತದೆ :

ರಾಜ್ಯ	ಎಕರೆಗಳು
ಆಂಧ್ರ	1,60,917
ಅಸ್ಸಾಂ	—
ಬಿಹಾರ್	2,17,517
ಬೊಂಬಾಯಿ	31,889
ಮಧ್ಯಪ್ರದೇಶ	44,397
ಮದರಾಸು (ತಮಿಳುನಾಡು)	1,00,459
ಒರಿಸ್ಸಾ	78,000
ಪಂಜಾಬ್ (ಐ)	18,662
ಉತ್ತರ ಪ್ರದೇಶ	5,38,383
ಪಶ್ಚಿಮ ಬಂಗಾಳ	1,80,866
ಹೈದ್ರಾಬಾದ್	20,474
ಮಧ್ಯಭಾರತ	5,000

ರಾಜ್ಯ	ಎಕರೆಗಳು
ಮೈಸೂರು	26,105
ಪೆಪ್ಸು	3,441
ಸೌರಾಷ್ಟ್ರ	1,200
ತಿರುವಾಂಕೂರ–ಕೊಚ್ಚಿನ್	23,031
ಭೂಪಾಲ್	3,206
ಕೊಡಗು	62
ಹಿಮಾಚಲ ಪ್ರದೇಶ	122
ಕಚ್	3,500
ವಿಂಧ್ಯಪ್ರದೇಶ	2,031
ಜಮ್ಮು ಮತ್ತು ಕಾಶ್ಮೀರ	132
ಭಾರತ ದೇಶದಲ್ಲಿ ಒಟ್ಟು	14,59,394 ಎಕರೆ


ಈ ಮಾವಿನ ಬೆಳೆಯ ವಿಸ್ತೀರ್ಣವನ್ನು ಹೆಚ್ಚಿಸುವುದಕ್ಕೆ ಹೆಚ್ಚು ಅವಕಾಶವಿದೆ.

ಭಾರತ ದೇಶದಲ್ಲಿ ಮಾವಿನ ಬೇಸಾಯ ಪುರಾತನ ಕಾಲದಿಂದ ಇದ್ದರೂ ಸಹ ಇದರ ಯೋಗ್ಯ ಬೇಸಾಯಕ್ಕೆ ಅಷ್ಟಾಗಿ ಗಮನ ಕೊಟ್ಟಿಲ್ಲ. ಈ ಬೆಳೆ ಹೊಲದ ಬೆಳೆಗಳಂತಲ್ಲದೆ ಒಮ್ಮೆ ನೆಟ್ಟ ಬಳಿಕ ಅವುಗಳ ಬಗ್ಗೆ ಯಾವುದೇ ಕಾಳಜಿ ವಹಿಸುವ ಅವಶ್ಯಕತೆ ಇಲ್ಲ, ಹಾಗೂ ಯಾವುದೇ ಬಗೆಯ ಮಣ್ಣು ಇದಕ್ಕೆ ಸೂಕ್ತ ಎಂಬ ಮಿಥ್ಯಾವಾದಕ್ಕೆ ಗುರಿಯಾಗಿದೆ. ಹಳೆಯ ಮಾವಿನ ತೋಟಗಳಿಗೆ ಗೊಬ್ಬರ ಮತ್ತು ನೀರಾವರಿಯ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ಮಾಡಿರುವುದು ಸಾಮಾನ್ಯ. ಇಂತಹ ತೋಟಗಳಲ್ಲಿ ಮಾವಿನ ಮರಗಳು ಏಳಿಗೆ ಹೊಂದದಿದ್ದರೂ, ಬಿದ್ದುಹೋಗದೆ, ಎಲ್ಲ ತೆಗಳಿಕೆಯ ಸಹನೆಗೆ ಸಾಕ್ಷಿಯಾಗಿವೆ. ಧಾರಾಳ ಗೊಬ್ಬರ ವಿನಿಯೋಗ ಮತ್ತು ನೀರಾವರಿಗಳಿಂದ ಇವುಗಳನ್ನು ಪುನರುಜ್ಜೀವನಗೊಳಿಸಬಹುದು.

ಮಾವಿನ ಬೇಸಾಯದಲ್ಲಿ ಕೆಲವು ಸಮಸ್ಯೆಗಳಿವೆ. ಹಣ್ಣಿನ ತೋಟವನ್ನು ಪ್ರಾರಂಭಿಸುವುದು ಬಹಳ ಶ್ರಮದಾಯಕ ಕೆಲಸ. ನಾಟಿಮಾಡಿದ ಸಸಿಗಳಲ್ಲಿ ಅನೇಕ ಸಸ್ಯಗಳು ಸತ್ತು ಹೋಗುತ್ತವೆ ಮತ್ತು ನಾಟಿಮಾಡಿದ ಮರಗಳು ಫಸಲಿಗೆ ಬರಲು ಹೆಚ್ಚು ಕಾಲ ತೆಗೆದುಕೊಳ್ಳುತ್ತವೆ. ಫಸಲು ಕೊಡುವ ಕಾಲ ದೀರ್ಘ ವಾಗಿರುತ್ತದೆ. ಮರಗಳು ಒಮ್ಮೆ ನೆಲೆಗೊಂಡ ಮೇಲೆ ಲಾಭದಾಯಕವಾಗುತ್ತವೆ.

ಮಾವಿನ ವಾಣಿಜ್ಯ ಬೇಸಾಯದಲ್ಲಿ ಸೂಕ್ತವಾದ ತಳಿಗಳ ಆಯ್ಕೆಯ ಅವಶ್ಯ ಕತೆಯನ್ನು ಹೆಚ್ಚು ಒತ್ತಾಯವಾಗಿ ಹೇಳಬೇಕಾದುದಿಲ್ಲ. ಮಾವಿನ ಸಸಿ ನೆಟ್ಟ

ನಂತರ ಫಸಲು ದೊರೆಯಲು ಬಹಳ ವರ್ಷಗಳು ಹಿಡಿಯುವುದರಿಂದ ಕೀಳು ದರ್ಜೆಯ ಆಯ್ಕೆಯ ಫಲಿತಾಂಶ, ಹಣ ಖರ್ಚುಮಾಡಿದ ಬಹಳ ದಿನಗಳನಂತರ ಗಮನಕ್ಕೆ



ಚಿತ್ರ 14 : ಭಾರತದಲ್ಲಿ ಹಿಮ ಬೀಳುವ ಪ್ರದೇಶಗಳು

ಬರುತ್ತದೆ. ಇದು ನಂಬಲರ್ಹವಾದ ಮೂಲಗಳಿಂದ ಮಾತ್ರ ಸಸಿಗಳನ್ನು ಕೊಳ್ಳಬೇಕು ಎಂಬ ವಿಚಾರವನ್ನು ಒತ್ತಿಹೇಳುತ್ತದೆ. ಆಯ್ಕೆಮಾಡಿದ ತಳಿ ಬೇಸಾಯ ಮಾಡುವ ಪ್ರದೇಶಕ್ಕೆ ಹೊಂದಿಕೊಳ್ಳುವಂತಿರಬೇಕು ಮತ್ತು ಉತ್ಪಾದನೆಯಾಗುವ

ಫಸಲಿಗೆ ಉತ್ತಮ ಮಾರುಕಟ್ಟೆಯಿರಬೇಕು. ಹೆಚ್ಚು ಪರಿಚಿತವಾದ ಕಡಮೆ ಸಂಖ್ಯೆಯ ತಳಿಗಳನ್ನು ಬೇಸಾಯಮಾಡುವುದು ಒಳ್ಳೆಯದು. ಅಂಥ ತಳಿಗಳಿಗೆ ಅಧಿಕ ಫಸಲು ಕೊಡುವ ಸಾಮರ್ಥ್ಯವಿರಬೇಕು. ಅವು ಸಾಧ್ಯವಾದಷ್ಟುಮಟ್ಟಿಗೆ ಪರ್ಯಾಯ ಫಲ ಪ್ರವೃತ್ತಿಯಿಂದ ದೂರವಿರಬೇಕು ಮತ್ತು ಹಣ್ಣು ಉತ್ತಮ ಗುಣಮಟ್ಟದ್ದಿದ್ದು ಉತ್ತಮ ಶೇಖರಣೆ ಗುಣದಿಂದಲೂ ಕೂಡಿದಂಥದ್ದಾಗಿರಬೇಕು. ಕೆಲವು ತಳಿಗಳು ಶೀಘ್ರಕಾಲಿಕ, ಕೆಲವು ಮಧ್ಯಕಾಲಿಕ, ಹಾಗೆಯೇ ಕೆಲವು ತಳಿಗಳು ನಿಧಾನಕಾಲಿಕ ಫಸಲು ಕೊಡುತ್ತವೆ, ಇದರಿಂದ ಒಂದೇ ಸಮನೆ ಫಸಲು ಸಿಗುವುದು ಸಾಧ್ಯವಾಗುತ್ತದೆ. ಪಾಶ್ಚಾತ್ಯ ಮಾರುಕಟ್ಟೆಗಳಿಗೆ ರವಾನಿಸುವ ಉದ್ದೇಶದಿಂದ ಮಾವಿನ ಬೇಸಾಯ ಮಾಡುವಾಗ ಈ ಅಂಶವನ್ನು ಪರಿಶೀಲಿಸುವುದು ಇನ್ನಷ್ಟು ಗಮನಾರ್ಹ ಸಂಗತಿಯಾಗಿರುತ್ತದೆ.

ಹವಾಗುಣ

ಮಾವು ಉಷ್ಣ ಮತ್ತು ಸಮಶೀತೋಷ್ಣವಲಯಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಇದು ಸರಾಸರಿ ಉಷ್ಣತೆ ಸುಮಾರು 80ಡಿಗ್ರಿ ಫ್ಯಾರನ್‌ಹೀಟ್‌ನಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ ಮತ್ತು ಹಿಮ ಬೀಳುವುದನ್ನು ಅದರಲ್ಲೂ ಎಳೆ ಸಸ್ಯಗಳು ಸಹಿಸುವುದಿಲ್ಲ. ಉತ್ತಮ ತಳಿಗಳು ಚೆನ್ನಾಗಿ ಮಳೆಯಾಗುವ (ವಾರ್ಷಿಕವಾಗಿ ಮಳೆ 30 ರಿಂದ 150 ಅಂಗುಲ) ಪ್ರದೇಶಗಳಲ್ಲಿ ಉಷ್ಣವಿರುವ ಒಣ ವಾತಾವರಣದಲ್ಲಿ ಬೆಳೆಯುತ್ತವೆ. ಮಳೆಯ ಹಂಚಿಕೆಯು ಅದರ ಪ್ರಮಾಣಕ್ಕಿಂತ ಬಹಳ ಮುಖ್ಯವಾದದ್ದು. ಹೂ ಬಿಡುವ ಕಾಲದಲ್ಲಿ ಮೋಡ ಕವಿದ ಮತ್ತು ಮಳೆ ಬೀಳುವ ವಾತಾವರಣವಿರಬಾರದು. ಇದರಿಂದ ನೊಣ ಮತ್ತು ದುಂಬಿ ಮುಂತಾದ ಕೀಟಗಳಿಂದ ಪರಾಗ ವಿತರಣೆಗೆ ಅಡ್ಡಿಯುಂಟಾಗುತ್ತದೆ. ಆದ್ದರಿಂದ ಇಂತಹ ಹವಾಗುಣ ಅಪೇಕ್ಷಣೀಯವಲ್ಲ. ಹೂ ಬಿಡುವ ಕಾಲದಲ್ಲಿ ಮಳೆ ಬೀಳುವುದರಿಂದ ಪರಾಗ ವಿತರಣೆಗೆ ಮುಖ್ಯ ಮೂಲವಾದ ಕೀಟಗಳ ಚಟುವಟಿಕೆ ಕುಂದುತ್ತದೆ, ಬಿರುಸಾಗಿ ಬೀಳುವ ಮಳೆಯ ಹನಿಯು ಹೂವಿನ ಶಲಾಕಾಗ್ರವನ್ನು ಗಾಯಗೊಳಿಸುತ್ತದೆಯಲ್ಲದೆ ಬೂಷ್ಟು ಮುಂತಾದ ರೋಗಗಳನ್ನು ಹರಡುತ್ತದೆ. ಈ ಸಮಸ್ಯೆಯು ಬೊಂಬಾಯಿಯ (ಕೀಮ ಮತ್ತು ಇತರರು, 1954) ಪೂರ್ವ ಜಿಲ್ಲೆಗಳಲ್ಲಿ ತೀವ್ರವಾಗಿದೆ. ಹೂ ಬಿಡುವುದಕ್ಕೆ ಮೊದಲಿನ ಒಣ ಹವಾಗುಣ ಹೆಚ್ಚು ಹೂ ಬಿಡುವುದಕ್ಕೆ ಪ್ರೋತ್ಸಾಹಕಾರಿ. ಹಣ್ಣಾಗುವ ಕಾಲದಲ್ಲಿ ಗಾಳಿ ಮತ್ತು ಬಿರುಗಾಳಿ ತುಂಬ ಹಾನಿಯನ್ನುಂಟು ಮಾಡಿ ಹಣ್ಣುಗಳನ್ನು ಬಹುವಾಗಿ ಉದುರಿಸುತ್ತದೆ. ಹಣ್ಣಾಗುವ ಸಮಯದಲ್ಲಿ ಹೆಚ್ಚು ಮಳೆ ಗಣನೀಯ ತೊಂದರೆಯನ್ನುಂಟುಮಾಡುತ್ತದೆ ಮತ್ತು ಪಶ್ಚಿಮ ಘಟ್ಟಗಳಲ್ಲಿನ ನಿಧಾನಕಾಲಿಕ ಫಸಲನ್ನು ಸಂಪೂರ್ಣವಾಗಿ ನಾಶಮಾಡುತ್ತದೆ.

ಹವಾಗುಣವು ಮಾವಿನ ಹಣ್ಣಿನ ದರ್ಜೆಯ ಮೇಲೆ ಗಣನೀಯ ಪರಿಣಾಮವನ್ನುಂಟುಮಾಡಬಲ್ಲದು. ಇದರಿಂದಾಗಿ ಒಂದು ಪ್ರದೇಶಕ್ಕೆ ಹೊಂದಿಕೊಳ್ಳುವ ತಳಿ ಇನ್ನೊಂದು ಪ್ರದೇಶಕ್ಕೆ ಹೊಂದಿಕೊಳ್ಳುವುದಿಲ್ಲ.

ಮಣ್ಣು

ಮಾವಿನ ಬೇಸಾಯಕ್ಕೆ ಇಂಥ ಮಣ್ಣೇ ಬೇಕು ಎಂಬ ನಿಗದಿಯೇನೂ ಇಲ್ಲ. ಮಣ್ಣು ಉತ್ತಮ ಬಸಿಯುವ ಗುಣದಿಂದ ಕೂಡಿದ್ದು ಆಳವಾಗಿದ್ದರೆ ಸಾಕು. ಇದಕ್ಕಿಂತ ಹೆಚ್ಚಾಗಿ ತಳದ ಮಣ್ಣು ಫಲವತ್ತಾಗಿದ್ದು ಮೇಲ್ಭಾಗದ ಮಣ್ಣು ಹೆಚ್ಚು ಸಾರಹೀನವಾಗಿದ್ದರೂ ಅಡ್ಡಿಯಿಲ್ಲ. ಮಣ್ಣಿನಲ್ಲಿ ಹೆಚ್ಚು ಶೇಕಡಾಂಶ ಹ್ಯೂಮಸ್ ಇರುವುದು ಅಪೇಕ್ಷಣೀಯ. ವಿಶೇಷವಾಗಿ ಉತ್ತಮ ದರ್ಜೆಯ ಮಾವಿನ ಹಣ್ಣಿಗೆ ಇದು ಅಗತ್ಯ. ಗಂಗಾನದಿಯ ದಡದಲ್ಲಿರುವ ಸಾಗಾಣಿಕೆಯ ಗೋಡುಯುತ ಮೆಕ್ಕಲು ಮಣ್ಣು ಮಾವಿನ ಬೇಸಾಯಕ್ಕೆ ಉತ್ಕೃಷ್ಟವಾದದ್ದು. ಹೆಮಾಟೈಟಿಕ್ ಕ್ವಾರ್ಟ್ಸೈಟ್‌ನಿಂದ ಉದ್ಭವಿಸಿರುವ ಧಾರವಾಡದ ಕೆಂಪು ಮಣ್ಣುಗಳು, ಬೆಳಗಾವ್, ರತ್ನಗಿರಿ ಹಾಗೂ ಗೋವದಲ್ಲಿರುವ ಕೆಂಪು ಜಂಬಿಟ್ಟಿಗೆ ಮಣ್ಣು ಮಾವಿನ ಬೇಸಾಯಕ್ಕೆ ಬಹಳ ಸೂಕ್ತವಾದವು ಎಂದು ಬರ್ನ್ಸ್ ಮತ್ತು ಪ್ರಯಾಗ್ (1920) ಅಭಿಪ್ರಾಯಪಡುತ್ತಾರೆ. ಅತಿ ಹೆಚ್ಚು ಮಳೆಯಾಗುವ ಪ್ರದೇಶದಲ್ಲಿರುವ ಹತ್ತಿ ಬೆಳೆಯುವ ಕಪ್ಪು ಮಣ್ಣುಗಳಲ್ಲಿ ನೀರು ಬಸಿದು ಹೋಗದಿರುವುದರಿಂದ ಇಂತಹ ಮಣ್ಣುಗಳು ಮಾವಿನ ಬೇಸಾಯಕ್ಕೆ ಸೂಕ್ತವಲ್ಲ. ವಿಪರೀತ ಮರಳಿನ ಅಂಶವಿರುವ ಮಣ್ಣುಗಳು, ಹೆಚ್ಚು ಆಳವಿಲ್ಲದ ಬಂಡೆ ಮಣ್ಣುಗಳು, ಜೌಗು ಮಣ್ಣುಗಳು, ಕ್ಷಾರ ಮತ್ತು ಸುಣ್ಣ ಮಣ್ಣುಗಳು ಸಹ ಮಾವಿನ ಬೇಸಾಯಕ್ಕೆ ಸೂಕ್ತವಲ್ಲ.

ವೃದ್ಧಿ

ಪುರಾತನ ಕಾಲದಿಂದಲೂ ಮಾವಿನ ಸಸ್ಯವನ್ನು ಓಟೆಯಿಂದ ವೃದ್ಧಿ ಮಾಡುತ್ತಿದ್ದರು. ಈಗ ಬೇಸಾಯದಲ್ಲಿರುವ ಅನೇಕ ತಳಿಗಳು ಬೀಜದ ವೃದ್ಧಿಯಿಂದ ಉದ್ಭವಿಸಿವೆ. ಇದು ಸ್ವಾಭಾವಿಕ ರೀತಿಯ ವೃದ್ಧಿ ಪದ್ಧತಿ. ಆದರೆ ಈ ವಿಧಾನದಿಂದ ತಳಿಯ ಗುಣಗಳನ್ನು ಮುಂದುವರಿಸಲು ಸಾಧ್ಯವಿಲ್ಲ, ಈ ಸಸ್ಯಕ್ಕೆ ಅನ್ಯ ಪರಾಗದಿಂದ ಗರ್ಭಧಾರಣೆಯಾಗುವುದರಿಂದ, ತಳಿ ಗುಣಗಳನ್ನು ಮುಂದುವರಿಸಲು ನಿರ್ಲಿಂಗ ಸಂತಾನಾಭಿವೃದ್ಧಿಯನ್ನು ಕೈಗೊಳ್ಳಬೇಕಾಗುತ್ತದೆ. ಫಿಲಿಪ್ಪೈನ್ಸ್ ಮತ್ತು ಕ್ಯೂಬಾದಂಥ ದೇಶಗಳಲ್ಲಿ ಬೇಸಾಯದಲ್ಲಿರುವ ತಳಿಗಳು ಬಹು ಭ್ರೂಣದವು. ಈ ತಳಿಗಳಲ್ಲಿ ಓಟೆಯಿಂದ ಬಂದ ಸಸಿಗಳು ತಾಯಿ ಸಸ್ಯವನ್ನು ಹೋಲುತ್ತವೆ. ಭಾರತ ದೇಶದಲ್ಲಿ ಬೇಸಾಯದಲ್ಲಿರುವ ಬಹುತೇಕ ಎಲ್ಲ ವಾಣಿಜ್ಯ ತಳಿಗಳೂ ಏಕಭ್ರೂಣದವು. ಭಾರತ ದೇಶದ ಪಶ್ಚಿಮ ಸಮುದ್ರ ತೀರದಲ್ಲಿ ಸುಮಾರು 10

ಬಹುಭ್ರೂಣ ತಳಿಗಳು ಗಮನಕ್ಕೆ ಬಂದಿವೆ, ಆದರೆ ಅವು ಅಷ್ಟೇನೂ ಪ್ರಾಮುಖ್ಯತೆಯನ್ನು ಪಡೆದಿಲ್ಲ. ಕಮಾನು ಕಸಿ ಮಾಡುವುದು ಮಾವಿನ ಸಸ್ಯವನ್ನು ನಿರ್ಲಿಂಗ ರೀತಿಯಿಂದ ವೃದ್ಧಿ ಮಾಡುವ ಪದ್ಧತಿಯಾಗಿದೆ. ಇತ್ತೀಚೆಗೆ ಪ್ರಯೋಗದಿಂದ ಕಣ್ಣು ಹಾಕುವುದು, ಕಸಿ ಮಾಡುವುದು (ಗ್ರ್ಯಾಫ್ಟಿಂಗ್) ಮತ್ತು ಗೂಟೀ (ಮಾರ್‌ಕೊಟಿಂಗ್) ಮುಂತಾದ ಇತರ ವಿಧಾನಗಳು ಯಶಸ್ವಿಯಾಗಿರುವುದು ಕಂಡು ಬಂದಿದೆ.

ಸಸಿಗಳನ್ನು ಬೆಳೆಸುವುದು

ಆರೋಗ್ಯವಾದ ಕಸುವಿನ ಬೇರು ಸಸಿಗಳನ್ನು ಬೆಳೆಸುವುದಕ್ಕೆ, ದಷ್ಟಪುಷ್ಟವಾದ ಹೆಚ್ಚು ಇಳುವರಿ ಕೊಡುವ ಮರಗಳಲ್ಲಿ ಚೆನ್ನಾಗಿಬಲಿತ ಓಟೆಗಳನ್ನು ಆರಿಸಿಕೊಳ್ಳಬೇಕು. ಮಾವನ್ನು ಕೊಯ್ಲುಮಾಡಿದನಂತರ ಓಟೆಗಳು ಕೇವಲ ಕೆಲವು ದಿವಸಗಳು ಮಾತ್ರ ಜೀವಂತವಾಗಿರುತ್ತವೆ ಎಂಬುದು ಅನುಭವದಿಂದ ಕಂಡುಬಂದಿದೆ. ಆದ್ದರಿಂದ, ಓಟೆಗಳನ್ನು ಹಣ್ಣಿನಿಂದ ತೆಗೆದನಂತರ ಹೆಚ್ಚು ವಿಳಂಬ ಮಾಡದೆ ನಾಟಿ ಮಾಡಬೇಕು. ಹಣ್ಣು ಕೊಯ್ಲುಮಾಡಿದ ಎರಡು ತಿಂಗಳ ನಂತರ, ಓಟೆಗಳು ಮೊಳೆಯುವ ಶೇಕಡಾಂಶವು 80 ರಿಂದ 12 ರವರೆಗೆ ಇರುತ್ತದೆಂದು ಜೋಷಿ (1952) ವರದಿ ಮಾಡಿದ್ದಾರೆ ಮರದಲ್ಲಿ ಹಣ್ಣಾಗಿರುವ ಹಣ್ಣುಗಳ ಓಟೆಗಳನ್ನು ತೆಗೆದುಕೊಳ್ಳುವುದು ಉತ್ತಮ. ಸುರಟಿಕೊಂಡಿರುವ ಮತ್ತು ಬಲಿಯದಿರುವ ಓಟೆಗಳನ್ನು ನಾಟಿಮಾಡಬಾರದು. ಓಟೆಗಳನ್ನು ನಾಟಿಮಾಡುವ ಮೊದಲು ಅವುಗಳ ಮೇಲಿರುವ ತಿರುಳನ್ನು ಪೂರ್ಣವಾಗಿ ತೆಗೆದುಹಾಕಿ ನಾಟಿಮಾಡಬೇಕು.

ಓಟೆಗಳನ್ನು ನಾಟಿಮಾಡುವುದಕ್ಕೆ ಅತ್ಯುತ್ತಮವಾದ ಕಾಲವೆಂದರೆ ಮಳೆ ಪ್ರಾರಂಭವಾದ ಮೇಲೆ ಅಥವಾ ಪ್ರಾರಂಭವಾದ ಸ್ವಲ್ಪ ದಿವಸಗಳ ನಂತರ. ಓಟೆಗಳನ್ನು ನಾಟಿಮಾಡಲು, ದಕ್ಷಿಣ ಭಾರತದಲ್ಲಿ ಜೂನ್ ತಿಂಗಳು ಮತ್ತು ಉತ್ತರ ಭಾರತದಲ್ಲಿ ಜುಲೈ ತಿಂಗಳ ಪ್ರಾರಂಭ ಕಾಲ ಶ್ರೇಷ್ಠವಾದದ್ದು. ಓಟೆಗಳನ್ನು ಕುಂಡಗಳಲ್ಲಿ ಅಥವಾ ಮಡಿಗಳಲ್ಲಿ ನಾಟಿಮಾಡಬಹುದು. ಒಂದು ಕುಂಡದಲ್ಲಿ ಎರಡು ಅಥವಾ ಮೂರು ಓಟೆಗಳನ್ನು ಒಂದು ಅಂಗುಲ ಆಳವಾಗಿ ನಾಟಿಮಾಡಬೇಕು. ಪಾತಿಯಲ್ಲಿ ನಾಟಿ ಮಾಡುವಾಗ, ಪಾತಿಗಳನ್ನು ಚೆನ್ನಾಗಿ ಹದಮಾಡಿ, ಗೊಬ್ಬರ ಹಾಕಬೇಕು. ಓಟೆಗಳಲ್ಲಿ ಮೂಲಕಾಂಡ ಮೇಲಕ್ಕೆ ಇರುವಂತೆ ನಾಟಿ ಮಾಡಿದರೆ, ನೇರವಾದ ಕಾಂಡ ಮತ್ತು ತಾಯಿ ಬೇರು ಬೆಳೆಯುತ್ತದೆ. ಓಟೆಗಳ ಮೇಲ್ಭಾಗವನ್ನು ಕೆಳಗೆ ಮಾಡಿ ನಾಟಿ ಮಾಡಬೇಕು, ಅಂದರೆ ಸೇರಿಕೆ (ಸುಚರ್) ಮೇಲ್ಭಾಗಕ್ಕೆ ಇರಬೇಕು. ಓಟೆಗಳನ್ನು ಚಪ್ಪಟೆಯಾಗಿರಿಸಿ ನಾಟಿ ಮಾಡುವ ಸಾಮಾನ್ಯ ಪದ್ಧತಿ ಯೋಗ್ಯವಲ್ಲ. ಸಸಿಗಳನ್ನು ಬೆಳೆಸುವ ನರ್ಸರಿಗೆ ಚೆನ್ನಾಗಿ ಬಸಿದುಹೋಗುವ ಮಣ್ಣು ಯೋಗ್ಯ.

ಓಟಿಗಳನ್ನು ನಾಟಿಮಾಡಿದನಂತರ ಧಾರಾಳವಾಗಿ ನೀರು ಕೊಡಬೇಕು. ನಾಟಿಮಾಡಿದ ಒಂದು ತಿಂಗಳನಂತರ ಓಟಿಗಳು ಮೊಳೆಯುತ್ತವೆ. ಭಾರತ ದೇಶದಲ್ಲಿ ಬೇಸಾಯ ಮಾಡುವ ಅನೇಕ ತಳಿಗಳು ಏಕಭ್ರೂಣವಾಗಿರುವುದರಿಂದ, ಒಂದು ಓಟಿಯಲ್ಲಿ ಒಂದೇ ಮೊಳಕೆ ಬರುತ್ತದೆ. ಕೆಲವು ಸಾರಿ ಒಂದು ಓಟಿಯಿಂದ, ಒಂದಕ್ಕಿಂತ ಹೆಚ್ಚು ರೆಂಬೆ ಬರುತ್ತವೆ. ಇಂತಹ ಸಂದರ್ಭಗಳಲ್ಲಿ ಮಣ್ಣಿನ ತಳಭಾಗದಿಂದ ರೆಂಬೆ ಪ್ರಾರಂಭವಾಗಿರುತ್ತವೆ. ಕೃಶವಾಗಿರುವ ಎಲ್ಲಾ ರೆಂಬೆ (ಮೊಸು)ಗಳನ್ನು ತೆಗೆದುಹಾಕಬೇಕು ಮತ್ತು ಕೃಶವಾಗಿರುವ ಸಸಿಗಳನ್ನು ತ್ಯಜಿಸಬೇಕು. ಒಂದೇ ರೆಂಬೆಯಿಂದ ಕೂಡಿರುವ ದೃಢವಾದ ಸಸಿಗಳನ್ನು ಮಾತ್ರ ಬೆಳೆಯಲು ಬಿಡಬೇಕು.

ಸಸಿಗಳು ನೇರವಾಗಿ ಬೆಳೆಯಲು, ಪಾತಿ ಮತ್ತು ಕುಂಡಗಳ ಮಣ್ಣನ್ನು ಚೆನ್ನಾಗಿ ಹದ ಮಾಡಬೇಕು. ಸೂಕ್ತವಾಗಿ ಬೇಸಾಯಮಾಡಿಲ್ಲದ ಮಣ್ಣಿನಲ್ಲಿ ಬೆಳೆದ ಮತ್ತು ಆರೈಕೆ ಮಾಡಿಲ್ಲದ ಸಸಿಗಳ ಕಾಂಡ ಮತ್ತು ಬೇರುಗಳು ತಿರುಚಿಕೊಂಡಿರುತ್ತವೆ. ಇಂತಹ ಸಸಿಗಳು ಬೇರು ಸಸ್ಯಕ್ಕೆ(ರೂಟ್‌ಸ್ಟಾಕ್) ಯೋಗ್ಯವಾಗಿರುವುದಿಲ್ಲ.

ನರ್ಸರಿಯಲ್ಲಿ ಬೆಳೆಸಿದ ಮಾವಿನ ಸಸಿಗಳನ್ನು ಒಂಬತ್ತು ತಿಂಗಳನಂತರ ಕುಂಡಗಳಿಗೆ ಸ್ಥಳಾಂತರಿಸಬೇಕು. ಸಸಿಗಳನ್ನು ಕುಂಡಗಳಿಗೆ ಸ್ಥಳಾಂತರಿಸುವಾಗ ಅವುಗಳ ತಾಯಿ ಬೇರನ್ನು ಕುಂಡಕ್ಕೆ ಸರಿಹೊಂದುವಂತೆ ಕತ್ತರಿಸಬೇಕು. ವಾತಾವರಣದಲ್ಲಿ ಹೆಚ್ಚು ತೇವಾಂಶವಿರುವಾಗ ಸಸಿಗಳನ್ನು ಪಾತಿಯಿಂದ ಕುಂಡಕ್ಕೆ ಸ್ಥಳಾಂತರಿಸಬೇಕು. ಕುಂಡದಲ್ಲಿರುವ ಈ ಸಸಿಗಳನ್ನು ಕಮಾನು ಕಸಿ ಅಥವಾ ಕಣ್ಣು ಹಾಕಲು ಉಪಯೋಗಿಸಬಹುದು. ಕಮಾನು ಸಸಿ ಅಥವಾ ಕಣ್ಣು ಹಾಕಿದ ಸಸಿಗಳು ನೆಲದಲ್ಲಿ ನಾಟಿ ಮಾಡುವ ಸ್ಥಿತಿಯನ್ನು ಮುಟ್ಟುವವರೆಗೆ ಕೈಯಿಂದ ನೀರು ಹಾಕಿ ಚೆನ್ನಾಗಿ ಕಾಪಾಡಬೇಕು.

ಕಮಾನು ಕಸಿ (ಇನಾರ್ಚಿಂಗ್)

ಈ ವಿಧಾನದಲ್ಲಿ ಉತ್ತಮವಾದ ತಳಿಯ ಕಾಂಡವನ್ನು ಬೇರುಸಸಿಗೆ ಕಸಿ ಮಾಡಲಾಗುತ್ತದೆ. ಮೇಲ್ಕಂಡ ರೀತಿಯಲ್ಲಿ ಬೇರು ಸಸಿಗಳನ್ನು ಭೂಮಿ ಅಥವಾ ಕುಂಡಗಳಲ್ಲಿ ಬೆಳೆಸಬೇಕು. ಬೇರು ಸಸ್ಯ ಸುಮಾರು ಸೀಸದ ಕಡ್ಡಿಯಷ್ಟು ದಪ್ಪವಾದಾಗ ($\frac{1}{4}''$ ದಿಂದ $\frac{1}{3}''$ ಅಂಗುಲ ದಪ್ಪ) ಅದನ್ನು ಉತ್ತಮ ತಳಿಯ ಕಾಂಡದ ಸಮೀಪಕ್ಕೆ ತಂದು ಅಲ್ಲಿ ನಿಲ್ಲುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಕುಂಡವನ್ನು, ಯೋಗ್ಯ ಆಸರೆ ಅಥವಾ ಕಸಿ ನಿಲುವಿನ (ಗ್ರಾಫ್ಟಿಂಗ್ ಸ್ಟ್ಯಾಂಡ್) ಮೇಲೆ ಅಥವಾ ಬಿದಿರಿನ ಸೀಳು ಅಥವಾ ಮರದ ಕುಂಡಗಳ ಮೇಲೆ ನಿಲ್ಲಿಸಬೇಕು. ಕಸಿ ಕೊಂಬೆ (ಕಾಂಡ ಸಸಿ)ಯಲ್ಲಿ ರೆಂಬೆಗಳು ಬಹಳ ಕೆಳಗೆ ಇದ್ದರೆ, ಬೇರು ಸಸಿ ಇರುವ

ಕುಂಡವನ್ನು ನೆಲದ ಮೇಲೆ ಇಡಬಹುದು. ಹೆಚ್ಚು ಸಂಖ್ಯೆಯ ಕಸಿ ಸಸ್ಯಗಳನ್ನು ತಯಾರು ಮಾಡಲು ಕೆಲವು ನರ್ಸರಿ ಮಾಲೀಕರು, ಉತ್ತಮ ತಳಿ ಸಸ್ಯಗಳನ್ನು ಹತ್ತರಿಂದ ಹನ್ನೆರಡು ಅಡಿ ಅಂತರದಲ್ಲಿ ನಾಟಿ ಮಾಡುತ್ತಾರೆ. ಮರಗಳ ತಾಯಿ ಕಾಂಡ ಮತ್ತು ದಪ್ಪ ರೆಂಬೆಗಳನ್ನು ಕತ್ತರಿಸಿ ಕೆಳಮಟ್ಟದಲ್ಲಿ, ಪೊದೆಯಂತೆ ಮಾವಿನ ಮರ ಬೆಳೆಯುವಂತೆ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಬೇರು ಸಸಿಯಿರುವ ಕುಂಡಗಳನ್ನು ನೆಲದ ಮೇಲೆ ಇಟ್ಟು, ಕೆಳಭಾಗದಲ್ಲಿರುವ ಉತ್ತಮ ತಳಿ ರೆಂಬೆಗಳಿಗೆ ಕಸಿ ಮಾಡುತ್ತಾರೆ. ಸುಲಭವಾಗಿ ಮತ್ತು ಮಿತವಾಗಿ ನೀರಾವರಿ ಮಾಡಲು ಕೆಲವು ಸಾರಿ ಬೇರುಸಸಿ ಕುಂಡಗಳನ್ನು ನೆಲದಲ್ಲಿ ನಾಟಿಮಾಡುವುದುಂಟು. ಕೆಲವು ಸಾರಿ, ಇಂತಹ ಉತ್ತಮ ತಳಿ ಮರಗಳ ಕೆಳಗೆ, ನೆಲದಲ್ಲಿ ಬೇರು ಸಸಿಗಳನ್ನು ಬೆಳೆಸುತ್ತಾರೆ. ಈ ವಿಧಾನದಲ್ಲಿ (ಬೇಸಾಯಗಾರನ ದೃಷ್ಟಿಯಿಂದ) ದೊಡ್ಡ ತೊಂದರೆ ಎಂದರೆ, ಉತ್ತಮ ತಳಿಯ ಕಾಂಡಸಸ್ಯ ಫಲವನ್ನು ಕೊಡದೇ ಇರುವ ಕಾರಣ, ಈ ಸಸ್ಯದಿಂದ ತಯಾರು ಮಾಡಿದ ಕಸಿಸಸ್ಯಗಳ ಫಲ ಕೊಡುವ ಸಾಮರ್ಥ್ಯ ಖಚಿತವಾಗಿ ತಿಳಿಯದಿರುವುದಾಗಿದೆ.

ಕಮಾನು ಕಸಿ ಮಾಡುವುದಕ್ಕೆ ಶ್ರೇಷ್ಠವಾದ ಕಾಲವೆಂದರೆ, ಕಸಿಕೊಂಬೆ ಮತ್ತು ಬೇರು ಸಸ್ಯಗಳು ಕಸುವಿನಿಂದ ಬೆಳೆಯುವ ಕಾಲ. ಈ ಸಮಯದಲ್ಲಿ, ಮರದಲ್ಲಿರುವ ಸಸ್ಯ ರಸ ಸುಲಭವಾಗಿ ಹರಿದು, ಕಸಿಮಾಡಲು ಉಂಟುಮಾಡಿರುವ ಗಾಯ ಮಾಯುವಂತೆ ಮಾಡುತ್ತದೆ. ಹೆಚ್ಚು ಉಷ್ಣಾಂಶದಿಂದ ಕೂಡಿರುವ ಒಣ ಹವಾಗುಣ ಕಮಾನುಕಸಿಗೆ ಸೂಕ್ತವಾದುದಲ್ಲ. ಕಮಾನು ಕಸಿಗೆ ಜುಲೈನಿಂದ ಫೆಬ್ರವರಿ ತಿಂಗಳು ಸೂಕ್ತವಾದದ್ದು. ಜುಲೈನಿಂದ–ಸೆಪ್ಟಂಬರ್ ತಿಂಗಳು ಶ್ರೇಷ್ಠ, ಅಕ್ಟೋಬರ್-ಡಿಸೆಂಬರ್ ಉತ್ತಮವಾದ ಇನ್ನೊಂದು ಕಾಲ.

ಕುಂಡದಲ್ಲಿರುವ ಆರಿಸಿದ ಬೇರು ಸಸ್ಯಗಳನ್ನು ಇದೇ ದಪ್ಪವಿರುವ ಕಸಿಕೊಂಬೆಯ ಹತ್ತಿರ ತರಬೇಕು. ಕಸಿಕೊಂಬೆಯು ಒಂದು ವರ್ಷ ವಯಸ್ಸಿನ, $1\frac{1}{2}$ ಯಿಂದ $2\frac{1}{2}$ ಅಡಿ ಉದ್ದದ ತುದಿ, ಇದಕ್ಕೆ ಸೂಕ್ತವಾದದ್ದು. ಕಸಿಕೊಂಬೆಯನ್ನು ಕುಂಡದಲ್ಲಿರುವ ಬೇರು ಸಸ್ಯವನ್ನು ಮುಟ್ಟುವಂತೆ ಬಗ್ಗಿಸಬೇಕು. ಕಸಿಕೊಂಬೆ ಮತ್ತು ಬೇರುಸಸ್ಯದ ಕಾಂಡ ಮುಟ್ಟಿರುವ ಭಾಗವನ್ನು ಗುರುತುಮಾಡಿಕೊಳ್ಳಬೇಕು. ಆ ಸ್ಥಳದಲ್ಲಿ $2\frac{1}{2}$ ಯಿಂದ 3 ಅಂಗುಲ ಉದ್ದವಾಗಿ ಸಿಪ್ಪೆಯಲ್ಲಿ ಸ್ವಲ್ಪ ಕಾಂಡದ ಮರ ಬರುವಂತೆ ತೆಗೆಯಬೇಕು. ಈ ಸ್ಥಳವು ಸಾಮಾನ್ಯವಾಗಿ ಕುಂಡದಲ್ಲಿರುವ ಮಣ್ಣಿನಿಂದ 9ರಿಂದ 12 ಅಂಗುಲ ಎತ್ತರವಾಗಿರಬೇಕು. ಕಸಿಕೊಂಬೆಯಲ್ಲಿ ಸಹ ಗುರ್ತಿಸಿರುವ ಸ್ಥಳದಲ್ಲಿ ಸಿಪ್ಪೆಯ ಸಮೇತ ಸ್ವಲ್ಪ ಕಾಂಡದ ಭಾಗ ಬರುವಂತೆ ಕೊಯ್ಯಬೇಕು. ಕೊಯ್ಯುವುದಕ್ಕಾಗಿ ಹರಿತವಾದ ಚಾಕು ಉಪಯೋಗಿಸಬೇಕು. ಕೊಯ್ದಿರುವ ಕಸಿಕೊಂಬೆ

ಮತ್ತು ಬೇರು ಸಸ್ಯದ ಕಾಂಡಗಳ ನಡುವೆ ಸ್ಥಳ ಉಳಿಯದೆ ಸರಿಯಾಗಿ ಕೂಡುವಂತೆ ಜೋಡಿಸಬೇಕು. ಜೋಡಿಸಿರುವ ಎರಡು ಸಸ್ಯಗಳ ಕೆಂಬಿಯಮ್ ಮುಟ್ಟುವಂತಿರಬೇಕು. ಇವೆರಡನ್ನು ರ್‍ಯಾಫಿಯ, ಬಾಳೆಯ ನಾರು, ಮೇಣ ಹಚ್ಚಿದ ಬಟ್ಟೆ ಅಥವಾ ದಾರದಿಂದ ಭದ್ರವಾಗಿ ಕಟ್ಟಬೇಕು. ಅನಂತರ ಕಾಂಡವು ಕೂಡಿರುವ ಸ್ಥಳಕ್ಕೆ ಪ್ಯಾರಾಫಿನ್ ಬಟ್ಟೆ ಕಟ್ಟಬೇಕು. ಗ್ರ್ಯಾಫ್ಟಿಂಗ್ ವ್ಯಾಕ್ಸ್ ಹಚ್ಚಬೇಕು. ಕೆಲವರು ಕೆಂಪು ಮಣ್ಣು ಅಥವಾ ಗೋಡು, ಜೇಡಿ, ಮರಳು ಮತ್ತು ಸಗಣಿಯ ಸಮ ಪ್ರಮಾಣದ ಮಿಶ್ರಣವನ್ನು ಸೇರಿಕೆ ಸ್ಥಳದ ಸುತ್ತಲೂ ಕಟ್ಟುತ್ತಾರೆ. ಗ್ರ್ಯಾಫ್ಟಿಂಗ್ ವ್ಯಾಕ್ಸನ್ನು, ರೋಸಿನ್, ಜೇನುಮೇಣ ಮತ್ತು ಕೊಬ್ಬು ಅಥವಾ ನಾರಗಸೆ(ಲಿನ್ ಸೀಡ್) ಎಣ್ಣೆಯಿಂದ ತಯಾರಿಸುತ್ತಾರೆ. ಕಮಾನುಕಸಿ ಕಾರ್ಯವಾಗಿದ ನಂತರ, ಈ ವ್ಯವಸ್ಥೆಯನ್ನು ಕೊನೆಯಪಕ್ಷ ಎರಡು ತಿಂಗಳ ಕಾಲ ಕದಲಿಸದೆ ಹಾಗೆ ಉಳಿಸುತ್ತಾರೆ.

ಕಸಿಕೊಂಬೆ ಮತ್ತು ಬೇರುಸಸ್ಯದ ಸಂಯೋಗವಾದನಂತರ, ಕೂಡಿರುವ ಭಾಗದ ಕೆಳಭಾಗದಲ್ಲಿ ಕಸಿಕೊಂಬೆಯನ್ನು ಕತ್ತರಿಸಿ ತಾಯಿ ಸಸ್ಯದಿಂದ ಬೇರ್ಪಡಿಸಲಾಗುತ್ತದೆ. ಈ ಕಾರ್ಯವನ್ನು ಹಂತಗಳಲ್ಲಿ ನೆರವೇರಿಸಲಾಗುತ್ತದೆ. ಕಮಾನು ಕಸಿ ಮಾಡಿದ ತಿಂಗಳಬಳಿಕ ಕಸಿಕೊಂಬೆಯ ದಪ್ಪದ ಅರ್ಧಭಾಗವನ್ನು ಮೊದಲ ಬಾರಿ ಕತ್ತರಿಸುತ್ತಾರೆ. ಕೂಡಿಕೆಯನ್ನು ಅಂಶಶಃವಾಗಿ ಪ್ರತ್ಯೇಕಿಸುವ ಎರಡು ವಾರಗಳ ಮೊದಲು, ಮೊದಲು ಕತ್ತರಿಸಿರುವ ಸ್ಥಳಕ್ಕೆ ಎದುರಾಗಿ ಸ್ವಲ್ಪ ಭಾಗವನ್ನು ಕತ್ತರಿಸಬೇಕು. ಇದೇ ಕಾಲದಲ್ಲಿ, ಕೂಡಿಕೆಯಿಂದ ಮೇಲಿರುವ ಬೇರುಸಸ್ಯದ ತುದಿ ರೆಂಬೆಯನ್ನು ಸಹ ಕತ್ತರಿಸಬೇಕು. ಇದಾದ ಎರಡು ವಾರಗಳ ಇಲ್ಲವೇ ತಿಂಗಳ ಬಳಿಕ ಕಸಿಕೊಂಬೆಯನ್ನು ತಾಯಿಸಸ್ಯದಿಂದ ಸಂಪೂರ್ಣವಾಗಿ ಪ್ರತ್ಯೇಕವಾಗುವಂತೆ ಹಾಗೂ ಬೇರುಸಸ್ಯದ ಚಿಗುರು ಕಾಂಡತುದಿಗಳನ್ನು ಕತ್ತರಿಸಬೇಕು. ಕಸಿಸಸ್ಯದಲ್ಲಿ ಕತ್ತರಿಸಿದ ಭಾಗಗಳಿಗೆ ವೈಟ್‌ಲೆಡ್ ಅಥವಾ ಟಾರು ಲೇಪನ ಮಾಡುವುದು ಉತ್ತಮ. ಇದರಿಂದ ಕೊಳೆತ ಮತ್ತು ಕಾಂಡ ಕೊರಕದ ಹಾವಳಿ ತಪ್ಪುತ್ತದೆ. ಪ್ರತ್ಯೇಕಿಸಿದ ಕಸಿಸಸ್ಯವನ್ನು ತೋಟದಲ್ಲಿ ನಾಟಿಮಾಡುವುದಕ್ಕೆ ಮೊದಲು ಕಡೆಯಪಕ್ಷ ಒಂದೆರಡು ತಿಂಗಳು (ಆರು ತಿಂಗಳು ಅಪೇಕ್ಷಣೀಯ) ಪಾರ್ಶ್ವ ನೆರಳು ಅಥವಾ ನೆರಳಿನಲ್ಲಿಡುವುದು ಉತ್ತಮ.

ಕಸಿಸಸ್ಯವನ್ನು ಪ್ರತ್ಯೇಕಿಸಿದ ಒಂದರಿಂದ ಮೂರು ತಿಂಗಳ ಒಳಗೆ, ಕೂಡಿಕೆ ಸ್ಥಳದಲ್ಲಿ ಕಟ್ಟಿರುವ ಮಣ್ಣಿನ ಮಿಶ್ರಣ ಮತ್ತು ಇತರ ವಸ್ತುಗಳನ್ನು ತೆಗೆಯುವುದು ಅಗತ್ಯ. ಕಮಾನು ಕಸಿ ಮಾಡಿದ ದಿನದಿಂದ ಕಸಿಸಸ್ಯಗಳನ್ನು ತೋಟದಲ್ಲಿ ನಾಟಿಮಾಡುವ ತನಕ ಕ್ರಮವಾಗಿ ನೀರು ಕೊಡುವುದು ಅನಿವಾರ್ಯ. ಒಣ ಹವಾಗುಣದಲ್ಲಿ ಪ್ರತಿ

ನಿತ್ಯ ಮತ್ತು ಇತರ ಕಾಲದಲ್ಲಿ ಅಗತ್ಯವಾದಾಗ ತಪ್ಪದೆ ನೀರು ಕೊಡಬೇಕು. ಪ್ರತ್ಯೇಕಿಸಿದ ಸಸ್ಯಗಳನ್ನು ಪ್ರತ್ಯೇಕಿಸಿದನಂತರ ಒಂದು ತಿಂಗಳಿಂದ ಒಂದು ವರ್ಷದ ಒಳಗೆ



ಚಿತ್ರ 15 : ಕಮಾನು ಕಸಿ ಮಾಡುವ ಒಂದು ಹೊಸ ವಿಧಾನ

ನಾಟಿ ಮಾಡುವುದು ಸೂಕ್ತ. ಆದ್ದರಿಂದ, ಬೇರುಸಸಿಗಳನ್ನು ಬೆಳೆಸಲು ಬೀಜ ಬಿತ್ತಿದ ದಿನದಿಂದ, ಕಸಿಸಸಿಗಳನ್ನು ಪ್ರತ್ಯೇಕಿಸುವ ದಿನದವರೆಗೆ ಸುಮಾರು ಎರಡು ವರ್ಷಗಳ ಕಾಲ ಹಿಡಿಯುತ್ತದೆ.

ಸುಲಭವಾಗಿ ಮತ್ತು ಕಡಮೆ ಖರ್ಚಿನಿಂದ ಮಾವಿನ ಕಸಿಸಸ್ಯಗಳನ್ನು ತಯಾರ್ಯ ಮಾಡುವ ವಿಧಾನ ಒಂದನ್ನು ಶ್ರೀ ಗಾರ್ಗ್‌ರವರು (1954) ರೂಪಿಸಿದ್ದಾರೆ. ಪಾತಿಗಳಲ್ಲಿರುವ ಒಂದು ವರ್ಷದ ಬೇರು ಸಸ್ಯಗಳನ್ನು ಅಗೆದು ತೆಗೆಯಬೇಕು. ಈ ರೀತಿ ತೆಗೆಯುವಾಗ ಬೇರಿನ ಸುತ್ತಲೂ ಮಣ್ಣಿನ ಮುದ್ದೆ ಬರುವಂತೆ ತೆಗೆಯಬೇಕು. ತೆಗೆದನಂತರ ಮಣ್ಣಿನ ಮುದ್ದೆಗೆ ನೀರು ಹಾಕಿ, ಮಣ್ಣು ಬೀಳದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಅನಂತರ, ಎರಡುಮೂರು ದಿವಸಗಳಲ್ಲಿ ಮಣ್ಣು ಗಟ್ಟಿಯಾಗುತ್ತದೆ, ಆಗ ಮುಖ್ಯ ಬೇರಿಗೆ ಅಗತ್ಯವಾದಷ್ಟು ಮಣ್ಣನ್ನು ಮಾತ್ರ ಉಳಿಸಿ, ಉಳಿದುದನ್ನು ತೆಗೆದುಹಾಕಬೇಕು, ಈ ಮಣ್ಣಿಗೆ ನಾರು, ಪಾಚಿ ಅಥವಾ ಮೃದು

ವಾದ ಹುಲ್ಲನ್ನು ಸುತ್ತಿ ನೂಲಿನ ದಾರದಿಂದ ಕಟ್ಟಬೇಕು. ಮಣ್ಣಿನ ಉಂಡೆಯಿಂದ ಕೂಡಿದ ಸಸ್ಯದ ಬುಡವನ್ನು ಸುಮಾರು ಅರ್ಧನಿಮಿಷಗಳ ಕಾಲ ನೀರಿನಲ್ಲಿಟ್ಟು, ಅನಂತರ ಹೊರತೆಗೆದು ನೆರಳಿನಲ್ಲಿ ಸುಮಾರು ಎಂಟು ದಿವಸಗಳ ಕಾಲ ನೇರವಾಗಿ ನಿಲ್ಲಿಸಿರಬೇಕು. ಈ ರೀತಿ ನಿಲ್ಲಿಸಿರುವ ಕಾಲದಲ್ಲಿ ಸಸಿಗಳು ಜೋಲು ಬಿದ್ದರೆ ಮತ್ತೆ ಸ್ವಲ್ಪಕಾಲ ನೀರಿನಲ್ಲಿ ಮೊದಲಿನಂತೆ ಇಡಬೇಕು. ಅನಂತರ ಸಸಿಗಳನ್ನೊಳಗೊಂಡ ತಂಪಾದ ಮಣ್ಣಿನ ಉಂಡೆಗಳನ್ನು ಪಾಲಿಥೀನ್ ಚೀಲಕ್ಕೆ ಹಾಕಬೇಕು. ಅಗತ್ಯವಾದರೆ ಹೆಚ್ಚು ಪಾಚಿ ಅಥವಾ ಹುಲ್ಲನ್ನು ಚೀಲದೊಳಕ್ಕೆ ಸೇರಿಸಬೇಕು. ಚೀಲದ ಮೇಲ್ಭಾಗವನ್ನು ನಾರಿನಿಂದ ಕಟ್ಟಬೇಕು ; ಹಾಗೆಯೇ ಮಣ್ಣಿನ ಉಂಡೆಯ ಮೇಲೆ ಸಹ ಕಟ್ಟುವುದು ಅಗತ್ಯ. ಈ ಉಂಡೆಯೊಳಕ್ಕೆ ಗಾಳಿ, ನೀರು ಮತ್ತು ಸೂರ್ಯನ ಕಿರಣಗಳು ಪ್ರವೇಶಿಸದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಈ ರೀತಿ ಸಿದ್ಧಮಾಡಿದ ಸಸಿಗಳನ್ನು, ಉತ್ತಮ ತಳಿಯ ತಾಯಿಮರದ ಕಸಿಮಾಡಬಹುದಾದ ರೆಂಬೆಗಳಿಗೆ ತೂಗುಹಾಕಬೇಕು. ಅನಂತರ ಕಸಿಮಾಡುವ ಸಾಮಾನ್ಯ ಪದ್ಧತಿಯಿಂದ ಕಟ್ಟಬೇಕು. ಸುಮಾರು ಆರು ವಾರಗಳಲ್ಲಿ ಕೂಡಿಕೆ ಸಂಪೂರ್ಣವಾಗುತ್ತದೆ. ನಾಲ್ಕು ವಾರಗಳ ನಂತರ ಮೊದಲು ವಿವರಿಸಿದ ವಿಧಾನದಿಂದ ಕಸಿಸಸ್ಯವನ್ನು ಪ್ರತ್ಯೇಕಿಸಬೇಕು. ತಾಯಿಮರದಿಂದ ಪ್ರತ್ಯೇಕಿಸಿದ ಕಸಿ ಸಸ್ಯಗಳನ್ನು ಕುಂಡಗಳಲ್ಲಿ ಹಾಕಬಹುದು ಅಥವಾ ತಂಪಾದ ನೆರಳಿನಲ್ಲಿರುವ ಮರಳು ಶೇಖರಣೆಯಲ್ಲಿಡಬಹುದು.

ಕಣ್ಣು ಹಾಕುವುದು

ಮಾವಿನ ಸಸ್ಯಕ್ಕೆ ಕಣ್ಣು ಹಾಕುವುದನ್ನು ಅನೇಕ ದೇಶಗಳಲ್ಲಿ ಪ್ರಯತ್ನಿಸಲಾಗಿದೆ. ಇದು ಕ್ವೀನ್ಸ್‌ಲ್ಯಾಂಡ್, ಫ್ಲಾರಿಡಾ, ಫಿಲಿಪ್ಪೈನ್ಸ್, ಜಾವಾ, ಸಿಲೋನ್ ಮತ್ತು ಈಜಿಪ್ಟ್ ದೇಶಗಳಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿರುವುದು ವರದಿಯಾಗಿದೆ. ಮಾವಿನ ಸಸ್ಯವನ್ನು ವೃದ್ಧಿಮಾಡುವ ವಿಧಾನ ಇತ್ತೀಚೆಗೆ ಭಾರತ ದೇಶದಲ್ಲಿ ಆಚರಣೆಗೆ ಬರುತ್ತಿದೆ. ಪಾತಿಗಳಲ್ಲಿ ಮಾವಿನ ಸಸಿಗಳನ್ನು ಬೆಳೆಸಿ ಅವುಗಳು ಒಂದು ವರ್ಷ ವಯಸ್ಸಿಗೆ ಬಂದನಂತರ ಕಣ್ಣು ಹಾಕುತ್ತಾರೆ.

ಕಣ್ಣು ಹಾಕುವುದು ಎಂದರೆ, ಉತ್ತಮ ತಳಿಯ, ಕಸಿಕೊಂಬೆಯಿಂದ ಒಂದು ಕಣ್ಣನ್ನು [illegible] ಸಮೇತ ತೆಗೆದು, ಬೇರು ಸಸ್ಯದ ಕಾಂಡದ ಸಿಪ್ಪೆಯ ಕೆಳಗೆ ಸೇರಿಸುವುದು. ವೃದ್ಧಿಮಾಡಲು ಇಚ್ಛಿಸಿದ ಯಾವುದಾದರೂ ಒಂದು ತಳಿಯ ರೆಂಬೆಗಳನ್ನು ದೂರದೇಶಗಳಿಂದಲೂ ಸಹ ಪಾಚಿಯಲ್ಲಿ, ಮರದ ಹೊಟ್ಟಿನಲ್ಲಿ ಅಥವಾ ಥರ್ಮಾಸ್ ಫ್ಲಾಸ್ಕಿನಲ್ಲಿ ತರಬಹುದು. ತೇವದಿಂದ ಕೂಡಿದ ಪಾಚಿಯಲ್ಲಿ ಸುತ್ತಿದ ಮಾವಿನ ಕಣ್ಣುಕಡ್ಡಿಗಳು ಎರಡರಿಂದ ಮೂರು ವಾರಗಳ ಕಾಲ ಹಸುರಾಗಿ ಉಳಿದಿರುವುದು ಕಂಡುಬಂದಿದೆ. ಜೂನ್-ಜುಲೈ ತಿಂಗಳಲ್ಲಿ ನಾಟಿ ಮಾಡಿದ ಓಟೆಗಳಿಂದ

ಬೆಳೆದ ಸಸಿಗಳು ಮುಂದಿನ ಮಾರ್ಚ್ ತಿಂಗಳಲ್ಲಿ, ಅಂದರೆ ಸಸಿಗಳಿಗೆ ಸುಮಾರು 9 ತಿಂಗಳು ವಯಸ್ಸಾದಾಗ ಕಣ್ಣು ಹಾಕಲು ಯೋಗ್ಯವಾಗಿರುತ್ತವೆ. ಸಸಿಗಳಿಗೆ ಯೋಗ್ಯ ನೀರಾವರಿ ಸೌಕರ್ಯ ಇದ್ದಲ್ಲಿ ವಸಂತ ಮತ್ತು ಬೇಸಿಗೆಕಾಲ, ಕಣ್ಣು ಹಾಕಲು ಸೂಕ್ತವಾದದ್ದು. ಕಣ್ಣು ಕಡ್ಡಿಗಳಲ್ಲಿ ಎಲೆಗಳನ್ನು ತೆಗೆದು ತೊಟ್ಟುಗಳನ್ನು ಕಡ್ಡಿಯಲ್ಲಿ ಉಳಿಸಿಕೊಳ್ಳಬೇಕು.

ಫೋರ್‌ಕರ್ಟ್ ವಿಧಾನದಲ್ಲಿ ಕಣ್ಣು ಹಾಕುವುದು

ಕಸಿಕೊಂಬೆಗೆ ಬೇರೆ ಯಾವ ವಿಧಾನದಿಂದಲೂ ಕಣ್ಣು ಹಾಕುವುದು ಸಾಧ್ಯವಾಗದಿದ್ದಾಗ ಈ ಫೋರಕರ್ಟ್ ವಿಧಾನ ಜಾವಾದ್ವೀಪದಲ್ಲಿ ಮೊದಲು ಪ್ರಾರಂಭವಾಯಿತು. ಜಾವ ಮತ್ತು ಸಿಲೋನ್ ದೇಶಗಳಲ್ಲಿ ಮಾವಿಗೆ ಕಣ್ಣು ಹಾಕುವುದರಲ್ಲಿ ಯಶಸ್ವಿಯಾಗಿರುವ ಏಕೈಕ ವಿಧಾನ ಫೋರ್‌ಕರ್ಟ್ ವಿಧಾನ. ಭಾರತದಲ್ಲಿ, ಪೂನಾದಲ್ಲಿರುವ ಗಣೇಶ್‌ಖಂಡ್ ಹಣ್ಣು ಸಂಶೋಧನಾ ಕೇಂದ್ರದಲ್ಲಿ ಈ ವಿಧಾನವನ್ನು ಗಾಂಧಿಯವರು(1955) ಪ್ರಯತ್ನಿಸಿ ಯಶಸ್ವಿಯಾದರು. ಫೋರ್‌ಕರ್ಟ್ ವಿಧಾನಕ್ಕೆ ಆರಿಸುವ ಕಣ್ಣುಕಡ್ಡಿ (ಬಡ್‌ಸ್ಟಿಕ್) ಒಂದು ವರ್ಷ ವಯಸ್ಸಿನದಾಗಿರಬೇಕು. ಕಣ್ಣು ಕಡ್ಡಿಯ ಮೇಲೆ ಇರುವ ಕಣ್ಣು ಉಬ್ಬಿದ್ದು ಪ್ರಮುಖವಾಗಿರಬೇಕು. $1\frac{1}{4}$ ರಿಂದ $1\frac{1}{2}$ ಅಂಗುಲ ಉದ್ದದ ಚಚ್ಚೌಕವಾದ ಬಿಲ್ಲೆಯ ಮಧ್ಯೆ ಒಂದು ಕಣ್ಣು ಬರುವಂತೆ ತೆಳುವಾದ ತೊಗಟೆ ಭಾಗವನ್ನು ತೆಗೆಯಬೇಕು. ಈ ಬಿಲ್ಲೆಯ ಹಿಂದೆ ಇರುವ ಮರದ ಭಾಗವನ್ನು ಉಗುರಿನಿಂದ ಎಚ್ಚರಿಕೆಯಿಂದ ತೆಗೆಯಬೇಕು ಮತ್ತು ಎಲೆಯ ತೊಟ್ಟನ್ನು ಸಿಪ್ಪೆಯ ಸಮೀಪಕ್ಕೆ ತೆಗೆದು ಹಾಕಬೇಕು. ಬೇರು ಸಸ್ಯದ ಕಾಂಡದ ಮೇಲೆ, ಭೂಮಿಯಿಂದ 4ರಿಂದ 6ಅಂಗುಲ ಎತ್ತರವಾಗಿ, ಚಚ್ಚೌಕವಾಗಿ ಕಾಂಡದ ಮೇಲಿನ ಸಿಪ್ಪೆಯನ್ನು ತೆಗೆಯಬೇಕು. ಈ ರೀತಿ ಸಿಪ್ಪೆ ತೆಗೆಯುವಾಗ, ಸಿಪ್ಪೆಯನ್ನು ಮೊದಲು ಅಡ್ಡವಾಗಿ ಕೊಯ್ದು, ಅನಂತರ ಉದ್ದವಾಗಿ ಕೊಯ್ಯಬೇಕು. ಬೇರುಸಸ್ಯ ಕಾಂಡದ ಮೇಲೆ ತೆಗೆಯುವ ಸಿಪ್ಪೆಯು, ಕಣ್ಣು ಸಮೇತವಾಗಿ ತೆಗೆದಿರುವ ಸ್ಥಳಕ್ಕಿಂತ ವಿಶಾಲವಾಗಿರಬೇಕು ಮತ್ತು ಈ ರೀತಿ ತೆಗೆಯುವಾಗ ಸಿಪ್ಪೆಯನ್ನು ಪೂರ್ಣವಾಗಿ ಒಂದೇ ಸಾರಿ ಒಳಗಿನ ಮರ ಕಾಣುವಂತೆ ತೆಗೆಯಬೇಕು. ಕಣ್ಣು ಸಮೇತ ತೆಗೆದಿರುವ ಬಿಲ್ಲೆಯನ್ನು ಬೇರುಸಸ್ಯದ ಕಾಂಡದ ಮೇಲೆ ಕಾಣುವ ಮರದ ಭಾಗದ ಮೇಲೆ ಎಚ್ಚರಿಕೆಯಿಂದ ಇಟ್ಟು ಅನಂತರ ಈ ಬಿಲ್ಲೆ ಅದೇ ಸ್ಥಳದಲ್ಲಿ ಭದ್ರವಾಗಿ ನಿಂತು, ನೀರು ಮತ್ತು ಗಾಳಿ ನುಗ್ಗದಂತೆ ವ್ಯಾಕ್ಸ್ ಟೇಪ್ ಸುತ್ತಬೇಕು. ಈ ಕಾರ್ಯ ಯಶಸ್ವಿಯಾಗಲು, ಹರಿತವಾದ ಚಾಕುವಿನಿಂದ ಶೀಘ್ರವಾಗಿ ಸಮಯ ವ್ಯಯ ಮಾಡದೆ, ಸಿಪ್ಪೆಯ ಕೆಳಭಾಗದಲ್ಲಿರುವ ಕೆಂಬಿಯಮ್‌ಅನ್ನು ಗಾಯಗೊಳಿಸದೆ ನಿರ್ವಹಿಸಬೇಕು.

ಮೂರು ವಾರಗಳನಂತರ, ಮೇಲೆ ಕಟ್ಟಿರುವ ವ್ಯಾಕ್ಸ್ ಟೇಪನ್ನು ಬಿಚ್ಚಿ, ಬೇರು ಸಸ್ಯಕ್ಕೆ ಅಂಟಿಕೊಂಡಿರುವ ಹಸುರಾಗಿರುವ ಕಣ್ಣುಬಿಲ್ಲೆಯ ಕೆಳಗಿನ ಸಿಪ್ಪೆಯನ್ನು ಕತ್ತರಿಸಬೇಕು. ಕಣ್ಣಿನ ಮಧ್ಯಭಾಗವನ್ನು ಬಿಟ್ಟು, ಅದು ಬೆಳೆಯಲು ಅವಕಾಶಕೊಟ್ಟು ಉಳಿದ ಭಾಗವನ್ನು ಮತ್ತೆ ಕಟ್ಟಬೇಕು.

ಅನಂತರ, ಮೂರು ವಾರಗಳಲ್ಲಿ ಕಣ್ಣು ಬೆಳೆಯಲು ಪ್ರಾರಂಭವಾಗುತ್ತದೆ. ಆಗ ಕಣ್ಣಿನ ಮೇಲ್ಭಾಗದ ಸಿಪ್ಪೆಯನ್ನು ಕತ್ತರಿಸಿ, ಸುತ್ತಿರುವ ಟೇಪನ್ನು ಬಿಚ್ಚಿಹಾಕಬೇಕು. ಬಾಂಬೆ ರಾಜ್ಯದಲ್ಲಿ ಆಗಸ್ಟ್ ಅಥವಾ ಸೆಪ್ಟಂಬರ್ ತಿಂಗಳಲ್ಲಿ ಕಣ್ಣು ಹಾಕಿದ ಸಸ್ಯಗಳು, ಹೆಚ್ಚು ಉಷ್ಣಾಂಶವಿರುವ ಅಕ್ಟೋಬರ್ ತಿಂಗಳಲ್ಲಿ ಸ್ವಲ್ಪ ಬೆಳೆದು ಮುಂದಿನ ಚಳಿಗಾಲದಲ್ಲಿ ಸುಪ್ತಾವಸ್ಥೆಯಲ್ಲಿರುತ್ತವೆ. ಮುಂಗಾರು ಮಳೆ ಪ್ರಾರಂಭದಲ್ಲಿ ಕಣ್ಣು ಸಸ್ಯಗಳು ಶೀಘ್ರವಾಗಿ ಬೆಳೆಯಲು ಪ್ರಾರಂಭಿಸಿ ಮುಂದಿನ ವರ್ಷದ ಮುಂಗಾರು ಮಳೆಯ ಕಾಲಕ್ಕೆ ಸುಮಾರು ನಾಲ್ಕು ಅಡಿ ಎತ್ತರವಾಗಿ ಬೆಳೆದು ತೋಟದಲ್ಲಿ ನಾಟಿಮಾಡಲು ಸಿದ್ಧವಾಗಿರುತ್ತವೆ.

ಗಾಂಧಿಯವರ(1955) ಪ್ರಕಾರ ಫೋರ್‌ಕರ್ಟ್ ವಿಧಾನದಲ್ಲಿ ಕಣ್ಣು ಹಾಕುವುದರಿಂದ ಬೇರುಸಸ್ಯದ ಕೆಂಬಿಯಮ್‌ಗೆ ಗಾಯವಾಗದೆ ಇರುವುದರಿಂದಲೂ ಮತ್ತು ಇದರ ಮೇಲೆ ಟೇಪ್ ಸುತ್ತುವುದರಿಂದ ಒಣಗುವುದು ತಪ್ಪುವುದರಿಂದಲೂ ಅದು ಗುರಾಣಿರೂಪದಲ್ಲಿ ಕಣ್ಣು ಹಾಕುವುದಕ್ಕಿಂತ ಹೆಚ್ಚು ಪರಿಣಾಮಕಾರಿ. ಕುಶಲತೆ ಇಲ್ಲದ ಕೆಲಸಗಾರನು ಗುರಾಣಿ ವಿಧಾನದಲ್ಲಿ ಕಣ್ಣು ಹಾಕುವಾಗ ಬೇರುಸಸ್ಯದ ಕೆಂಬಿಯಮ್‌ನ್ನು ಗಾಯಗೊಳಿಸುವ ಸಾಧ್ಯತೆ ಇರುತ್ತದೆ. ಇದರ ಜೊತೆಗೆ ಗುರಾಣಿ ವಿಧಾನದಲ್ಲಿ ಕಣ್ಣು ಹಾಕಿದಾಗ, ಕಣ್ಣು ಭಾಗಶಃ ಕೆಂಬಿಯಮ್‌ನ್ನು ಆವರಿಸಿರುತ್ತದೆ ಮತ್ತು ಗಾಳಿ ಇದರೊಳಗೆ ನುಗ್ಗಿ ಕೆಂಬಿಯಮ್ ಒಣಗುವಂತೆ ಮಾಡುತ್ತದೆ.

ಗುರಾಣಿ ವಿಧಾನದಲ್ಲಿ ಕಣ್ಣು ಹಾಕುವುದು

ಕೆಲವು ಸ್ಥಳಗಳಲ್ಲಿ, ಮಾವಿನಲ್ಲಿ, ತೊಗಟೆ ಕಸಿ ಇಲ್ಲವೇ ತೇಪೆ ಕಣ್ಣು ವಿಧಾನಕ್ಕಿಂತ ಬಾರ್ಕ್‌ಗ್ರಾಫ್ಟಿಂಗ್ ಗುರಾಣಿ ವಿಧಾನದಲ್ಲಿ ಕಣ್ಣುಹಾಕುವುದು ಹೆಚ್ಚು ಯಶಸ್ವಿಯಾಗಿದೆ, ಹಾಗೆಯೇ ಇತರೆಡೆಗಳಲ್ಲಿ ಸುಧಾರಿತ ಫೋರ್‌ಕರ್ಟ್ ವಿಧಾನವು ಯಶಸ್ವಿಯಾಗಿದೆ.

ಕಿತ್ತಳೆ ಫಲಗಳಲ್ಲಿ, ಗುರಾಣಿರೂಪದಲ್ಲಿ ಕಣ್ಣುಹಾಕುವುದು ಸಾಮಾನ್ಯ. ಉತ್ತಮ ತಳಿಯ ಕಸಿಕಾಂಡದಿಂದ, ಒಂದು ಚೂರು ಮರ ಬರುವ ಹಾಗೆ ಕಣ್ಣನ್ನು ತೆಗೆಯಬೇಕು. ಬೇರುಸಸ್ಯದ ಕಾಂಡದ ಮೇಲಿನ ಸಿಪ್ಪೆಯನ್ನು T ಅಥವಾ ⊥ ಆಕಾರ

ದಲ್ಲಿ ಕತ್ತರಿಸಬೇಕು. ಬೇರುಸಸ್ಯದ ಕಾಂಡದಮೇಲೆ ಸೀಳಿರುವ ಸಿಪ್ಪೆಯ ಒಳಕ್ಕೆ ಕಣ್ಣನ್ನು ಸೇರಿಸಿ ವ್ಯಾಕ್ಸ್‌ಟೇಪನ್ನು ಸುತ್ತಬೇಕು. ಮುಂದಿನ ಕಾರ್ಯವು ಫೋರ್ ಕರ್ಟ್ F ವಿಧಾನದಂತೆ.

ತೇಪೆ ಕಣ್ಣು ವಿಧಾನ

ಬೇರುಸಸ್ಯದ ಕಾಂಡದ ಮೇಲೆ ಸೀಳಿರುವ ಸಿಪ್ಪೆಯ ಒಳಗೆ ಚಚ್ಚೌಕವಾದ ಕಣ್ಣಿರುವ ಬಿಲ್ಲೆಯನ್ನು ಸೇರಿಸುವುದು ತೇಪೆ ಕಣ್ಣು ವಿಧಾನ. ಒಂದು ಧೃಢವಾಗಿರುವ ಬೇರುಸಸ್ಯವನ್ನು ಆರಿಸಿಕೊಂಡು ಅದರ ಕಾಂಡದ ಮೇಲೆ ಒಂದು ಚೂರು ಸಿಪ್ಪೆಯನ್ನು ತೆಗೆದು ಹಾಕಬೇಕು. ಬೇರುಸಸ್ಯದ ಕಾಂಡದ ಮೇಲೆ ತೆಗೆದುಹಾಕುವಷ್ಟು ಗಾತ್ರದ ಕಣ್ಣಿರುವ ಒಂದು ಚೂರನ್ನು ಉತ್ತಮ ತಳಿ ಸಸ್ಯದಿಂದ ತೆಗೆದುಕೊಳ್ಳಬೇಕು. ಕಣ್ಣು ಸರಿಯಾದ ಸ್ಥಳದಲ್ಲಿ ಉಳಿಯುವಂತೆ ಪಟ್ಟಿಕಟ್ಟಬೇಕು. ಅನಂತರ, ಹಂತಹಂತವಾಗಿ ಕಣ್ಣು ಬೆಳೆಯಲು ಕಣ್ಣುಹಾಕಿದ ಸ್ಥಳದಿಂದ ಮೇಲ್ಭಾಗಕ್ಕಿರುವ ಬೇರುಸಸ್ಯಕಾಂಡವನ್ನು ಕತ್ತರಿಸಬೇಕು.

ದಕ್ಷಿಣ ಭಾರತದಲ್ಲಿ, ಈ ವಿಧಾನವು, ಸುಮಾರು ಶೇಕಡಾ 10ರಿಂದ 15 ರಷ್ಟು ಯಶಸ್ವಿಯಾಗಿದೆ.

ಸ್ಥಳದಲ್ಲೇ (ಇನ್‌ಸಿಟು) ಕಣ್ಣು ಹಾಕುವುದು

ಲಾಲ್‌ಸಿಂಗ್ ಮತ್ತು ಖಾನ್(1942) ತೋಟದಲ್ಲಿ ನೆಲದಲ್ಲಿರುವ ಮಾವಿನ ಸಸಿಗಳಿಗೆ ಕಣ್ಣುಹಾಕುವ ಪ್ರಯತ್ನ ಮಾಡಿದರು, ಈ ಉಪಾಯವು ಎಳೆಯ ಸಸ್ಯಗಳಿಗಿಂತಲೂ 2–3 ವಯಸ್ಸಿನ ಸಸಿಗಳಲ್ಲಿ ಯಶಸ್ವಿಯಾಯಿತು ಮತ್ತು ಬೆಳೆದ ಸಸಿಗಳಲ್ಲಿ ಕಣ್ಣು ಹಾಕಿದವುಗಳು ಸರಿಯಾಗಿ ನಾಟಿಯಾಗಿಲ್ಲ. ಮಾವಿನ ತೋಟಗಳನ್ನು ನಿರ್ಮಿಸಲು ಈ ವಿಧಾನವನ್ನು ದೊಡ್ಡ ಪರಿಮಾಣದಲ್ಲಿ ಆಚರಣೆಗೆ ತರಲಾಯಿತು. ಕೆಳದರ್ಜೆಯ ಮಾವಿನ ಮರಗಳಿಗೆ ಕಣ್ಣು ಹಾಕಿ ತುದಿಯನ್ನು ಕತ್ತರಿಸಲು ಈ ವಿಧಾನವನ್ನು ಅನುಸರಿಸಲಾಯಿತು.

ಕಸಿಮಾಡುವುದು

ಷಹರಾನ್‌ಪುರದಲ್ಲಿ ಮಾವಿನ ಸಸ್ಯಗಳನ್ನು ಸುಮಾರು ಕೇವಲ ಎರಡು ವಾರಗಳಲ್ಲಿ ಕಸಿಮಾಡುವ ಯಶಸ್ವಿ ಉಪಾಯವನ್ನು ಸಿಂಗ್ (1951) ಎಂಬುವನು ಕಂಡು ಹಿಡಿದ. ಆತ ಜುಲೈ ತಿಂಗಳ ಪ್ರಾರಂಭದಲ್ಲಿ ಮಾವಿನ ಓಟೆಗಳನ್ನು ನಾಟಿಮಾಡಿದ ಮತ್ತು ಅವುಗಳು ಅದೇ ತಿಂಗಳಲ್ಲಿ ಮೊಳೆತು ಕೊನೆಗೆ ಒಂದು ಅಡಿ ಎತ್ತರ ಮತ್ತು $\frac{1}{4}$ ರಿಂದ $\frac{1}{8}$ ಅಂಗುಲ ದಪ್ಪವಾದವು. ಆಗ ಆ ಸಸಿಗಳನ್ನು ಅವುಗಳಿಗೆ ಅಂಟಿಕೊಂಡಿರುವ ಓಟೆಗಳ ಸಮೇತ ತೆಗೆದು, ಅಂಟಿಕೊಂಡಿರುವ ಮಣ್ಣನ್ನು ಸ್ವಚ್ಛಮಾಡಲಾಯಿತು.

ಓಟೆಗಳಿಗೆ ½" ದಪ್ಪದ ಹಾವಸ ಪಾಚಿಯನ್ನು ಹಾಕಿ ಅದು ಭದ್ರವಾಗಿ ನಿಲ್ಲುವಂತೆ ದಾರದಿಂದ ಕಟ್ಟಲಾಯಿತು. ಸೆಪ್ಟಂಬರ್ ತಿಂಗಳಲ್ಲಿ ಈ ಸಸಿಗಳನ್ನು ಉತ್ತಮ ತಳಿಯ ಮರದ, ಅದೇ ಗಾತ್ರದ ರೆಂಬೆಗಳಿಗೆ ಕಸಿಮಾಡಿದ. ಬೇರುಸಸ್ಯ ಮತ್ತು ಕಸಿಕಾಂಡಕ್ಕೆ ಶೀಘ್ರವಾಗಿ ಹೊಂದಾಣಿಕೆಯಾಯಿತು. ಮುಂದೆ ಈ ಕಸಿಸಸ್ಯಗಳನ್ನು ಕುಂಡಗಳಿಗೆ ಹಾಕಲಾಯಿತು. ಈ ವಿಧಾನವು ಶೇಕಡಾ 80ರಷ್ಟು ಯಶಸ್ವಿಯಾಯಿತು.

ಬೇರು ಕಸಿ

ಮಾವಿನ ಸಸಿಗಳ ಬೇರನ್ನು ಕಸಿಮಾಡಲು ಸಾಧ್ಯವೆಂಬುವದನ್ನು ಕೊಡೂರಿನಲ್ಲಿ (ಆಂಧ್ರ) ತೋರಿಸಲಾಯಿತು. ಈ ವಿಧಾನವು ಯೂರೋಪ್ ಮತ್ತು ಅಮೆರಿಕಾ ದೇಶಗಳಲ್ಲಿ ಸೇಬು, ಪಿಯರ್ಸ್ ಮತ್ತು ದ್ರಾಕ್ಷಿ ಬಳ್ಳಿಗಳ ಬೆಂಚ್ ಕಸಿಮಾಡುವ ವಿಧಾನಕ್ಕೆ ಸರಿಸಮಾನವಾಗಿದೆ. ಈ ವಿಧಾನದಲ್ಲಿರುವ ಏಕೈಕ ವ್ಯತ್ಯಾಸವೆಂದರೆ ಬೇರುಸಸಿಯು ಎರಡು ಅಂಗುಲ ಉದ್ದದ ಬೇರನ್ನು ಗಾಳಿಗೆ ತೆರೆದಿಟ್ಟು ಕಸಿಕೊಂಬೆಗೆ ಕಸಿಮಾಡುವುದಾಗಿದೆ.

ಬೇರುಸಸ್ಯಗಳು, ಕಮಾನುಕಸಿ ಸಸ್ಯಗಳಿಗಿಂತ ಬೆಳವಣಿಗೆಯಲ್ಲಿ ಮತ್ತು ಫಸಲು ಕೊಡುವುದರಲ್ಲಿ ಏಕರೂಪವಾಗಿರುತ್ತವೆ. ಕಮಾನುಕಸಿಸಸ್ಯಗಳಲ್ಲಿ ಬೇರು ಸಸ್ಯದ ಒಂದು ಭಾಗವು ಉಳಿದಿರುತ್ತದೆ. ಆದರೆ ಈ ವಿಧಾನವು ಹೆಚ್ಚು ಶ್ರಮ ದಾಯಕವಾದ್ದರಿಂದ ಇದನ್ನು ಅಧಿಕ ಪರಿಮಾಣದಲ್ಲಿ ಅನುಸರಿಸಲು ಸಾಧ್ಯವಿಲ್ಲ. ಈ ವಿಧಾನವು ಪ್ರಯೋಗಗಳಿಗಾಗಿ ಏಕರೂಪದ ಸಸ್ಯಗಳನ್ನು ತಯಾರುಮಾಡಲು ಉಪಯುಕ್ತ.

ಚೋದಕ ಸ್ರಾವಗಳು ಮತ್ತು ಬೇರುಬಿಡುವಿಕೆ

ಕಾನ್‌ಪುರದಲ್ಲಿ, ಮಾವಿನ ತುಂಡುಗಳಲ್ಲಿ ಚೋದಕ ಸ್ರಾವಗಳ ಸಹಾಯದಿಂದ ಬೇರು ಬಿಡಿಸುವ ಪ್ರಯತ್ನವನ್ನು ಸಿಂಗ್ ಮತ್ತು ಟಿಯೋಟಿಯ(1951) ಮಾಡಿದರು. ಅವರುಗಳು, β ಇಂಡೋಲಿಯೂಸಿಟಿಕ್ ಆಮ್ಲ, ನ್ಯಾಫ್ತೆಲಿನ್ ಅಸಿಟಿಕ್ ಆಮ್ಲ, ಫಿನೈಲ್ ಅಸಿಟಿಕ್ ಆಮ್ಲ, ಮತ್ತು β ಇಂಡೋಲ್ ಬ್ಯೂಟರಿಕ್ ಆಮ್ಲಗಳನ್ನು ಎರಡು ತಳಿಮಾಪಿಗೆ ಮಾರ್‌ಕೊಟ್ ಮಾಡುವಾಗ ಉಪಯೋಗಿಸಿದರು. ಶೇಕಡಾ ಒಂದರ ನ್ಯಾಫ್ತಲೀನ್ ಅಸಿಟಿಕ್ ಆಮ್ಲವು ದುಸೇರಿ ಮಾವಿನ ತುಂಡುಗಳು ಬೇರುಬಿಡುವುದನ್ನು ನೂರಕ್ಕೆನೂರು ಪಾಲು ಪ್ರಚೋದಿಸಿತು. ಹಾಗೆಯೇ ಶೇಕಡಾ 2ರ ನ್ಯಾಫ್ತಲೀನ್ ಅಸಿಟಿಕ್ ಆಮ್ಲವು ಲಾಂಗ್ರಾ ಮಾವಿನ ತಳಿಯ ಶೇಕಡಾವಾರು

ಮಾವಿನಲ್ಲಿ, ಏರ್‌ಲೇಯರಿಂಗ್, ಗೂಟಿ ಅಥವಾ ಮಾರ್ಕೊಟಿಂಗ್ ವಿಧಾನವು ರೂಢಿಯಲ್ಲಿರುವ ಕಮಾನುಕಸಿಗಿಂತ ಸುಧಾರಿಸಿದ ವಿಧಾನವಾಗಿದೆ. ಈ



ಚಿತ್ರ 16 : ಏರ್‌ಲೇಯರಿಂಗ್

ವಿಧಾನದಲ್ಲಿ ¼ರಿಂದ ½ ಅಂಗುಲ ದಪ್ಪದ ರೆಂಬೆಯನ್ನು ಆರಿಸಿಕೊಂಡು, ತುದಿಯಿಂದ 1 ರಿಂದ 1½ ಅಡಿ ದೂರದಲ್ಲಿ 1½ ಯಿಂದ 2 ಅಂಗುಲ ಅಗಲವಾಗಿ ಕಾಂಡದ ಸುತ್ತಲೂ ಮೇಲ್ಭಾಗದ ತೊಗಟೆಯನ್ನು ತೆಗೆಯಬೇಕು. ತೊಗಟೆ ತೆಗೆದಿರುವ ಸ್ಥಳಕ್ಕೆ ತೇವವಾದ ಪಾಚಿ ಅಥವಾ ತೇವವಾದ ಮತ್ತು ನಯವಾದ ಎಲೆಗೊಬ್ಬರವನ್ನು ಹಾಕಿ, ಪ್ಲಾಸ್ಟಿಕ್ ಹಾಳೆಯಿಂದ ಕಟ್ಟಬೇಕು. ಪ್ಲಾಸ್ಟಿಕ್ ಹಾಳೆಯು ತೇವಾಂಶವನ್ನು ಹೊರಗೆ ಬಿಡದೆ ಗಾಳಿಯಾಡಲು ಅವಕಾಶ ನೀಡುತ್ತದೆ ; ಇವನ್ನು ಗೂಟಿ ಎಂದು ಕರೆಯುತ್ತಾರೆ. ಗೂಟಿಯನ್ನು ಆಗಾಗ ಬಿಸಿನೀರಿನಿಂದ ನೆನೆಸುವುದು ಅಗತ್ಯ. ಸಿಂಗ್ ಎಂಬುವರು ಗೂಟಿಯನ್ನು ಪ್ಲಾಸ್ಟಿಕ್ ಹಾಳೆಯಿಂದ ಸುತ್ತುವುದಕ್ಕೆ ಮೊದಲು ವಿವಿಧ ಸಾಂದ್ರತೆಯ α ನ್ಯಾಫ್ತಲೀನ್ ಅಸಿಟಿಕ್ ಆಮ್ಲ ಮತ್ತು β ಇಂಡೋಲ್ ಅಸಿಟಿಕ್ ಆಮ್ಲಗಳನ್ನು ತೊಗಟೆ ತೆಗೆದಿರುವ ಮೇಲ್ತುದಿಗೆ ಹಚ್ಚಿ ಪ್ರಯೋಗ ಒಂದನ್ನು ಕೈಗೊಂಡರು. ಇದರ ಫಲಿತಾಂಶ ಪ್ರೋತ್ಸಾಹಕಾರಿಯಾಗಿದೆ. ಶೇಕಡಾ 1ರ ನ್ಯಾಫ್ತಲೀನ್ ಅಸಿಟಿಕ್ ಆಮ್ಲ ಹಚ್ಚಿದ ಗೂಟಿಗಳಲ್ಲಿ ಶೇಕಡಾ 37ರವರೆಗೆ ಬೇರು ಬಿಟ್ಟಿದ್ದವು.

ಟಾಪ್ ವರ್ಕಿಂಗ್

ನಮ್ಮ ದೇಶದಲ್ಲಿರುವ ಬಹುತೇಕ ಮಾವಿನ ಮರಗಳು ಓಟೆಗಳಿಂದ ವೃದ್ಧಿಯಾದವು. ಇವು ಕೀಳುದರ್ಜೆಯ ಫಸಲನ್ನು ಕೊಡುತ್ತವೆ. ಕೀಳುದರ್ಜೆಯ ಫಸಲು ಕೊಡುವ ಮರಗಳನ್ನು ಟಾಪ್ ವರ್ಕಿಂಗ್ ಕಾರ್ಯಕ್ಕೆ ಒಳಪಡಿಸುವುದರಿಂದ ಉತ್ತಮ ಫಸಲು ಕೊಡುವಂತೆ ಮಾಡಬೇಕು. ಈ ವಿಧಾನವನ್ನು ಉತ್ತರ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ದೊಡ್ಡ ಪರಿಮಾಣದಲ್ಲಿ ಪ್ರಯತ್ನಿಸಿ ಯಶಸ್ಸುಗಳಿಸಲಾಯಿತು. ಇತ್ತೀಚೆಗೆ ಈ ವಿಧಾನವನ್ನು ಪಚ್‌ಮಾರಿ(ಮಧ್ಯ ಪ್ರದೇಶ)ಯಲ್ಲಿ ಪ್ರಯತ್ನಿಸಲಾಗಿದೆ.

ಪಕ್ಕಕಸಿ (ಸೈಡ್ ಗ್ರಾಫ್ಟಿಂಗ್)

ಬಲಿತ ಮಾವಿನ ಮರಗಳಲ್ಲಿ ಪಕ್ಕಕಸಿ ಮಾಡುವ ವಿಧಾನವು ಯಶಸ್ವಿಯಾದ ಟಾಪ್ ವರ್ಕಿಂಗ್ ವಿಧಾನ. ಈ ವಿಧಾನವು ತೊಗಟೆ ಸೀಳಿರುವ ಸಿಪ್ಪೆ ಅಥವಾ ಗಂಟು ಗಂಟಾದ ತೊಗಟೆಯಿರುವ ಮರಗಳಿಗಿಂತ ನಯವಾದ ತೊಗಟೆಯಿರುವ ಮರಗಳಲ್ಲಿ ಯಶಸ್ವಿಯಾಗುತ್ತದೆ. ಈ ವಿಧಾನ ಹೆಚ್ಚು ವಯಸ್ಸಾಗಿರುವ ಮರಗಳಲ್ಲಿ ಯಶಸ್ವಿಯಾಗಿದೆ. ಈ ಕಾರ್ಯದನಂತರ, ಮೋಡ ಕವಿದ ವಾತಾವರಣ, ತೇವಾಂಶವಿರುವ ವಾತಾವರಣ, ಹೆಚ್ಚು ಗಾಳಿ ಇಲ್ಲದಿರುವಿಕೆ, ಮಳೆ ಬೀಳುವುದು ಮತ್ತು ಉಷ್ಣತೆಯ ವಾತಾವರಣಗಳು ಬಹಳ ಹಿತಕರವಾದುವು. ಆದ್ದರಿಂದ ಟಾಪ್‌ವರ್ಕ್

ಹಳೆಯ ಮರದ ದಪ್ಪವಾದ ರೆಂಬೆಗಳನ್ನು ಕತ್ತರಿಸಿಹಾಕಿ, ಪ್ರತಿಯೊಂದು ರೆಂಬೆಗೆ ಪಕ್ಕಕಸಿ ಮಾಡಬೇಕು. ಹರಿತವಾದ ಚಾಕುವಿನಿಂದ ತ್ರಿಕೋಣಾಕಾರವಾಗಿ ತೊಗಟೆಯನ್ನು ತೆಗೆದು ತೊಗಟೆಯನ್ನು ಎಚ್ಚರಿಕೆಯಿಂದ ಉಳಿಸಿಕೊಳ್ಳಬೇಕು. ತ್ರಿಕೋಣಾಕಾರವಾಗಿ ತೆಗೆದಿರುವ ಸ್ಥಳದ ತಳಭಾಗದಲ್ಲಿ, ಉದ್ದವಾಗಿ ಕೆಳಭಾಗಕ್ಕೆ ಎಂಟರಿಂದ ಹತ್ತು ಅಂಗುಲ ಉದ್ದವಾಗಿ ಸಮಾನಾಂತರವಾದ ಎರಡು ಸೀಳುಗಳನ್ನು ತೆಗೆಯಬೇಕು. ಎರಡು ಸೀಳುಗಳ ನಡುವೆ ಇರುವ ತೊಗಟೆಯನ್ನು ಎಚ್ಚರಿಕೆಯಿಂದ (ಮೇಲ್ಭಾಗದಿಂದ ಪ್ರಾರಂಭಿಸಬೇಕು) ಕಣ್ಣು ಹಾಕುವ ದಂತದ ಅಥವಾ ಉಕ್ಕಿನ ಚಾಕಿನ ಅಲುಗಿನಿಂದ ಎತ್ತಬೇಕು. ಒಂದು ವರ್ಷವಯಸ್ಸಿನ ಚೆನ್ನಾಗಿ ಬಲಿತ ತುದಿಯ ಎರಡು ರೆಂಬೆಗಳಲ್ಲಿ ಎಲೆಗಳನ್ನು ತೆಗೆದುಹಾಕಿ 8 ರಿಂದ 9 ಅಂಗುಲ ಉದ್ದದ ಸೀಸದ ಕಡ್ಡಿ ಗಾತ್ರದ ತುಂಡುಗಳನ್ನು ಕತ್ತರಿಸಿಕೊಳ್ಳಬೇಕು. ಈ ತುಂಡುಗಳ ಒಂದು ತುದಿಯನ್ನು ಬೆಣೆಯಾಕಾರಕ್ಕೆ ಕೊಯ್ದು ಸಿದ್ಧಪಡಿಸಿ ತೊಗಟೆಯ ಸೀಳಿನೊಳಕ್ಕೆ ಭದ್ರವಾಗಿ ಹಿಡಿದುಕೊಳ್ಳುವಂತೆ ಸೇರಿಸಬೇಕು. ಅನಂತರ ಎರಡು ತ್ರಿಕೋಣಾಕಾರದ ತೊಗಟೆಯ ಭಾಗಗಳನ್ನು ಮೊದಲಿದ್ದ ಸ್ಥಿತಿಗೆ ಹೊಂದಿಸಿ ದಾರದಿಂದ ಕಟ್ಟಬೇಕು. ಬ್ಯಾಂಡೇಜಿನ ಮೇಲೆ ಗ್ರ್ಯಾಫ್ಟಿಂಗ್ ವ್ಯಾಕ್ಸ್ ಹಚ್ಚಬೇಕು. ವಿವಿಧ ಎತ್ತರಗಳಲ್ಲಿ ಎಲ್ಲಾ ರೆಂಬೆಗಳಲ್ಲಿ ಮೇಲ್ಕಂಡ ರೀತಿಯಲ್ಲಿ ಕತ್ತರಿಸಿ ಕೀಳುದರ್ಜೆಯ ರೆಂಬೆಗಳಿಗೆ ಉತ್ತಮ ಕಾಂಡತುಂಡುಗಳನ್ನು ಕಟ್ಟಬೇಕು. ಯಶಸ್ವಿಯಾದ ಕಸಿಗಳಲ್ಲಿ, ನಾಲ್ಕರಿಂದ ಆರುವಾರಗಳಲ್ಲಿ ಕಣ್ಣುಗಳು ಬೆಳೆಯುತ್ತವೆ. ಯಶಸ್ವಿಯಾಗದ ಕಸಿಗಳಲ್ಲಿ ಕಾಂಡ ಕಸಿತುಂಡುಗಳು ಒಣಗುತ್ತವೆ. ಈ ಕೆಲವು ಕಸಿಗಳು ಯಶಸ್ವಿಯಾಗಿರುವುದು ಕಂಡುಬಂದನಂತರ ಉಳಿದ ಕೀಳುದರ್ಜೆಯ ರೆಂಬೆಗಳನ್ನು ಕ್ರಮೇಣ ಕತ್ತರಿಸಬೇಕು. ಕತ್ತರಿಸುವ ಭಾಗಕ್ಕೆ ಟಾರ್ ಮುಂತಾದ ಸೋಂಕು ನಿವಾರಕವನ್ನು ಹಚ್ಚಬೇಕು. ಮೂರು ತಿಂಗಳ ಬಳಿಕ ಕಸಿಗೆ ಕಟ್ಟಿರುವ ಬ್ಯಾಂಡೇಜ್ ಮತ್ತು ವ್ಯಾಕ್ಸ್ ಟೇಪನ್ನು ಬಿಚ್ಚುವುದು ಅಗತ್ಯ. ಕಸಿಮಾಡಿದ ಎರಡು ಅಥವಾ ಮೂರು ವರ್ಷಗಳನಂತರ ಉತ್ತಮ ತಳಿಯ ಕಾಂಡಸಸ್ಯವು ಫಲಬಿಡುತ್ತದೆ.

ನಾಯಕ್‌ರವರು (1941) ಕೊಡೂರು ಹಣ್ಣಿನ ಸಂಶೋಧನಾ ಕೇಂದ್ರದಲ್ಲಿ ಈ ವಿಧಾನದ ಪ್ರಯೋಗಮಾಡಿ ಪ್ರೋತ್ಸಾಹಕಾರಿ ಫಲಿತಾಂಶಗಳನ್ನು ವರದಿಮಾಡಿದ್ದಾರೆ. ಖಾದರ್, ನೀಲಂ, ಅಲಂಪೂರ್ ಮತ್ತು ಬಂಗನಪಲ್ಲಿ ಎಂಬ ನಾಲ್ಕು ವಾಣಿಜ್ಯ ತಳಿಗಳಮೇಲೆ ವಿವಿಧ ಕಾಲಗಳಲ್ಲಿ ಮೇಲ್ಕಂಡ ಪ್ರಯೋಗವನ್ನು ನಡೆಸಿದರು. ಪ್ರಯೋಗಕ್ಕೆ ಒಂದುವರ್ಷ ವಯಸ್ಸಿನ ಗುಂಡಾಗಿರುವ, ಕೊಳವೆಯಾಕಾರದ, ತುದಿಯಲ್ಲಿ ಚೆನ್ನಾಗಿ ಉಬ್ಬಿರುವ ಕಣ್ಣುಗಳಿರುವ ಕಡ್ಡಿಗಳನ್ನು ಉಪಯೋಗಿಸಲಾಯಿತು. ಕಸಿಯಶಸ್ಸಿನ ವಿಶ್ಲೇಷಣೆಯಿಂದ ಖಾದರ್ ಎಂಬ ತಳಿಯು ವರ್ಷದ ಎಲ್ಲಾ ಕಾಲ

ತಳಿಯಲ್ಲಿ ಅಕ್ಟೋಬರ್ ತಿಂಗಳಲ್ಲಿ ಶೇಕಡಾ 90 ಮತ್ತು ನವಂಬರ್ ತಿಂಗಳಲ್ಲಿ ಶೇಕಡಾ 100ರಷ್ಟು ಯಶಸ್ಸು, ಅಲಂಪೂರ್ ಬಾನೆಷಾನ್ ಅಕ್ಟೋಬರ್ ಮತ್ತು ನವಂಬರ್ ತಿಂಗಳಲ್ಲಿ ಶೇಕಡಾ 80ರಿಂದ 90 ಯಶಸ್ಸು ಮತ್ತು ಬಂಗನಪಲ್ಲಿ ತಳಿಯು ಅಕ್ಟೋಬರ್ ತಿಂಗಳಲ್ಲಿ ಶೇಕಡಾ 50 ಮತ್ತು ನವಂಬರ್ ತಿಂಗಳಲ್ಲಿ ಶೇಕಡಾ 100ರಷ್ಟು ಯಶಸ್ಸು ಕೊಟ್ಟಿದೆ.

ಕ್ರೌನ್ ಗ್ರಾಫ್ಟಿಂಗ್

ಈ ವಿಧಾನವು ತುಲನಾತ್ಮಕವಾಗಿ ಕಡಮೆ ವೆಚ್ಚದ ವಿಧಾನ. ಟಾಪ್ ವರ್ಕ್ ಕ್ರಮವನ್ನು ಅನುಸರಿಸಬೇಕಾದ ದೊಡ್ಡ ಮರದ ಪ್ರಮುಖ ರೆಂಬೆಗಳನ್ನು ತಾಯಿ ಕಾಂಡದಿಂದ ಮುಂದಕ್ಕೆ ಮೂರರಿಂದ ನಾಲ್ಕು ಅಡಿ ಎತ್ತರದಲ್ಲಿ ಕತ್ತರಿಸಬೇಕು. ನೇರವಾಗಿ ಬೆಳೆಯುವ ರೆಂಬೆಗಳು ಕ್ರೌನ್ ಗ್ರಾಫ್ಟಿಂಗ್ ಕಾರ್ಯಕ್ಕೆ ಯೋಗ್ಯವಾದವು. ಕತ್ತರಿಸಿದ ಮುಖ್ಯ ರೆಂಬೆಗಳ ತುದಿಗೆ, ಇಚ್ಛಿಸಿದ ಉತ್ತಮ ತಳಿಯ ಕಸಿಕೊಂಬೆಗಳನ್ನು ಕ್ಲೆಫ್ಟ್ ಗ್ರಾಫ್ಟಿಂಗ್ ಮಾಡಬೇಕು.

ತೇವಾಂಶದಿಂದ ಕೂಡಿದ ವಾತಾವರಣದಲ್ಲಿ ಮಾಡಿದ ಕ್ರೌನ್ ಗ್ರಾಫ್ಟಿಂಗ್ ಹೆಚ್ಚು ಯಶಸ್ಸು ಗಳಿಸುತ್ತದೆ ಎಂದು ಗಾಂಧಿಯವರು(1955) ಸೂಚಿಸಿದ್ದಾರೆ. ತೇವಾಂಶವನ್ನು ಕಾಪಾಡಲು ಇವರು ಒಂದು ಸರಳ ವಿಧಾನವನ್ನು ರೂಪಿಸಿದ್ದಾರೆ. ಅದರಂತೆ, ಮಾಡಿರುವ ಗ್ರಾಫ್ಟ್ ಮೇಲೆ ಮರದ ಹೊಟ್ಟು ಇರುವ ಹುಲ್ಲಿನ ಆವರಿಕೆಯನ್ನು ಅಳವಡಿಸಿ, ಕಸಿಕೊಂಬೆಗೆ ಬೆಳಕು ಸಿಕ್ಕುವಂತೆ ಗಾಜಿನ ಮೇಲ್ಹೊದಿಕೆ ಮಾಡಬೇಕು. ದಿನ ಬಿಟ್ಟು ದಿನ ಮರದ ಹೊಟ್ಟಿಗೆ ಕಸಿ ಯಶಸ್ಸುಗಳಿಸುವವರೆಗೆ ತೇವಾಂಶವಿರುವಂತೆ ಸ್ವಲ್ಪ ನೀರು ಹಾಕಬೇಕು. ಬೇರುಸಸ್ಯದ ಬುಡಗಳಿಗೆ ವಾರಕ್ಕೆ ಒಂದು ಸಾರಿ ನೀರುಕೊಟ್ಟು ಅವು ಕಸುವುಯುಕ್ತ ರಸಮಯವಾಗಿ ಉಳಿಯುವಂತೆ ಮಾಡಬೇಕು.

ನೆಡುವುದು

ಸಸ್ಯಗಳನ್ನು ತೋಟದಲ್ಲಿ ನಾಟಿಮಾಡುವುದಕ್ಕೆ ಮೊದಲು ಗಾಳಿತಡೆಯನ್ನು ...ರ್ಮಿಸುವುದು ಅಗತ್ಯ. ಗಾಳಿತಡೆಯು ಮಾವಿನ ಮರಗಳಿಗೆ ಶಾಖಗಾಳಿ, ಚಂಡಮಾರುತ, ಹಿಮ ಮುಂತಾದವುಗಳ ಹಾವಳಿಯಿಂದ ರಕ್ಷಣೆ ನೀಡುತ್ತದೆ. ಗಾಳಿತಡೆ ...ದ ಪರಿಸ್ಥಿತಿ ಮಾವಿನ ಮರಗಳಿಗೆ ಗಣನೀಯ ತೊಂದರೆಯನ್ನು ಉಂಟುಮಾಡು...

ದೂರ ವ್ಯಾಪಿಸಿರುತ್ತದೆ. ವಿಸ್ತಾರವಾದ ತೋಟಕ್ಕೆ ಒಂದಕ್ಕಿಂತ ಹೆಚ್ಚು ಸಾಲು ಗಾಳಿತಡೆ ಮರಗಳನ್ನು ನೆಡುವುದು ಅಗತ್ಯ. ಸ್ಥಳೀಯ ಪರಿಸ್ಥಿತಿಯಲ್ಲಿ ದಷ್ಟಪುಷ್ಟವಾಗಿ, ಶೀಘ್ರವಾಗಿ ಮತ್ತು ಎತ್ತರವಾಗಿ ಬೆಳೆಯುವ ಮರಗಳನ್ನು ಈ ಕಾರ್ಯಕ್ಕಾಗಿ ನಾಟಿಮಾಡಬೇಕು. ಇದಕ್ಕೆ ಸಾಮಾನ್ಯವಾಗಿ ಎತ್ತರವಾಗಿ ಬೆಳೆಯುವ ಸಿಸಿಹ್ಯಾಮ್ (ಡಾಲ್‌ಬರ್ಜಿಯಾಸಿಸೋ), ಯೂಕಲಿಪ್ಟಸ್ ಪ್ರಭೇದ, ನೇರಳೆ (ಸಿಜಿಯಮ್ ಕುಮಿನ್ನೈ), ರೆಡ್‌ಸ್ಯಾಂಡರ್ಸ್ (ಟೆರೋಕಾರ್ಪಸ್ ಸ್ಯಾಂಟಲಿನಸ್), ಮಿಲಿಂಗ್‌ಟೋನಿಯ ಹಾರ್ಟೆನ್‌ಸಿಸ್ ಎರಿತ್ರಿನಾ ಇಂಡಿಕಾ ಮತ್ತು ಕ್ಯಾಸುರಿನಾ ಇಕ್ವಿಸೆಟಿಫೋಲಿಯ ಮುಂತಾದವು ಯೋಗ್ಯವಾದವು. ಮಾವಿನ ಓಟೆಯಿಂದ ಬೆಳೆದ ಮರಗಳು ಮತ್ತು ಬಿದಿರುಗಳನ್ನು ಸಹ ಗಾಳಿ ತಡೆಗಾಗಿ ಬೆಳೆಸಬಹುದು. ಕುಳ್ಳು ಮತ್ತು ಎತ್ತರವಾದ ಮರಗಳನ್ನು ಪರ್ಯಾಯ ಸಾಲುಗಳಲ್ಲಿ ಗಾಳಿತಡೆಗಾಗಿ ಬೆಳೆಸುವುದು ಉಚಿತ.

ನಾಟಿಮಾಡುವಾಗ ಉತ್ತಮವಾದ ಕಸಿಸಸ್ಯಗಳನ್ನು ಆರಿಸುವುದು ಬಹಳ ಮುಖ್ಯ. ನಂಬಲರ್ಹ ಮೂಲದಿಂದ ಸೂಕ್ತ ತಳಿ ಸಸ್ಯಗಳನ್ನು ತರಬೇಕು. ಹೊಸದಾಗಿ ತಾಯಿಮರದಿಂದ ಪ್ರತ್ಯೇಕಿಸಿದ ಕಸಿಸಸ್ಯಗಳನ್ನು ಕೊಳ್ಳಬಾರದು ಮತ್ತು ಆರೋಗ್ಯವಾಗಿ, ನೇರವಾಗಿ, ಉತ್ತಮವಾಗಿ ಸಂಯೋಗವಾಗಿರುವ ಮತ್ತು ದೊಡ್ಡ ಕುಂಡಗಳಲ್ಲಿರುವ ಕಸಿಗಳನ್ನು ಆರಿಸಿಕೊಳ್ಳಬೇಕು. ತಾಯಿಮರದಿಂದ ಪ್ರತ್ಯೇಕಿಸಿದ ಆರು ತಿಂಗಳ ಒಳಗೆ ನಾಟಿಮಾಡಲು ಸಾಧ್ಯವಾಗದಿದ್ದಲ್ಲಿ ಕಸಿಸಸ್ಯಗಳ ಕುಂಡದಲ್ಲಿರುವ ಮಣ್ಣನ್ನು ಬದಲಾಯಿಸಬೇಕು, ಇಲ್ಲದಿದ್ದರೆ ಕುಂಡದಲ್ಲಿ ಬೇರುಗಳು ತುಂಬಿಹೋಗುತ್ತವೆ.

ಚಚ್ಚೌಕವಾಗಿ ಅಥವಾ ಷಡ್ಭುಜಾಕಾರವಾಗಿ ಮಾವಿನ ಸಸಿಗಳನ್ನು ನಾಟಿ ಮಾಡಬಹುದು. ನೆಡುವ ಅಂತರವು ತಳಿ, ಮಣ್ಣು ಮತ್ತು ಹವಾಗುಣವನ್ನು ಅನುಸರಿಸುತ್ತದೆ. ಅನೇಕ ಸ್ಥಳಗಳಲ್ಲಿ 40 ಅಡಿ ಅಂತರ ಸರಿಹೊಂದುತ್ತದೆ. ದುಸೆರಿ ಮುಂತಾದ ತಳಿಗಳ ಮರಗಳು ದೊಡ್ಡ ಮರಗಳಾಗಿ ಬೆಳೆಯುವುದರಿಂದ 45ಅಡಿ ಅಂತರದಲ್ಲಿ ನೆಡಬಹುದು. ಹಾಗೆಯೇ ಲಾಂಗ್ರಾ ಮುಂತಾದ ತಳಿಗಳು ವಿಶಾಲವಾಗಿ ಬೆಳೆಯುವುದರಿಂದ 45ಅಡಿ ಅಂತರದಲ್ಲಿ ನೆಡಬೇಕು. ಫಲವತ್ತಾದ ಮಣ್ಣು ಮತ್ತು ಮಾವಿಗೆ ಹಿತಕರವಾದ ಹವಾಗುಣದಲ್ಲಿ ಸಸಿ ನಾಟಿಮಾಡುವಾಗ ಹೆಚ್ಚು ಅಂತರ ಕೊಡುವುದು ಅಗತ್ಯ. ಉದಾಹರಣೆಗೆ, ಗುಜರಾತ್ ರಾಜ್ಯದ ಸಮುದ್ರತೀರ ಪ್ರದೇಶ ಮತ್ತು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಗಳಲ್ಲಿ ಮಾವಿನ ಬೆಳೆಗೆ 60ಅಡಿ ಅಂತರ ಕೊಡಬೇಕು. ಓಟೆಯಿಂದ ಬೆಳೆಸಿದ ಮರಗಳು ಸಾಮಾನ್ಯವಾಗಿ ದೊಡ್ಡ ಗಾತ್ರದವು ಮತ್ತು ಎತ್ತರವಾಗಿ ಬೆಳೆಯುವುದರಿಂದ ಹೆಚ್ಚು ಅಂತರ ಕೊಡಬೇಕು.

ತೋಟದಲ್ಲಿ ಸಸಿಗಳನ್ನು ನಾಟಿಮಾಡುವ ಮೊದಲು 3x3x3 ಅಡಿ ಗಾತ್ರದ ಗುಂಡಿಗಳನ್ನು ಸಸಿಮಾಡುವ ಒಂದು ತಿಂಗಳು ಮೊದಲು ತೆಗೆಯಬೇಕು. ಅನಂತರ ಗುಂಡಿಗಳನ್ನು 100 ಪೌಂಡು ಮೂಳೆ ಪುಡಿ ಮತ್ತು 10 ಪೌಂಡು ಸೌದೆಬೂದಿ ಮಿಶ್ರಣಮಾಡಿದ ಮೇಲ್ಮಣ್ಣಿನಿಂದ ತುಂಬಬೇಕು (ಬರ್ನ್ಸ್ ಮತ್ತು ಪ್ರಯಾಗ್, 1920). ಒಣ ಪ್ರದೇಶಗಳಲ್ಲಿ ಗೆದ್ದಲನ್ನು ಆಕರ್ಷಿಸುವ ಕೊಟ್ಟಿಗೆ ಗೊಬ್ಬರದ ಬದಲು 5 ಪೌಂಡು ಬೇವಿನಹಿಂಡಿ ಅಥವಾ ಹಿಪ್ಪೆಹಿಂಡಿಯನ್ನು ಉಪಯೋಗಿಸಬೇಕು. ಪ್ರತಿ ಗುಂಡಿಗೆ 10 ರಿಂದ 20 ಪೌಂಡು ಚೆನ್ನಾಗಿ ಕೊಳೆತಿರುವ ಕೊಟ್ಟಿಗೆ ಗೊಬ್ಬರ ಕೊಡಬೇಕೆಂದು ನಾಯಕ್(1949) ಶಿಫಾರಸ್ಸು ಮಾಡಿದ್ದಾರೆ. ಗೆದ್ದಲು ಹುಳುಗಳ ತೊಂದರೆಯನ್ನು ತಪ್ಪಿಸಲು, ಸಸಿ ನಾಟಿ ಮಾಡುವುದಕ್ಕೆ 6ರಿಂದ 12 ತಿಂಗಳು ಮೊದಲು ಗೊಬ್ಬರವನ್ನು ಗುಂಡಿಗಳಿಗೆ ಹಾಕಬೇಕು ಅಥವಾ ಮೇಲೆ ಸೂಚಿಸಿರುವಷ್ಟು ಕಾಲ ಶೇಖರಣೆಮಾಡಿ ನಾಟಿಮಾಡಿದ ನಂತರ ಹಾಕಬಹುದು. ಶೀಮ ಮತ್ತು ಇತರರು(1954) ನಾಯಕರ ವಾದವನ್ನು ಸಮರ್ಥಿಸಿದ್ದಾರೆ ಮತ್ತು ಹೊಸಗೊಬ್ಬರವು ಮಣ್ಣಿನಲ್ಲಿ ವಿಪರೀತ ಶಾಖವುಂಟುಮಾಡಿ, ಬೆಳೆಯುತ್ತಿರುವ ಎಳೆಯ ಮಾವಿನ ಸಸಿಗಳ ಬೇರಿಗೆ ಹಾನಿಯನ್ನುಂಟು ಮಾಡಬಹುದೆಂದು ಅಭಿಪ್ರಾಯಪಡುತ್ತಾರೆ. ಇವರು ಪ್ರತಿ ಗುಂಡಿಗೆ 25 ಪೌಂಡು ಕೊಟ್ಟಿಗೆ ಗೊಬ್ಬರ, $1\frac{1}{2}$ ಪೌಂಡು ಮೂಳೆಪುಡಿ ಮತ್ತು $2\frac{1}{2}$ ಪೌಂಡು ಬೂದಿ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಗಾಂಧಿಯವರ (1955) ಪ್ರಕಾರ ರತ್ನಗಿರಿ ಪ್ರದೇಶದಲ್ಲಿ ಮಣ್ಣು ಮತ್ತು ಹಸುರೆಲೆ ಗೊಬ್ಬರವನ್ನು ಪರ್ಯಾಯ ಪದರಗಳಲ್ಲಿ ಹಾಕಬೇಕು. ಈ ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದರಿಂದ ಹೊಸ ಹಸುರೆಲೆ ಗೊಬ್ಬರ ಶೀಘ್ರವಾಗಿ ಕೊಳೆತುಹೋಗುತ್ತದೆ ಮತ್ತು ಗೆದ್ದಲು ಹುಳುಗಳ ಹಾವಳಿ ಇರುವುದಿಲ್ಲ.

ಗುಂಡಿಗಳಿಗೆ ಮಣ್ಣನ್ನು ತುಂಬಿದಾಗ, ಗುಂಡಿಗೆ ತುಂಬಿದ ಮಣ್ಣು ಭೂಮಟ್ಟಕ್ಕಿಂತ ಎತ್ತರವಾಗಿರಬೇಕು. ಮುಂಗಾರು ಮಳೆ ಪ್ರಾರಂಭವಾದನಂತರ ಗುಂಡಿಗಳನ್ನು ತುಂಬಬೇಕು ಅಥವಾ ಗುಂಡಿ ತುಂಬಿದನಂತರ ನೀರಾವರಿ ಮಾಡಬೇಕು. ಗುಂಡಿಗಳನ್ನು ತುಂಬಿದ ಎರಡು ವಾರಗಳನಂತರ ಮಣ್ಣು ನೆಲೆಗೊಂಡ ಬಳಿಕ ಸಸಿಗಳನ್ನು ನಾಟಿಮಾಡಿದರೆ ಅವು ಕೆಳಕ್ಕೆ ಕುಸಿಯುವುದಿಲ್ಲ.

ಮಾವಿನ ಸಸಿಗಳನ್ನು ಮಳೆಗಾಲದಲ್ಲಿ ನಾಟಿಮಾಡಬೇಕು. ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಮುಂಗಾರು ಮಳೆಯನಂತರ ನಾಟಿಮಾಡಿದರೆ ಹೆಚ್ಚು ತೇವಾಂಶದಿಂದ ಸಸಿಗಳು ಸಾಯುವುದಿಲ್ಲ. ದಕ್ಷಿಣಭಾರತದಲ್ಲಿ, ಜುಲೈ ತಿಂಗಳಿಂದ ನವೆಂಬರ್ ತಿಂಗಳವರೆಗೆ ಮಾವಿನ ಸಸಿಗಳನ್ನು ನಾಟಿಮಾಡಬಹುದು ಉತ್ತರ

ಕಾಲ. ಆದರೆ, ಮೊದಲ ಸಾರಿ ಮುಂಗಾರು ಮಳೆ ಬಿದ್ದನಂತರ ಮಾವಿನ ಸಸಿಗಳನ್ನು ನಾಟಿಮಾಡಿದರೆ, ಮಳೆ ಸರಿಯಾಗಿ ಪ್ರಾರಂಭವಾಗುವ ಹೊತ್ತಿಗೆ ಸಸಿಗಳು ಉತ್ತಮವಾಗಿ ನೆಲೆಗೊಳ್ಳುತ್ತವೆ. ನಾಟಿಮಾಡುವುದಕ್ಕೆ ಸಂಜೆಯು ಸಮಯ ಸೂಕ್ತವಾದದ್ದು. ಮಾವಿನ ಸಸಿಗಳನ್ನು ಬೆಳಗಿನ ಹೊತ್ತಿನಲ್ಲಿ ನಾಟಿಮಾಡಿದರೆ, ಮಧ್ಯಾಹ್ನದ ಬಿಸಿಲಿನ ಝಳದಿಂದ ಸಸಿಗಳು ಅನಾನುಕೂಲತೆಯನ್ನು ಅನುಭವಿಸುತ್ತವೆ. ಕುಂಡಗಳಲ್ಲಿರುವ ಮಾವಿನ ಸಸಿಗಳನ್ನು ಹೊರತೆಗೆದು ಗುಂಡಿಗಳ ಮಧ್ಯದಲ್ಲಿ ಮಣ್ಣಿನ ಉಂಡೆ ಹಿಡಿಸುವಷ್ಟು ಮಾಡಿರುವ ರಂಧ್ರದಲ್ಲಿ ಇಟ್ಟು ಮಣ್ಣಿನಿಂದ ಭದ್ರವಾಗಿ ಮುಚ್ಚಿ ಸಸಿಗಳು ನೇರವಾಗಿ ನಿಲ್ಲುವಂತೆ ಮಾಡಬೇಕು. ನಾಟಿಮಾಡಿದ ಪಾತಿಯ ಮಣ್ಣು ಮಾವಿನ ಸಸಿಯ ಬುಡದಿಂದ ಹೊರಭಾಗಕ್ಕೆ ಇಳಿಜಾರಾಗುವಂತೆ ಮಾಡುವುದರಿಂದ ನೀರು ಸಸಿಯ ಬುಡಕ್ಕೆ ಮುಚ್ಚಿ, ಕಾಂಡ ಕೊಳೆಯುವುದು ಮುಂತಾದ ತೊಂದರೆಗಳನ್ನು ತಪ್ಪಿಸುತ್ತದೆ. ಸಸಿಗಳನ್ನು ಕುಂಡದಲ್ಲಿ ಮೊದಲು ನಾಟಿಮಾಡಿದ್ದ ಆಳಕ್ಕೆ ಅನುಗುಣವಾಗಿ ಗುಂಡಿಯಲ್ಲಿ ನಾಟಿಮಾಡಬೇಕು. ಹೆಚ್ಚು ಆಳವಾಗಿ ನಾಟಿಮಾಡುವುದರಿಂದ ಮುಂದಿನ ಬೆಳವಣಿಗೆ ಕುಂಠಿತವಾಗುತ್ತದೆ ಮತ್ತು ತೊಗಟೆಯು ಶಿಲೀಂಧ್ರ ರೋಗಗಳಿಗೆ ತುತ್ತಾಗುತ್ತದೆ. ಸಸಿಗಳನ್ನು ನಾಟಿಮಾಡಿದ ನಂತರ ಯಥೇಚ್ಛವಾಗಿ ನೀರು ಕೊಡಬೇಕು. ಸಸಿಗಳಿಗೆ ಊರುಗೋಲು ಕೊಡುವುದರಿಂದ ಕೂಡಿಕೆಯ ಮೇಲ್ಭಾಗ ಗಾಳಿಗೆ ಮುರಿದುಹೋಗುವುದನ್ನು ತಪ್ಪಿಸಬಹುದು. ಮಾವಿನ ಕಸಿಸಸ್ಯಗಳು ಬಹಳ ಸೂಕ್ಷ್ಮ. ಇವುಗಳನ್ನು ತೋಟದಲ್ಲಿ ನಾಟಿಮಾಡಿದ ನಂತರ ಎಚ್ಚರಿಕೆ ವಹಿಸದಿದ್ದರೆ ಸಾಯುವ ಸಾಧ್ಯತೆ ಹೆಚ್ಚು. ಆದ್ದರಿಂದ ಅವುಗಳನ್ನು ಹಿಮ ಮತ್ತು ಶಾಖದಿಂದ ಕೂಡಿದ ಗಾಳಿಯಿಂದ ರಕ್ಷಿಸಲು ಎರಡುಮೂರು ವರ್ಷದವರೆಗೆ ಪ್ರತಿಯೊಂದು ಸಸಿಗೂ ಸಣ್ಣ ಚಪ್ಪರ ಹಾಕುವುದು ಅವಶ್ಯ. ಈ ಸಮಸ್ಯೆ ಉತ್ತರ ಭಾರತದಲ್ಲಿ ಬಹಳ ತೀವ್ರವಾಗಿದೆ.

ಬೇಸಾಯ ಪದ್ಧತಿಗಳು

ಸಸಿಗಳನ್ನು ನಾಟಿಮಾಡಿದನಂತರ, ಅವು ಕಸುವಿನಿಂದ ಬೆಳೆಯಬೇಕು. ಆದ್ದರಿಂದ ನೀರಾವರಿ ಮತ್ತು ಗೊಬ್ಬರ ಕೊಡುವುದು ಅಗತ್ಯವಾಗುತ್ತದೆ. ಸಸಿಗಳನ್ನು ಯಾವ ಕಾರಣಕ್ಕೂ ಸವರಬಾರದು ಮತ್ತು ತಾಯಿಕಾಂಡದ ಬೆಳವಣಿಗೆಗೆ ಯಾವ ಕಾರಣದಿಂದಲೂ ತೊಂದರೆಯಾಗಬಾರದು. ಮುಂದೆ ಮರಗಳು ಸರಿಯಾದ ಆಕಾರಕ್ಕೆ ಬೆಳೆಯುವಂತೆ ಗಮನವಹಿಸಬೇಕು. ಮಾವಿನ ಗಿಡಗಳನ್ನು ಸರಿಯಾದ ಆಕಾರಕ್ಕೆ ಬೆಳೆಸಲು ಸವರುವಾಗ, ಎಚ್ಚರತಪ್ಪಿ ತಾಯಿಕಾಂಡವು ಬಿಸಿಲಿನ ತಾಪಕ್ಕೆ ಸಿಕ್ಕುವಂತೆ ರೆಂಬೆಗಳನ್ನು ಕತ್ತರಿಸಬಾರದು ಮತ್ತು ನೆಲದಿಂದ ಮೇಲೆ ಮೊದಲ

ಅಡಿಗಳಿಗಿಂತ ಹೆಚ್ಚು ಬೆಳೆಯಲು ಅವಕಾಶನೀಡದೆ ಇದ್ದರೆ, ಸೂರ್ಯನ ಕಿರಣಗಳಿಂದ ಸುಡುವುದನ್ನು ತಪ್ಪಿಸಬಹುದು. ಬೆಳಕಿಗೆ ಸಿಕ್ಕದಿರುವ ಕೇವಲ ಹೆಣೆದುಕೊಂಡಿರುವ ಮತ್ತು ಗುಂಪಾಗಿರುವ ರೆಂಬೆಗಳನ್ನು ಮಾತ್ರ ತೆಗೆಯಬೇಕು. ಸವರುವುದಕ್ಕಿಂತ ಸವರದೆ ಇರುವುದೇ ಲೇಸು. ಆದರೂ ಬೇರುಸಸ್ಯದಲ್ಲಿರುವ ಮೋಸುಗಳು ಮತ್ತು ಮೊದಲನೆ ನಾಲ್ಕು ವರ್ಷಗಳಲ್ಲಿನ ಎಲ್ಲ ಹೂವನ್ನು ಅಗತ್ಯವಾಗಿ ತೆಗೆಯಬೇಕು.

ಗೊಬ್ಬರ ಮತ್ತು ನೀರಾವರಿ ಮಾಡುವುದೂ ಸೇರಿ ಬೇಸಾಯಕ್ರಮಗಳ ಬಗ್ಗೆ ದೊರೆತಿರುವ ಪ್ರಾಯೋಗಿಕ ಅಂಕಿಅಂಶಗಳು ಸಾಕಷ್ಟು ಇವೆ, ಮತ್ತು ವಿವಿಧ ಸಂಶೋಧಕರು ಮಾಡಿರುವ ಸಲಹೆಗಳು ಸೀಮಿತವಾದ ಅಭಿಪ್ರಾಯಗಳಾಗಿವೆ. ಸಾಮಾನ್ಯವಾಗಿ ಮಾವಿನ ಬೆಳೆಗೆ ಮೊದಲ ಮೂರು ನಾಲ್ಕು ವರ್ಷಗಳನಂತರ ನೀರಾವರಿ ಮಾಡುವುದು ರೂಢಿಯಲ್ಲಿಲ್ಲ. ಸಸಿಗಳನ್ನು ನಾಟಿಮಾಡಿದ ಮೇಲೆ ಒಣ ಪರಿಸ್ಥಿತಿಯಲ್ಲಿ ನೀರಾವರಿ ಮತ್ತು ಮಳೆಗಾಲದಲ್ಲಿ ಸಹ ಅಗತ್ಯವಾದಾಗ ನೀರಾವರಿ ಮಾಡುವುದನ್ನು ಶಿಫಾರಸ್ಸು ಮಾಡಲಾಗಿದೆ. ಕೆಲವು ಸಂಶೋಧಕರು, ನಾಟಿಮಾಡಿದ ಮೊದಲ ವರ್ಷದ ಒಣ ಪರಿಸ್ಥಿತಿಯಲ್ಲಿ ಎರಡು ಮೂರು ದಿವಸಗಳಿಗೆ ಒಮ್ಮೆ ನೀರಾವರಿಮಾಡಲು ಸಲಹೆ ಮಾಡಿದ್ದಾರೆ. ಇದು ಬಹಳ ಹೆಚ್ಚಾಯಿತು. ಮಣ್ಣನ ಕಡಮೆ ಅಂತರದಲ್ಲಿ ತೇವ ಮಾಡುವುದಕ್ಕಿಂತ, ಹೆಚ್ಚು ಅಂತರದಲ್ಲಿ ಹೆಚ್ ಪ್ರಮಾಣದ ನೀರು ಕೊಡುವುದು ಸೂಕ್ತ. ಮೇಲ್ಭಾಗದ 9ಅಂಗುಲ ಮಣ್ ಒಣಗಿದಾಗ ಮಾವಿನ ಸಸಿಗಳಿಗೆ ನೀರಾವರಿ ಮಾಡಬೇಕೆಂದು ನಾಯಕ್(1949 ಸಲಹೆ ಮಾಡಿದ್ದಾರೆ. ಈ ಹಂತದಲ್ಲಿ, ನೀರಾವರಿಮಾಡಲು ಪರಿವರ್ತಿತಪಾತಿ ನಿಯಮವನ್ನು ಅನುಸರಿಸಬೇಕು. ನೀರಾವರಿ ಕೊರತೆಯಿಂದ ರತ್ನಗಿರಿಯಂತಹ ಪ್ರದೇಶಗಳಲ್ಲಿ ಮಾವಿನ ಸಸಿಗಳಿಗೆ ಕೈಯಿಂದ ನೀರು ಕೊಡಬೇಕಾಗುತ್ತದೆ. ಮಾವಿಗೆ, ಒಂದ ವರ್ಷಕ್ಕೆ 50ರಿಂದ 70 ಅಂಗುಲ ನೀರಾವರಿ ಬೇಕಾಗುತ್ತದೆ. ಇದರಲ್ಲಿ ಬಹುಪಾಲ ನೀರಾವರಿ, ಮಾವಿನ ಹೂವು ಅರಳುವುದರಿಂದ ಹಿಡಿದು ಫಸಲು ಮಾಗಿಯುವವರೆ ಬೇಕಾಗುತ್ತದೆ ಮತ್ತು ಹೂ ಬಿಡುವುದಕ್ಕೆ ಮೊದಲು 2–3 ತಿಂಗಳ ಕಾಲ ನೀರಾವ ಯನ್ನು ತಪ್ಪಿಸಬೇಕು ಎಂದು ಹಿಗ್ಗಿನ್ಸ್ (1906) ಸಲಹೆ ಮಾಡಿದ್ದಾರೆ.

ಹೂ ಪ್ರಾರಂಭವಾದ ಬಳಿಕ ಫಲ ಮಾಗಿಯುವವರೆಗೆ ನೀರಾವರಿ ಬೇಕೇ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿರುವ ಗೂಢಾರ್ಥವೆಂದರೆ ಹಸುರು ಭಾಗ ಬೆಳೆಯುವುದನ್ನು ಮಿತಗೊಳಿಸಿ ಮೊಗ್ಗು ಮತ್ತು ಹೂ ಬಿಡಲ ಪ್ರೋತ್ಸಾಹಿಸುವುದು ಆದರೂ, ಈ ಕಾಲದಲ್ಲಿ 1 ಅಥವಾ 2 ನೀರಾವರಿ ಅಗತ್ ವೆಂದು ಕೆಲವರ ಅಭಿಪ್ರಾಯ. ಮೈದಾನ ಪ್ರದೇಶಗಳಲ್ಲಿ ಫಲಬಿಡುವ ಮಾವಿ ಮರಗಳಿಗೆ ನೀರಾವರಿ ಮಾಡುವುದು ಎಂದರೆ ನೀರನ್ನು ಹರಿಸುವುದು ಎಂದರ್ಥ.

ಎಳೆಯ ಮಾವಿನ ತೋಟದಲ್ಲಿ ಮಧ್ಯಂತರ ಬೆಳೆಯನ್ನು ಬೆಳೆಯುವುದು ಉತ್ತಮ ಪದ್ಧತಿ. ಇದರಿಂದ, ಫಸಲು ಸಿಕ್ಕದಿರುವ ಕಾಲದಲ್ಲಿ ವರಮಾನ ಸಿಕ್ಕುತ್ತದೆ ; ಮತ್ತು ಪರೋಕ್ಷವಾಗಿ, ಮಾವಿನ ಮರಗಳಿಗೆ ನೀರಾವರಿ, ಗೊಬ್ಬರ ಮತ್ತು ಬೇಸಾಯ ಒದಗುತ್ತದೆ. ಇದರಿಂದ, ಒಣ ಪರಿಸ್ಥಿತಿಯಲ್ಲಿ ತೋಟಕ್ಕೆ ತೇವಾಂಶ ಸಿಕ್ಕುತ್ತದೆ. ಮಧ್ಯಂತರ ಬೆಳೆಯಾಗಿ ಯಾವುದಾದರೂ ಕಡಲೆಯಂಥ ಬೇರುಗಂಟು ಬೆಳೆ, ಬರ್‌ಸೀಮ್ ಅಥವಾ ಬಟಾಣಿ ಮುಂತಾದವುಗಳನ್ನು ಬೆಳೆಯಬಹುದು. ವಾಸ್ತವವಾಗಿ ಎತ್ತರಕ್ಕೆ ಬೆಳೆಯದಿರುವ ಬೆಳೆಗೆ ಹೆಚ್ಚು ನೀರಾವರಿ ಅಗತ್ಯವಿಲ್ಲದಿರುವುದರಿಂದ ಇಂತಹ ಬೆಳೆಗಳನ್ನು ಬೆಳೆಯಬಹುದು. ಮಾವಿನ ಮರಗಳ ನಡುವೆ ಖಾಲಿ ಇರುವ ಸ್ಥಳದಲ್ಲಿ ಕೆಲವು ಮರಗಳನ್ನು ಸಹ ಬೆಳೆಸಬಹುದು. ಇಂತಹ ಮರಗಳನ್ನು ಮಾವಿನ ಮರಗಳ ಹತ್ತಿರ ನೆಡಬಾರದು. ಈ ಮರಗಳು ಪೋಷಕಾಂಶಗಳಿಗಾಗಿ ಮಾವಿನ ಮರಗಳ ಜೊತೆಯಲ್ಲಿ ಸ್ಪರ್ಧಿಸುವ ಮೊದಲು ಅವುಗಳನ್ನು ತೆಗೆದುಹಾಕಬೇಕು. ಪೀಚ್, ಪ್ಲಮ್, ಪಾಲ್ಸಾ, ಪರಂಗಿ, ಪೈನಾಪಲ್ ಮತ್ತು ಗಿಡ್ಡ ತಳಿಯ ಬಾಳೆ ಮುಂತಾದವುಗಳನ್ನು ಹೀಗೆ ಖಾಲಿ ಇರುವ ಸ್ಥಳದಲ್ಲಿ ಬೆಳೆಸಬಹುದು. ಒಂದು ವರ್ಷದಲ್ಲಿ ಕೊನೆಯ ಪಕ್ಷ ಎರಡು ಸಾರಿಯಾದರೂ ಬೇಸಾಯ ಮಾಡಬೇಕಾಗುತ್ತದೆ. ಮಾವಿನ ತೋಟದಲ್ಲಿ ಹಸುರಲೆ ಗೊಬ್ಬರದ ಬೆಳೆಗಳನ್ನು ಬೆಳೆದು ಅವುಗಳನ್ನು ಮಳೆಗಾಲದಲ್ಲಿ ಉಳುಮೆಮಾಡಿ, ಮಣ್ಣಿಗೆ ಸೇರಿಸುವುದು ಸೂಕ್ತ.

ಭಾರತ ದೇಶದಲ್ಲಿ ಮಾವಿನ ಮರಗಳಿಗೆ ಗೊಬ್ಬರ ಕೊಡುವುದು ಹೆಚ್ಚು ರೂಢಿಯಲ್ಲಿಲ್ಲ. ಈ ವಿಷಯದ ಬಗ್ಗೆ ಹೆಚ್ಚಿನ ಪ್ರಾಯೋಗಿಕ ಅಂಕಿಅಂಶಗಳು ದೊರೆಯದೆ ಇದ್ದರೂ ಸಹ, ಮಾವಿಗೆ ಗೊಬ್ಬರ ಕೊಡುವುದು ಲಾಭದಾಯಕವೆಂದು ಖಚಿತವಾಗಿ ಕಂಡುಬಂದಿದೆ. ಬಹಳ ವರ್ಷಗಳ ಕಾಲ ಪೋಷಕಾಂಶಗಳ ಕೊರತೆಯಿಂದ ಬಳಲಿ ಇನ್ನೂ ಒಣಗಿಲ್ಲದ ಮಾವಿನ ಮರಗಳನ್ನು ಯೋಗ್ಯ ಬೇಸಾಯ ಪದ್ಧತಿಗಳಿಂದ ಪುನರುಜ್ಜೀವನಗೊಳಿಸಬಹುದು. ಇದರಿಂದ ಕಡಮೆ ಪ್ರಮಾಣದ ಪೋಷಕಾಂಶಗಳಿಂದ ಕೂಡಿದ ಸಸ್ಯಗಳಲ್ಲಿ ಶರ್ಕರ ಪಿಷ್ಟಗಳ ಶೇಖರಣೆಯನ್ನು ಕ್ರಮವಾಗಿ ಹೆಚ್ಚಿಸಬಹುದು. ಗೊಬ್ಬರ ಕೊಡುವುದು ಫಲಕೊಡುವುದರ ಅವಧಿಗೆ ಬಹಳವಾಗಿ ಸಂಬಂಧಿಸಿದೆ. ಮಾವಿನ ಮರವು ಪ್ರತಿವರ್ಷ ಕ್ರಮವಾಗಿ ಅಧಿಕ ಫಲ ಕೊಡುವಂತೆ ರಾಸಾಯನಿಕ ಗೊಬ್ಬರ ಕೊಡುವ ಕಾಲ ಮತ್ತು ಪರಿಮಾಣದ ಬಗ್ಗೆ ಯೋಜನೆ ರೂಪಿಸಬೇಕು.

ಫ್ಲಾರಿಡಾದಲ್ಲಿ, ಫಲಕೊಡದಿರುವ ವಯಸ್ಸಿನ ಮಾವಿನ ಮರಗಳಿಗೆ ಶೇಕಡಾ 4–5 ಸಾರಜನಕ, ಶೇಕಡಾ 7–9 ರಂಜಕ ಮತ್ತು ಶೇಕಡಾ 1.5ರಷ್ಟು ನೀರಿನಲ್ಲಿ ಕರಗುವ ಮೆಗ್ನೀಷಿಯಮ್ ಅಲ್ಲದೆ ಜೊತೆಗೆ ಶೇಕಡಾ 30–40 ಭಾಗ ಸಾವಯವ

ರೂಪದಲ್ಲಿರುವ ಸಾರಜನಕ ಮಿಶ್ರಣವುಳ್ಳ ರಾಸಾಯನಿಕ ಗೊಬ್ಬರ ಕೊಡುವುದನ್ನು ರೂಹ್ಲೆ (ಫ್ಲಾರಿಡಾ ಮ್ಯಾಂಗೊ ಫೋರಂ, 1951) ಸಲಹೆ ಮಾಡಿದ್ದಾರೆ. ಈ ಮಿಶ್ರಣವನ್ನು ಸಸಿ ನಾಟಿಮಾಡಿದನಂತರ ಮೂರುನಾಲ್ಕು ವಾರಗಳಲ್ಲಿ, ಮೊದಲನೆ ವರ್ಷ ಪ್ರತಿ ಮರಕ್ಕೆ $\frac{1}{4}$ ರಿಂದ $\frac{1}{2}$ ಪೌಂಡು ಕೊಡುವುದನ್ನು, ನವಂಬರ್ ತಿಂಗಳಿಂದ ಜನವರಿ ತಿಂಗಳವರೆಗೆ ಬಿಟ್ಟು ಉಳಿದ ಪ್ರತಿ ತಿಂಗಳಲ್ಲಿ ಒಂದು ಸಾರಿ ಕೊಡುವುದನ್ನು ಸಲಹೆ ಮಾಡಿದ್ದಾರೆ. ಸಸಿ ನಾಟಿಮಾಡಿದನಂತರ ಎರಡನೆ ಮತ್ತು ಮೂರನೆ ವರ್ಷ ದಲ್ಲಿ ಪ್ರತಿ ಎರಡು ತಿಂಗಳಿಗೆ ಒಂದು ಸಾರಿ, ಕೊಡುವ ಮಿಶ್ರಣದ ಪರಿಣಾಮವನ್ನು ಕ್ರಮೇಣ ನಾಲ್ಕು ಪೌಂಡುಗಳಿಗೆ ಏರಿಸಬೇಕು. ಫಲಕೊಡುವ ಮಾವಿನ ಮರಗಳಿಗೆ ಕೊಡುವ ಗೊಬ್ಬರವನ್ನು ಮೂರು ಸಮ ಪ್ರಮಾಣದಲ್ಲಿ ಕೊಡಲು ಶಿಫಾರಸ್ಸು ಮಾಡಿ ದ್ದಾರೆ. ಮಾವು ಹೂ ಬಿಡುವುದಕ್ಕೆ ಮೊದಲು ಕೊಡುವ $\frac{1}{10}$ ಪೌಂಡು ಸಾರಜನಕವು ಅಮೋನಿಯಮ್ ಸಲ್ಫೇಟ್ ಮುಂತಾದ ಕೃತಕ ರೂಪದಲ್ಲಿದ್ದು ಕೊಟ್ಟನಂತರ ಹೂ ಗೊಂಚಲು ಉದ್ದವಾಗುವಾಗ ನೀರಾವರಿ ಮುಂದುವರಿಸಬೇಕು. ಎರಡನೆ ಪ್ರಮಾಣದ ರಾಸಾಯನಿಕ ಗೊಬ್ಬರವನ್ನು ವಸಂತಕಾಲದ ಒಂದು ತಿಂಗಳನಂತರ ಕೊಡಬೇಕು. ಇದೇ ರೀತಿಯಾದ ಮಿಶ್ರಣವನ್ನು ಫಸಲು ಕೊಡದಿರುವ ಸಸ್ಯಗಳಿಗೆ ಶಿಫಾರಸ್ಸು ಮಾಡ ಲಾಗಿದೆ. ಆದರೆ ಇದರಲ್ಲಿ ಪೊಟ್ಯಾಷ್ ಮತ್ತು ಮೆಗ್ನೀಷಿಯಮ್‌ಗಳ ಪ್ರಮಾಣ ಕ್ರಮವಾಗಿ 5–8 ಶೇಕಡಾ 3 ಭಾಗ ಇರಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಈ ಮಿಶ್ರಣವನ್ನು ಪ್ರತಿಮರಕ್ಕೆ 1 ಪೌಂಡು ಪ್ರಮಾಣದಲ್ಲಿ ಕೊಡಬೇಕು. ಮಳೆ ಗಾಲದ ಪ್ರಾರಂಭದಲ್ಲಿ ಮೂರನೆ ಬಾರಿಯ ಗೊಬ್ಬರ ಕೊಡಬೇಕು. ವಸಂತಕಾಲದಲ್ಲಿ ಕೊಡುವ ಮಿಶ್ರಣದಲ್ಲಿ ಮಾರ್ಪಾಟುಮಾಡಿಕೊಡುವ ಸಾರಜನಕವು ಸಾವಯವರೂಪ ದಲ್ಲಿ ಇದ್ದು ಅದನ್ನು ಶೇಕಡಾ 50 ಭಾಗದಷ್ಟು ಹೆಚ್ಚಿಸಬೇಕು. ಹೆಚ್ಚು ಸಸ್ಯಾಂಗ ಭಾಗ ಬೆಳೆಸಬೇಕಾದ ಅಗತ್ಯವಿದ್ದರೆ- ಪ್ರಮಾಣವನ್ನು $1\frac{1}{2}$ ಪೌಂಡಿಗೆ ಏರಿಸಬೇಕು.

ಬಲಿತ ಮರಗಳ ಬೆಳವಣಿಗೆಯು ಅವುಗಳ ಫಲದಾಯಕತೆಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂಬ ವಿಷಯವನ್ನು ಎಲ್ಲಾ ಸಂಶೋಧಕರು ಒಪ್ಪುತ್ತಾರೆ. ಪೋಪೆನೊ (1920) ಫಲ ಕೊಡುವ ಮಾವಿನ ಮರಗಳಿಗೆ ಕೊಟ್ಟಿಗೆ ಗೊಬ್ಬರದ ಅಗತ್ಯವಿಲ್ಲ ಎಂದು ಹೇಳುವವಮಟ್ಟಿಗೆ ಹೋಗಿದ್ದಾರೆ. ಆದರೂ ಬಿಹಾರದಲ್ಲಿ ಮಾಡಿರುವ ಸಂಶೋ ಧನೆಯ ಆಧಾರದ ಮೇಲೆ ಸಾರಜನಕವನ್ನು ಒದಗಿಸುವುದು ಅಗತ್ಯವೆಂದು ಸೇನ್ ಮತ್ತು ರಾಯ್ (1945) ತೀರ್ಮಾನಿಸಿದ್ದಾರೆ. ಸಾರಜನಕವು ಬೆಳವಣಿಗೆಯನ್ನು ನಿರ್ದಿಷ್ಟಪಡಿಸುತ್ತದೆ ಮತ್ತು ಅದು ರಂಜಕ ಮತ್ತು ಪೊಟ್ಯಾಷ್ ಮುಂತಾದ ಮೂಲವಸ್ತುಗಳನ್ನು ತೆಗೆದುಕೊಳ್ಳುವುದನ್ನು ನಿಯಂತ್ರಿಸುವುದು ಕಂಡುಬಂದಿದೆ. ಆದರೂ ಅವಶ್ಯಕತೆಗಿಂತ ಹೆಚ್ಚಾದ ಸಾರಜನಕವು ಪೊಟ್ಯಾಷ್ ಕೊರತೆಯನ್ನುಂಟು ಮಾಡುತ್ತದೆ. ಮಾವಿನ ಸಸ್ಯ ಪೊಟ್ಯಾಷ್ ಕೊರತೆಯನ್ನು ಸಹಿಸಲಾರದು. ಅಡ್ಡ

ರಿಂದ, ಸಾರಜನಕ ಮತ್ತು ಪೊಟ್ಯಾಷ್ ಪ್ರಮಾಣವನ್ನು ಕಾಪಾಡಿಕೊಂಡು ಬರುವುದು ಬಹಳ ಮುಖ್ಯ. ಮಾವಿನ ಸಸ್ಯಕ್ಕೆ ರಂಜಕದ ಅಗತ್ಯತೆ ಪೊಟ್ಯಾಷ್ ಗಿಂತ ಬಹಳ ಕಡಮೆ. ರಾಯ್ ಮತ್ತು ಇತರರು (1951) ಪ್ರತಿ ಮರಕ್ಕೆ 1.6 ಪೌಂಡು ಸಾರಜನಕ, 4 ಪೌಂಡು ರಂಜಕ ಮತ್ತು 1.5 ಪೌಂಡು ಪೊಟ್ಯಾಷ್ ಪ್ರಮಾಣದ ಶಿಫಾರಸ್ಸನ್ನು ದೃಢವಾಗಿ ಪ್ರತಿಪಾದಿಸುತ್ತಾರೆ. ಈ ಪ್ರಮಾಣವನ್ನು 200 ಪೌಂಡು ಕೊಟ್ಟಿಗೆ ಗೊಬ್ಬರ, 4 ಪೌಂಡು ಹರಳು ಹಿಂಡಿ, 10 ಪೌಂಡು ಮೂಳೆಪುಡಿ, 2 ಪೌಂಡು ಅಮೋನಿಯಮ್ ಸಲ್ಫೇಟ್ ಮತ್ತು 30 ಪೌಂಡು ಸೌದೆ ಬೂದಿಯಿಂದ ಪಡೆಯಬಹುದು. ಅಮೋನಿಯಮ್ ಪ್ರಮಾಣವನ್ನು ಅಧಿಕ ಫಸಲಿನ ವರ್ಷದಲ್ಲಿ ದ್ವಿಗುಣಗೊಳಿಸಬೇಕು ; ಬೂದಿಯ ಅರ್ಧಭಾಗವನ್ನು ಜೂನ್ ತಿಂಗಳಲ್ಲಿ ಹಾಕಬೇಕು. 2 ಪೌಂಡು ಸಾರಜನಕ ಮತ್ತು 1 ಪೌಂಡು ರಂಜಕವನ್ನು ಪ್ರತಿ ಮರಕ್ಕೆ ಜುಲೈ ತಿಂಗಳಲ್ಲಿ ಕೊಡಬೇಕೆಂದು ವೆಂಕಟರತ್ನಂ(1953) ಶಿಫಾರಸ್ಸು ಮಾಡುತ್ತಾರೆ. ಬಾಂಬೆ ಪ್ರದೇಶಕ್ಕೆ ಪ್ರತಿ ಸಸ್ಯಕ್ಕೆ ಮೊದಲ ವರ್ಷ 20 ಪೌಂಡು ಕೊಟ್ಟಿಗೆ ಗೊಬ್ಬರದ, ಅನಂತರ 100 ಪೌಂಡು ಮುಟ್ಟುವವರೆಗೆ ಪ್ರತಿವರ್ಷ 10 ಪೌಂಡುಗಳಂತೆ ಹೆಚ್ಚಿಸುವುದು ; 5 ಪೌಂಡು ಮೂಳೆ ಪುಡಿ, ಇದನ್ನು ಕ್ರಮೇಣ 15 ಪೌಂಡಿಗೆ ಹೆಚ್ಚಿಸುವುದು ; ಮತ್ತು 10 ಪೌಂಡು ಸೌದೆಬೂದಿ, ಇದನ್ನು ಕ್ರಮೇಣ 30 ಪೌಂಡಿಗೆ ಏರಿಸುವುದನ್ನು ಬರ್ನ್ಸ್ ಮತ್ತು ಪ್ರಯಾಗ್ ಸಲಹೆ ಮಾಡಿದ್ದಾರೆ. ಆ್ಯಲನ್ (1935) 10 ಪೌಂಡಿನಷ್ಟು ಕೊಟ್ಟಿಗೆ ಗೊಬ್ಬರ, ಇದನ್ನು 50 ಪೌಂಡು ಮುಟ್ಟುವವರೆಗೆ ಪ್ರತಿವರ್ಷ 5 ಪೌಂಡಿನಂತೆ ಹೆಚ್ಚಿಸುವುದು ; 3 ಪೌಂಡು ಬೇವಿನ ಹಿಂಡಿ, ಇದನ್ನು ಕ್ರಮೇಣ 6 ಪೌಂಡಿಗೆ ಹೆಚ್ಚಿಸುವುದು ; 3 ಪೌಂಡು ಮೂಳೆಪುಡಿ ಮತ್ತು 1 ಪೌಂಡು ಪೊಟ್ಯಾಷಿಯಮ್ ಸಲ್ಫೇಟ್ ಎರಡನ್ನೂ 12 ಪೌಂಡ್ ಪರಮಾವಧಿಗೆ ಏರಿಸುವುದನ್ನು ಸಲಹೆಮಾಡಿದ್ದಾರೆ.

ಗಾಂಧಿ (1955) ರವರ ಪ್ರಕಾರ ಮಾವಿನ ಬೆಳೆಗೆ ಗೊಬ್ಬರ ಕೊಡುವುದಕ್ಕೆ ಉಷ್ಣವಲಯದಲ್ಲಿ ಮಳೆಗಾಲದ ಪ್ರಾರಂಭ ಹಾಗೂ ಸಮಶೀತೋಷ್ಣ ವಲಯದಲ್ಲಿ ಹೂ ಬಿಡುವ ಎರಡು ತಿಂಗಳು ಮೊದಲಕಾಲ ಯೋಗ್ಯವಾದ ಸಮಯ. ಎಳೆಯ ಮಾವಿನ ಸಸ್ಯಗಳಿಗೆ ಬುಡದ ಸುತ್ತಲೂ 1 ಅಡಿ ಬಿಟ್ಟು, ವೃತ್ತಾಕಾರದ ಕಾಲುವೆಯಲ್ಲಿ ಗೊಬ್ಬರ ಹಾಕಬೇಕು. ಕೃಶವಾಗಿರುವ ಸಸಿಗಳಿಗೆ 5 ರಿಂದ 10 ಪೌಂಡು ಅಮೋನಿಯಮ್ ಸಲ್ಫೇಟ್ ಕೊಡಬೇಕು.

ದಕ್ಷಿಣ ಭಾರತದಲ್ಲಿ ಹಿಮ ಬೀಳುವುದಕ್ಕೆ ರಕ್ಷಣೆ ನೀಡುವುದು ಅನವಶ್ಯಕ. ಆದರೂ ಉತ್ತರ ಭಾರತದಲ್ಲಿ ಎಳೆಯ ಸಸಿಗಳನ್ನು ಹಿಮದಿಂದ ತಡೆಯಲು ರಕ್ಷಣೆ ನೀಡಬೇಕಾಗುತ್ತದೆ. ಎಳೆಯ ಮರಗಳಿಗೆ ರಕ್ಷಣೆ ಕೊಡದಿದ್ದರೆ ಅವು ಸತ್ತುಹೋಗು

ತ್ತವೆ. ತರುವಾಯ ಮೂರು ವರ್ಷಗಳ ಕಾಲ ಚಳಿಗಾಲದಲ್ಲಿ ಹುಲ್ಲು ಹೊದಿಕೆಯಿಂದ ರಕ್ಷಣೆ ನೀಡುವುದು ಪದ್ಧತಿ. ಈ ರೀತಿ ರಕ್ಷಣೆ ನೀಡುವಾಗ ಆಗ್ನೇಯ ದಿಕ್ಕನ್ನು ಬಿಟ್ಟು ಉಳಿದೆಲ್ಲಾ ಆವರಿಸಬೇಕು. ಆಗ್ನೇಯ ದಿಕ್ಕನ್ನು ಬಿಡುವುದರ ಕಾರಣ ಸೂರ್ಯನ ಬೆಳಕು ಬೀಳುವ ಸಲುವಾಗಿ. ಸಸ್ಯದ ಮುಕುಟಕ್ಕೆ ಮತ್ತು ಆವರಿಕೆಗೆ ಮಧ್ಯೆ ಸ್ಥಳವಿರಬೇಕು. ಗಾಳಿ ತಡೆ, ಹೊದಿಕೆ ಬೆಳೆ ಮತ್ತು ಹಿಮಬೀಳುವ ಕಾಲದಲ್ಲಿ ನೀರಾವರಿ ಇವು ಹಿಮಬೀಳುವುದನ್ನು ತಡೆಯಲು ಪರಿಣಾಮಕಾರಿ. ತೋಟವನ್ನು ಶಾಖದಿಂದ ಕೂಡಿರುವಂತೆ ಮಾಡುವುದು ಹೆಚ್ಚು ಲಾಭದಾಯಕ. ಬಲಿತ ದೊಡ್ಡ ಮರಗಳಿಗೆ ಹಿಮದಿಂದಾಗುವ ಪರಿಣಾಮ ಅಷ್ಟೇನೂ ಗಂಭೀರವಾಗಿರುವುದಿಲ್ಲ. ಬಲಿತ ದೊಡ್ಡ ಮರಗಳಿಗೆ ಹಿಮ ಬೀಳುವುದನ್ನು ತಡೆಯಲು ಸಾಧ್ಯವಿಲ್ಲ ಮತ್ತು ಅಗತ್ಯ ಇರುವುದಿಲ್ಲ. ಆವರಿಸಿರುವ ಸಸ್ಯಗಳ ಹೊದಿಕೆಯನ್ನು ಫೆಬ್ರವರಿ ತಿಂಗಳಲ್ಲಿ ತೆಗೆಯಬೇಕು. ಇಂತಹ ಆವರಿಕೆಗಳನ್ನು ಏಪ್ರಿಲ್ ತಿಂಗಳ ಮಧ್ಯದಿಂದ ಜೂನ್ ತಿಂಗಳವರೆಗೆ ಶಾಖಗಾಳಿಯನ್ನು ತಡೆಯಲು ಮತ್ತೆ ಹಾಕಬೇಕು.

ಕೊಯ್ಲು

ಕಸಿಸಸ್ಯಗಳು ನಾಟಿಮಾಡಿದನಂತರ 5 ರಿಂದ 7 ವರ್ಷಗಳಲ್ಲಿ ಫಸಲು ಕೊಡಲು ಪ್ರಾರಂಭಿಸಿ, ಸುಮಾರು 15 ವರ್ಷಗಳನಂತರ ಅತ್ಯುನ್ನತ ಪರಿಮಾಣದ ಫಸಲನ್ನು ಕೊಡುತ್ತವೆ. ಅವುಗಳ ಫಸಲು ಕೊಡುವ ಅವಧಿ ಸುಮಾರು 50ವರ್ಷ. ಇನ್ನೊಂದು ಕಡೆ ಓಟೆಯಿಂದ ಬೆಳೆದ ಮರಗಳು ಸುಮಾರು 10 ವರ್ಷಗಳನಂತರ ಫಸಲಿಗೆ ಬಂದು, ಸುಮಾರು 100 ವರ್ಷಗಳ ಕಾಲ ಫಸಲು ಮುಂದುವರಿಯುತ್ತದೆ ಮತ್ತು ಪ್ರತಿಮರದ ಇಳುವರಿ ವೃದ್ಧಿಮಾಡಿದ ಮರಕ್ಕಿಂತ ಅಧಿಕವಾಗಿರುತ್ತದೆ. ಇಳುವರಿಯು ತಳಿ, ಮರದ ವಯಸ್ಸು ಮತ್ತು ವಾತಾವರಣ ಪರಿಸ್ಥಿತಿ ಮುಂತಾದ ಅನೇಕ ವಿಷಯಗಳನ್ನು ಅವಲಂಬಿಸುತ್ತದೆ. ಕೆಲವು ತಳಿಗಳ ಸಾಂಕೇತಿಕ ಗುಣವೆಂದರೆ ಅನಿರ್ದಿಷ್ಟ ಫಲದಾಯಕತೆ, ಇದನ್ನು ಗಣಿಸಬೇಕಾಗುತ್ತದೆ. ಆರು ವರ್ಷದ ಉತ್ತಮ ಕಸಿ ಮಾವಿನ ಮರದಲ್ಲಿ 50ರಿಂದ 75 ಹಣ್ಣು, ಹತ್ತು ವರ್ಷಗಳಲ್ಲಿ 300 ರಿಂದ 500 ಹಣ್ಣುಗಳು ಮತ್ತು ಸಂಪೂರ್ಣ ಬಲಿತ ಮರದಲ್ಲಿ 1000 ದಿಂದ 1500 ಹಣ್ಣುಗಳು ಸಿಕ್ಕುತ್ತವೆ ಎಂದು ಅಂದಾಜುಮಾಡಲಾಗಿದೆ. ಫಸಲು ಬಿಡಲು ವಿಶೇಷ ಅನುಕೂಲಕರ ವರ್ಷಗಳಲ್ಲಿ 3500 ಹಣ್ಣುಗಳು ಸಿಕ್ಕುತ್ತವೆ ಮತ್ತು ಇವು ಸುಮಾರು 8 ಮಣ ತೂಗುತ್ತವೆ. ಲಾಂಗ್ರಾ, ದುಸೆರಿ, ಬಾನೆಷಾನ್, ಪೈರಿ, ನೀಲಂ, ಅಲ್ಫಾನ್ಸೊ ಮತ್ತು ಬೆಂಗಳೂರಾ ತಳಿಗಳಿಗೆ ಇದು ಅನ್ವಯಿಸುತ್ತದೆ.

ಕಡಮೆ ಫಲಕೊಡುವ ಜಹಾಂಗೀರ್ ಮುಂತಾದ ತಳಿಗಳಲ್ಲಿ, ಒಂದು ಮರದ ಇಳುವರಿ 250 ಹಣ್ಣುಗಳಿಗಿಂತ ಹೆಚ್ಚಾಗಿ ಇರುವುದಿಲ್ಲ.

ಮಾವಿನಲ್ಲಿ ಹೂಬಿಟ್ಟನಂತರ ಸುಮಾರು ಐದು ತಿಂಗಳಿಗೆ ಹಣ್ಣು ಸಿಕ್ಕುತ್ತವೆ. ಆದ್ದರಿಂದ ಹಣ್ಣು ಬಿಡುವ ಕಾಲ ಹೂ ಬಿಡುವುದನ್ನು ಅನುಸರಿಸುತ್ತದೆ. ಫೆಬ್ರವರಿ ಮತ್ತು ಮಾರ್ಚಿ ತಿಂಗಳಿನಲ್ಲಿ ಶೀಘ್ರವಾಗಿ ಮಾರುಕಟ್ಟೆಗೆ ಬರುವ ಮಾವು ತಮಿಳು ನಾಡಿನ ಸಮುದ್ರತೀರ ಪ್ರದೇಶದಿಂದ ಬರುತ್ತವೆ. ಉತ್ತರ ಭಾರತದಲ್ಲಿ ಮಾವಿನ ಹಣ್ಣಿನ ಕಾಲ ನಿಧಾನ. ಪಶ್ಚಿಮ ಬಂಗಾಳದಲ್ಲಿ ಜೂನ್ ತಿಂಗಳ ಪ್ರಾರಂಭದಲ್ಲಿ ಮಾವಿನ ಹಣ್ಣಿನ ಕಾಲ ಪ್ರಾರಂಭವಾಗುತ್ತದೆ, ತುಲನಾತ್ಮಕವಾಗಿ ನೋಡಿದಾಗ ಇದು ಬಹಳ ನಿಧಾನ. ಪಂಜಾಬ್ ರಾಜ್ಯದಲ್ಲಿ ಜುಲೈತಿಂಗಳ ಪ್ರಾರಂಭದಲ್ಲಿ ಮಾವಿನ ಹಣ್ಣಿನ ಕಾಲ ಪ್ರಾರಂಭವಾಗುತ್ತದೆ.

ಮಾವಿನಫಸಲಿನ ಬಹುಪಾಲನ್ನು ಕಾಯಿಗಳು ಬಲಿತನಂತರ ಹಣ್ಣಾಗುವುದಕ್ಕೆ ಮೊದಲು ಕೊಯ್ಲುಮಾಡುತ್ತಾರೆ. ಇದರಿಂದ, ಸಾಗಾಣಿಕೆ ಸುಲಭವಾಗುತ್ತದೆ. ಶೇಖರಣೆ ಮಾಡಿದ ಕಾಯಿಗಳು ಹಣ್ಣಾದನಂತರ ಉತ್ತಮ ವಾಸನೆ, ದರ್ಜೆ ಮತ್ತು ಬಣ್ಣದಿಂದ ಕೂಡಿರುತ್ತವೆ ಎಂಬ ಅಭಿಪ್ರಾಯವು ಸಹ ಕೆಲವರಲ್ಲಿ ಇದೆ. ಆದರೂ ಬಹುಪಾಲು ಮಾವಿನ ಹಣ್ಣನ್ನು ತಿನ್ನುವ ಉತ್ತರ ಭಾರತದ ಜನರು ಮರದಲ್ಲಿ ಮಾಗಿದ ಹಣ್ಣುಗಳನ್ನು ಇಚ್ಛಿಸುತ್ತಾರೆ. ಆದರೆ ಮರದಲ್ಲಿ ಮಾವು ಹಣ್ಣಾಗಲು ಬಿಟ್ಟರೆ, ಹಕ್ಕಿಗಳಿಂದ ಬಹಳ ತೊಂದರೆಯುಂಟಾಗುತ್ತದೆ ಎಂಬುದು ಗೊತ್ತಿರುವ ವಿಷಯ.

ಮಾವಿನ ಹಣ್ಣು ಬಹು ಸೂಕ್ಷ್ಮ ಮತ್ತು ಶೀಘ್ರವಾಗಿ ನಾಶವಾಗುತ್ತದೆ ; ಹಣ್ಣು ಬಳಕೆದಾರರ ಕೈ ಸೇರುವವರೆಗೆ ಉತ್ತಮ ಸ್ಥಿತಿಯಲ್ಲಿ ಇರುವಂತೆ ಬಹಳ ಎಚ್ಚರಿಕೆವಹಿಸಬೇಕು. ಉದ್ದವಾದ ಬಿದಿರುಗಳ ತುದಿಯಲ್ಲಿರುವ ಗುಂಡಾಗಿರುವ ಕಬ್ಬಿಣದ ಸಲಾಕೆಗೆ ದಾರದ ಬಲೆಯನ್ನು ಕಟ್ಟಿ ಮಾವಿನ ಬಲಿತ ಕಾಯಿಗಳನ್ನು ಕೊಯ್ಲು ಮಾಡುತ್ತಾರೆ. ಕೊಯ್ಲು ಮಾಡಿದ ಮಾವಿನ ಫಸಲನ್ನು, ಚೆನ್ನಾಗಿ ಬೆಳಕು ಇರುವ ಕೊಠಡಿಯಲ್ಲಿ, ನಾಲ್ಕು ಅಂಗುಲ ಎತ್ತರವಾಗಿ ಹರಡಿರುವ ಮಾವಿನ ಎಲೆಗಳ ಮೇಲೆ ಎರಡು ದಿವಸಗಳ ಕಾಲ ಶೇಖರಣೆ ಮಾಡುವುದನ್ನು ಬರ್ನ್ಸ್ ಮತ್ತು ಪ್ರಯಾಗ್ ಸಲಹೆ ಮಾಡಿದ್ದಾರೆ. ಅನಂತರ ಇವುಗಳನ್ನು ಬತ್ತದ ಹುಲ್ಲಿನ ಪದರಗಳಲ್ಲಿ ಶೇಖರಿಸಬೇಕು. ಈ ಶೇಖರಣೆಯಲ್ಲಿ ಕಾಯಿಗಳು ಸುಮಾರು ಒಂದು ವಾರಗಳಲ್ಲಿ ಹಣ್ಣಾಗುತ್ತವೆ. ಉತ್ತರ ಭಾರತದಲ್ಲಿ ಮಾವಿನ ಕಾಯಿಗಳನ್ನು ಬೂಸಾ ಅಥವಾ ಧಾನ್ಯಗಳಲ್ಲಿ ಶೇಖರಿಸುತ್ತಾರೆ ಮತ್ತು ಈ ವ್ಯವಸ್ಥೆಯಲ್ಲಿ ಕಾಯಿಗಳು ಸುಮಾರು ನಾಲ್ಕು ದಿವಸಗಳಲ್ಲಿ ಹಣ್ಣಾಗುತ್ತವೆ. ಫಸಲು ಕೊಯ್ಲು ಮಾಡುವಾಗ

ತೊಟ್ಟಿಲ್ಲದಂತೆ ಕೊಯ್ಲು ಮಾಡುತ್ತಾರೆ. ಮಾವಿನ ಕಾಯಿಗಳಲ್ಲಿ ತೊಟ್ಟುಗಳನ್ನು
ಉಳಿಸಿಕೊಂಡರೆ ಅಥವಾ ಕಾಯಿಗಳಿಗೆ ಮೇಣ ಹಾಕಿದಾಗ ಶೇಖರಣೆ ಕಾಲ ಹೆಚ್ಚು
ವುದು ಕಂಡುಬಂದಿಲ್ಲ (ಬರ್ನ್ಸ್ ಮತ್ತು ಪ್ರಯಾಗ್). ಪ್ರತಿಯೊಂದು ಹಣ್ಣನ್ನು
ಟಿಶ್ಯೂ ಕಾಗದದಿಂದ ಸುತ್ತಿದರೆ ಹಣ್ಣುಗಳು ಹೆಚ್ಚುಕಾಲ ಕೆಡದೆ ಉಳಿಯುತ್ತವೆ
ಎಂದು ಪೋಪ್ (1929) ವರದಿಮಾಡಿದ್ದಾರೆ. ಸಾಧಾರಣವಾಗಿ ಕೊಯ್ಲು
ಮಾಡುವುದಕ್ಕಿಂತ ಏಳರಿಂದ ಹತ್ತು ದಿವಸ ಮೊದಲು ಕೊಯ್ಲುಮಾಡಿ, ಕಾಯಿಗಳನ್ನು
ಪ್ರತಿ 5000 ಗಾಳಿಗೆ ಒಂದು ಭಾಗ ಎಥಿಲೀನ್ ಅನಿಲ ಮಿಶ್ರಣದಲ್ಲಿ 70-80°F
ಉಷ್ಣತೆ ಮತ್ತು ಶೇಕಡಾ 85-90 ಭಾಗ ತೇವಾಂಶದಲ್ಲಿ ಚಿಕಿತ್ಸೆ ಮಾಡಿದರೆ
ಮಾವಿನ ಹಣ್ಣಾಗುತ್ತದೆ ಎಂದು ಮಾರ್‌ಲೊಥ್(1947) ವರದಿ ಮಾಡಿದ್ದಾರೆ.
ಅವರು ಮಾವಿನ ಕಾಯಿಗಳಲ್ಲಿ ನಾಲ್ಕು ಅಂಗುಲ ತೊಟ್ಟುಗಳನ್ನು ಉಳಿಸಿ, ಅವು
ಗಳನ್ನು ಪ್ಯಾಕ್ ಮಾಡುವಾಗ ತೆಗೆದು ಹಾಕಬೇಕೆಂದು ಸಹ ಸಲಹೆಯನ್ನು
ಮಾಡಿದ್ದಾರೆ. ಇದರಿಂದ, ತೊಟ್ಟಿನ ಕೊನೆಯಲ್ಲಿ ರಸವು ಸುರಿದು ಹಣ್ಣು ವಿಕಾರ
ವಾಗುವುದಿಲ್ಲ ಎಂದು ಹೇಳಲಾಗಿದೆ. ಮಾವು ಹಣ್ಣಾಗುವಾಗ ಉಷ್ಣಾಂಶವು 36°C
ಗಿಂತ ಅಧಿಕವಾದರೆ ಹಣ್ಣುಗಳು ಶೀಘ್ರವಾಗಿ ಕೊಳೆತುಹೋಗುತ್ತವೆ ಎಂಬುದನ್ನು
ಪಟವರ್ಧನ್ (1927) ಕಂಡುಹಿಡಿದಿದ್ದಾರೆ. ಆದ್ದರಿಂದ ಮಾವಿನ ಶೇಖರಣೆಯಲ್ಲಿ
ಉಷ್ಣಾಂಶವು 33°Cನ್ನು ಮುಟ್ಟಿದಾಗ, ಅವುಗಳನ್ನು ಹುಲ್ಲಿನ ಮೇಲೆ ಒಂದೇ ಪದರ
ವಾಗಿ ಯಾವ ಅವರಿಕೆಯೂ ಇಲ್ಲದಂತೆ ಇಡಬೇಕು ಮತ್ತು ಅವುಗಳು ನಿಧಾನವಾಗಿ
ಹಣ್ಣಾಗಲು ಬಿಡಬೇಕು.

ಮಾವನ್ನು ಸಾಗಾಣಿಕೆ ಮಾಡಬೇಕಾದಾಗ, ಅವುಗಳನ್ನು ಕೊಯ್ಲುಮಾಡಿದ
ನಂತರ, ಬುಟ್ಟಿ ಅಥವಾ ಪೆಟ್ಟಿಗೆಗಳ ಒಳಗೆ ಹುಲ್ಲು ಹಾಕಿ ಪ್ಯಾಕ್ ಮಾಡಬೇಕು.
ಉತ್ತರ ಭಾರತದಲ್ಲಿ ಅರ್ಧ ವೃತ್ತಾಕಾರದ ಬುಟ್ಟಿಗಳನ್ನು, ದಕ್ಷಿಣ ಭಾರತದಲ್ಲಿ ಕೊಳವೆ
ಯಾಕಾರದ ಬುಟ್ಟಿಗಳನ್ನು ಉಪಯೋಗಿಸುತ್ತಾರೆ. ಇಂತಹ ಪ್ರತಿಯೊಂದು
ಬುಟ್ಟಿಯು 50ರಿಂದ 100 ಹಣ್ಣುಗಳನ್ನು ಹಿಡಿಸುತ್ತವೆ. ಮಹಾರಾಷ್ಟ್ರದಲ್ಲಿ
2x1x1 ಅಡಿ ಗಾತ್ರದ ಪೆಟ್ಟಿಗೆಗಳನ್ನು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ.
ಮಾವನ್ನು ಸಾಗಾಣಿಕೆ ಮಾಡಲು ಪೆಟ್ಟಿಗೆಗಳು ಯೋಗ್ಯವಾದರೂ ಅವುಗಳಿಗೆ ಹೆಚ್ಚು
ವೆಚ್ಚ ತಗುಲುತ್ತದೆ. ಹೊರದೇಶಗಳಿಗೆ ಅಲ್ಫಾನ್ಸೊ ಮಾವನ್ನು ಸಾಗಾಣಿಕೆ
ಮಾಡಲು, ಮುಚ್ಚಿಯಲ್ಲಿ ಒಂದು 12 ಮಾವಿನ ಹಣ್ಣುಗಳ ಪದರವಿಡಬಹುದಾದ
$18 \times 10 \times 4\frac{1}{2}$ ಅಂಗುಲ ಗಾತ್ರದ ಪೆಟ್ಟಿಗೆಗಳು ಉಪಯುಕ್ತ. ಇವು ಬಹು ಮಾವಿನ
ತಳಿಗಳು ಹೆಚ್ಚು ಕಾಲ ಉಳಿಯಲಾರವು, ಆದರೆ ಕೆಲವು ಮಾತ್ರ ಈ ನಿಯಮಕ್ಕೆ
ವ್ಯತಿರಿಕ್ತ. ಬೆಂಗಳೂರಾ (ತೋತಾಪುರಿ) ತಳಿಯ ಹಣ್ಣುಗಳು ಉತ್ತಮ ಉಳಿಯುವ
ಗುಣದಿಂದ ಕೂಡಿವೆ ; ಇವುಗಳನ್ನು ಶೇಖರಣೆ ವ್ಯವಸ್ಥೆ ಇಲ್ಲದೆ ಮದ್ರಾಸಿನಿಂದ ರೈಲ್ವೆ

ಗಳಲ್ಲಿ ಸಾಗಾಣಿಕೆ ಮಾಡುತ್ತಾರೆ. ಇವು ದೂರ ಸ್ಥಳಗಳಿಗೆ ಉತ್ತಮ ಸ್ಥಿತಿಯಲ್ಲಿ ತಲುಪುತ್ತವೆ. ಬಾನೆಷಾನ್ ತಳಿಯ ಮಾವಿನ ಹಣ್ಣುಗಳು ಸಹ ಉತ್ತಮ ಶೇಖರಣೆ ಗುಣದಿಂದ ಕೂಡಿವೆ, ಇವುಗಳನ್ನು ಆಂಧ್ರಪ್ರದೇಶದಿಂದ ದೆಹಲಿ ಮಾರುಕಟ್ಟೆಗಳಿಗೆ ಸಾಗಾಣಿಕೆ ಮಾಡುತ್ತಾರೆ. ಉತ್ತಮ ಶೇಖರಣೆ ಗುಣದಿಂದ ಕೂಡಿರುವ ಇತರ ಮಾವಿನ ತಳಿಗಳು ಎಂದರೆ ಅಲ್ಫಾನ್ಸೊ ಮತ್ತು ದುಸೇರಿ.

ಭಾರತ ದೇಶದಲ್ಲಿ ಮಾವಿನ ಫಸಲಿನ ಮಾರಾಟದ ಬಗ್ಗೆ ಹೇಳಬೇಕಾದ್ದು ಬೇಕಾದಷ್ಟಿದೆ. ಸಾಮಾನ್ಯವಾಗಿ ಮಾವಿನ ಬೇಸಾಯಗಾರ ಮರದಲ್ಲಿರುವ ಪೂರ್ಣ ಫಸಲನ್ನು ಗುತ್ತಿಗೆದಾರರಿಗೆ ಮಾರುತ್ತಾನೆ, ಈತ ಫಸಲನ್ನು ಕೊಯ್ಲುಮಾಡಿ ಮಾರಾಟಮಾಡುತ್ತಾನೆ, ವಿಂಗಡಣೆಮಾಡಿದ ಮತ್ತು ಸೂಕ್ತವಾಗಿ ಪ್ಯಾಕ್ ಮಾಡಿದ ಫಸಲು ಮಾರುಕಟ್ಟೆಗೆ ಬರುತ್ತದೆ. ಇದರ ಪರಿಣಾಮವಾಗಿ, ಸಾಗಾಣಿಕೆಯಲ್ಲಿ ಹೆಚ್ಚು ನಷ್ಟ ಮತ್ತು ಕಡಿಮೆ ಲಾಭ ಸಂಭವಿಸುತ್ತದೆ. ನಮ್ಮ ದೇಶದಲ್ಲಿ ಉಷ್ಣ ಹವಾಗುಣವಿರುವುದರಿಂದ, ರೈಲಿನಲ್ಲಿ ಮಾವು ಸಾಗಾಣಿಕೆಮಾಡಲು ಶೀತ ಸಂಗ್ರಹಣ ವ್ಯವಸ್ಥೆಯಿರಬೇಕು ಮತ್ತು ಹಣ್ಣಿನ ವಿಂಗಡಣೆ ಅಗತ್ಯವಾಗುತ್ತದೆ. ಮಾವಿನ ವಿಂಗಡಣೆಮಾಡುವ ಪ್ರಯತ್ನ ಇತ್ತೀಚಿನದು. ಬಿಹಾರದಲ್ಲಿ ಮಾಲ್ಡ ಮತ್ತು ಬಡುವ ತಳಿಗಳ ಮಾವನ್ನು ವಿಂಗಡಣೆಮಾಡಿ ಕಲ್ಕತ್ತಕ್ಕೆ ಕಳಿಸುವುದರಿಂದ ಪ್ರತಿ ಬುಟ್ಟಿಗೆ 6ರೂ.ಗಳ ಹೆಚ್ಚು ಹಣ ಸಿಕ್ಕಿದೆ. ಮಾಸ್ರಾದಲ್ಲಿ (ಬಿಹಾರ್) ಇದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಫಜರಿ, ದುಸೇರಿ, ಮತ್ತು ಸಫೇದ ವಿಂಗಡಣೆಯನ್ನು ಪ್ರಯತ್ನಿಸಿದ್ದು, ಪ್ರತಿ 132 ಹಣ್ಣುಗಳಿಗೆ 2/3 ರಿಂದ 5/8 ರೂಪಾಯಿಗಳಷ್ಟು ಹೆಚ್ಚು ಹಣ ದೊರಕಿದೆ. ಬೊಂಬಾಯಿಯಲ್ಲಿ ದರ್ಜೆ ಮಾಡಿದ ಮಾವಿನ ಅಲ್ಫಾನ್ಸೊ ಹಣ್ಣುಗಳು ಪ್ರತಿ ಸಾವಿರ ಹಣ್ಣುಗಳಿಗೆ 21/8 ರೂಪಾಯಿಗಳಷ್ಟು ಆದಾಯ ಕೊಟ್ಟಿವೆ. ಬೇಸಾಯಗಾರರು, ಮಾವಿನ ಮಾರಾಟ ಸಹಕಾರಿ ಸಂಘಗಳನ್ನು ರಚಿಸುವುದು ಅಗತ್ಯವಾಗಿದೆ. ಇಂತಹ ಸಂಘಗಳು ಮಹಾರಾಷ್ಟ್ರದ ರತ್ನಗಿರಿ ಮತ್ತು ಕರ್ನಾಟಕ ರಾಜ್ಯದ ಧಾರವಾಡಗಳಲ್ಲಿ ಸ್ಥಾಪಿತವಾಗಿವೆ.


ಅನಿರ್ದಿಷ್ಟ ಫಲದಾಯಕತೆ

ವಾಣಿಜ್ಯ ಪ್ರಾಮುಖ್ಯತೆಯನ್ನು ಪಡೆದಿರುವ ಮಾವಿನ ಅನೇಕ ತಳಿಗಳು ನಿಯತಕಾಲಿಕ ಫಸಲನ್ನು ಕೊಡದೆ ಇರುವುದರಿಂದ ಗಣನೀಯ ತೊಂದರೆಯಾಗುತ್ತದೆ. ಈ ಅನಿರ್ದಿಷ್ಟ ಕಾಲಿಕ ಫಲಕ್ಕೆ ಕಾರಣ ವಾತಾವರಣ ಪರಿಸ್ಥಿತಿಯೋ ಅಥವಾ ಅನುವಂಶಿಕ ಗುಣವೊ ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಕೆಲವು ತಳಿಗಳು ಇತರ ತಳಿಗಳಿಗಿಂತ ಹೆಚ್ಚಾಗಿ ವಾರ್ಷಿಕ ಫಲ ಕೊಡುವ ಗುಣದವು. ಈ ಅನಿರ್ದಿಷ್ಟ ಫಲ

ಕೊಡುವ ಗುಣ, ಆನುವಂಶಿಕ ಗುಣವೆಂಬುದನ್ನು ಸೂಚಿಸುತ್ತದೆ. ಇದು ಪೂರ್ಣ ವಿವರಣೆಯಾಗಿದ್ದರೆ, ಒಂದು ನಿರ್ದಿಷ್ಟ ತಳಿಯು, ದ್ವೈವಾರ್ಷಿಕ ಫಲ ಅಥವಾ ಪರ್ಯಾಯವಾಗಿ ಅಧಿಕ ಮತ್ತು ಕಡಮೆ ಫಲವನ್ನು ಕೊಡುವ ಖಚಿತವಾದ ಕಾಲಕ್ರಮದಿಂದ ಕೂಡಿರಬೇಕಾಗುತ್ತದೆ. ಇಂತಹ ಕಾಲಚಕ್ರ ಎಲ್ಲೂ ಕಂಡುಬಂದಿಲ್ಲ. ಅಧಿಕ ಫಲ ವರ್ಷದ ನಂತರ ಮುಂದೆ ಒಂದು ಅಥವಾ ಅಧಿಕ ವೇಳೆ ಹೆಚ್ಚು ಕಡಮೆ ಫಲ ಕಂಡು ಬಂದಿದೆ ಮತ್ತು ಈ ಅನಿರ್ದಿಷ್ಟ ಫಲಕ್ಕೆ ವಾತಾವರಣ ಪರಿಸ್ಥಿತಿ ಕಾರಣವೆಂಬುದೂ ಕಂಡುಬಂದಿದೆ. ಮಾವಿನಲ್ಲಿ ಪರ್ಯಾಯ ಫಲಕ್ಕೆ ಕಾರಣ ಅನುವಂಶಿಕತೆ ಎಂದು ಗಾಂಧಿ (1955) ಅಭಿಪ್ರಾಯಪಡುತ್ತಾರೆ. ಒಂದು ವರ್ಷ ಫಸಲು ಕೊಡುವ ರೆಂಬೆಗಳು ಮುಂದಿನ ವರ್ಷ ಹಸುರು ಭಾಗದ ಬೆಳವಣಿಗೆಯನ್ನು ಮಾತ್ರ ನೀಡುತ್ತವೆ ಮತ್ತು ಇದರ ವಿರುದ್ಧ ಇದ್ದರೂ ಇರಬಹುದು. ಏನೇ ಆಗಲಿ ಮಾವಿನಲ್ಲಿ ಪರ್ಯಾಯ ಫಲಕೊಡುವ ಪ್ರವೃತ್ತಿ ಅಥವಾ ಒಂದು ವರ್ಷದಲ್ಲಿ ಹೂಬಿಡುವ ರೆಂಬೆಗಳು ಮುಂದಿನ ವರ್ಷ ಫಲ ಕೊಡದೆ ಇರುವುದಕ್ಕೆ ಅನುವಂಶಿಕ ಗುಣ ಕಾರಣವಲ್ಲ ಎಂಬುದು ನಾಯಕರ (1949)ವಾದ. ಸಾಬೂರು, ಕೊಡೂರು ಮತ್ತು ಲೈಲಾಪುರದಲ್ಲಿ ನಡೆಸಿದ ಸಂಶೋಧನೆಯು, ಪರ್ಯಾಯ ಫಲ ಕೊಡುವುದನ್ನು ಬೇಸಾಯ ಕ್ರಮಗಳ ನಿಯಂತ್ರಣದಿಂದ ಕಡಮೆ ಮಾಡಬಹುದೆಂದು ಸೂಚಿಸುತ್ತದೆ. ಆರು ವರ್ಷಗಳಿಗೆ ಒಂದು ಸಾರಿ ಅಧಿಕ ಫಲವನ್ನು ಪಡೆಯಬಹುದು ಎಂದು ಬಿಹಾರದಲ್ಲಿ ಮಾಡಿದ ಪ್ರಯೋಗದಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಮಾವು ಪರ್ಯಾಯ ವರ್ಷಗಳಲ್ಲಿ ಫಲ ಕೊಡುತ್ತದೆ, ಆದರೆ 10–12 ವರ್ಷದ ಮರಗಳಿಗೆ ಸೂಕ್ತವಾಗಿ ಗೊಬ್ಬರ ಕೊಡುವುದರಿಂದ ಅಧಿಕ ಫಲವನ್ನು ಪಡೆಯಬಹುದು ಎಂದು ವ್ಯಾಗಲ್ (1931) ಅಭಿಪ್ರಾಯಪಡುತ್ತಾರೆ. ಈ ಸಮಸ್ಯೆಯು ಶಾರೀರಿಕ ಕ್ರಿಯೆಗಳಿಂದ ಉಂಟಾಗುತ್ತದೆ ಎಂದು ಪೊಪೆನೋ ಅಭಿಪ್ರಾಯಪಡುತ್ತಾರೆ.

ಮಾವಿನ ಮರದಲ್ಲಿ ಹೂ ಬಿಡುವುದಕ್ಕೂ ಅದರ ಹಸುರು ಭಾಗದ ಬೆಳವಣಿಗೆಗೂ ನಿಕಟ ಸಂಬಂಧವಿದೆ. ಪಶ್ಚಿಮ ಭಾರತದಲ್ಲಿ ಮಾವು, ವಸಂತ ಕಾಲದ ಪ್ರಾರಂಭದಲ್ಲಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಮತ್ತು ಮುಂಗಾರು ಮಳೆಗೆ ಮೊದಲು, ಈ ಮೊದಲಾದ ಮೂರು ಹಂತಗಳಲ್ಲಿ ಹೂ ಬಿಡುತ್ತದೆ. ಬಿಹಾರದಲ್ಲಿ ಸಹ ಮೂರು ಹಂತಗಳಲ್ಲಿ ಹೂ ಬಿಡುತ್ತದೆ. ದಕ್ಷಿಣಭಾರತದಲ್ಲಿ, ಫೆಬ್ರವರಿಯಿಂದ ಜೂನ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮಾವು ಹೂ ಬಿಡುತ್ತದೆ. ಉತ್ತರ ಪ್ರದೇಶದ ಸಹರಾನಪುರದ ಸುತ್ತಮುತ್ತಲ ಪ್ರದೇಶಗಳಲ್ಲಿ ಮತ್ತೆ ಮತ್ತೆ ಜುಲೈ-ಆಗಸ್ಟ್ ತಿಂಗಳಲ್ಲಿ, ಎರಡು ಸಾರಿ ಹೂ ಬಿಡುತ್ತದೆ. ಪಂಜಾಬ್ ರಾಜ್ಯದಲ್ಲಿ ಏಪ್ರಿಲ್ ತಿಂಗಳಿಂದ ಆಗಸ್ಟ್ ತಿಂಗಳವರೆಗೆ ಐದು ಹಂತಗಳಲ್ಲಿ ಮಾವು ಹೂ ಬಿಡುತ್ತದೆ. ಉತ್ತರ ಭಾರತದಲ್ಲಿ ನವೆಂಬರ್ ತಿಂಗಳಲ್ಲಿ ಕೊನೆಯ ಹಂತದ ಹೂಬಿಡುತ್ತದೆ. ಮಾವಿನ ಹೂವು ತುದಿ ಮೊಗ್ಗುಗಳಲ್ಲಿ ಬಿಡುತ್ತದೆ,

ಪಕ್ವ ಮೊಗ್ಗುಗಳಲ್ಲಿ ಹೂ ಬಿಡುವುದು ಅಪರೂಪ. ಹೂ ಬಿಡುವುದರ ಪ್ರಮಾಣವನ್ನು ನಿಯಂತ್ರಿಸುವ ಮುಖ್ಯ ವಿಷಯಗಳೆಂದರೆ, ಹೂ ಬಿಡುವ ಸಮಯದಲ್ಲಿ ತುದಿರೆಂಬೆಗಳು ಬಲಿತಿರುವಿಕೆ ಮತ್ತು ಅವುಗಳ ವಯಸ್ಸು. ಬಹುವಾಗಿ, ಎಂಟು ತಿಂಗಳ ವಯಸ್ಸಿನ ಹಾಗೂ ಹಿಂದಿನ ನಾಲ್ಕು ತಿಂಗಳಲ್ಲಿ ಏನೂ ಬೆಳವಣಿಗೆಯಾಗದೆ ಇರುವ ರೆಂಬೆಗಳಲ್ಲಿ



ಚಿತ್ರ 17 : ಭಾರತದಲ್ಲಿ ಮಾವು ಹೂ ಬಿಡಲಾರಂಭಿಸುವ ಕಾಲ (1954–55)

ಹೂ ಬಿಡುತ್ತದೆ. ಇತರ ರೆಂಬೆಗಳಲ್ಲಿ ಹೂ ಬಿಡುವುದು ಅಪರೂಪ. ಕೆಲವು ಸಂದರ್ಭಗಳಲ್ಲಿ ಎರಡು ತಿಂಗಳ ವಯಸ್ಸಿನ ರೆಂಬೆಗಳೂ ಸಹ ಹೂ ಬಿಡುತ್ತವೆ. ಇದು ಅಪರೂಪ ಸಂದರ್ಭ ಮತ್ತು ಮಾವಿನ ಮರಗಳ ಕೆಲವು ಭಾಗಗಳಲ್ಲಿ ಅನಿರೀಕ್ಷಿತ

ಆಹಾರ ಸಾಂದ್ರತೆಯ ಕಾರಣದಿಂದ ಇಂತಹ ಎರಡು ತಿಂಗಳ ರೆಂಬೆಗಳು ಹೂ ಬಿಡುತ್ತವೆ. ಮಾವು ಹೂ ಮೊಗ್ಗಿನ ವ್ಯತ್ಯಾಸವು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಉಂಟಾಗುತ್ತದೆ ಎಂದು ಮೂಸಾಹಿಬ್-ಉ-ದ್ದಿನ್ (1946) ಮತ್ತು ಸೇನ್ ಹಾಗೂ ಮಲ್ಲಿಕ್ (1940) ಅಭಿಪ್ರಾಯಪಡುತ್ತಾರೆ. ಎಲೆ ಮೊಗ್ಗಿನ ವ್ಯತ್ಯಾಸವು ಬೇಸಿಗೆ ಕಾಲದ ಪ್ರಾರಂಭಕ್ಕೆ ಮೊದಲಾಗಿ ಬೇಸಿಗೆ ಕಾಲದಲ್ಲಿ ಹೂ ಮೊಗ್ಗು ವ್ಯತ್ಯಾಸ ಮೊದಲಾಗುವುದಕ್ಕೆ ಮೊದಲು ಶಾರೀರಕ ಬೆಳವಣಿಗೆಯು ಅಂತಿಮ ಸ್ಥಿತಿಯನ್ನು ಮುಟ್ಟಿ ಸಾಕಷ್ಟು ಶರ್ಕರಪಿಷ್ಟಗಳನ್ನು ಶೇಖರಿಸುತ್ತದೆ. ಆದ್ದರಿಂದ, ಈ ರೆಂಬೆಗಳು ಮುಂದಿನ ಕಾಲದಲ್ಲಿ ಹೂಗಳನ್ನು ಬಿಡುತ್ತವೆ. ಹೂ ಮೊಗ್ಗು ಬಿಡುವುದರಲ್ಲಿ ಪ್ರಾಥಮಿಕ ಸಮಸ್ಯೆ ಎಂದರೆ ಶರ್ಕರಪಿಷ್ಟ ಮತ್ತು ಸಾರಜನಕ ಪ್ರಮಾಣದ ಸಮಸ್ಯೆ. ಹೆಚ್ಚು ಶರ್ಕರಪಿಷ್ಟ ಪ್ರಮಾಣವು ಹೂಮೊಗ್ಗು ಬಿಡಲು ಪ್ರೋತ್ಸಾಹಕಾರಿ. ಹಾಗೆಯೇ ಹೆಚ್ಚು ಪ್ರಮಾಣದ ಸಾರಜನಕ ಎಲೆಮೊಗ್ಗು ಬಿಡಲು ಪ್ರೋತ್ಸಾಹಕಾರಿ. ಹೂಬಿಡುವ ರೆಂಬೆಗಳಲ್ಲಿ ಹೆಚ್ಚು ಶರ್ಕರಪಿಷ್ಟ ಶೇಖರಣೆ ಮತ್ತು ಊತಕಗಳಲ್ಲಿ ಶಾರೀರಕವಾಗಿ ಸಾರಜನಕ ಕೊರತೆಯುಂಟಾಗಿರುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಶರ್ಕರಪಿಷ್ಟ-ಸಾರಜನಕ ಪ್ರಮಾಣ ಹೆಚ್ಚಿದ್ದು ಅದು ಎಲೆ ಮೊಗ್ಗುಗಳ ಹುಟ್ಟು ಮತ್ತು ಬೆಳವಣಿಗೆಗೆ ನೆರವಾಗುವುದಿಲ್ಲ. ಒಂದು ವಿಶೇಷವಾದ ಚೋದಕ ಸ್ರಾವ ಹೂಮೊಗ್ಗು ಉಂಟಾಗಲು ಸಂಬಂಧಿಸಿರಬಹುದು ಮತ್ತು ಕೃತಕವಾಗಿ ಹೂ ಬಿಡುವುದನ್ನು ಪ್ರಚೋದಿಸಲು ಹೆಟೆರೋಆಕ್ಸಿನ್ ಕಂಡುಹಿಡಿಯಬಹುದು ಎಂದು ಸೇನ್ (1943) ಸಲಹೆ ಮಾಡುತ್ತಾರೆ. ಹೆಚ್ಚು ಹೂಬಿಡಲು, ಹಿಂದಿನ ಬೆಳವಣಿಗೆಯ ಪ್ರಾರಂಭದಲ್ಲಿ ಸಾರಜನಕ ಮತ್ತು ನೀರಾವರಿ ಸರಬರಾಜು ಮಾಡಿ, ಹೂ ಬಿಡುವುದಕ್ಕೆ ನಾಲ್ಕು ತಿಂಗಳು ಮೊದಲು ಸಸ್ಯಾಂಗ ಅಭಿವೃದ್ಧಿ ಪ್ರೋತ್ಸಾಹಿಸದಿರುವ ತೇವಾಂಶ ಮತ್ತು ಸಾರಜನಕ ಸ್ಥಿತಿಗಳುಂಟು ಮಾಡುವುದು ಅವಶ್ಯ.

ಜನವರಿ ತಿಂಗಳಲ್ಲಿ ಹೂ ಬಿಟ್ಟಿರುವ ರೆಂಬೆಯು, ವಸಂತ ಕಾಲ ಅಥವಾ ಮಳೆಗಾಲದ ಪ್ರಾರಂಭದಲ್ಲಿ ಹಣ್ಣು ಕೊಯ್ಲು ಮಾಡುವ ತನಕ ಯಾವ ಬೆಳವಣಿಗೆಯನ್ನೂ ಉಂಟುಮಾಡುವುದಿಲ್ಲ. ಅನಂತರ ಆದ ಶಾರೀರಕ ಬೆಳವಣಿಗೆಯಿಂದ ಶರತ್ ಕಾಲದಲ್ಲಿ ಹೂ ಮೊಗ್ಗು ಬಿಡಲು ಬಹಳ ನಿಧಾನವಾಗುತ್ತದೆ. ಆದ್ದರಿಂದ ಮುಂದಿನ ವರ್ಷ ಶಾರೀರಕ ಬೆಳವಣಿಗೆ ಮಾತ್ರ ಆಗುತ್ತದೆ. ಇನ್ನೊಂದು ಕಡೆ, ಹೂಬಿಡದೆ ಇರುವ ರೆಂಬೆಗಳು ಶೀಘ್ರವಾಗಿ ಶಾರೀರಕ ಬೆಳವಣಿಗೆಯನ್ನು ಮಾತ್ರ ಉಂಟುಮಾಡುತ್ತವೆ ಮತ್ತು ಮುಂದಿನ ವರ್ಷ ಹೂ ಬಿಡುತ್ತವೆ. ಇದರ ಅರ್ಥ ರೆಂಬೆಗಳು ಎಲೆಮೊಗ್ಗು ಮತ್ತು ಹೂಮೊಗ್ಗುಗಳನ್ನು ಪರ್ಯಾಯವಾಗಿ ಬಿಡುತ್ತವೆ. ಒಂದು ಮರದಲ್ಲಿ ಒಂದು ವರ್ಷ ಶೇಕಡಾ 90 ಭಾಗ ರೆಂಬೆಗಳು ಹೂಬಿಟ್ಟರೆ, ವಾಸ್ತವಿಕವಾಗಿ

ಮುಂದಿನ ವರ್ಷ ಅವುಗಳಲ್ಲಿ ಹೂಬಿಡುವುದಿಲ್ಲ. ಇದರಿಂದ ಒಂದು ವರ್ಷ ಅಧಿಕ ಫಸಲು ಮತ್ತು ಇದರ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಹೆಚ್ಚು ಹಣ್ಣು ಬಂದು ಬೆಲೆ ಕಡಮೆಯಾಗುತ್ತದೆ.; ಮುಂದಿನ ವರ್ಷ ಫಸಲು ಇಲ್ಲದೆ ಇರುವುದರಿಂದ ವರಮಾನವಿರುವುದಿಲ್ಲ. ಆದರೂ ನಿಸರ್ಗದಲ್ಲಿ ಇಂತಹ ಚಕ್ರ ನಿರ್ದಿಷ್ಟವಾಗಿ ಯಾಂತ್ರಿಕವಾಗಿರುವುದಿಲ್ಲ. ಒಂದು ಫಲರಹಿತ ವರ್ಷದ ಬಳಿಕ ಹಿಮ, ಬಿಸಿಗಾಳಿ, ಕೀಟಪೀಡೆ ಅಥವಾ ರೋಗಗಳಿಂದಾಗಿ ಮತ್ತೆ ಫಸಲಿಲ್ಲದೆ ಹೋಗಬಹುದು. ಆದ್ದರಿಂದ, ಒಂದು ಉತ್ಪನ್ನಕಾರಿ ಅಥವಾ ಫಲವರ್ಷದ ನಂತರ ಮುಂದೆ ಒಂದು ಅಥವಾ ಹೆಚ್ಚು ಫಲವಿಲ್ಲದ ವರ್ಷಗಳಾಗಬಹುದು. ಒಂದು ಸಾರಿ ಫಲ ಮತ್ತು ಫಲವಿಲ್ಲದ ಸ್ಥಿತಿ ನೆಲೆಗೊಂಡ ಬಳಿಕ ಫಲಬಿಟ್ಟ ವರ್ಷದಲ್ಲಿ ಹೂ ಬಿಡುವುದಕ್ಕೆ ಎರಡು ತಿಂಗಳಮೊದಲು ಧಾರಾಳವಾಗಿ ಗೊಬ್ಬರ ಕೊಡದೆ ಇದ್ದರೆ ಮತ್ತು ಕೆಲವು ಹೂಗಳನ್ನು ತೆಗೆಯದೆ ಇದ್ದರೆ, ನಿರ್ದಿಷ್ಟವಾರ್ಷಿಕ ಫಲವನ್ನು ನಿರೀಕ್ಷಿಸಲು ಸಾಧ್ಯವಿರುವುದಿಲ್ಲ.

ಕಾಯಿ ಕಚ್ಚದೆ ಇರುವಾಗ ಅಥವಾ ಉದುರಿಹೋದಾಗ ಪಕ್ಕದ ಮೋಸುಗಳಲ್ಲಿ ಮುಂದಿನ ವರ್ಷ ಹೂ ಬಿಡುವುದನ್ನು ಸೇನ್ ಕಂಡಿದ್ದಾರೆ. ಲಾಲ್‌ಸಿಂಗ್ ಮತ್ತು ಖಾನ್ (1939) ಲಾಂಗ್ರಾ ಮಾವಿನ ತಳಿ ಮರದಲ್ಲಿ, ಹೂಬಿಟ್ಟ ಗೊಂಚಲುಗಳಲ್ಲಿ ಕೆಲವು ಭಾಗ ತೆಗೆದುದರ ಪರಿಣಾಮವಾಗಿ ಮರುವರ್ಷ ಶೇಕಡಾ 70 ರಷ್ಟು ಗೊಂಚಲುಗಳು ಹೂಬಿಟ್ಟಿದ್ದವು. ಬೊಂಬಾಯಿ ಮಾವಿನ ತಳಿ ಮರದಲ್ಲಿ ಫಲವರ್ಷದಲ್ಲಿ ಎಲ್ಲಾ ಗೊಂಚಲುಗಳನ್ನು ತೆಗೆದು ಹಾಕಿದಾಗ, ಫಲವಿಲ್ಲದ ವರ್ಷದಲ್ಲಿ ಈ ಮರವು ಕೆಲವು ಹೂ ಗೊಂಚಲುಗಳನ್ನು ಬಿಟ್ಟಿದ್ದನ್ನು ಸೇನ್ ಗಮನಿಸಿದ್ದಾರೆ. ಆದ್ದರಿಂದ, ಮಾವಿನ ಪರ್ಯಾಯ ಫಲದ ಸಮಸ್ಯೆಯನ್ನು, ಫಲ ವರ್ಷದಲ್ಲಿ ಫಸಲನ್ನು ನಿಯಂತ್ರಿಸುವುದರಿಂದ ಮತ್ತು ಮರಗಳ ಸಾಧಾರಣ ಕಸುವು ಮತ್ತು ಆರೋಗ್ಯವನ್ನು ಕಾಪಾಡುವುದರಿಂದ ಪರಿಹರಿಸಬಹುದಾಗಿದೆ.

ಮಾವಿನ ಬೆಳೆಯಲ್ಲಿ, ಪ್ರತಿವರ್ಷ ಫಲಬಿಡುವುದನ್ನು ಪ್ರೋತ್ಸಾಹಿಸಲು ಮುಂದೆ ಕಾಣಿಸಿರುವ ವಿಷಯಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು.

(ಅ) ಪ್ರತಿವರ್ಷ ಫಲಕೊಡುವ ತಳಿಗಳನ್ನು ಆರಿಸಿ ನಾಟಿ ಮಾಡುವುದು

ಎಲ್ಲಾ ಮಾವಿನ ತಳಿಗಳು, ಅನಿರ್ದಿಷ್ಟ ಫಲದ ದೃಷ್ಟಿಯಿಂದ ಸಮ ಪ್ರವೃತ್ತಿಯಿಂದ ಕೂಡಿರುವುದಿಲ್ಲವಾದ್ದರಿಂದ ತುಲನಾತ್ಮಕವಾಗಿ ಪ್ರತಿವರ್ಷ ಫಲಕೊಡುವ ತಳಿಗಳನ್ನು ನಾಟಿ ಮಾಡಬೇಕು. ಹೆಚ್ಚು ಶೇಕಡಾಂಶ ತುದಿ ಹೂಗೊಂಚಲು ಬಿಡುವ ತಳಿಗಳು ಫಲವನ್ನು ಕೊಡುತ್ತವೆ ಎಂಬುದನ್ನು ಬಿಹಾರದಲ್ಲಿ ಗಮನಿಸಲಾಗಿದೆ. ಬಿಹಾರದ ಫಜ್ಲಿ ಎಂಬ ತಳಿಯು ಇದಕ್ಕೆ ಒಂದು ಉತ್ತಮ ಉದಾಹರಣೆ. ದುಸೆರಿ

ಎಂಬ ತಳಿಯು ತುಲನಾತ್ಮಕವಾಗಿ ಪ್ರತಿವರ್ಷ ಫಲ ಕೊಡುವ ತಳಿ. ಗಮನಾರ್ಹವಾಗಿ ವಾರ್ಷಿಕ ಫಲ ಕೊಡುವ ತಳಿಗಳೆಂದರೆ ನೀಲಂ ಮತ್ತು ಬೆಂಗಳೂರಾ. ಯಾವುದಾದರೂ ಒಂದು ತಳಿಯಲ್ಲಿ ಪ್ರತಿಯೊಂದು ಮರದಲ್ಲೂ ಫಲ ಕೊಡುವುದರಲ್ಲಿ ಭಿನ್ನತೆಯನ್ನು ನಾಯಕ್ ಗಮನಿಸಿದ್ದಾರೆ. ವಾರ್ಷಿಕ ಫಲ ಕೊಡುವ ಲಕ್ಷಣವಿರುವ ಮರವನ್ನು ಮಾತ್ರ ಮುಂದೆ ವೃದ್ಧಿ ಮಾಡಬೇಕೆಂದು ಇವರು ಸಲಹೆ ಮಾಡಿದ್ದಾರೆ. ಹೆಚ್ಚಾಗಿ, ಸಾಧ್ಯವಾದಷ್ಟು ಅಧಿಕ ಫಲ ಕೊಡುವ ತಳಿಗಳನ್ನು ಮಾತ್ರ ನಾಟಿ ಮಾಡಬೇಕು. ಕಡಮೆ ಫಲ ಕೊಡುವ ಮರಗಳಲ್ಲಿ ಬಹಳ ಕಡಮೆ ಶೇಕಡಾಂಶದ ದ್ವಿಲಿಂಗ ಹೂವುಗಳಿರುವುದನ್ನು ಗಮನಿಸಲಾಗಿದೆ. ಉದಾಹರಣೆಗೆ, ಜಹಂಗೀರ್ ಮತ್ತು ಅಲಂಪೂರ್ ಬಾನೆಷಾನ್ ತಳಿಗಳಲ್ಲಿ ದ್ವಿಲಿಂಗ ಹೂಗಳ ಶೇಕಡಾಂಶ ಕ್ರಮವಾಗಿ ಮೂರು ಮತ್ತು ಒಂದು. ಮಾವಿನಲ್ಲಿ ಸ್ವಯಂ ಪರಾಗ ಹೊಂದಾಣಿಕೆ ಇಲ್ಲ ; ಆದರೆ ಸಾಧಾರಣವಾಗಿ ಪ್ರತಿ 150 ಹೂಗಳಲ್ಲಿ ಒಂದು ಮಾತ್ರ ಕಾಯಿ ಕಚ್ಚುತ್ತದೆ. ಉಳಿದವು ಉದುರಿಹೋಗುತ್ತವೆ. ಆದ್ದರಿಂದ, ವಿಶೇಷವಾಗಿ ಸಂಪೂರ್ಣ ಹೂಗಳ ಸಂಖ್ಯೆ ಕಡಮೆಯಾಗಿದ್ದಾಗ ಸಹ ಫಲವು ವರ್ಷದಿಂದ ವರ್ಷಕ್ಕೆ ಕ್ರಮೇಣ ಖಂಡಿತವಾಗಿ ಕಡಮೆಯಾಗುತ್ತದೆ. ಕಾಯಿಕಚ್ಚದೆ ಇರುವುದಕ್ಕೆ, ಫ್ಲಾರಿಡಾದಲ್ಲಿ ಹ್ಯಾಡನ್ ಎಂಬ ತಳಿಯ ಬಗ್ಗೆ ಯಂಗ್ (ಫ್ಲಾರೀಡಾ ಮ್ಯಾಂಗೊ ಫೋರಂ 1951) ಅಧ್ಯಯನ ಮಾಡಿದ್ದಾನೆ. ಈ ಅಧ್ಯಯನದ ಪ್ರಕಾರ ಏಕಭ್ರೂಣದ ತಳಿಗಳಲ್ಲಿ ಫಲ ಬಿಡದೆ ಇರುವುದಕ್ಕೆ ಕಾರಣ (1) ಶೇಕಡಾ ಹೆಚ್ಚು ಸಂಖ್ಯೆಯ ಸ್ತ್ರೈಣಾಂಗ (ಅಂಡಾಶಯ)ಗಳು ಕಾರ್ಯರಹಿತವಾಗಿರುವುದು, (2) ಹೂ ಬಿಡುವ ಕಾಲದಲ್ಲಿ ಅಂಡವ್ಯೂಹವು ನಶಿಸುವುದು ಮತ್ತು (3) ಆ್ಯಂತ್ರಾಕ್ನೋಸ್‌ರೋಗ.

ದೀರ್ಘಕಾಲ ಹೂ ಬಿಡುವ ತಳಿಗಳನ್ನು ಆರಿಸಿಕೊಂಡರೆ ಪರಿಪೂರ್ಣ ಹೂಗಳು ಒಳ್ಳೆಯ ಪರಾಗಸ್ಪರ್ಶ ಪಡೆಯುತ್ತವೆ.

(ಅ) ಬೇಸಾಯ

ಬೇಸಾಯ ಮಾಡುವುದರ ಗುರಿ ಎಂದರೆ, ಮಾವಿನ ಮರಗಳನ್ನು ಕಸುವಿನಿಂದ ಕಾಪಾಡುವುದು ಮತ್ತು ಹೂ ಬಿಡುವುದಕ್ಕೆ ಮೊದಲು ಮರಗಳಲ್ಲಿ ಹಸುರು ಭಾಗವು ಬೆಳೆಯದಿರುವಂತೆ ಮಾಡುವುದು. ಬಿಹಾರ ರಾಜ್ಯದಲ್ಲಿ ಒಂದು ವರ್ಷದಲ್ಲಿ ವಸಂತ ಕಾಲದಲ್ಲಿ ಒಂದು ಸಾರಿ ಮತ್ತು ಶರತ್ ಕಾಲದಲ್ಲಿ ಎರಡು ಸಾರಿ ; ಹೀಗೆ ಒಟ್ಟು ಮೂರು ಬಾರಿ ಉಳುಮೆಯನ್ನು ಶಿಫಾರಸ್ಸು ಮಾಡಲಾಗಿದೆ. ನವೆಂಬರ್ ತಿಂಗಳಲ್ಲಿ ನೀರಾವರಿ ಮಾಡಬಾರದು. ಹೂ ಬಿಡುವುದಕ್ಕೆ ಮೊದಲು ಅಥವಾ ಮಳೆಗಾಲ ಪ್ರಾರಂಭವಾಗುವುದಕ್ಕೆ ಒಂದು ತಿಂಗಳು ಮೊದಲು ಧಾರಾಳವಾಗಿ ಗೊಬ್ಬರ ಕೊಡ

ಬೇಕು. ಫಲಬಿಟ್ಟ ವರ್ಷದಲ್ಲಿ ಸಾರಜನಕ ರಾಸಾಯನಿಕ ಗೊಬ್ಬರವನ್ನು ಹೆಚ್ಚು ಪ್ರಮಾಣದಲ್ಲಿ ಕೊಡಬೇಕು. ಈ ಎಲ್ಲಾ ಅಗತ್ಯವಾದ ಕ್ರಮಗಳೂ ಪ್ರತಿವರ್ಷ ಫಲವನ್ನು ಕ್ರಮವಾಗಿ ಕೊಡುವುವೆಂಬ ಭರವಸೆಯಿಲ್ಲ. ಆದರೆ ಇವು ಪೂರ್ಣವಾಗಿ ಫಲಕೊಡದ ಸ್ಥಿತಿಯನ್ನು ಪರಿವರ್ತಿಸುತ್ತವೆ. ಬೇಸಿಗೆಯ ಪ್ರಾರಂಭದಲ್ಲಿ ಉತ್ತಮ ಎಲೆಮೊಗ್ಗನ್ನು ಕೊಡದ ಮಾವಿನ ಮರಗಳಿಗೆ, ಮಳಗಳ ವಯಸ್ಸಿಗೆ ತಕ್ಕಂತೆ 5ರಿಂದ 10 ಪೌಂಡು ಅಮೋನಿಯಮ್ ಸಲ್ಫೇಟನ್ನು ಜೂನ್ ತಿಂಗಳಲ್ಲಿ ಕೊಟ್ಟು, ಹೆಚ್ಚು ನೀರಾವರಿ ಮಾಡಬೇಕು ಎಂದು ಸೇನ್ (1946) ಸಲಹೆ ಮಾಡಿದ್ದಾರೆ.

(ಇ) ಹೂ ತೆಗೆಯುವುದು

ಬಿಹಾರ್ ಮತ್ತು ಪಂಜಾಬ್‌ನಲ್ಲಿ ಮಾಡಿದ ಪ್ರಯೋಗಗಳಿಂದ ಹೂತೆಗೆದ ರೆಂಬೆಗಳು ಮುಂದಿನ ವರ್ಷ ಹೂಬಿಡುವುದು ಕಂಡುಬಂದಿದೆ. ಬಿಹಾರದಲ್ಲಿ, ಮಾವು ಫಲಬಿಟ್ಟ ವರ್ಷದಲ್ಲಿ ಶೇಕಡಾ 50 ಭಾಗ ಹೂಗಳನ್ನು ತೆಗೆದುಹಾಕಿದಾಗ ಆ ವರ್ಷ ಫಲದ ಪ್ರಮಾಣದಲ್ಲಿ ಕಡಮೆಯಾಗಲಿಲ್ಲ ಮಾತ್ರವಲ್ಲ ಮರುವರ್ಷ ಫಲ ದೊರೆತಿರುವುದು ಕಂಡುಬಂದಿದೆ.

(ಈ) ಇತರ ಚಿಕಿತ್ಸೆಗಳು

ಪೋರ್ಟೊರಿಕೊ ದೇಶದಲ್ಲಿ, ಮಾವಿನ ಮರಕ್ಕೆ ಗರ್ಡ್‌ಲಿಂಗ್ ಮಾಡುವುದನ್ನು ಕಿನ್‌ಮನ್ (1918) ಪ್ರಯತ್ನಿಸಿದ್ದ. ಭಾರತ ದೇಶದಲ್ಲಿ ಸಹ ಹೆಚ್ಚು ಹಸುರು ಭಾಗ ಬೆಳೆದಿರುವ ಮಾವಿನ ಮರಕ್ಕೆ ಆಗಸ್ಟ್ ತಿಂಗಳಲ್ಲಿ ಆರರಿಂದ ಒಂಬತ್ತು ಅಂಗುಲ ಗರ್ಡ್‌ಲಿಂಗ ಮಾಡುವುದು ಹೂ ಬಿಡುವುದನ್ನು ಪ್ರಚೋದಿಸಲು ಪರಿಣಾಮಕಾರಿಯಾಗಿ ಅನುಕೂಲಕರ ಎಂದು ಪರಿಗಣಿಸಲಾಗಿದೆ. ಆದರೂ ಇದನ್ನು ಕ್ರಮವಾಗಿ ಪ್ರತಿವರ್ಷ ಅನುಸರಿಸುವುದರಿಂದ ಮಾವಿನ ಮರದ ಕಸುವು ನಶಿಸಿ ಹೋಗುವುದರಿಂದ ಇದು ಅಪೇಕ್ಷಣೀಯ ಕ್ರಮವಲ್ಲ.

ಮಹಾರಾಷ್ಟ್ರದ ರತ್ನಗಿರಿ ಪ್ರದೇಶದಲ್ಲಿ ಮಾವಿನ ಮರಗಳಿಗೆ ಅನೇಕವೇಳೆ ಅಡಿಗೆ ಉಪ್ಪು ಹಾಕುತ್ತಾರೆ. ಸೆಪ್ಟೆಂಬರ್ ತಿಂಗಳಲ್ಲಿ ಮಳೆಯಾದಾಗ, ಮಾವಿನ ಮರದ ಬುಡಗಳಿಂದ ಒಂದು ಅಡಿ ದೂರದಲ್ಲಿ ವೃತ್ತಾಕಾರದ ಕಾಲುವೆಗಳಲ್ಲಿ, ಒಂದು ಅಡಿ ಆಳದಲ್ಲಿ ಪ್ರತಿವರ್ಷಕ್ಕೆ ಐದರಿಂದ ಹತ್ತು ಪೌಂಡು ಉಪ್ಪು ಹಾಕುತ್ತಾರೆ. ಈ ಕ್ರಮದಿಂದ ಅನಿರ್ದಿಷ್ಟ ಫಲದ ನಿಯಂತ್ರಣವಾಗುವುದು ಅನುಮಾನ. ಆದರೆ, ಇದು ಹೆಚ್ಚು ಹಸುರು ಭಾಗ ಬೆಳೆಯುವ ಮರಗಳಲ್ಲಿ ಹೂ ಬಿಡುವುದನ್ನು ಪ್ರಚೋದಿಸುವು

ಮಾವಿನ ಮರಕ್ಕೆ ಹೊಗೆ ಹಾಕುವುದರಿಂದ ವರ್ಷದ ಯಾವ ಕಾಲದಲ್ಲಿ ಬೇಕಾದರೂ ಹೂ ಬಿಡುವಂತೆ ಮಾಡಬಹುದು ಎಂಬುದನ್ನು, ಫಿಲಿಪ್ಪೈನ್ಸ್‌ನ ವೆಸ್ಟರ್ (1920) ಕಂಡುಹಿಡಿದಿದ್ದಾರೆ. ಇವರು ಮಾವಿನ ಮರಕ್ಕೆ ಹಗಲು ಮತ್ತು ರಾತ್ರಿ ಒಂದು ವಾರ ಕಾಲ ಹೊಗೆ ಹಾಕಿದರು. ಅನಂತರ ಒಂದು ತಿಂಗಳ ಕಾಲ ಮಾವಿನ ಮರಗಳ ಸುತ್ತಲೂ ಹೂ ಬಿಡುವವರೆಗೆ ಬೆಳಗ್ಗೆ ಮತ್ತು ಸಂಜೆ ಲಘುವಾಗಿ ಬೆಂಕಿ ಹಾಕಿದರು. ಅಲ್ಕಾಲ ಹಾಗೂ ಸ್ಯಾನ್‌ಪೆಡ್ರೊ (1935) ಮತ್ತು ಲಾನುಜ (1939) ಸಹ ಈ ವಿಧಾನದ ಯಶಸ್ಸನ್ನು ಕಂಡಿದ್ದಾರೆ. ಬಿಹಾರದಲ್ಲಿ ಸೇನ್ ಮಾವಿನ ಮರಗಳಿಗೆ ಹೊಗೆ ಹಾಕಿದ್ದರು, ಆದರೆ ಅವು ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ.

ಅಧ್ಯಾಯ 2

ಕೀಟ ಪೀಡೆಗಳು ಮತ್ತು ರೋಗಗಳು

ಪ್ರಪಂಚದಾದ್ಯಂತ, ಮಾವಿನ ಬೆಳೆ, ಹಲವು ಕೀಟಪೀಡೆ ಮತ್ತು ರೋಗಗಳಿಂದ ನಷ್ಟವನ್ನು ಅನುಭವಿಸುತ್ತದೆ. ಭಾರತ ದೇಶದಲ್ಲಿ ಮಾವಿನ ಜಿಗಿಹುಳು ಅಥವಾ ಜಾಸಿಡ್ಹಾಪರ್, ಮಾವಿನ ಮೂತಿ ಹುಳು ಮತ್ತು ಬೂದಿ ರೋಗಗಳು ಮಾವಿನ ಬೆಳೆಗೆ ವಿಪತ್ಕಾರಿಗಳಾಗಿವೆ. ಇವುಗಳನ್ನು ಸೂಕ್ತವಾಗಿ ಹತೋಟಿ ಮಾಡದಿದ್ದರೆ, ಜಿಗಿಹುಳು ಇಡೀ ಬೆಳೆಯನ್ನು ನಷ್ಟಗೊಳಿಸುತ್ತದೆ. ಆದರೆ ಸಾಮಾನ್ಯವಾಗಿ ನಷ್ಟವು ಶೇಕಡಾ 25ರಿಂದ 60ರಷ್ಟು ಉಂಟಾಗುತ್ತದೆ.

ಕೀಟ ಪೀಡೆಗಳು

ಮಾವಿನ ಜಿಗಿಹುಳು (ಇಡಿಯೊಸೆರಸ್ ಪ್ರಭೇದ)

ಮಾವಿನ ಹೂಗೊಂಚಲಿನ ಮೇಲೆ ಜೀವಿಸುವ ಈ ಜಿಗಿಹುಳು 1889ರಲ್ಲಿ ಪ್ರಥಮವಾಗಿ ಭಾರತ ದೇಶದ ಸಂಶೋಧಕರನ್ನು ಆಕರ್ಷಿಸಿದೆ. ಪಾಲೊ ಮತ್ತು ಗಾರ್ಸಿಯ (1935) ಉಲ್ಲೇಖಿಸುವ ಲಿಥಿಯರಿ (1889) ಎಂಬ ಸಂಶೋಧಕನು ಇಡಿಯೊಸೆರಸ್ ಅಟಕಿನ್‌ಸೊನಿ, ಇಡಿಯೊಸೆರಸ್ ನಿವಿಯೋಸ್ಪಾರಸಸ್ ಮತ್ತು ಇಡಿಯೊಸೆರಸ್ ಕ್ಲೈಪಿಯಲಿಸ್ ಎಂಬ ಮೂರು ಪ್ರಭೇದಗಳ ಜಿಗಿಹುಳುಗಳನ್ನು ಗುರುತಿಸಿದ್ದಾನೆ. ಈ ಕೀಟಗಳು ಭಾರತ ದೇಶದ ಎಲ್ಲಾ ಕಡೆಗಳಲ್ಲಿ ಕಂಡುಬರುತ್ತವೆ. ಪ್ರತಿಯೊಂದು ರಾಜ್ಯದಲ್ಲಿ ಒಂದು ಅಥವಾ ಹೆಚ್ಚು ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಬಿಹಾರ್ ಮತ್ತು ದಕ್ಷಿಣ ಭಾರತದಲ್ಲಿ ಈ ಮೂರು ಪ್ರಭೇದಗಳು ಮತ್ತು ಪಂಜಾಬ್ ರಾಜ್ಯದಲ್ಲಿ ಕೇವಲ ಇಡಿಯೊಸೆರಸ್ ಅಟಕಿನ್‌ಸೊನಿ ಮತ್ತು ಇಡಿಯೊಸೆರಸ್ ಕ್ಲೈಪಿಯಲಿಸ್ ವರದಿಯಾಗಿವೆ.

ಈ ಮೂರು ಪ್ರಭೇದಗಳಲ್ಲಿ, ಭಾರತ ದೇಶದಲ್ಲಿ ಇಡಿಯೊಸೆರಸ್ ಕ್ಲೈಪಿಯಲಿಸ್ ಗಾತ್ರದಲ್ಲಿ ಬಹಳ ಚಿಕ್ಕದು ಮತ್ತು ಹಾನಿಕರವಾದುದು. ಉಪ್ಪಲ್ ಮತ್ತು ವ್ಯಾಗಲ್ (1944) ಪ್ರಕಾರ ಇಡಿಯೊಸೆರಸ್ ಅಟಕಿನ್‌ಸೊನಿ, ಮಾವಿನ ಮರದ

ಮರದ ತಾಯಿಕಾಂಡ ಮತ್ತು ರೆಂಬೆಗಳ ಮೇಲೆ ಇರುತ್ತವೆ, ಹಾಗೆಯೇ ಇಡಿಯೊಸೆರಸ್ ನಿವಿಯೋಸ್ಪಾರ್ಸಸ್ ಮತ್ತು ಇಡಿಯೊಸೆರಸ್ ಕ್ಲೈಪಿಯಲಿಸ್ ಹೂ ಬಿಡುವ ಕಾಲದಲ್ಲಿ ಹೂಗಳ ಮೇಲೆ ವಾಸಿಸಿ ರಸವನ್ನು ಹೀರಿ ಜೀವಿಸುತ್ತವೆ ಮತ್ತು ಉಳಿದ ಕಾಲದಲ್ಲಿ ಎಲೆಗಳ ಮೇಲೆ ವಾಸಿಸುತ್ತವೆ. ಈ ಮೂರು ಪ್ರಭೇದಗಳಲ್ಲಿ ಇಡಿಯೊಸೆರಸ್ ಕ್ಲೈಪಿಯಲಸ್ ಬಹಳ ಹೆಚ್ಚು ಸಂತಾನಾಭಿವೃದ್ಧಿ ಮಾಡುವ ಪ್ರವೃತ್ತಿಯದು ; ವರ್ಷಕ್ಕೆ ಒಂದು ಸಾರಿ ಹೂಗೊಂಚಲುಗಳ ಮೇಲೆ, ಬಹುವಾಗಿ ಜನವರಿ, ಫೆಬ್ರವರಿ ತಿಂಗಳಲ್ಲಿ ಸಂತಾನಾಭಿವೃದ್ಧಿ ಮಾಡುತ್ತದೆ. ಇನ್ನೊಂದು ಕಡೆ, ಇಡಿಯೊಸೆರಸ್ ನಿವಿಯೊಸ್ಪಾರ್ಸಸ್ ಹೂಬಿಡುವ ಕಾಲದಲ್ಲಿ ಸಂತಾನಾಭಿವೃದ್ಧಿ ಮಾಡುವುದಲ್ಲದೆ, ಜೂನ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಹ ಸಂತಾನಾಭಿವೃದ್ಧಿ ಮಾಡುತ್ತದೆ. ಇಡಿಯೊಸೆರಸ್ ಅಟಕಿನ್‌ಸೊನಿ ಅಷ್ಟೇನೂ ಸಂತಾನಾಭಿವೃದ್ಧಿ ಪ್ರವೃತ್ತಿಯದಲ್ಲ ; ವರ್ಷಕ್ಕೆ ಮೂರು ಸಾರಿ ಬಹುವಾಗಿ ಎಲೆಗಳ ಮೇಲೆ ಮತ್ತು ಅಪರೂಪವಾಗಿ ಹೂಗೊಂಚಲುಗಳ ಮೇಲೆ ಸಂತಾನವೃದ್ಧಿ ಮಾಡುತ್ತದೆ. ಎಲ್ಲಾ ಮೂರು ಪ್ರಭೇದದ ಕೀಟಗಳೂ ಉಳಿದ ಕಾಲಗಳಲ್ಲಿ ತಮ್ಮ ಪ್ರೌಢ ವಯಸ್ಸನ್ನು ಮಾವಿನ ಮರದ ಕಾಂಡ ಮತ್ತು ಎಲೆಗಳ ಮೇಲೆ ಕಳೆಯುತ್ತವೆ. ಇವಕ್ಕೆ ಪರ್ಯಾಯ ಆತಿಥೇಯಗಳಾವುವೆಂಬುದು ತಿಳಿದಿಲ್ಲ (ವ್ಯಾಗಲ್ 1934). ಆದರೂ ಸಹ ಕೆಲವು ಸಾರಿ ಇವು ವಿವಿಧ ಪ್ರಭೇದಗಳ ಜಂಬೀರ ವೃಕ್ಷದ ಎಲೆಗಳ ಮೇಲೆ ಮತ್ತು ಕೆಲವು ವೇಳೆ ಕ್ಯಾಲೊಫಿಲ್ಲಸ್ ಇನೊಫಿಲ್ಲಮ್ ಮೇಲೆ ಕಾಣಿಸಿಕೊಳ್ಳುತ್ತವೆ. ಆದರೆ ಈ ವೃಕ್ಷಗಳು ಈ ಕೀಟಗಳಿಗೆ ಪರ್ಯಾಯ ಆಹಾರ ಸಸ್ಯಗಳೇನಲ್ಲ (ಉಪ್ಪಲ್ ಮತ್ತು ವ್ಯಾಗಲ್ 1944).

ಕೊಂಕಣ ಮತ್ತು ಕರ್ನಾಟಕ ಪ್ರಾಂತಗಳಲ್ಲಿ ಇಡಿಯೊಸೆರಸ್ ಕ್ಲೈಪಿಯಲಿಸ್ ಹೂ ಬಿಡುವ ಕಾಲದಲ್ಲಿ ಅತಿಯಾಗಿ ಸಂತಾನಾಭಿವೃದ್ಧಿ ಮಾಡುವುದರಿಂದ ಹೆಚ್ಚು ಹಾನಿಯನ್ನುಂಟುಮಾಡುವ ಪ್ರಧಾನಕೀಟ. ಇನ್ನುಳಿದ ಎರಡು ಪ್ರಭೇದಗಳು ಅಗಾಧ ಸಂಖ್ಯೆಯಲ್ಲಿ ದಕ್ಷಿಣ ಗುಜರಾತ್ ರಾಜ್ಯ ಮತ್ತು ಬೊಂಬಾಯಿಯ ಸುತ್ತಮುತ್ತಲೂ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ದಕ್ಷಿಣ ಭಾರತದಲ್ಲಿ ಈ ಮೂರು ಪ್ರಭೇದಗಳ ಕೀಟಗಳೂ ಇವೆ, ಆದರೆ ಇವುಗಳಲ್ಲಿ ನಿವಿಯೊಸ್ಪಾರ್ಸಸ್ ಪ್ರಭೇದವು ಬಹಳ ಹಾನಿಯನ್ನುಂಟುಮಾಡುತ್ತವೆ. ಮೈಸೂರು ರಾಜ್ಯದಲ್ಲಿ ಇಡಿಯೊಸೆರಸ್ ಕ್ಲೈಪಿಯಲಿಸ್ ಮುಖ್ಯವಾಗಿ ಹೂಗೊಂಚಲುಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇತರ ಎರಡು ಪ್ರಭೇದಗಳು ಎಳೆಯ ರೆಂಬೆಗಳ ಮೇಲೂ ಸಹ ಕಾಣಿಸಿಕೊಳ್ಳುತ್ತವೆ. ಪಂಜಾಬಿನಲ್ಲಿ ಇಡಿಯೊಸೆರಸ್ ಅಟಕಿನ್‌ಸೊನಿ ಮತ್ತು ಇಡಿಯೊಸೆರಸ್ ಕ್ಲೈಪಿಯೊಲಿಸ್ ಈ ಎರಡು ಪ್ರಭೇದಗಳು ಮಾತ್ರ ಕಂಡು ಬಂದಿವೆ. ಇವುಗಳಲ್ಲಿ ಮೊದಲನೆಯದೇ ಹೆಚ್ಚಾಗಿ ಕಂಡುಬರುತ್ತದೆ.

ಜಾಸಿಡ್ ಹಾಪರುಗಳು

ಹಾಪರುಗಳು, $\frac{1}{8}$ ರಿಂದ $\frac{1}{4}$ ಅಂಗುಲ ಗಾತ್ರದ ಸಣ್ಣ ಕೀಟಗಳು. ಪ್ರಾಪ್ತ ವಯಸ್ಸಿನ ಈ ಕೀಟಗಳು ಬೆಣೆಯಾಕಾರದವು ಮತ್ತು ತಗಣೆಯ ವರ್ಗಕ್ಕೆ ಸೇರಿವೆ ಹೀರುವ ಅಂಗ (ಮೂತಿ)ದಿಂದ ಇವು ಮಾವಿನ ಸಸ್ಯದ ಎಳೆಯ ಭಾಗಗಳನ್ನು ಚುಚ್ಚಿ ಹೂಗೊಂಚಲುಗಳಿಗೆ ಮತ್ತು ಕಾಯಿಗಳಿರುವ ರೆಂಬೆಗಳಿಗೆ, ತೊಂದರೆಯನ್ನುಂಟು ಮಾಡುತ್ತವೆ. ಬೇಸಿಗೆ ಕಾಲದಲ್ಲಿ ನಿಬಿಡವಾಗಿರುವ ರೆಂಬೆಗಳ ತಳಭಾಗದಲ್ಲಿ, ಅಗಾಧ ಸಂಖ್ಯೆಯಲ್ಲಿ ಎಲೆಗಳ ಕೆಳಭಾಗದಲ್ಲಿ ಮತ್ತು ಚಳಿಗಾಲದಲ್ಲಿ ತೊಗಟೆಯ ಕೆಳಭಾಗದಲ್ಲಿ ಅಥವಾ ಎಲೆಗಳ ಕೆಳಭಾಗದಲ್ಲಿ ಅವಿತುಕೊಂಡಿರುತ್ತವೆ. ಇವು ಬೆಳಕಿನಿಂದ ದೂರ ವಿದ್ದು, ನೆರಳಿನಲ್ಲಿರಲು ಇಚ್ಛಿಸುತ್ತವೆ. ಮೋಡ ಕವಿದ ವಾತಾವರಣ ಇವುಗಳ ಹಾವಳಿಗೆ ಪ್ರೋತ್ಸಾಹಕಾರಿ. ಪಾಲೊ ಮತ್ತು ಗಾರ್ಸಿಯ(1935) ರವರ ಪ್ರಕಾರ ಕಗ್ಗತ್ತಲಿನ ರಾತ್ರಿ ಮತ್ತು ಸೌಮ್ಯ ವಾತಾವರಣದಲ್ಲಿ ಶೇಕಡಾ 90 ಭಾಗ ತೇವಾಂಶ ವಿರುವ ಸ್ಥಿತಿ ಹಾವಳಿಗೆ ಬಹಳ ಅನುಕೂಲಕಾರಿ. ಮರಿಹುಳು ಮತ್ತು ಪ್ರಾಪ್ತ ವಯಸ್ಸಿನ ಕೀಟಗಳು ಸಸ್ಯಗಳ ರಸವನ್ನು ಹೀರಿ ಅಂಟಾದ ಮಲವಿಸರ್ಜನೆ ಮಾಡು ವುದರಿಂದಾಗಿ ಸಸ್ಯಗಳಿಗೆ ತೊಂದರೆಯನ್ನುಂಟುಮಾಡುತ್ತವೆ, ಕಾರಣವೆಂದರೆ ಈ ಹಂತದಲ್ಲಿ ಇದರ ಮೇಲೆ ಕಪ್ಪಾದ ಸೂಟಿ ಮೌಲ್ಡ್ ರೋಗವು ಕಂಡುಬಂದು ಇಡೀ ಎಲೆಯನ್ನು ಆವರಿಸುತ್ತದೆ ; ಇದರಿಂದ ಎಲೆಗಳ ಸಾಮಾನ್ಯ ಕಾರ್ಯಗಳಿಗೆ ತೊಂದರೆಯುಂಟಾಗುತ್ತದೆ. ಉಪ್ಪಲ್ ಮತ್ತು ವ್ಯಾಗಲ್ (1944) ಪ್ರಕಾರ ಪ್ರಾಪ್ತ ವಯಸ್ಸಿನ ಕೀಟಗಳಿಂದ ಉಂಟಾಗುವ ಹಾನಿ ಕಡಮೆ. ಕಾರಣ ಇವು ರೆಂಬೆಗಳು ಮತ್ತು ಎಳೆಯ ಎಲೆಗಳಲ್ಲಿನ ರಸವನ್ನು ಹೀರುತ್ತವಲ್ಲದೆ ಹೂಗೊಂಚಲು ಗಳನ್ನು ಪೀಡಿಸುವುದು ಅಪರೂಪ.

ಜೀವನ ಚಕ್ರ

ಜಾಸಿಡ್ಡುಗಳು, ಹೂಗೊಂಚಲುಗಳ ಊತಕಗಳು ಮತ್ತು ಅರಳದೆ ಇರುವ ಹೂವುಗಳ ಮೇಲೆ ಮೊಟ್ಟೆಗಳನ್ನಿಡುತ್ತವೆ. ಮುಂಬೈಯಲ್ಲಿ 4 ರಿಂದ 6 ದಿವಸಗಳಲ್ಲಿ, ಪಂಜಾಬ್‌ನಲ್ಲಿ 8ರಿಂದ 10 ದಿವಸಗಳಲ್ಲಿ ಮೊಟ್ಟೆಗಳಿಂದ ಮರಿಹುಳುಗಳು ಹೊರ ಬರುತ್ತವೆ. ಹೇಸ್(1953) ರವರ ಪ್ರಕಾರ ಅವು ಶೀಘ್ರವಾಗಿ ಬೆಳೆದು ರೆಕ್ಕೆಗಳಿ ರುವ ಕೀಟಗಳಾಗುವುದಕ್ಕೆ ಮೊದಲು ಐದು ಸಾರಿ ಪೊರೆ ಬಿಡುತ್ತವೆ. ಮರಿಹುಳು ಗಳು ಪ್ರಾಪ್ತವಯಸ್ಸಿಗೆ ಬರಲು ಬಾಂಬೆಯಲ್ಲಿ 10ರಿಂದ 13 ದಿವಸಗಳು ಮತ್ತು ಪಂಜಾಬಿನಲ್ಲಿ 25ರಿಂದ 29 ದಿವಸಗಳು ಬೇಕಾಗುತ್ತವೆ. ಜಾಸಿಡ್ಡುಗಳ ಜೀವನಚಕ್ರ, ಸಾಧಾರಣವಾಗಿ ಎಲ್ಲಾ ಪ್ರಭೇದಗಳಿಗೆ ಒಂದೇ ಆಗಿರುತ್ತದೆ.

ಹತೋಟಿ

ಸ್ವಲ್ಪ ಹಿಂದಿನ ಕಾಲದಲ್ಲಿ ಜಾಸಿಡ್ಡುಗಳನ್ನು ಹತೋಟಿಮಾಡಲು, ಹೂಬಿಡುವ ಕಾಲದಲ್ಲಿ ಒಂದು ಅಥವಾ ಹೆಚ್ಚು ಬಾರಿ ಗಂಧಕದ ಪುಡಿ ಎರಚುವುದು, ಹೊಗೆಸೊಪ್ಪಿನ ಕಷಾಯ, ಕ್ರೂಡ್ ಆಯಿಲ್‌ಎಮಲ್‌ಷನ್, ಮೀನೆಣ್ಣೆಯ ಸಾಬೂನು ಮತ್ತು ಪೈರಿತ್ರಮ್ ಮುಂತಾದವುಗಳನ್ನು ನಾಲ್ಕೈದು ಬಾರಿ ಸಿಂಪಡಿಸುತ್ತಿದ್ದರು. ಇದು ಕೀಟಗಳ ಸಂತಾನಾಭಿವೃದ್ಧಿ ಇಲ್ಲದಿರುವ ಕಾಲದಲ್ಲಿ ಉಪಯುಕ್ತವಾಗಿಲ್ಲ. ಸುಣ್ಣನೆಯ ಗಂಧಕದ ಪುಡಿಯನ್ನು, ಮಾವಿನ ಹೂಬಿಡುವ ಕಾಲದಲ್ಲಿ, ಎರಡು ವಾರಗಳ ಅಂತರದಲ್ಲಿ ಎರಚುವುದು, ಕಡಿಮೆ ಖರ್ಚಿನ ಹೆಚ್ಚು ಸಮರ್ಥಕ್ರಮವೆಂದು ವ್ಯಾಗಲ್ (1934) ಪರಿಗಣಿಸಿದ್ದಾರೆ. ಗುಜರಾತ್‌ನಲ್ಲಿ 8ರಿಂದ 10 ಸಾರಿ ಗಂಧಕದ ಪುಡಿಯನ್ನು ಎರಚುವುದು ಅಗತ್ಯ (ಉಪ್ಪಲ್ ಮತ್ತು ವ್ಯಾಗಲ್). ದೇಶಪಾಂಡೆ ಮತ್ತು ಕರಂಡಿಕರ್‌ರವರು ಮೀನೆಣ್ಣೆಯ ಸಾಬೂನು (ಫಿಷ್ ಆಯಿಲ್ ರೆಸಿನ್ ಸೋಪ್) 1 ಪೌಂಡನ್ನು ನಾಲ್ಕು ಗ್ಯಾಲನ್ ನೀರಿನೊಂದಿಗೆ ಮಿಶ್ರಣ ಮಾಡಿ ಮರಿಹುಳುಗಳನ್ನು ನಿಯಂತ್ರಿಸುವುದನ್ನು ಮತ್ತು ಇದು ಪ್ರಾಪ್ತವಯಸ್ಸಿನ ಕೀಟಗಳ ಮೇಲೆ ಯಾವ ಪರಿಣಾಮ ಉಂಟುಮಾಡದೇ ಇರುವುದನ್ನು ಮನಗಂಡಿದ್ದಾರೆ.

ಸಮರಾನಂತರದ ಕಾಲದಲ್ಲಿ ಈ ಜಾಸಿಡ್ಡುಗಳ ಹತೋಟಿಯಲ್ಲಿ ಗಣನೀಯ ಪ್ರಗತಿಯಾಗಿದೆ. ಶೇಕಡಾ 0.2ಡಿ.ಡಿ.ಟಿ. ಸಿಂಪರಣೆ ಅಧಿಕತಮ ಪರಿಣಾಮಕಾರಿಯೂ ಆಗಿರುವುದು ಸಾಬೀತಾಗಿದ್ದರೂ ಶೇಕಡಾ 10ರ ಡಿ.ಡಿ.ಟಿ ಪುಡಿಯನ್ನು ಗಂಧಕದ ಪುಡಿ ಜೊತೆಯಲ್ಲಿ 1 : 1 ಪ್ರಮಾಣದಲ್ಲಿ ಮಿಶ್ರಮಾಡಿ ಎರಚುವುದು ಪರಿಣಾಮಕಾರಿ ನಿಯಂತ್ರಣ ಕ್ರಮವೆಂದು ಟ್ರೆಹಾನ್ (1947–48) ವರದಿ ಮಾಡಿದ್ದಾನೆ. ಮಾರ್ಚ್ ತಿಂಗಳಲ್ಲಿ ಶೇಕಡಾ 15ರಷ್ಟು ಡಿ. ಡಿ. ಟಿ ಒಂದು ಸಾರಿ ಸಿಂಪಡಿಸುವುದರಿಂದ ಸೊಹಿ ಮತ್ತು ಚಾಟ್ರ (1950) ಉತ್ತಮ ಫಲಿತಾಂಶ ಪಡೆದಿದ್ದಾರೆ. ಈ ಸಿಂಪರಣೆಯ ಪರಿಣಾಮ ಕೊನೆಯ ಪಕ್ಷ ಐದು ವಾರಗಳ ಕಾಲ ಉಳಿದಿರುತ್ತದೆ. ಗುಎಸರಾಲ್ 550(ಶೇಕಡಾ 50ರ ಡಿ.ಡಿ.ಟಿ. ನೀರಿನಲ್ಲಿ ಕರಗುವ ಪುಡಿ) ಬಳಕೆಯಿಂದ ಯಶಸ್ಸನ್ನು ಪಂಜಾಬಿನ ಲತೀಫ್ ಮತ್ತು ಕ್ವಾಯುಮ್ (1950) ಹಾಗೂ ಬಿಹಾರಿನಿಂದ ರಾಯ್ ಮತ್ತು ರಾಮ್ (1952) ವರದಿ ಮಾಡಿದ್ದಾರೆ. ಮೊದಲ ಸಂಶೋಧಕರು ದ್ರಾವಣವನ್ನು 1 : 300ರಷ್ಟು ದುರ್ಬಲ ಮಾಡಬೇಕೆಂದು ಮತ್ತು ಎರಡನೆಯ ಸಂಶೋಧಕರು 1ಭಾಗ ಗುಎಸರಾಲ್‌ನ್ನು 40 ಭಾಗದಲ್ಲಿ ಮಿಶ್ರಣ ಮಾಡಿ ಹೂಮೊಗ್ಗು ವಿಂಗಡಣೆ ಕಾಲದಲ್ಲಿ ಒಂದು ವಾರದ ಅಂತರದಲ್ಲಿ ಮೂರು ಸಾರಿ ಸಿಂಪಡಿಸಬೇಕು ಎಂದೂ ಶಿಫಾರಸ್ಸು ಮಾಡಿದ್ದಾರೆ. ಡಿ.ಡಿ.ಟಿ.

ಶಿಫಾರಸ್ಸು ಮಾಡಿದ್ದಾರೆ. ಗುಎಸರಾಲ್ 405–50, ಶೇಕಡಾ 5ರ ಡಿ.ಡಿ.ಟಿ. ಮತ್ತು ಶೇಕಡಾ 50 ಗಂಧಕವಿರುವ ಉತ್ತಮವಾದ ಸಿದ್ಧವಸ್ತು. ಹೂ ಬಿಡುವುದು ಪ್ರಾರಂಭವಾದ ಮೇಲೆ, ಎರಡು ವಾರಗಳ ಅಂತರದಲ್ಲಿ, ಮೂರು ಸಾರಿ ಪುಡಿ ಧೂಳಿಸುವುದನ್ನು ಶಿಫಾರಸ್ಸು ಮಾಡಲಾಗಿದೆ. ಡಿ.ಡಿ.ಟಿಯೊಂದೇ ಜಾಸಿಡ್ಡುಗಳನ್ನು ಕೊಲ್ಲಬಲ್ಲದು. ಆದರೆ ಇದೇ ಸಮಯದಲ್ಲಿ ಡಿ.ಡಿ.ಟಿ ಇನ್ನೊಂದು ಸೂಕ್ಷ್ಮ ಕೀಟವಾದ ನುಸಿಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದರಿಂದ, ಇದಕ್ಕೆ ಗಂಧಕ ಸೇರಿಸುವುದು ಅಗತ್ಯವಾಗುತ್ತದೆ. ಜಾಸಿಡ್ಡುಗಳು ನುಸಿಯನ್ನು ತಿನ್ನುವುದರಿಂದ, ಇವು ನುಸಿ ಹತೋಟಿ ಮಾಡುತ್ತವೆ. ಗಂಧಕವು ಜಾಸಿಡ್ಡುಗಳನ್ನು ಹಿಮ್ಮೆಟ್ಟಿಸುತ್ತದೆ. ಮಿಲ್ಡ್ಯೂ ರೋಗವನ್ನು ನಿಯಂತ್ರಿಸುತ್ತದೆ ಮತ್ತು ನುಸಿಯನ್ನು ಕೊಲ್ಲುತ್ತದೆ.

ಹೆಚ್ಚು ಗಾಳಿಯಿರುವ ಕಾಲದಲ್ಲಿ ಗಂಧಕವು ಪರಿಣಾಮವನ್ನುಂಟುಮಾಡದೆ ಇರುವುದರಿಂದ, ಅಧಿಕ ಗಾಳಿಯಿರುವ ದಿವಸಗಳಲ್ಲಿ ಗಂಧಕದ ಪುಡಿಯನ್ನು ಎರಚಬಾರದು. ಗಂಧಕದ ಪುಡಿ ಎರಚಿದನಂತರ ಮಳೆ ಬಂದರೆ ಅದನ್ನು ತೊಳೆದು ಹಾಕುವುದರಿಂದ, ಹಾಗೆ ತೊಳೆದು ಹೋದ ಮೂರು-ನಾಲ್ಕು ದಿವಸಗಳ ನಂತರ ಮತ್ತೆ ಗಂಧಕದ ಪುಡಿ ಸಿಂಪಡಿಸಬೇಕು.

ಇಡಿಯೊಸೆರಸ್ ಅಟಕಿನ್‌ಸೊನಿ ಲೆತ್. ಜಾಸಿಡ್ಡುಗಳನ್ನು ಶರೀರಾಂತರ್ಗತ ಕೀಟ ನಾಶಕವಾದ ಶೇಕಡಾ 4ರ ಸಾಂದ್ರತೆಯ ಪೆಸ್ಟೋಕ್ಸ್ 111 ಸಿಂಪಡಿಸುವುದರಿಂದ ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದೆಂದು ಪಶ್ಚಿಮ ಬಂಗಾಳದ ಡೇ ಮತ್ತು ದತ್ತಾ ವರದಿ ಮಾಡಿದ್ದಾರೆ. ಮಳೆಯಿಂದ ಇದು ತೊಳೆದುಹೋಗದೆ ಇರುವುದರಿಂದ ಇದನ್ನು ಅನೇಕವೇಳೆ ಉಪಯೋಗಿಸಬಹುದು.

ಮಾವಿನ ಕಾಂಡಕೊರಕ

ದೇಶದಲ್ಲಿ ಮಾವು ಬೆಳೆಯುವ ಎಲ್ಲಾ ಭಾಗಗಳಲ್ಲಿ ಈ ಕೀಟವು ಅಧಿಕವಾಗಿ ವ್ಯಾಪಿಸಿದೆ. ಬ್ಯಾಟೊಸೆರಾ ರೂಬಸ್ ಮತ್ತು ಬ್ಲುಮೆಟಿಯ ಟ್ರಾನ್ಸ್‌ವರ್‌ಸಾ ವಾಕರ್. ಎಂಬ ಎರಡು ಪ್ರಭೇದ ಕೀಟಗಳನ್ನು ಇದುವರೆಗೆ ನಮೂದಿಸಲಾಗಿದೆ. ಬ್ಲುಮೆಟಿಯ ಟ್ರಾನ್ಸ್‌ವರ್‌ಸಾದ ಸಂಗ್ರಹಣೆಯಿರುವ ಬ್ರಿಟಿಷ್ ಮ್ಯೂಜಿಯಂ, ಈ ಕೀಟವು ಸಿಲೋನ್, ಮಲಯಾ ಪರ್ಯಾಯ ದ್ವೀಪ ಮತ್ತು ಈಸ್ಟ್ ಇಂಡೀಸ್ (ಹ್ಯಾಂಪ್‌ಸನ್ 1912) ಹತ್ತಿರದ ಕೆಲವು ದ್ವೀಪಗಳಲ್ಲಿ ಇದೆ ಎಂಬುದನ್ನು ಸೂಚಿಸುತ್ತವೆ. ಈ ಕೀಟವು ಮಾವು ಮತ್ತು ಅಂಜೂರದ ಮರಗಳನ್ನು ನಾಶಮಾಡುತ್ತದೆ.

ಬ್ಯಾಟೊಸೆರಾ ರುಬಿಸ್

ಇದು, ಮಾವಿನ ಬೆಳೆಗೆ ತೀವ್ರವಾದ ಮತ್ತು ಸಾಮಾನ್ಯವಾದ ಕೀಟ. ಇದೊಂದು ದಪ್ಪ ದುಂಬಿ. ಇದರ ಮರಿಹುಳು ಮಾವಿನ ಕಾಂಡ ಅಥವಾ ರೆಂಬೆಗಳನ್ನು ಕೊರೆಯುತ್ತದೆ. ಮಾವಿನ ತೊಗಟೆಯಲ್ಲಿರುವ ಸೀಳುಗಳು ಮತ್ತು ಮರದ ಹತ್ತಿರ ಬಿದ್ದಿರುವ ಮರದ ಪುಡಿ, ಈ ಕೀಟದ ಹಾವಳಿಯನ್ನು ಸೂಚಿಸುತ್ತದೆ. ಪ್ರಾಪ್ತ ವಯಸ್ಸಿನ ಕೀಟವು ಮಾವಿನ ತೊಗಟೆಯ ರಂಧ್ರಗಳಲ್ಲಿ ಮೊಟ್ಟೆಗಳನ್ನು ಇಡುತ್ತದೆ ಮತ್ತು ಇದರಿಂದ ಹೊರಬರುವ ಮರಿಹುಳು ಕಾಂಡವನ್ನು ಕೊರೆಯುತ್ತದೆ. ಈ ರೀತಿ ಕೊರೆಯುವುದರಿಂದ ಕಾಂಡದ ಒಳಗೆ ಡೊಂಕು ಡೊಂಕಾದ ಅಥವಾ ಸುರುಳಿಯಂತಿರುವ ಸುರಂಗಗಳು ಉಂಟಾಗುತ್ತವೆ. ಅತಿಯಾಗಿ ಪೀಡಿತ ರೆಂಬೆಗಳ ಸುತ್ತಲೂ ಸುರಂಗಗಳು ಉಂಟಾಗಿ, ಅವು ಮುರಿದು ಬೀಳುತ್ತವೆ. ಕೆಲವುವೇಳೆ ದೊಡ್ಡ ದೊಡ್ಡ ಮರಗಳು ಸಹ ಈ ಕೀಟದ ಹಾವಳಿಗೆ ಆಹುತಿಯಾಗಿ ಒಣಗಿ ಹೋಗುತ್ತವೆ.

ರಂಧ್ರ ಮತ್ತು ಸುರಂಗಗಳ ಒಳಗಿರುವ ಮರಿಹುಳುಗಳನ್ನು ಕೊಕ್ಕೆಯಿರುವ ಸಲಾಕೆಯನ್ನು ಒಳಸೇರಿಸಿ ಹೊರತೆಗೆದು ನಾಶಮಾಡುವುದು ಉತ್ತಮ ಪರಿಹಾರ ಮಾರ್ಗಗಳಲ್ಲಿ ಒಂದು. ಸುರಂಗಗಳು ಡೊಂಕು ಡೊಂಕಾಗಿರುವುದರಿಂದ ಮರಿಹುಳು, ಗಳನ್ನು ಹೊರತೆಗೆಯಲು ಸಾಧ್ಯವಾಗದಿದ್ದರೆ, ಹತ್ತಿಯನ್ನು ಕಾರ್ಬನ್‌ಡೈ ಸಲ್ಫೈಡ್ ಪೆಟ್ರೋಲ್ ಅಥವಾ ಕ್ಲೋರೋಫಾರ್ಮ್‌ನಲ್ಲಿ ಅದ್ದಿ ಅಥವಾ ಒಂದು ಹರಳು ಕ್ಲೋರೋಫಾರಂ ಒಳಸೇರಿಸಿ ಮೇಲು ರಂಧ್ರಕ್ಕೆ ಸೇರಿಸಬೇಕು. ಪಿಚಕಾರಿಯಿಂದ ಸೀಮೆ ಎಣ್ಣೆಯನ್ನು ಒಳಹೊಗಿಸುವುದು ಅಥವಾ ಒಂದೆರಡು ಪೊಟ್ಯಾಷಿಯಮ್ ಸೈನೈಡ್ ಹರಳನ್ನು ರಂಧ್ರದೊಳಕ್ಕೆ ಸೇರಿಸುವುದರಿಂದ ಮರಿಹುಳುಗಳನ್ನು ಕೊಲ್ಲಬಹುದು ಎಂದು ರಹಮಾನ್ (1946) ಶಿಫಾರಸ್ಸು ಮಾಡುತ್ತಾರೆ. ಮೇಲ್ಭಾಗದ ರಂಧ್ರಗಳನ್ನು ಎರಡು ಸಂದರ್ಭಗಳಲ್ಲಿ ತೇವವಾದ ಮಣ್ಣಿನಿಂದ ಮುಚ್ಚಬೇಕು. ಕ್ರೂಡ್ ಕಾರ್ಬಾಲಿಕ್ ಆಮ್ಲ (ಒಂದು ಪಿಂಟ್), ಮೆದುವಾದ ಸಾಬೂನು (ಎರಡು ಪೌಂಡು) ಮತ್ತು ಬಿಸಿ ನೀರು (ಒಂದು ಗ್ಯಾಲನ್)ಗಳಿಂದ ಮಾಡಿದ ಹಿಟ್ಟಿನಿಂದ ರಂಧ್ರಗಳನ್ನು ಮುಚ್ಚುವುದರಿಂದ ಕೀಟ ಹತೋಟಿ ಮಾಡುವುದನ್ನು ನಾಯಕ್ (1949) ಸೂಚಿಸಿದ್ದಾರೆ. ಈ ಹಿಟ್ಟನ್ನು ಲೇಪನ ಮಾಡುವುದಕ್ಕೆ ಮಾಡಿದ ಗಾಯಗಳಿಗೆ ಟಾರ್ ಬಳಿಯಬೇಕು. ಇದೇ ಕ್ರಮದಲ್ಲಿ ಎಲ್ಲಾ ಪೀಡಿತ ಮರಗಳಿಗೆ ಚಿಕಿತ್ಸೆ ಮಾಡಬೇಕು. ಒಣಗಿಹೋಗಿರುವ ರೆಂಬೆಗಳನ್ನು ಕತ್ತರಿಸಿ ಸುಟ್ಟುಹಾಕಬೇಕು. ಈ ಕೀಟವು ಮೊಟ್ಟೆಗಳನ್ನಿಡುವ ಕಾಲದಲ್ಲಿ ಮರದ ಬುಡಕ್ಕೆ ಜಾಲರಿ ತಂತಿ ಹಾಕಬೇಕು ಎಂದು ರಹಮಾನ್ ಶಿಫಾರಸ್ಸು ಮಾಡಿದ್ದಾರೆ.

ಚ್ಲುಮೇಟಿಯ ಟ್ರಾನ್ಸ್‌ವೆರ್ಸಾ ವಾಕರ್

ಈ ಕೀಟವು ವಿಶೇಷವಾಗಿ ಮಳೆಗಾಲದಲ್ಲಿ, ಎಳೆಯ ರೆಂಬೆಗಳ ಒಳಭಾಗವನ್ನು ಕೊರೆಯುತ್ತದೆ. ಕೊರೆತದಿಂದ ಟೊಳ್ಳಾದ ರೆಂಬೆತುದಿ ಒಣಗಿ ಬಿದ್ದುಹೋಗುತ್ತದೆ.

ಪೀಡಿತ ರೆಂಬೆಗಳಲ್ಲಿರುವ ಸುರಂಗಗಳ ತಳಭಾಗಕ್ಕೆ ಕತ್ತರಿಸಿ ರೆಂಬೆಯನ್ನು ಸುಡುವುದರಿಂದ, ಈ ಕೀಟವನ್ನು ಹತೋಟಿ ಮಾಡಬಹುದು. ಶೇಕಡಾ 0.5ರ ಲೆಡ್ ಆರ್ಸಿನೇಟ್ ದ್ರಾವಣವನ್ನು 3–4 ದಿವಸಗಳ ಅಂತರದಲ್ಲಿ ಸಿಂಪರಿಸುವುದರಿಂದ ಹೊಸ ರೆಂಬೆಗಳಿಗೆ ಬೀಳುವ ಕೀಟವನ್ನು ಹತೋಟಿ ಮಾಡಬಹುದು.

ಮಾವಿನ ಓಟೆ ಮೂತಿಹುಳು

ಮಾವು ಬೆಳೆಯುತ್ತಿರುವ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಈ ಕೀಟದ ಹಾವಳಿ ಸಾಮಾನ್ಯ. ಇದು ಕ್ರಿಪ್ಟೋರಿಂಕಸ್ (ಸ್ಟೆರ್‌ನೋಕೀಟಸ್) ನ ಎರಡು ಪ್ರಭೇದಗಳಿಗೆ ಸೇರಿದೆ ಕ್ರಿಪ್ಟೋರಿಂಕಸ್ ಗ್ರಾವಿಸ್ ಎಂಬ ಪ್ರಭೇದ ; ಇದನ್ನು ಪೂರ್ವಬಂಗಾಳ, ಅಸ್ಸಾಮ್ ಮತ್ತು ಜಾವಾದಲ್ಲಿ ವರದಿ ಮಾಡಿದ್ದಾರೆ ಮತ್ತು ಕ್ರಿಪ್ಟೋರಿಂಕಸ್ ಮ್ಯಾಂಜಿಫೆರ ಎಂಬ ಪ್ರಭೇಧ, ಇದು ದಕ್ಷಿಣ ಭಾರತದಲ್ಲಿ ಕಂಡುಬರುತ್ತದೆ (ಹೇಸ್ 1953). ತಮಿಳುನಾಡಿನಲ್ಲಿರುವ ಬೆಂಗಳೂರಾ ಎಂಬ ಮಾವಿನ ತಳಿ ಈ ಕೀಟಕ್ಕೆ ಸುಲಭವಾಗಿ ಬಲಿಯಾಗುತ್ತದೆ ಎಂದು ಗಾಂಧಿ(1955)ಯವರು ಹೇಳಿದ್ದಾರೆ.

ಕಾಯಿಗಳ ಮೆದುವಾದ ಭಾಗದಲ್ಲಿ ಈ ಕೀಟವು ಮೊಟ್ಟೆಗಳನ್ನಿಡುತ್ತದೆ, ಮತ್ತು ಮೊಟ್ಟೆಗಳಿಂದ ಹೊರಬಂದ ಮರಿಹುಳುಗಳು ತಿರುಳಿನ ಮೂಲಕ ಓಟೆಗೆ ಹಾದು ಹೋಗಿ, ಇನ್ನುಳಿದ ತಮ್ಮ ಜೀವನ ಚಕ್ರವನ್ನು ಮುಗಿಸಿ ಓಟೆಯೊಳಗೆ ಕೋಶಾವಸ್ಥೆ ಮುಟ್ಟುತ್ತವೆ; ಅಂತಿಮವಾಗಿ ಮೂತಿಹುಳುಗಳಾಗುತ್ತವೆ. ಕಾಯಿಗಳು ಹಣ್ಣಾದ ನಂತರ, ಮೂತಿಹುಳು ಓಟೆಯಿಂದ ಹೊರಬಂದು ತಿರುಳನ್ನು ತಿನ್ನುತ್ತದೆ. ಓಟೆಯಲ್ಲಿ ಒಂದಕ್ಕಿಂತ ಹೆಚ್ಚು ಮರಿಹುಳುಗಳಿದ್ದರೆ, ಅದನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ, ಆದರೆ ಈ ಹಾವಳಿಯು ಓಟೆ ಮೊಳೆಯುವುದನ್ನು ತಪ್ಪಿಸಲಾರದು.

ಕೀಟವು ತನ್ನ ಜೀವನಚಕ್ರವನ್ನು ಓಟೆಯೊಳಗೆ ಮುಗಿಸುವ ಕಾರಣ, ಹೊರಗೆ ಯಾವ ಚಿಹ್ನೆಯೂ ಕಾಣುವುದಿಲ್ಲ. ಕೀಟ ಮಲವಿಸರ್ಜನೆ ಮಾಡಿರುವ ಕಾರಣ ಓಟೆಯ ಪಕ್ಕದಲ್ಲಿರುವ ತಿರುಳು ಬಣ್ಣಗೆಟ್ಟಿರುವುದನ್ನು ಹಣ್ಣು ಕೊಯ್ದಾಗ ನೋಡಬಹುದು. ಈ ಕೀಟವನ್ನು ಸಂಪೂರ್ಣವಾಗಿ ಹತೋಟಿ ಮಾಡುವ ಯಾವ ಪರಿಣಾಮ

ಕಾಗಿ ವಿಧಾನವೂ ಇಲ್ಲ. ಕೀಟಪೀಡಿತ ಹಣ್ಣು ಮತ್ತು ಓಟೆಗಳನ್ನು ಸುಡಬೇಕು, ಮತ್ತು ಪೀಡಿತಮರದ ಸುತ್ತಲೂ ಅಗೆದು ಮರಿಹುಳುಗಳನ್ನು ಹೊರಗೆ ಹಾಕಬೇಕು.

ಹಣ್ಣಿನ ನೊಣ

ಈ ಕೀಟದಲ್ಲಿ ಡಾಕುಸ್ ಫೆರುಜಿನಿಯಸ್, ಡಾಕುಸ್‌ಜೊನಾಟಸ್, ಡಾಕುಸ್ ಕರೆಕ್ಟಸ್ ಮತ್ತು ಡಾಕುಸ್ ಫೆರುಜಿನಿಯಸ್ ಡಾರ್ಸಾಲಿಸ್ ಎಂಬ ನಾಲ್ಕು ಪ್ರಭೇದಗಳು ಕಂಡು ಬಂದಿವೆ. ರಹಮಾನ್ (1946) ಪ್ರಕಾರ ಪೀಚ್ ಬೆಳೆಯ ಹಣ್ಣು ನೊಣವು, ಮಾವು ಮತ್ತು ಸೀಬೆ ಬೆಳೆಗೆ ಬಹಳ ಹಾನಿಕಾರಿ ಮತ್ತು ಪಂಜಾಬ್‌ನಲ್ಲಿ ಪೀಚ್ ಬೆಳೆಯನ್ನು ಪೀಡಿಸುತ್ತವೆ.

ಪೂರ್ಣವಾಗಿ ಬಲಿತಿರುವ ಕಾಯಿಗಳ ಮೇಲೆ, ಹಣ್ಣಿನ ನೊಣ ಮೊಟ್ಟೆಗಳನ್ನು ಇಡುತ್ತದೆ, ಮೊಟ್ಟೆಗಳಿಂದ ಹೊರಬರುವ ಬಿಳಿಯ ಬಣ್ಣದ, ತೆವಳುತ್ತಿರುವ ಮರಿಹುಳುಗಳು ತಿರುಳನ್ನು ಪೂರ್ಣವಾಗಿ ನಾಶಮಾಡುತ್ತವೆ. ಮರಿಹುಳುಗಳು ಪ್ರೌಢಾವಸ್ಥೆ ತಲುಪಿದ ನಂತರ ಹಣ್ಣಿನಿಂದ ಹೊರಬಂದು ಮಣ್ಣಿನಲ್ಲಿ ಕೋಶಾವಸ್ಥೆಯನ್ನು ಮುಟ್ಟುತ್ತವೆ. ಕೆಲವು ಕಾಲಗಳಲ್ಲಿ ಇದು ತೀವ್ರವಾದ ಪೀಡೆ. ದಕ್ಷಿಣ ಭಾರತದಲ್ಲಿ ಇದು ನಿರ್ದಿಷ್ಟವಾಗಿ ನಿಧಾನಕಾಲಿಕ ತಳಿಗಳಿಗೆ ತೊಂದರೆಯನ್ನು ಕೊಡುತ್ತದೆ.

ಈ ಕೀಟವನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡುವ ವಿಧಾನವೆಂದರೆ, ಮರಿಹುಳು ಪೀಡಿತ ಹಣ್ಣುಗಳನ್ನು ನಾಶಮಾಡುವುದು ; ಬಿದ್ದು ಹೋಗಿರುವ ಹಣ್ಣುಗಳನ್ನು ಅಲ್ಲಿ ಉಳಿಸಿ, ಈ ಕೀಟಗಳು ಮೊಟ್ಟೆ ಇಡುವಂತೆ ಮಾಡಿ, ಪೀಡಿತ ಹಣ್ಣುಗಳನ್ನು ಅನಂತರ ನಾಶ ಮಾಡಬೇಕು. ಹಣ್ಣಿನ ಕಾಲದಲ್ಲಿ ಈ ಕೀಟಗಳು ಐದರಿಂದ ಆರು ಸಾರಿ ಮೊಟ್ಟೆ ಇಡುವುದರಿಂದ ಮೊದಲನೆ ಸಾರಿ ಇಟ್ಟ ಮೊಟ್ಟೆಗಳಿಂದ ಹೊರಬರುವ ಮರಿಹುಳುಗಳನ್ನು ನಾಶಮಾಡುವುದು ಬಹಳ ಮುಖ್ಯ. ವಿಷಗುಳಿಗೆಗಳನ್ನು ಉಪಯೋಗಿಸಿ ಕೀಟಗಳು ಆಕರ್ಷಿತವಾಗುವಂತೆ ಮಾಡಿ ಮೊಟ್ಟೆ ಇಡುವುದಕ್ಕೆ ಮೊದಲು ಕೊಲ್ಲುವುದು, ಇದಕ್ಕಾಗಿ ಒಂದು ಚಟಾಕು ಲೆಡ್‌ಆರ್ಸಿನೇಟ್, ಎರಡು ಚಟಾಕು ಮೊಲೆಸಸ್ ಮತ್ತು ನಾಲ್ಕು ಸೇರು ನೀರಿನ ಮಿಶ್ರಣ ಸಿಂಪಡಿಕೆಯನ್ನು ವಿಷಪೂರಿತ ಆಕರ್ಷಕ ಆಹಾರವಾಗಿ ಬಳಸುವುದನ್ನು ರಹಮಾನ್ (1946) ಶಿಫಾರಸ್ಸು ಮಾಡಿದ್ದಾರೆ. ಜೂನ್-ಆಗಸ್ಟ್ ತಿಂಗಳಲ್ಲಿ, ವಾರಕ್ಕೆ ಒಂದು ಸಾರಿ, ಕೆಲವು ವೇಳೆ ಇನ್ನೂ ಕಡಮೆ ಅವಧಿಯಲ್ಲಿ ಮರದ ಒಂದು ಮೂಲೆಯ ಸಣ್ಣ ಸ್ಥಳದಲ್ಲಿ ಮಿಶ್ರಣವನ್ನು ಸಿಂಪಡಿಸಬೇಕು. 6 ಪೌಂಡು ಸಕ್ಕರೆ ಮತ್ತು 6 ಔನ್ಸ್ ಲೆಡ್ ಆರ್ಸಿನೇಟನ್ನು 8 ಗ್ಯಾಲನ್ ನೀರಿನಲ್ಲಿ ಮಿಶ್ರಮಾಡಿ, ವಿಷಗುಳಿಗೆಗಳನ್ನು ಮಾಡಿ, ಡಾಕುಸ್

ಪ್ರಭೇದದ ಕೀಟವನ್ನು ಹತೋಟಿಮಾಡುವುದನ್ನು ಸಿಲೋನಿನ ಪಾರ್‌ಸನ್ಸ್ (1931) ಶಿಫಾರಸ್ಸು ಮಾಡಿದ್ದಾರೆ. ಈ ಮಿಶ್ರಣವನ್ನು ಎಲೆಗಳ ಮೇಲೆ ಚಿಮುಕಿಸುವುದರಿಂದ ಅಥವಾ ಡಬ್ಬಗಳು ಅಥವಾ ಸೀಸೆಗಳನ್ನು ರೆಂಬೆಗಳಿಗೆ ನೇತುಹಾಕಿ ಅವುಗಳಲ್ಲಿ ಒಂದು ಚೂರು ಬಟ್ಟೆಯಲ್ಲಿ ಅಥವಾ ದೀಪದ ಬತ್ತಿಗಳಲ್ಲಿ ಮಿಶ್ರಣವನ್ನು ಅದ್ದಿ, ಒಂದು ತುದಿ ಹೊರಚಾಚಿರುವಂತಿಡಬೇಕು. 1 ಪೌಂಡು ಕಚ್ಚಾ ಎಣ್ಣೆಯ ಎಮಲ್ಷನನ್ನು 10 ಗ್ಯಾಲನ್ ನೀರಿನಲ್ಲಿ ಮಿಶ್ರಮಾಡಿ ಸಿಂಪಡಿಸುವುದರಿಂದ ನೊಣಗಳು ಮೊಟ್ಟೆ ಇಡುವುದನ್ನು ತಪ್ಪಿಸಬಹುದು ಎಂದು ದಕ್ಷಿಣ ಭಾರತದ ನಾಯರ್ ಸೂಚಿಸಿದ್ದಾರೆ. ಕೆಲವರು ಗ್ಯಾಮೆಕ್ಸನ್ ಧೂಳಿಸುವುದನ್ನು ಸಹ ಸಲಹೆಮಾಡಿದ್ದಾರೆ. ಮರಿಹುಳುಗಳು ಮಣ್ಣಿನಲ್ಲಿ ಕೋಶಾವಸ್ಥೆಯನ್ನು ಮುಟ್ಟುವುದರಿಂದ, ಮರಗಳ ಕೆಳಗಿನ ಮಣ್ಣನ್ನು ಕೆದಕಿ, ಕೋಶಗಳನ್ನು ತೇಲಿಸಿ ನಾಶಮಾಡುವುದು ಈ ಕೀಟ ಹತೋಟಿಗೆ ಬಹಳ ಸಹಾಯಕ.

ಮಾವಿನ ಬಿಳಿ ತಗಣೆ

ಈ ಕೀಟವು ಪಂಜಾಬಿನ ಕೆಲವು ಜಿಲ್ಲೆಗಳಲ್ಲಿ ಬಹಳ ಹಾನಿಯನ್ನುಂಟು ಮಾಡುತ್ತದೆ ಎಂದು ರಹಮಾನ್ (1946) ಹೇಳಿದರೂ ಸಹ, ಈ ಕೀಟವು ದೇಶದ ಎಲ್ಲಾ ಭಾಗಗಳಲ್ಲಿ ಕಂಡುಬರುತ್ತದೆ.

ಡ್ರೊಸಿಕಾ (ಮೊನೊಪ್ಲೆಬಸ್) ಸ್ಟೆಬಿಂಗಿ ತಗಣೆ ಸುಮಾರು 62 ಭಿನ್ನ ಸಸ್ಯ ಪ್ರಭೇದಗಳನ್ನು ಪೀಡಿಸುತ್ತದೆ. ರಹಮಾನ್ ಮತ್ತು ಲತೀಫ್ (1944) ರ ಪ್ರಕಾರ ಮಾವು, ಜಂಬೀರ ಫಲಗಳು, ಜೋರೆ ಹಣ್ಣಿನ ಸಸ್ಯ ಮತ್ತು ಸೀಬೆ ಸಸ್ಯಗಳು ಈ ಕೀಟಕ್ಕೆ ಅತಿಯಾಗಿ ಬಲಿಯಾಗುತ್ತವೆ. ಈ ಕೀಟವು ತುದಿಯಲ್ಲಿರುವ ಹಣ್ಣು ಬಿಡುವ ರೆಂಬೆ ಮತ್ತು ಎಳೆಯ ರೆಂಬೆಗಳನ್ನು ಪೀಡಿಸುತ್ತದೆ. ಇದರಿಂದ ಎಳೆಯ ರೆಂಬೆಗಳು ಫಲ ಬಿಡದೆ ಉದುರಿಹೋಗುತ್ತವೆ.

ಕೇವಲ ಪ್ರೌಢ ಹೆಣ್ಣು ಕೀಟಗಳು ಮಾತ್ರ ಹಾನಿಕರ. ಇವು ಫೆಬ್ರವರಿ-ಏಪ್ರಿಲ್ ತಿಂಗಳ ಕಾಲದಲ್ಲಿ ಮಾವಿನ ತುದಿರೆಂಬೆಗಳಲ್ಲಿ ಗುಂಪುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮೇ ತಿಂಗಳಲ್ಲಿ ತೆವಳಿಕೊಂಡು ಬಂದು ನೆಲದಲ್ಲಿ ವಾಸಿಸುತ್ತವೆ ಮತ್ತು ಕೆಲವೇ ಮೊಟ್ಟೆಗಳನ್ನು ಇಡುತ್ತವೆ. ಈ ಹಂತದಲ್ಲಿ ಪ್ರೌಢ ಹೆಣ್ಣು ಕೀಟ ಸುಮಾರು ಅರ್ಧ ಅಂಗುಲ ಉದ್ದವಿರುತ್ತದೆ ; ಮೇಲೆ ಬಿಳಿಯ ತುಪ್ಪಳು ಇರುತ್ತದೆ. ಈ ಕಾಲದಲ್ಲಿ ರೆಕ್ಕೆಗಳಿರುವ ಪ್ರೌಢ ಕೀಟವು ಸಹ ಕಾಣಿಸಿಕೊಳ್ಳುತ್ತದೆ. ಹೆಣ್ಣು ಕೀಟಗಳು ಮೇ ತಿಂಗಳಲ್ಲಿ ಮೊಟ್ಟೆಗಳನ್ನು ಇಡುತ್ತವೆ, ಇವು ಜನವರಿ-ಫೆಬ್ರವರಿ ತಿಂಗಳವರೆಗೆ ಒಡೆ

ಯದೆ ಉಳಿದಿರುತ್ತವೆ. ಈ ಮೊಟ್ಟೆಗಳು ಒಡೆದನಂತರ ಮರಿಹುಳುಗಳು ಮತ್ತೆ ತೆವಳಿಕೊಂಡು ಮರದ ಮೇಲ್ಭಾಗವನ್ನು ಮುಟ್ಟುತ್ತವೆ.

ಬುಡದ ಮೇಲೆ ಗ್ರೀಸ್ ಪಟ್ಟಿಗಳನ್ನು ಬಳಿಯುವುದರಿಂದ ಕೀಟವನ್ನು ಹತೋಟಿ ಮಾಡಬಹುದು. ಡಿಸೆಂಬರ್ ತಿಂಗಳಲ್ಲಿ ಮರಗಳಿಗೆ ಪಟ್ಟಿಗಳನ್ನು ಹಚ್ಚಿ, ಅವುಗಳನ್ನು ಏಪ್ರಿಲ್ ತಿಂಗಳವರೆಗೆ ಉಳಿಸಬೇಕೆಂದು ರಹಮಾನ್(1946) ಶಿಫಾರಸ್ಸು ಮಾಡುತ್ತಾರೆ. ಮೂರು ಸೇರು ರೊಸಿನ್ ಎಣ್ಣೆಯನ್ನು ಒಂದು ಸೇರು ರೇಪ್ ಬೀಜದ ಎಣ್ಣೆಯಲ್ಲಿ ಕರಗಿಸಿದ ಮಿಶ್ರಣ ಅಥವಾ ಸಮಪ್ರಮಾಣದ ಕೋಲ್ ಟಾರ್ ಮತ್ತು ಕಚ್ಚಾ ಎಣ್ಣೆ ಎಮಲ್ಷನ್ ಮಿಶ್ರಣದಲ್ಲಿ ಹತ್ತಿಯ, ಉಣ್ಣೆಯ ಅಥವಾ ಸೆಣಬು ಹಗ್ಗವನ್ನು ನೆನೆಸಿ ಮರಕ್ಕೆ ಸುತ್ತಬೇಕು. ಪಟ್ಟಿಯನ್ನು ಭೂಮಟ್ಟದಿಂದ 3–4 ಅಡಿ ಎತ್ತರದಲ್ಲಿ 9 ಅಂಗುಲ ದಪ್ಪವಾಗಿ ಸುತ್ತಿರಬೇಕು. ಮರಿಹುಳುಗಳು ಮರವನ್ನು ಹತ್ತುವಾಗ ಪಟ್ಟಿಯಲ್ಲಿ ಹಿಡಿಯಲ್ಪಡುತ್ತವೆ ಮತ್ತು ಇವುಗಳನ್ನು ಮೀನೆಣ್ಣೆ ರಾಳದ ಸಾಬೂನಿನ ಸಿಂಪರಣೆಯಿಂದ (ನಾಲ್ಕು ಗ್ಯಾಲನ್ ನೀರಿನಲ್ಲಿ 12 ಚಟಾಕು ಮೀನೆಣ್ಣೆ ರಾಳದ ಸಾಬೂನು ಕರಗಿಸಿದ ದ್ರಾವಣ) ಅಥವಾ ನೀರಿರುವ ಪಾತ್ರೆಗೆ ಸ್ವಲ್ಪ ಸೀಮೆಎಣ್ಣೆ ಹಾಕಿ, ಈ ಪಾತ್ರೆಗೆ ಮರಿಹುಳುಗಳನ್ನು ಹಾಕುವುದರಿಂದ ಕೊಲ್ಲಬಹುದು. ಈ ರೀತಿ ಪಟ್ಟಿಗಳನ್ನು ಮಾವಿನ ಮರಕ್ಕೆ ಕಟ್ಟುವುದರಿಂದ ಉತ್ತರಪ್ರದೇಶದಲ್ಲಿ ಮಾವಿನ ಇಳುವರಿ ದ್ವಿಗುಣವಾಗಿದೆ. ಮಾವಿನ ಮರಗಳಿಗೆ ನವಾಬ್ಬಾರ್ ಎಂಬ ಪಟ್ಟಿ ಕಟ್ಟುವುದನ್ನು ರಹಮಾನ್ ಮತ್ತು ಲತೀಫ್ ಶಿಫಾರಸ್ಸು ಮಾಡಿದ್ದಾರೆ.

ಶಲ್ಕ ಕೀಟಗಳು

ಮಾವಿನ ಎಲೆ ಮತ್ತು ಹಣ್ಣುಗಳನ್ನು ಅನೇಕ ವಿಧವಾದ ಕೀಟಗಳು ಪೀಡಿಸುತ್ತವೆ. ಐದು ಬಗೆಯ ಪೀಡಿಸುವ ಕೀಟಗಳನ್ನು ಬರ್ನ್ಸ್ ಮತ್ತು ಪ್ರಯಾಗ್ ಪಟ್ಟಿ ಮಾಡಿದ್ದಾರೆ. ಇವುಗಳಲ್ಲಿ ಆಸ್ಪಿಡಿಯೋಟಸ್ ಡಿಸ್ಟ್ರಕ್ಟರ್ ಬಹಳ ಹಾನಿಕಾರಿ. ಈ ಕೀಟಗಳು ಮಾವಿನ ಮರದ ಎಳೆಯ ಭಾಗಗಳ ಮೇಲೆ ನೆಲೆಸಿರುತ್ತವೆ. ಸ್ವಾಭಾವಿಕ ಶತ್ರುಗಳಿಂದ ಇವುಗಳನ್ನು ಸಾಮಾನ್ಯವಾಗಿ ನಿಯಂತ್ರಿಸಬಹುದು, ಎಂದು ಅನ್ಸಾರಿ(1947) ಹೇಳುತ್ತಾರೆ. 2 ರಿಂದ 3 ಪೌಂಡು ಇಂಧನ ತೈಲ ಸೇರಿಸಿದ 4 : 4 : 50 ಬೋರ್ಡೋಕ್ಸ್ ಮಿಶ್ರಣವನ್ನು ಸಿಂಪಡಿಸುವುದರಿಂದ ಅಥವಾ ರೊಸಿನ್ ಹಾಕುವುದರಿಂದ ಶಲ್ಕಕೀಟವನ್ನು ನಿಯಂತ್ರಿಸಬಹುದು. ಇದನ್ನು ಮೀನೆಣ್ಣೆ ರಾಳದ ಸಾಬೂನು (40 ಗ್ಯಾಲನ್ ನೀರಿನಲ್ಲಿ 1 ಭಾಗ ಸಾಬೂನು ಹಾಕಿರುವ ದ್ರಾವಣ) ಸಿಂಪರಣೆಯಿಂದಲೂ ಹತೋಟಿಮಾಡಬಹುದು. ಸಿಲೋನಿನ ಪಾರಸಾನ್ಸ್ (1931)

ಶೇಕಡಾ ಎರಡರ ಸುಣ್ಣ ಮತ್ತು ಗಂಧಕವನ್ನು ಸಿಂಪಡಿಸುವುದರಿಂದ ಈ ಕೀಟವನ್ನು ಹತೋಟಿ ಮಾಡಬಹುದು ಎಂದು ಸೂಚಿಸಿದ್ದಾರೆ. ಈ ಸಿಂಪರಣೆಯು ಕೀಟನಾಶಕ ಮತ್ತು ಶಿಲೀಂಧ್ರ ನಾಶಕದ ಸಂಯೋಗವಾಗಿರುವುದರಿಂದ ಇದು ಅನೇಕ ಎಲೆ ತಿನ್ನುವ ಕೀಟಗಳನ್ನು ಹಿಮ್ಮೆಟ್ಟಿಸುತ್ತದೆ. ಶೇಕಡಾ 1ರ ಬಿಳಿ ಎಣ್ಣೆಯಿರುವ ಆಯಿಲ್ ಎಮಲ್ಷನ್. ಸಿಂಪರಣೆಯಿಂದ ಶಲ್ಕಕೀಟ ಹತೋಟಿ ಯಶಸ್ವಿಯಾಗಿದೆ ಎಂದು ಬರ್ಗರ್ (1935) ವರದಿಮಾಡಿದ್ದಾರೆ.

ಭಾರತ ದೇಶದಲ್ಲಿ ದಾಖಲೆಯಾಗಿರುವ ಇತರ ಶಲ್ಕಕೀಟಗಳೆಂದರೆ ಕೊಕೊಯಸ್ ಪ್ರಭೇದ (ಲೆಕ್ಯಾನಿಯಮ್), ಬಹುಶಃ ಕೊಕೊಯಸ್ ಹೆಸ್ಪೆರಿಡಿಯಮ್, ಲೆಯಾಕಾಸ್ಪಿಸ್ ಇಂಡಿಕಾ ; ಚಿಯೊನಾಸ್ಪಿಸ್ ಡಿಲಾಟಾಟಾ ; ಪಲ್ವಿನೇರಿಯ ಪಿಸಿಡೈ ಮತ್ತು ಐಸಿರ್ಯಾಸಯ್ ಚಿಲ್ಲಾರವ್ ; ಚಿಯೊನಾಸ್ಪಿಸ್ ವಿಟಿಸ್, ಪಲ್ವಿನೇರಿಯಾ ಪಾಲಿಗೊನೇಟ ಪಲ್ವಿನೇರಿಯ ಪರ್‌ಗಾಂಡೈ ಮತ್ತು ಕ್ಲಿಪಿಡೊಸಫಸ್‌ಗ್ಲೊವೆರೈ. ಈ ಎಲ್ಲ ಕೀಟಗಳಿಗೂ ರಾಳ ಸಾಬೂನಿನಿಂದ ತೊಳೆಯುವುದು ಸೂಚಿತ ಏಕೈಕ ಹತೋಟಿ ಕ್ರಮ.

ಅಹಮದ್ (1945) ಕಂಡಿರುವ, ಸ್ಟಿಲೊಸ್ಟ್ಯಥಸ್ ಪಾಂಡುರಸ್ ತಗಣೆ ಆಗ್ರಾ ಪ್ರದೇಶದಲ್ಲಿ ಮಾವಿನ ಬೆಳೆಗೆ ತೀವ್ರವಾಗಿ ಹಾನಿಯುಂಟುಮಾಡಿರುವುದು ಕಂಡಿದ್ದಾರೆ. ಇದು ಕಾಯಿಯಲ್ಲಿರುವ ರಸವನ್ನು ಹೀರಿ ಅದು ಬಿದ್ದುಹೋಗುವಂತೆ ಮಾಡುತ್ತದೆ. ಈ ಕೀಟದ ಜೀವನ ಚರಿತ್ರೆ ಅಥವಾ ಪರಿಣಾಮಕಾರಿ ಹತೋಟಿಯ ಬಗ್ಗೆ ಹೆಚ್ಚು ವಿವರಗಳು ತಿಳಿದುಬಂದಿಲ್ಲ.

ಗೆದ್ದಲು ಹುಳುಗಳು

ಈ ಕೀಟಗಳು ಮಾವನ್ನು ಸೇರಿ ಹಣ್ಣಿನ ಮರಗಳನ್ನು ಅಧಿಕವಾಗಿ ಪೀಡಿಸುತ್ತವೆ. ಆದರೆ ಆರೋಗ್ಯದ ಕಸುವುಳ್ಳ ಮರಗಳನ್ನು ಬಾಧಿಸುವುದು ಕಡಮೆ. ಇವುಗಳ ಹಾವಳಿ ಸಸಿಗಳಿಂದ ಹಿಡಿದು ಮರಗಳವರೆಗೆ ವ್ಯಾಪಿಸಿರುವುದು ಸಾಮಾನ್ಯ ಎಂದು ಲಾಲ್(1950) ವರದಿ ಮಾಡಿದ್ದಾರೆ.

ರಹಮಾನ್ (1946) ಈ ಕೀಟಹಾವಳಿಯನ್ನು ತಡೆಯುವುದಕ್ಕೆ ಅನೇಕ ಕ್ರಮಗಳನ್ನು ಸಲಹೆ ಮಾಡಿದ್ದಾರೆ ; ಈ ಕ್ರಮಗಳೆಂದರೆ ಸ್ವಚ್ಛವಾದ ಬೇಸಾಯ, ಕ್ರಮವಾದ ನೀರಾವರಿ, ಮಧ್ಯಂತರ ಬೇಸಾಯ ಮತ್ತು ಮಾವಿನ ತೋಟಕ್ಕೆ ಅರೆಬರೆ ಕಳಿತ ಗೊಬ್ಬರ ಇಲ್ಲವೇ ಕೊಟ್ಟಿಗೆ ಗೊಬ್ಬರ ಹಾಕುವುದನ್ನು ತಪ್ಪಿಸುವುದು, ಗೆದ್ದಲು ಹುಳುವನ್ನು ಹರಡುವ ಗೊಬ್ಬರಗಳನ್ನು ತಪ್ಪಿಸುವುದು ಮತ್ತು ಮರಗಳನ್ನು ನಾಟಿ

ಮಾಡುವುದಕ್ಕೆ ಮೊದಲು ಗುಂಡಿಗಳನ್ನು ವಿಶೇಷವಾದ ಕಚ್ಚಾ ಎಣ್ಣೆಯ ಎಮಲ್ಷನ್ (½ ಪೌಂಡ್ ಕಚ್ಚಾ ಎಣ್ಣೆಯ ಎಮಲ್ಷನ್ ಮತ್ತು ಆರ್ಸೆನಿಕನ್ನು ನಾಲ್ಕು ಮಂಕರಿ ಗೊಬ್ಬರ ಮತ್ತು ಮಣ್ಣಿನ ಜೊತೆಗೆ ಮಿಶ್ರ ಮಾಡುವುದು) ನಿಂದ ಚಿಕಿತ್ಸೆ ಮಾಡುವುದು.

ಗೆದ್ದಲು ಹುಳುಗಳು ಬೇರುಗಳಿಗೆ ಹಾವಳಿ ಮಾಡುವುದನ್ನು ಹತೋಟಿ ಮಾಡಲು ನೀರಾವರಿ ಪಾತಿಗೆ ಪ್ರಬಲ ಸ್ಯಾನಿಟರಿ ದ್ರಾವಣವನ್ನು (ನೂರು ಭಾಗ ನೀರಿನಲ್ಲಿ 3 ಭಾಗ ದ್ರಾವಣದ ಮಿಶ್ರಣ) ಸುರಿಯಬೇಕು. ಮರದ ಬುಡಗಳಿಗೆ, ಮಣ್ಣಿನಿಂದ 7 ಅಂಗುಲ ಎತ್ತರದಲ್ಲಿ 6 ಔನ್ಸ್ ಸ್ಯಾನಿಟರಿ ದ್ರಾವಣವನ್ನು ಬಳಿಯಬೇಕು.

ರೋಗಗಳು

ಬೂದಿ ರೋಗ (ಪೌಡರಿ ಮಿಲ್ಡ್ಯೂ)

ಮಿಲ್ಡ್ಯೂರೋಗ ಹಾವಳಿಯಿಂದ ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ಉಂಟಾಗುವ ಫಸಲಿನ ನಷ್ಟವು ಶೇಕಡಾ 5ರಿಂದ 20 ಭಾಗ (ಶೀವು ಮತ್ತು ಇತರರು, 1954).

ಈ ರೋಗವು ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ದಕ್ಷಿಣ ಭಾರತದಲ್ಲಿ ಬಹಳ ತೀವ್ರವೆಂದು ವರದಿಯಾಗಿದೆ. ಆಯಿಡಿಯಮ್ ಮ್ಯಾಂಜಿಫೆರ್ ಎಂಬ ಶಿಲೀಂಧ್ರದಿಂದ ಈ ರೋಗವು ಉಂಟಾಗುತ್ತದೆ. ಈ ರೋಗ ಬಂದಿರುವುದನ್ನು ಹೂಗೊಂಚಲುಗಳ ಮೇಲೆ ಬಿಳಿಯ ಮಚ್ಚೆಗಳಿರುವುದರಿಂದ ಪತ್ತೆಹಚ್ಚಬಹುದು. ಈ ರೋಗವು ಸಾಮಾನ್ಯವಾಗಿ ಎಲೆ, ಹೂಗೊಂಚಲು, ಹಣ್ಣು ಮುಂತಾದವುಗಳ ಮೇಲೆ ಕಾಣಿಸಿಕೊಳ್ಳುತ್ತದೆ. ರೋಗಪೀಡಿತ ಭಾಗದ ಹೂಗೊಂಚಲುಗಳಲ್ಲಿರುವ ಸೂಕ್ಷ್ಮವಾದ ಬೀಜಾಣು (ಸ್ಪೋರು)ಗಳನ್ನು ಗಾಳಿಯು ಆರೋಗ್ಯವಾಗಿರುವ ಆರಳದೆ ಇರುವ ಹೂಗಳಿಗೆ ಒಯ್ದು ಮುಟ್ಟಿಸುತ್ತದೆ. ಇದರನಂತರ ಐದು ದಿನಗಳಲ್ಲಿ ಆರೋಗ್ಯವಾಗಿರುವ ಸಸ್ಯಗಳ ಮೇಲೆ ರೋಗವುಂಟಾಗುತ್ತದೆ. ರಾಯ್‌ಸಿಂಘಾನಿ (1945) ಯವರ ಪ್ರಕಾರ, ಹೂಬಿಡುವ ಕಾಲದಲ್ಲಿ ಮಳೆಬಿದ್ದರೆ ಈ ರೋಗ ಹರಡುತ್ತದೆ. ಆದರೆ, ಪ್ರತಿಬಾರಿ ಮಳೆಬಿದ್ದ ನಂತರವೂ ರೆಂಬೆಗಳನ್ನು ಅಲುಗಾಡಿಸಿ ನೀರು ಬೀಳುವಂತೆ ಮಾಡುವುದರಿಂದ ರೋಗ ಬರುವ ಸಾಧ್ಯತೆಯನ್ನು ಶೇಕಡಾ 50 ರಿಂದ 75ರಷ್ಟು ತಡೆಯಬಹುದು. ಶಿಲೀಂಧ್ರ ಹೂಗಳು ಮತ್ತು ಎಳೆಯ ಕಾಯಿಗಳ ಎಳೆಯ ಕಣಗಳ ಮೇಲಿನ ಆಹಾರಾಂಶವನ್ನು ಹೀರುತ್ತವೆ ಮತ್ತು ಪೀಡಿತ ಭಾಗವುಗಳು ಒಣಗಿ ಉದುರಿಹೋಗುತ್ತವೆ.

ಈ ರೋಗವನ್ನು, ನುಣ್ಣನೆಯ ಗಂಧಕದ ಪುಡಿ (250ರಿಂದ 300 ಮೆಷ್) ಧೂಳಿಸುವುದರಿಂದ ಅತ್ಯುತ್ತಮವಾಗಿ ನಿಯಂತ್ರಿಸಬಹುದು. ದಪ್ಪವಾದ ಗಂಧಕದ ಪುಡಿ ಕಡಮೆ ರೋಗನಿವಾರಕ ಗುಣದ್ದು. ಗಂಧಕದ ಪುಡಿಯನ್ನು ಧೂಳಿಸುವುದರಿಂದ ಜಿಗಿಹುಳು ಮತ್ತು ಬೂದಿ ರೋಗವನ್ನು ಸಹ ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು. ಕೀಮ ಮತ್ತು ಇತರರು (1954) ಸಮುದ್ರತೀರ ಪ್ರದೇಶಗಳಲ್ಲಿನ ಈ ರೋಗಕ್ಕೆ ಪ್ರತಿಮರಕ್ಕೆ 1–3 ಪೌಂಡು ಗಂಧಕ ಧೂಳಿಸುವುದನ್ನು ಶಿಫಾರಸ್ಸು ಮಾಡಿದ್ದಾರೆ. ಹೂಬಿಟ್ಟ ಕೂಡಲೇ ಮೊದಲ ಸಾರಿ ಗಂಧಕದ ಪುಡಿಯನ್ನು ಧೂಳಿಸಿ ಮುಂದೆ 15 ದಿವಸಗಳ ಅಂತರದಲ್ಲಿ ಎರಡು ಸಾರಿ ಧೂಳಿಸಬೇಕು. ಗಾಳಿಯಿಲ್ಲದ ಬೆಳಗಿನ ಹೊತ್ತು ಗಂಧಕದಪುಡಿ ಧೂಳಿಸಲು ಯೋಗ್ಯಕಾಲ. ದಕ್ಷಿಣ ಭಾರತದಿಂದು ವರದಿ ಮಾಡಿರುವ ನಾಯಕ್ (1949) ಪ್ರಕಾರ ಬೋರ್ಡೋಕ್ಸ್ ಮಿಶ್ರಣ (3 ಪೌಂಡ ಸುಟ್ಟ ಸುಣ್ಣ, 3 ಪೌಂಡು ಮೈಲು ತುತ್ತ ಮತ್ತು 50 ಗ್ಯಾಲನ್ ನೀರು) ವನ್ನು ಹೂಬಿಡುವುದಕ್ಕೆ ಸ್ವಲ್ಪ ಮುಂದೆ ಸಿಂಪಡಿಸುವುದು ಉತ್ತಮ ಫಲಿತಾಂಶವನ್ನು ಕೊಟ್ಟಿದೆ. ಶೇಕಡಾ 5ರ ಡಿ.ಡಿ.ಟಿ. ಮತ್ತು ಶೇಕಡಾ 50ರ ಗಂಧಕವಿರುವ ಗುಎಸರಾಲ್ 405–50 ಸಿಂಪಡಿಸುವುದರಿಂದ ಜಿಗಿಹುಳು ಮತ್ತು ಬೂದಿರೋಗವನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು ಎಂದು ಗಾಂಧಿ (1955) ಶಿಫಾರಸ್ಸುಮಾಡಿದ್ದಾರೆ. ಸುಮಾರು 25 ಅಡಿ ಎತ್ತರವಿರುವ ಮರಕ್ಕೆ ಸುಮಾರು 2 ಪೌಂಡು ಮಿಶ್ರಣ ಬೇಕಾಗುತ್ತದೆ. ಹೆಚ್ಚಿನ ಮರಗಳಿಗೆ ಸುಮಾರು 3 ಪೌಂಡು ಮಿಶ್ರಣ ಬೇಕಾಗುತ್ತದೆ.

ಆ್ಯಂತ್ರಾಕ್ನೋಸ್

ಶಿಲೀಂಧ್ರದಿಂದ ಬರುವ ಈ ರೋಗವು, ತೇವಾಂಶ ಹವಾಗುಣವಿರುವ ಮದ್ರಾಸು, ಮೈಸೂರು, ಶಿವಿಳುನಾಡು, ತಿರುವಾಂಕೂರು–ಕೊಚ್ಚಿನ್ ಮತ್ತು ಅಸ್ಸಾಂ(ಗಾಂಧಿ 1955) ದೇಶಗಳಲ್ಲಿ ಕಂಡುಬರುತ್ತದೆ ; ಸತ್ತಾರ್ ಮತ್ತು ಮಾಲಿಕ್(1939) ಪಂಜಾಬ್ ರಾಜ್ಯದಲ್ಲಿ ಈ ರೋಗವನ್ನು ವರದಿಮಾಡಿದ್ದಾರೆ. ಈ ರೋಗವು, ಕಲೆಟೊಟ್ರಿಕಂ ಗ್ಲಿಯೊ ಸ್ಪೊರಿಯಾಯ್ಡಿಸ್ ಎಂಬ ಶಿಲೀಂಧ್ರದಿಂದ ಉಂಟಾಗುತ್ತದೆ. ಹೇಸ್ಸ್ (1953) ಉತ್ತರ ಪ್ರದೇಶದಲ್ಲಿ ಮೇಲ್ಕಂಡ ಶಿಲೀಂಧ್ರಕ್ಕೆ ಸಂಬಂಧಪಟ್ಟ ಕೇವಲ ಮಾವಿನ ರೆಂಬೆಗಳಿಗೆ ಮಾತ್ರ ತಗಲಿ ಮಾವಿಗೆ ಡೈಬ್ಯಾಕ್ ಉಂಟುಮಾಡುವ ಕ. ಮ್ಯಾಂಜಿಫೆರ ಎಂಬ ಶಿಲೀಂಧ್ರವನ್ನು ವರದಿಮಾಡಿದ್ದಾರೆ. ಹೇಸ್‌ರವರ ಪ್ರಕಾರ ಮಹಾರಾಷ್ಟ್ರದಲ್ಲಿ ಗ್ಲಿಯೊ ಸ್ಪೋರಿಯಂ ಮ್ಯಾಂಜಿಫೆರಾ ಶಿಲೀಂಧ್ರದಿಂದ ಇಂಥದೇ ಬ್ಲೈಟ್ ಎಂಬ ರೋಗ ಬರುತ್ತದೆ. ಇದು ಹೂಗಳನ್ನು ಸಹ ಬಾಧಿಸು

ತ್ತದೆ. ಸತ್ತಾರ್ ಮತ್ತು ಮಾಲಿಕ್ (1939) ಕ. ಗ್ಲಿಯೊ ಸ್ಪೋರಿಯಾ ಮತ್ತು ಗ್ಲಿಯೋ ಸ್ಪೋರಿಯಂ ಮ್ಯಾಂಜಿಫೆರಾ ಎರಡೂ ಒಂದೇ ಎಂದು ಪರಿಗಣಿಸುತ್ತಾರೆ.

ಆ್ಯಂಥ್ರಾಕ್ನೋಸ್ ಸಾಮಾನ್ಯವಾಗಿ ಎಳೆಯ ಮಾವಿನ ಮರಗಳನ್ನು ಪೀಡಿಸುತ್ತದೆ. ಈ ರೋಗವು ಹೂಗೊಂಚಲು ಮತ್ತು ಕಾಯಿಗಳಲ್ಲಿ ಒಂದೇ ರೀತಿಯಿರುತ್ತದೆ. ರೋಗವು ರೆಂಬೆಗಳ ಮೇಲೆ ಕಪ್ಪಾದ ಚುಕ್ಕೆಗಳಿಂದ ಪ್ರಾರಂಭವಾಗುತ್ತದೆ. ಆಳವಾದ ಕಂದುಬಣ್ಣದ ಚುಕ್ಕೆಗಳು ಎಲೆಗಳ ಮೇಲೆ ಸಹ ಕಂಡುಬರುತ್ತದೆ. ರೋಗವು ಶೀಘ್ರವಾಗಿ ಹರಡಿ, ಹೂಗಳು ಮತ್ತು ಅವುಗಳ ತೊಟ್ಟುಗಳನ್ನು ವ್ಯಾಪಿಸುವುದರಿಂದ ಫಲವಿಲ್ಲದಂತಾಗುತ್ತದೆ. ಹೂಗೊಂಚಲಿನ ಮೇಲೆ ರೋಗವು ಲಘುವಾಗಿ ಬರುವ ಹೊತ್ತಿಗೆ ಕೆಲವು ಕಾಯಿಗಳಾಗಿರಬಹುದು. ಆದರೆ ರೋಗವು ಮುಂದುವರಿದಂತೆ ಆ ಕಾಯಿಗಳೂ ಸಹ ಉದುರಿಹೋಗುತ್ತವೆ. ಎಲ್ಲಾ ವಯಸ್ಸಿನ ಕಾಯಿಗಳಿಗೂ ಈ ರೋಗ ತಟ್ಟುತ್ತದೆ ಮತ್ತು ರೋಗದಿಂದಾಗಿ ಎಳೆಯ ಕಾಯಿಗಳ ಮೇಲೆ ಕಪ್ಪು ಚುಕ್ಕೆಗಳು ಉಂಟಾಗುತ್ತವೆ ; ಕ್ರಮೇಣ ಈ ಚುಕ್ಕೆಗಳು ಅಗಲವಾಗುತ್ತವೆ. ರೋಗಪೀಡಿತ ಹಣ್ಣುಗಳು ಶೇಖರಣೆಯಲ್ಲಿ ಕೊಳೆತುಹೋಗುತ್ತವೆ ; ಆದರೆ ಅದೃಷ್ಟವಶಾತ್ ಕೇವಲ ಕೆಲವು ತಳಿಗಳು ಮಾತ್ರ ಈ ರೋಗಕ್ಕೆ ಬಲಿಯಾಗುತ್ತವೆ.

ಈ ರೋಗದ ಹತೋಟಿ ಕ್ರಮವೆಂದರೆ ರೋಗಪೀಡಿತವಾಗಿ ಸತ್ತುಹೋಗಿರುವ ಎಲ್ಲಾ ಭಾಗಗಳನ್ನು ಕತ್ತರಿಸಿಸುಡುವುದು. ನರ್ಸರಿಯಲ್ಲಿರುವ ಎಳೆಯ ಸಸಿಗಳಿಗೆ, ಫೆಬ್ರವರಿ, ಏಪ್ರಿಲ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಮೂರು ಸಾರಿ, ಬೋರ್ಡಾಕ್ಸ್ ಮಿಶ್ರಣ (ಮೈಲುತುತ್ತು 3 ಪೌಂಡು, ಸುಟ್ಟಸುಣ್ಣ 3 ಪೌಂಡು ಮತ್ತು 50 ಗ್ಯಾಲನ್ ನೀರು) ದಂತಹ ಶಿಲೀಂಧ್ರನಾಶಕವನ್ನು ಸಿಂಪಡಿಸಿ ಹತೋಟಿ ಮಾಡುವುದನ್ನು ಸತ್ತಾರ್ (1946) ಶಿಫಾರಸ್ಸು ಮಾಡಿದ್ದಾರೆ. ಪ್ರಾಪ್ತ ವಯಃಸ್ಸಿನ ಮರಗಳಿಗೆ ಈ ಸಿಂಪರಣೆಯ ಪ್ರಯೋಗವನ್ನು ಮಾಡಬೇಕಾಗಿರುವುದರಿಂದ ಈ ಹಂತದಲ್ಲಿ ಯಾವ ಖಚಿತವಾದ ಶಿಫಾರಸ್ಸನ್ನೂ ಮಾಡಲಾಗುವುದಿಲ್ಲ. ಮಾವು ಮತ್ತು ಜಂಬೀರ ಫಲಗಳಲ್ಲಿ ಶಿಲೀಂಧ್ರಗಳು ಒಂದೇ ಕಾಲದಲ್ಲಿ ಪೀಡಿಸುವುದರಿಂದ ಒಂದೇ ಸಾರಿ ಕ್ರಮಕೈಗೊಳ್ಳುವುದನ್ನು ಸತ್ತಾರ್ ಸಲಹೆ ಮಾಡಿದ್ದಾರೆ. ಗಾಂಧಿ (1955) ಸಹ ಇದೇ ಸಲಹೆಯನ್ನು ನೀಡಿದ್ದಾರೆ. ಕೀಮ ಮತ್ತು ಇತರರು (1954) ಬೋರ್ಡಾಕ್ಸ್ ಮಿಶ್ರಣದ (3 : 3 : 50) ಜೊತೆಯಲ್ಲಿ ಮಿಶ್ರಣವನ್ನು ಹರಡಿಸುವ ಕ್ಯಾಲ್ಸಿಯಂ ಕ್ಯಾಸಿಯೋನೇಟ್ ಸೇರಿಸಿ ಸಿಂಪಡಿಸುವುದರಿಂದ ಈ ರೋಗವನ್ನು ನಿಯಂತ್ರಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಹತೋಟಿ ಕ್ರಮವನ್ನು ಹೂಬಿಡುವ ಹಂತದಲ್ಲಿ ಮೂರು ಸಾರಿ ಮತ್ತು ಫಲದ ಕಾಲದಲ್ಲಿ

ಐದು ಸಾರಿ, ಒಟ್ಟಿನಲ್ಲಿ ಎಂಟು ಸಾರಿ ಕೈಗೊಳ್ಳಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ನಾಯಕ್(1949) ರವರು ಸಹ ಇದೇ ಸಲಹೆ ನೀಡಿದ್ದಾರೆ. ಹೂಗಳು ಅರಳುವುದಕ್ಕೆ ಮೊದಲು ಒಂದು ಸಾರಿ ಮತ್ತು ಮುಂದೆ ಒಂದು ವಾರ ಅಥವಾ ಹತ್ತು ದಿವಸಗಳ ಅಂತರದಲ್ಲಿ ಎರಡು ಅಥವಾ ಮೂರು ಸಾರಿ ಸಿಂಪಡಿಸ ಬೇಕು. ಶೇಖರಣೆಯಲ್ಲಿ ಹಣ್ಣುಗಳು ಕೊಳೆಯುವುದನ್ನು ತಡೆಯಲು, ಅವುಗಳನ್ನು ಬೆಳಕು ಗಾಳಿಯಿರುವ ಕೊಠಡಿಗಳಲ್ಲಿ ಸಿಪ್ಪೆಯ ಮೇಲೆ ಗಾಯಗಳಾಗದೇ ಇರುವಂತೆ ಎಚ್ಚರವಹಿಸಿ ಶೇಖರಿಸಬೇಕು. ಫಸಲಿನ ಕಾಲದಲ್ಲಿ ಹೊಸದಾಗಿ ತಯಾರುಮಾಡಿದ ಶೇಕಡಾ 1ರ ಬರ್ಗಂಡಿ ಮಿಶ್ರಣವನ್ನು ಸಿಂಪಡಿಸುವುದನ್ನು ಪರಿಣಾಮಕಾರಿ ಹತೋಟಿ ಕ್ರಮವಾಗಿ ಬಾಕರ್ (1938) ಮತ್ತು ಮೆಕ್‌ಕೀ (1940) ಸೂಚಿಸಿದ್ದಾರೆ ಫ್ಲಾರಿಡಾದ ಕೊನೊವರ್ ಮತ್ತು ರೂಹಲೆ (1949) ಬಯೊಕ್ಸಿನ್-1 (ಕಾಪರ್-8-ಕ್ವಿನೊಲಿನೊಲೆಟ್)ನ್ನು ಸಿಂಪಡಿಸುವುದು ಬೋರ್ಡೋಕ್ಸ್ ಮಿಶ್ರಣದಷ್ಟೇ ಪರಿಣಾಮಕಾರಿ, ಮತ್ತು ಇದರಿಂದ ಹಣ್ಣಿನ ಮೇಲೆ ಯಾವಗುರುತುಗಳೂ ಉಳಿಯುವುದಿಲ್ಲ ಎಂದು ವರದಿ ಮಾಡಿದ್ದಾರೆ. ಸಿಲೋನಿನಿಂದ ಪಾರ್‌ಸನ್ಸ್ (1931) ಬೋರ್ಡೋಕ್ಸ್ ಮಿಶ್ರಣ ಅಥವಾ 'ಸಲ್ಫಿನೆಟ್' ಅನ್ನು ನೀರಿನಲ್ಲಿ ಶೇಕಡಾ 1-2 ಭಾಗ ಬೆರಸಿ ಕಾಯಿ ಕಚ್ಚಿದನಂತರ ಹಣ್ಣಾಗುವವರೆಗೆ ಮರಕ್ಕೆ ಒಂದು ಸಾರಿ ಸಿಂಪಡಿಸುವುದನ್ನು ಶಿಫಾರಸ್ಸು ಮಾಡಿದ್ದಾರೆ.

ಬಂಚೀಟಾಪ್

ಈ ರೋಗವನ್ನು ಸಾಮಾನ್ಯವಾಗಿ ವಿಕೃತ (ವೈರೂಪ್ಯ) ಮಾವಿನ ಪುಷ್ಪ ವಿನ್ಯಾಸ ಎಂದು ಕರೆಯುತ್ತಾರೆ. ಇತ್ತೀಚೆಗೆ ಈ ರೋಗವು ಹೆಚ್ಚು ಗಮನವನ್ನು ಸೆಳೆದಿದೆ. ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಈ ರೋಗದ ವರದಿಯಾಗಿದೆ. ಪಂಜಾಬಿನಲ್ಲಿ ಈ ರೋಗ ಕಾಣಿಸಿಕೊಳ್ಳುವುದು ಅಧಿಕವಾಗುತ್ತಿದೆ ಮತ್ತು ರೋಗ ತೀವ್ರತೆಯು ತಳಿಯಿಂದ ತಳಿಗೆ ಮತ್ತು ಒಂದೇ ತಳಿಯ, ಮರದಿಂದ ಮರಕ್ಕೆ ವಿಭಿನ್ನವಾಗಿರುತ್ತದೆ ಎಂದು ಸತ್ತಾರ್ (1946) ಸೂಚಿಸಿದ್ದಾರೆ. ಕೀಮ ಮತ್ತು ಇತರರು (1954) ಗುಜರಾತ್‌ನಲ್ಲಿ ಮಹಾರಾಷ್ಟ್ರಕ್ಕಿಂತ ತೀವ್ರವೆಂದು ವರದಿ ಮಾಡಿದ್ದಾರೆ. ಸಹರಾನ್‌ಪುರದಲ್ಲಿ ತ್ರಿಪಾಠಿ(1954) ಯವರು ಮಾವಿನ 'ಬಂಚೀಟಾಪ್' ರೋಗ ಮತ್ತು ವಿಕೃತ ರೂಪವನ್ನು ತನಿಖೆ ಮಾಡಿದ್ದು ಇವೆರಡನ್ನು ಒಂದೇ ರೋಗದ ಲಕ್ಷಣಗಳೆಂದು ಪರಿಗಣಿಸಿ ಇದನ್ನು ಮಾವಿನ ವಿಕೃತಿ ರೂಪವೆಂದು ಕರೆಯಬಹುದಾಗಿ ತೀರ್ಮಾನಿಸಿದ್ದಾರೆ. ನಿರ್ವಾಣ್ (1953), ಉತ್ತರ ಪ್ರದೇಶದ ಸಹರಾನ್‌ಪುರದಿಂದ ನರ್ಸರಿಯಲ್ಲಿರುವ ನಾಲ್ಕು–ಐದು ತಿಂಗಳ ಮಾವಿನ ಸಸಿಗಳಿಗೆ ನವೆಂಬರ್–ಡಿಸೆಂಬರ್ ತಿಂಗಳಲ್ಲಿ ವಿಕೃತಿ (ವೈರೂಪ್ಯ) ಎಂಬ ರೋಗವು ಬರುತ್ತದೆ ಎಂದು ವರದಿ ಮಾಡಿದ್ದಾರೆ. ಎಲೆಗಳ

ಕಂಕುಳಲ್ಲಿ ದಪ್ಪವಾಗುವುದರೊಂದಿಗೆ ರೋಗವು ಕಾಣಿಸಿಕೊಳ್ಳುತ್ತದೆ ಮತ್ತು ಸಸ್ಯದ ತುದಿಯಲ್ಲಿ ಅನೇಕ ಸಣ್ಣ ಮೋಸುಗಳು ಕಾಣಿಸಿಕೊಳ್ಳುತ್ತವೆ. ಹೂಗೊಂಚಲಿನ ಕಿರುಗೊಂಚಲುಗಳು ನಿಬಿಡವಾಗಿ ಶಂಕಾಕಾರವನ್ನು ಮುಟ್ಟುತ್ತವೆ ಮತ್ತು ಹೂಗಳು ಬಹಳ ನಿಧಾನವಾಗಿ ಅರಳುತ್ತವೆ. ಅನಂತರ ಇಡೀ ಬೆಳವಣಿಗೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಪೀಡಿತ ಹೂಗೊಂಚಲುಗಳಲ್ಲಿ ಅಪರೂಪವಾಗಿ ಕಾಯಿಬಿಡುತ್ತದೆ. ಕೆಲವುವೇಳೆ ಹೂಗೊಂಚಲು ಹಾಗೆಯೇ ಉಳಿದು ಮರದ ಹಸುರು ಭಾಗವಾಗುತ್ತದೆ. ರೋಗವು ಮರದ ಕೆಲವು ರೆಂಬೆಗಳಿಗೆ ಸೀಮಿತವಾಗಿರಬಹುದು ಅಥವಾ ಇಡೀ ಮರವೇ ರೋಗಪೀಡಿತವಾಗಬಹುದು. ಈ ಅಸಾಮಾನ್ಯ ಬೆಳವಣಿಗೆಯಲ್ಲಿ ಯಾವ ಕೀಟ ಅಥವಾ ಶಿಲೀಂಧ್ರ ಪಾಲುಗೊಂಡಿಲ್ಲ ಎಂಬುದನ್ನು ಸತ್ತಾರ್ (1946) ವರದಿ ಮಾಡಿದ್ದಾರೆ. ಈ ರೋಗವು ನಂಜುಗಳಿಂದ ಅಥವಾ ಅನಿಯಮಿತ ಶಾರೀರಿಕ ಕ್ರಿಯೆಗಳಿಂದ ಬರುತ್ತದೆ ಎಂದು ಭಾವಿಸಲಾಗಿತ್ತು. ಕೆಲವುಸಾರಿ ಅಸಾಮಾನ್ಯ ಬೆಳವಣಿಗೆಯ ರೆಂಬೆಗಳಲ್ಲಿ ಸಾಮಾನ್ಯವಾದ ಫಲಬಿಡಬಹುದು. ಷಹರಾನ್‌ಪುರದಲ್ಲಿ ಈ ರೋಗದ ಬಗ್ಗೆ ಪೋಷಕ ಕೊರತೆಯ ಪ್ರಯೋಗ ಮಾಡಿ, ಖನಿಜ ಪೋಷಕಾಂಶಗಳ ಕೊರತೆ ಅಥವಾ ಪ್ರಧಾನ ಅಥವಾ ಅಪ್ರಧಾನ ಪೋಷಕಾಂಶಗಳ ಕೊರತೆಯಿಂದ ಈ ರೋಗ ಬರುವುದಿಲ್ಲವೆಂದು ತ್ರಿಪಾಠಿಯವರು ವರದಿ ಮಾಡಿದ್ದಾರೆ.

ಈ ರೋಗವನ್ನು ಹತೋಟಿಮಾಡಲು ಯಾವ ಖಚಿತವಾದ ಹತೋಟಿ ಕ್ರಮವನ್ನು ಇಲ್ಲಿಯವರೆಗೆ ಸೂಚಿಸಿಲ್ಲ. ಮರದಲ್ಲಿರುವ ರೋಗಸೂಚನೆಯ ಅಸಾಧಾರಣ ಭಾಗಗಳನ್ನು ತೆಗೆದು ಹಾಕಿ ಸುಡಬೇಕು. ಈ ಕಾರ್ಯದಿಂದ ರೋಗ ಹರಡುವುದನ್ನು ತಡೆಯಬಹುದು.

ಕಪ್ಪು ತುದಿ (ಬ್ಲ್ಯಾಕ್ ಟಿಪ್)

ಈ ರೋಗವು, ಇಟ್ಟಿಗೆ ಅಥವಾ ಸುಣ್ಣದ ಗೂಡಿಗೆ ಬಹಳ ಸಮೀಪವಾಗಿರುವ ಮಾವಿನ ತೋಟಗಳಿಗೆ ಬರುವುದು ಸಾಮಾನ್ಯ. ಈ ರೋಗ ಆಧುನಿಕ ಕಲ್ಲಿದ್ದಲು ಸುಡುವ ಹೊಗೆಯಿಂದ ಬರುತ್ತದೆ. ಇದು ಬಂಗಾಳ, ಬಿಹಾರ, ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿನ ಮಾವು ಬೆಳೆಯುವ ಪ್ರದೇಶಗಳಲ್ಲಿ ಸಾಮಾನ್ಯ. ಆದರೆ ತಮಿಳುನಾಡು, ಮೈಸೂರು ಮತ್ತು ಮಹಾರಾಷ್ಟ್ರದಲ್ಲಿ ಇದರ ಪರಿಚಯವಿಲ್ಲ. ಸೇನ್ (1943) ಈ ಪ್ರಾಂತಗಳಲ್ಲಿ ಇಟ್ಟಿಗೆ ಗೂಡುಗಳು ರೂಢಿಯಲ್ಲಿಲ್ಲದಿರುವುದೇ ಇದಕ್ಕೆ ಕಾರಣವೆಂದು ವರದಿ ಮಾಡಿದ್ದಾರೆ.

ಕಲ್ಲಿದ್ದಲು ಧೂಮಗಳಲ್ಲಿ ಗಂಧಕದ ಡೈಆಕ್ಸೈಡ್, ಎಥಲೀನ್ ಮತ್ತು ಮಾನಾಕ್ಸೈಡ್‌ಗಳು ವಿಶೇಷವಾಗಿ ವಿಷಕಾರಿಯಾಗುತ್ತವೆ ; ಇವುಗಳಲ್ಲಿ ಗಂಧಕದ ಡೈಆಕ್ಸೈಡ್ ಸಸ್ಯಗಳಿಗೆ ಬಹಳ ಹಾನಿಯನ್ನುಂಟುಮಾಡುತ್ತದೆ. ಗುಪ್ತ ಮತ್ತು

ಇತರರು (1950) ಮಾವಿನ ತೋಟಗಳಲ್ಲಿ ಕಲ್ಲಿದ್ದಲು ಸುಡುವುದರ ಮೂಲಕ ಕೆಲವು ಕಾಯಿಗಳಿಗೆ ರೋಗವುಂಟುಮಾಡಿದ್ದಾರೆ. ಆದರೂ ಗಂಧಕದ ಡೈ ಆಕ್ಸೈಡ್, ಕಾರ್ಬನ್ ಮಾನಾಕ್ಸೈಡ್ ಅಥವಾ ಎಥಿಲೀನ್‌ನಿಂದ ನೆಕ್ರೋಸಿಸ್ ಉಂಟಾಗುವುದರ ಬಗ್ಗೆ ಖಚಿತವಾದ ಉತ್ತರವನ್ನು ಕೊಟ್ಟಿಲ್ಲ. ರೋಗಪೀಡಿತ ಹಣ್ಣುಗಳ ಶುಷ್ಕ (ಸ್ಟೆರೈಲ್) ರಸವನ್ನು ಆರೋಗ್ಯವಾಗಿರುವ ಮರಗಳಿಗೆ ಸೇರಿಸುವುದರಿಂದ ಅವರು ರೋಗವನ್ನುಂಟುಮಾಡಿದರು. ರಾಜನ್ ಮತ್ತು ರಘು (1940) 1 : 100ರ ಪ್ರಬಲ ಸಾಂದ್ರತೆಯ ಎಥಿಲೀನ್ ವಿಶಿಷ್ಟ ಲಕ್ಷಣವನ್ನು ತೋರಿಸಿ, ಹೆಚ್ಚು ದುರ್ಬಲ ಸಾಂದ್ರತೆಯಲ್ಲಿ ಶೀಘ್ರ ಉಸಿರಾಟ, ಹೆಚ್ಚು ಸಕ್ಕರೆ ಪ್ರಮಾಣ ಮತ್ತು ಮೆದುವಾಗುವಿಕೆಗಳನ್ನುಂಟುಮಾಡಿರುವುದನ್ನು ಗುರುತಿಸಿದ್ದಾರೆ. ಗಂಧಕದ ಡೈ ಆಕ್ಸೈಡ್, ಎಥಿಲೀನ್ ಜೊತೆಯಲ್ಲಿ ಅಥವಾ ಇಲ್ಲದೆಯೇ ಮೇಲ್ಕಂಡ ಪರಿಣಾಮವನ್ನುಂಟುಮಾಡಿದೆ, ಮತ್ತು ಹಣ್ಣಿನ ಸಾಧಾರಣ ಸ್ಥಿತಿಯು ಕ್ಷೀಣಿಸುವುದು ಸಹ ಕಂಡುಬಂದಿದೆ. ಎಳೆಯ ಕಾಯಿಗಳು ಚಟುವಟಿಕೆಯಿಂದ ವೃದ್ಧಿಯಾಗುವ ಕಾಲದಲ್ಲಿ ಕಲ್ಲಿದ್ದಲು ಹೊಗೆ ಹಾಕಿದಾಗ ಮೇಲ್ಕಂಡ ರೀತಿಯ ಅವಲೋಕನವನ್ನು ಸೇನ್ (1943) ವರದಿ ಮಾಡಿದ್ದಾರೆ. ಸುಮಾರಾಗಿ ಬಲಿತ ಕಾಯಿಗಳಿಗೆ ಹೊಗೆ ಹಾಕಿದಾಗ, ಕಾಯಿ ಬಲಿಯುವುದಕ್ಕೆ ಮೊದಲು ಹಣ್ಣಾಗುವುದು ಮತ್ತು ಮೇಲ್ಸಿಪ್ಪೆ ಹಳದಿ ಬಣ್ಣಕ್ಕೆ ತಿರುಗುವುದು ಮುಂತಾದ ಅನಾನುಕೂಲಕರ ಸೂಚನೆಗಳು ಕಂಡುಬಂದಿದೆ. ಈ ರೋಗವು ಕಾಯಿಯ ತುದಿಯಿಂದ ಪ್ರಾರಂಭವಾಗುತ್ತದೆ, ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗುತ್ತದೆ, ಕ್ರಮೇಣ ಆಳವಾದ ಕಂದು ಬಣ್ಣಕ್ಕೆ ಅನಂತರ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ಸ್ಥಿತಿಯು ಶುಷ್ಕ ಕೊಳೆಯುವಿಕೆಯನ್ನು ಬಹಳವಾಗಿ ಹೋಲುತ್ತದೆ. ದಾಸ್‌ಗುಪ್ತಾ ಮತ್ತು ಅವರ ಸಹಪಾಠಿಗಳು (1939, 40 ಮತ್ತು 41) ಈ ರೋಗವು ನಂಜು ಅಥವಾ ಮಣ್ಣಿನ ಸ್ಥಿತಿಗೆ ಸಂಬಂಧಿಸಿಲ್ಲವೆಂದು ತೀರ್ಮಾನಿಸಿದ್ದಾರೆ. ಬಿಹಾರ್ ಮತ್ತು ಉತ್ತರ ಪ್ರದೇಶದಲ್ಲಿನ ಮಾವಿನ ಬೆಳೆಯ ವಿವರವಾದ ಸಮೀಕ್ಷೆ ನಡೆಸಿದ ಸೇನ್ (1934) ಹೊಗೆಗೂಡುಗಳ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿರುವ ಮಾವಿನ ತೋಟಗಳಿಗೆ ರೋಗದ ಹಾನಿ ಹೆಚ್ಚು ಎಂದು ವರದಿಮಾಡಿದ್ದಾರೆ. ಹೊಗೆಗೂಡಿನಿಂದ 500–600 ಅಡಿ ದೂರದಲ್ಲಿರುವ ಅನೇಕ ತಳಿಗಳಿಗೆ ಈ ರೋಗ ಬಂದರೂ ವಿವಿಧ ಮಾವಿನ ತಳಿಗಳು ರೋಗಕ್ಕೆ ತುತ್ತಾಗುವುದರಲ್ಲಿ ಭಿನ್ನತೆಯನ್ನು ತೋರಿಸುತ್ತವೆ. ಹಾನಿಯನ್ನುಂಟುಮಾಡುವುದೆಂದು ಕಂಡುಬಂದಿರುವ ಅತ್ಯುನ್ನತ ದೂರವೆಂದರೆ ಹೊಗೆಗೂಡಿನಿಂದ 700 ಗಜಗಳು.

ಈ ರೋಗಕ್ಕೆ ಏಕೈಕ ಪರಿಹಾರ ಕ್ರಮವೆಂದರೆ, ಗೂಡಿನ ಚಿಮಣಿಯನ್ನು 50 ಅಡಿಗಳಿಗಿಂತ ಎತ್ತರವಾಗಿ ಇಟ್ಟಿರುವುದು ಅಥವಾ ಮಾರ್ಚಿ ತಿಂಗಳಿಂದ ಮಾವಿನ ಹಣ್ಣಿನ ಕಾಲ ಮುಗಿಯುವವರೆಗೆ ಹೊಗೆಗೂಡಿನ ಕಾರ್ಯವನ್ನು ನಿಲ್ಲಿಸುವುದು.

ಅನುಬಂಧ

ಅನುಬಂಧ 1

ತಿನ್ನುವ ವಾಣಿಜ್ಯ ಮಾವಿನ ತಳಿಗಳು

1. ಆಲ್ ದಿ ಇಯರ್ ರೌಂಡ್ (ಬಾರಾಮಾಸಿಯ)
2. ಅಲ್ಫಾನ್‌ಸೊ ಬಿಹಾರ್
3. ಅಲ್ಫಾನ್‌ಸೊ ಬಾಂಬೆ
4. ಅನೊಪಾನ್
5. ಬೆಂಗಳೂರಾ
6. ಬಂಗನಪಲ್ಲಿ
7. ಬೊಂಬಾಯಿ
8. ಬಾಂಬೆ ಗ್ರೀನ್
9. ಬಾಂಬೆ ಯೆಲ್ಲೊ
10. ಚೆರಕುರಸಂ
11. ದುಸೆರಿ ಅಮಾನ್
12. ದೋಫೂಲ್
13. ಫಜ್ರಿ
14. ಫಜ್ಲಿ ಮಾಲ್ಡಾ
15. ಫಜ್ಲಿ ಜವ್‌ಕೊ
16. ಫರ್‌ನ್ಯಾಂಡಿನ್
17. ಜಮಾದಾರ್
18. ಕಾಲಿಪಾರಿ
19. ಲಾಂಗ್ರ
20. ಮಾಲ್ಡಾ ಹಂಡ್ಲೆ
21. ಮಂಕುರಾದ್
22. ಮುಂಡಪ್ಪ
23. ನೀಲಂ
24. ಪೈರಿ
25. ರಾಜಪುರಿ
26. ರುಮಾನಿ
27. ಸಫೇದಾ ಲಕ್ನೋ
28. ಸಫೇದಾ ಮಾಲಿಹಾಬಾದ್
29. ಸೇಲಂ ಬೆಂಗಳೂರಾ
30. ಸಮರ್‌ಬೆಹಿಷ್ತ್ ಚೌಸಾ
31. ಸರ್ದಾರ್
32. ಸೆಹ್‌ರೊಲಿ
33. ಷಾ ಪಸಂದ್
34. ಸುಕುಲ್
35. ಸುವರ್ಣರೇಖಾ

ರಸ ಕೊಡುವ ವಾಣಿಜ್ಯ ಮಾವಿನ ತಳಿಗಳು

1. ಚಂದ್ರಕಾರನ್
2. ಚಿನ್ನರಸಂ
3. ಕಂದೀಲ್
4. ಕೊತ್ತಪಲ್ಲಿ ಕೊಬ್ಬರಿ
5. ಪಂಚದರ ಕಳಸ
6. ಪನಕಲು
7. ಪೆದ್ದರಸಂ
8. ರಸ್‌ಪೂನಿಯ
9. ಸಕ್ಕರ್‌ಗುಟ್ಲಿ

ಡೆಸರ್ಟ್ ಮಾವಿನ ತಳಿಗಳು

1. ಅಲಂಪೂರ್‌ಬಾನೆಷಾನ್
2. ಅಲ್ಫೋನ್ಸೊ ಬಾಟ್ಲಿ
3. ಅಲ್ಫಾನ್ಸೊ ಪಂಜಾಬ್
4. ಅವಾನ್ ಅಬ್ಬಾಸಿ
5. ಅಮೀನ್‌ಅಬ್ದುಲ್ ಅಹೆದ್‌ಖಾನ್
6. ಅಮೀನ್ ಹೀರಾ
7. ಅಮೀನ್ ಇಬ್ರಾಹಿಮ್‌ಪುರ್
8. ಅಮೀನ್ ಖುರ್ದ್
9. ಅಮೀನ್ ಮಹಮುದ್ ಯೂನಸ್ ಖಾನ್
10. ಅಮೀನ್ ಸಹಯ್
11. ಅಮೀನ್ ತೆಹಸಿಲ್
12. ಅಮ್ಲೆಟ್
13. ಅನಾರ್ ಮಲ್ಗೋವ
14. ಅನೊಖ ಸಾರ್ದ
15. ಅಸ್‌ರುಫ್ ಉಸ್ ಸಮಾರ್
16. ಅಸೋಜಿಯ (ನಿಧಾನ ತಳಿ)
17. ಅತಿಮಧುರಂ
18. ಅಜೀಜ್ ಪಸಂದ್
19. ಅಜವ್-ಉಸ್-ಸಮರ್
20. ಬಾಗಲ್ ಸಹಯ್
21. ಬೆನಾಜಿರ್ ಸಂಡಿಲ್ಲ
22. ಬಾದ್ರುಲ್ ಅಸ್‌ಮಾರ್
23. ಭಾದುರಿಯ (ನಿಧಾನ ತಳಿ)
24. ಭಾರತ್ ಭೋಗ್
25. ಬೊಂಬಾಯಿ ಅಬ್ದುಲ್ ಹಕ್
26. ಬೋಷರ್ ಕಲಾಮ್‌ಸಾರ್
27. ಬೃಂದಾವನಿ
28. ಬುದ್ದು ಕಾ ಕೆಲ್ವಾ
29. ಭೋಟಾ ಜಹಾಂಗಿರ್
30. ದಾದಮಿಯೊ
31. ದೊಂಡಕಾಯಾಲುವಾನು
32. ದೂದಿಯ
33. ಫಕ್ರ್-ಸ್-ಸಮಾರ್
34. ಫಜ್ರಿಜಫ್ರಾನಿ
35. ಗೋಪಾಲ್ ಭೋಗ್
36. ಗುಲಾಬ್ ಜಮಾನ್
37. ಗುಲಾಬ್ ಖಾಸ್
38. ಹಿಮಾಯುದ್ದಿನ್
39. ಹಿಮ್‌ಸಾಗರ್
40. ಹುಷ್‌ನಾರ್
41. ಇಮಾಮ್ ಪಸಂದ್
42. ಇನಾಯತ್ ಪಸಂದ್
43. ಜೈಲರ್
44. ಜನಾರ್ಧನ್ ಪಸಂದ್ (ನಿಧಾನ ತಳಿ)
45. ಜಹಾಂಗಿರ್
46. ಕಾಚ್‌ಮುಹ
47. ಕಾಲಾಪಹಾರ್
48. ಕಾಂಚ ಮಿಥಾ
49. ಕರುಥ ಕೊಲಂಬನ್
50. ಖಾಸ ಇಬ್ರಾಹಿಮ್‌ಪುರ್
51. ಖಾಸ್-ಉಲ್-ಖಾಸ್
52. ಖುದಾದಾದ್
53. ಖುದ್ದೂಸ್
54. ಕಿಷನ್ ಭೋಗ್
55. ಲಾಲ್ ಮಲ್ಗೊವ
56. ಲಾಂಗ್ರಾಲಾಜ್
57. ಮಾರ್ಕೀಯುರ
58. ಮಲಗೋವ

59. ಮುರ್ಷಿದಾಬಾದ್
60. ನಜೀಮ್ ಪಸಂದ್
61. ನಿಸಾರ್ ಪಸಂದ್
62. ಪಡಿರಿ
63. ಪಂಜಾ ಪಸಂದ್
64. ರಾತೌಲ್
65. ರೆಹಮತ್ ಖಾಸ್
66. ಸಪೂರ್ ಪಸಂದ್
67. ಸಫೇದ್ ಕಲ್ಕತ್ತಾ
68. ಸಫೇದಾ ಮಲ್‌ಗೊವ
69. ಸಕ್ಕರ್ ಚೈನಾ
70. ಸಾಲೆಭಾಯ್ ಅಮಿಲಿ
71. ಸಮರ್ ಬೆಹಿಷ್ತ್ ಅಲಿಬಾಗ್
72. ಸಮರ್ ಬೆಹಿಷ್ತ್ ರಾಂಪುರ್
73. ಷಾದ್‌ವಾಲಾ
74. ಶಾಮ್‌ಸುಲ್-ಅಸ್‌ಮಾರ್
75. ತೈಮೂರಿಯಾ
76. ವನ್‌ರಾಜ್
77. ವಿಲ್ಲಾರ್ಡ್ F
78. ಜಫ್ರಾನ್
79. ಜರಡಲು

ಅನುಬಂಧ 2

ಪರಿಮಾಣಾತ್ಮಕ ಗುಣಗಳು

ಅನುಕ್ರಮ ಸಂಖ್ಯೆ	ತಳಿಯ ಹೆಸರು	ಹಣ್ಣಿನ ಆಳತೆ				ಪುಷ್ಪವಿನ್ಯಾಸ		ಓಟೆಯ ಆಳತೆ		
		ಹಣ್ಣಿನ ತೂಕ ಗ್ರಾಮ್‌ನಲ್ಲಿ	ಹಣ್ಣಿನ ಉದ್ದ ಸೆಂ. ಮೀ. ಗಳಲ್ಲಿ	ಪ್ರಧಾನ ವ್ಯಾಸ ಸೆಂ. ಮೀ. ಗಳಲ್ಲಿ	ಅಪ್ರಾಧಾನ ವ್ಯಾಸ ಸೆಂ. ಮೀ. ಗಳಲ್ಲಿ	ಹೂಗೊಂಚಲು ಉದ್ದ ಸೆಂ. ಮೀ. ಗಳಲ್ಲಿ	ಹೂಗೊಂಚಲು ವಿಸ್ತೀರ್ಣ ಸೆಂ. ಮೀ. ಗಳಲ್ಲಿ	ಓಟೆಯ ಉದ್ದ ಸೆಂ. ಮೀ. ಗಳಲ್ಲಿ	ಓಟೆಯ ಅಗಲ ಸೆಂ. ಮೀ. ಗಳಲ್ಲಿ	ಓಟೆಯ ದಪ್ಪ ಸೆಂ. ಮೀ. ಗಳಲ್ಲಿ
1	2	3	4	5	6	7	8	9	10	11
1.	ಅಬೆ-ಹಯಾತ್	197	8.3	6.5	5.6	36.0	25.0	6·0	3.3	1.8
2.	ಅಲಿಬಾಗ್ ಸಾಮರ್ ಬೆಹಿಷ್ತ್	ಸಮರ್ ಬೆಹಿಷ್ತ್ ಅಲಿಬಾಗ್ ನೋಡಿ								
3.	ಅಲಿಪಸಂದ್	336	12.1	8.3	7.8	28.4	20.2	8.3	3.0	2.1
4.	ವರ್ಷಾರದ್ಯಂತ	213	11.1	7.8	6.8	22.0	14.0	7.7	2.8	2.0
5.	ಅಲಂಪೂರ್ ಬಾನೆಷಾನ್	566	13.8	9.2	8.7	25.2	24.5	8.8	3.8	2.4
6.	ಅಲ್ಫಾನ್‌ಸೊ ಬಾಟ್ಲ	251	11.6	6.0	5.5	25.2	24.2	9.5	2.8	2.0

7.	ಅಲ್ಫಾನ್ಸೊ ಬಿಹಾರ್	241	8 8	6.8	6.3	20.2	15.1	7.2	3.3	2.2
8.	ಅಲ್ಫಾನ್ಸೊ ಬ್ಲ್ಯಾಕ್				ಬ್ಲಾಕ್ ಅಲ್ಫಾನ್ಸೊ ನೋಡಿ					
9.	ಅಲ್ಫಾನ್ಸೊ ಬಾಂಬೆ	241	11.3	8.5	7.9	24 8	32.5	7.8	3.8	2.0
10.	ಅಲ್ಫಾನ್ಸೊ ಪಂಜಾಬ್	227	9.5	8.0	7.4	23.0	18.0	7.2	3.3	2.0
11.	ಅಲ್ಫಾನ್ಸೊ ಲೈಟ್	199	11.9	9.0	8 4	24.2	23.9	7.6	4.3	2.9
12.	ಅಮಾನ್ ಅಬ್ಬಾಸಿ	340	12.5	7.0	6.5	22.0	20.0	9.5	3.2	1.9
13.	ಅಮಾನ್ ಅಂಗೋರಿ	227	11.7	6.1	5.6	22.0	14.0	10.7	3.5	1.8
14.	ಅಮಾನ್ ದುಸೆರಿ				ದುಸೆರಿ ಅಮಾನ್ ನೋಡಿ					
15.	ಅಮಾನ್ ಫೋರ್ಡ್				ಮಚಲಿ ನೋಡಿ					
16.	ಅಂಬಾಲವಿ	201	12.3	6 4	5.5	40.0	40.0	10.3	3 8	1.8
17.	ಅಮಿನ್ ಅಬ್ದುಲ್ ಅಹೆದ್ ಖಾನ್	340	12.3	8.0	7.5	21.3	12.5	9.3	3 8	2.2
18.	ಅಮೀನ್ ಹೀರಾ	411	13.2	7.4	7.0	26.3	15.0	71.0	3.8	1.9
19.	ಅಮೀನ್ ಇಬ್ರಾಹಿಮ್‌ಪುರ್	425	12.8	8 0	7.5	24.0	18.0	9.9	3.3	2.0
20.	ಅಮೀನ್ ಖುರ್ದ್	298	12.5	8.0	7.5	25.0	13.8	9.0	3.6	1.7
21.	ಅಮೀನ್ ಮಹಮದ್ ಯೂನಸ್‌ಖಾನ್	275	9.8	7.2	6.5	20.0	18.0	7.8	3.3	1.8
22.	ಅಮೀನ್ ಸಹಯ್	326	13.2	6.6	6.0	22.5	15.0	11.0	3.5	1.9
23.	ಅಮೀನ್ ತಹಸಿಲ್	285	13.5	8.5	8.0	21.3	12.[illegible]	[illegible]	[illegible]	[illegible]

ಅನುಬಂಧ 2 ಮುಂದುವರೆದಿದೆ

1	2	3	4	5	6	7	8	9	10	11
24.	ಅಮೀನಿ	552	14.8	11.1	10.4	32.4	23.3	8.4	3.8	2.0
25.	ಅಮ್ಲೆಟ್	573	16.1	11.7	9.6	25.2	18.5	10.7	4.0	1.5
26.	ಅನಾನಾಸ್ ಫತೇಪುರಿ				ಮಾರ್ಕೀಯರ ನೋಡಿ					
27.	ಅನಾರ್ ಮಲ್ ಗೋವಾ	564	17.6	10.0	9.2	24.8	24.4	14.5	4.5	2.0
28.	ಅನೊಖಾ ಸಾರ್ದ	675	17.0	10.5	9.7	34.0	14.0	13.3	5.0	2.0
29.	ಅನೊಪಾನ್	240	9.0	7.8	6.0	21.3	12.5	2.1	3.5	2.2
30.	ಅನೊರ	652	18.0	9.3	7.8	28.0	15.0	13.2	4.8	2.6
31.	ಅನ್ವಲ್ ರಾಠೌಲ್	170	8.5	6.3	6.0	21.3	16.3	6.5	3.5	2.2
32.	ಅಪ್ಪ್ಯಾಸ್				ಅಲ್ಫಾನ್‌ಸೊ ಬಾಂಬೆ ನೋಡಿ					
33.	ಅಸ್‌ರೂಪ್-ಉಸ್-ಸಮರ್	170	8.5	7.5	7.0	25.0	17.0	7.2	3.7	2 2
34.	ಅಸೊಜಿಯ	230	9.6	6.2	5.4	18.8	12.5	6.6	3.1	1.5
35.	ಅತಿ ಮಧುರಂ	308	9.2	8.4	8.4	20.6	19.8	7.6	4.0	2.2
36.	ಅಜೀಜ್ ಪಸಂದ್	199	10.5	7.5	7.0	23.8	12,5	8.0	3.6	1.7
37.	ಅಜುಮ್-ಉಸ್-ಸಮರ್	425	13.7	9.0	8.4	29.4	19.0	9.8	4.5	2.0
38.	ಬಾದಾಮಿ				ಅಲ್ಫಾನ್‌ಸೊ ಬಾಂಬೆ ನೋಡಿ					
39.	ಬಾದ್‌ಶ ಪಸಂದ್				ಸಫೇದ ಲಕ್ನೊ ನೋಡಿ					

40.	ಬಾಗಲ್ ಸಹಯ್	277	13.3	7.6	7.2	23.8	13.8	11.0	3.7	1.5
41.	ಭಾದುರಿಯ	128	10.0	7.2	6.8	31.0	19.0	6.9	3.2	2.1
42.	ಬಾನೆಶಾನ್				ಬಂಗನ್‌ಪಲ್ಲಿ ನೋಡಿ					
43.	ಬೆಂಗಳೂರಾ	482	15.0	8.0	7.1	23.4	23.6	12.6	4.0	1.9
44.	ಬಂಗನ್‌ಪಲ್ಲಿ	626	14.3	11.0	9.1	21.6	20.8	10.0	4.4	2.5
45.	ಬಾಂಗ್ಲವಾಲಾ				ಶಾಮ್‌ಸುಲ್ ಅಸಮಾರ್ ನೋಡಿ					
46.	ಬಂಕಾ	284	14.4	7.0	6 6	24.0	12.2	12.3	3.5	1.5
47.	ಬನ್‌ಸೋಡ್	562	15.0	9.7	.9.3	24.3	23.9	12.0	4.5	2.5
48.	ಬಾರಾಮಾಸಿಯ				ವರ್ಷಾದ್ಯಂತ ನೋಡಿ					
49.	ಬಾಟ್ಲಿ				ಅಲ್ಫಾನ್ಸೊ ಬಾಟ್ಲಿ ನೋಡಿ					
50.	ಬೇಗಂ ಪಸಂದ್	189	9.3	6 3	5.9	32.5	20 0	7.8	3.3	2.3
51.	ಬೆಲ್‌ಶ್ಯಾಸ್	170	8.8	5.3	4.7	22.8	21.5	7.6	3.2	1.7
52.	ಬೆನಾಜಿರ್ ಸಂಡಿಲ್ಲ	284	12.7	8.7	8.3	30.0	12.0	9.2	4.1	1.2
53.	ಬಾದ್ರುಲ್ ಅಸ್‌ಮಾರ್	204	10.1	6 0	5.6	20.0	15 0	8.6	3.2	2.0
54.	ಭವಾನಿ ಚೌರಸ್	198.5	9.0	6·2	7.1	21.0	19 0	7.3	3 3	2.1
55.	ಭಾರತ್ ಭೋಗ್	297	11.7	7 6	7.1	18.0	19.0	8.2	3.7	2.2
56.	ಭೋಟ್ಲಿ	567	11.2	10 5	10.1	25.2	32.4	8.5	5.1	2.7
57.	ಬಿಹಾರ್ ಅಲ್ಫಾನ್ಸೊ				ಅಲ್ಫಾನ್ಸೊ ಬಿಹಾರ್ ನೋಡಿ					

ಅನುಬಂಧ 2 ಮುಂದುವರಿದಿದೆ

1	2	3	4	5	6	7	8	9	10	11
58.	ಬಿಳಿ ಇಷಾದ				ಅಲ್ಫಾನ್ಸೊ ವೈಟ್ ನೋಡಿ					
59.	ಬ್ಲ್ಯಾಕ್ ಅಲ್ಫಾನ್ಸೊ	269	11.3	8.7	3.3	25.4	24.9	8.0	4.2	2.1
60.	ಬ್ಲ್ಯಾಕ್ ಆ್ಯಂಡ್ರೂಸ್	538	11.2	8.9	9.6	27.8	20.5	7.9	4.6	2.3
61.	ಬೊಟ್ಟಲಿ ಪೆದ್ದ ಕಾಯಲು ಪುನಸಾ				ಕಿಂತಲ್‌ವಾಣಿ ಪೇಟ ನೋಡಿ					
62.	ಬೊಂಬಾಯಿ	227	8.1	6.7	5.8	21.8	15.1	5.6	2.2	2.0
63.	ಬೊಂಬಾಯಿ ಅಬ್ದುಲ್ ಹಕ್	120	9.8	6.8	5.9	20.0	15.0	7.5	3.0	1.8
64.	ಬಾಂಬೆ ಭುಟ್ಟೊ	241	10.8	7.9	7.5	23.6	16.8	8.2	4.4	2.2
65.	ಬಾಂಬೆ ದರ್ಶ	269	12.1	7.9	7.4	24.2	24.2	8.8	3.8	2.4
66.	ಬಾಂಬೆ ಗ್ರೀನ್	227	11.0	8.0	7.5	22.5	12.5	8.6	3.8	2.4
67.	ಬಾಂಬೆ ಯೆಲೊ	241	13.2	7.0	6.3	20.0	19.3	8.0	3.6	1.9
68.	ಬೊರ್ಷ್ ಕಲಾಮ್‌ಸಾರ್	142	9.0	6.9	6.5	20.8	20.4	5.5	2.7	1.8
					ಸುರ್ಕ ಬರ್ಮ ನೋಡಿ					
69.	ಬ್ರೈಡ್ ಆಫ್ ರಷ್ಯ	230	11.3	7.5	7.1	33.8	15.0	9.7	3.9	2.3
70.	ಬೃಂದಾವನಿ	454	10.2	9.4	9.2	24.2	23.8	5.3	3.5	2.0
71.	ಬುದ್ಧಿ ಪಸಂದ್	199	11.2	5.5	5.1	26.0	14.0	9.3	3.0	2.0
72.	ಬುದ್ಧು ಕಾ ಕೆಲ್ವಾ									

73.	ಬರ್ಮೋಡಿಲ್ಲಾ	ಬೆಂಗಳೂರಾ ನೋಡಿ								
74.	ಕಲ್ಕತ್ತ ಸಫೇದ	ಸಫೇದಾ ಕಲ್ಕತ್ತ ನೋಡಿ								
75.	ಚಂಪಾಕಾನ್	185	9.7	6.1	5.8	48.0	58.0	7.1	2.6	1.7
76.	ಚಂದ್ರಕಾರನ್	42	6.1	3.0	3.4	25.6	24.8	5.4	3.1	2.1
77.	ಚಪ್ಪಾ	ಬಂಗನಪಲ್ಲಿ ನೋಡಿ								
78.	ಚಪ್ಪೈ	ಬಂಗನಪಲ್ಲಿ ನೋಡಿ								
79.	ಚೆರುಕುರಸಂ	329	12.0	7.5	7.1	33.4	24.8	9.4	3.5	2.1
80.	ಚಿನ್ನರಸಂ	427	12.2	8.9	7.9	31.4	28.8	8.9	4.9	2.9
81.	ಚಿನ್ನ ಸುವರ್ಣರೇಖಾ	ಸುವರ್ಣರೇಖಾ ನೋಡಿ								
82.	ಛೋಟಾ ಜಹಾಂಗೀರ್	510	10.7	10.7	10.2	28.6	27.7	9.3	4.7	2.8
83.	ಕಲೆಕ್ಟರ್	ಬೆಂಗಳೂರಾ ನೋಡಿ								
84.	ಕಲರಾ	ಪುಲಿಹೊರ ನೋಡಿ								
85.	ಕೋವಾಸ್‌ಜಿ ಪಟೇಲ್	751	14.7	11.1	10.5	24.6	24.1	9.8	2.8	2.3
86.	ದಾದಾಮಿಯೊ	360	12.7	9.2	7.1	29.0	28.0	9.2	3.8	2.0
87.	ದಂಡೀವಾಲಿ ಅಮೀನ್	ಅಮೀನ್ ಅಬ್ದುಲ್ ಅಹೆದ್ ಖಾನ್ ನೋಡಿ								
88.	ದಿಲ್‌ಪಸಂದ್	230	11.2	6.5	5.9	30.0	21.0	8.8	3.0	2.0
89.	ದೊಂಡಕಾಯಾಲುಮಾನು	406	13.1	8.8	7.6	21.8	21.5	8.9	3.9	1.8
90.	ದೂದಿಯ	205	10.5	5.8	5.2	28.4	27.6	9.0	3.0	2.1

1	2	3	4	5	6	7	8	9	10	11
91.	ದೂದಿಯ ಮಲ್‌ಗೊವ				ದೂದಿಯ ನೋಡಿ					
92.	ಡೋಕ್‌ಫೂಲ್	624	11.5	10.0	9.6	26.0	28.0	8 0	4.5	2.7
93.	ದುಸೆಂ ಅವಾನ್	272	8.3	6.3	6.0	30.0	35.3	5.8	3.8	1.8
94.	ಫಜ್ರಿ	657	13.8	10.4	10.0	28.4	20.0	13.2	4.8	2.1
95.	ಫಜ್ರಿ ಜಫ್ರಾನಿ	439	15.7	8.7	8.3	30.0	22.0	12.2	3.4	2 3
